ಬುಧವಾರ, ಜನವರಿ 25, 2023 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿದ್ಧತೆ
ಅಮೃತಸರದಲ್ಲಿ ಗಣರಾಜ್ಯೋತ್ಸವ ಪಥಸಂಚಲನದ ತಾಲೀಮಿನಲ್ಲಿ ಮಹಿಳಾ ಪೊಲೀಸ್ ಸಿಬ್ಬಂದಿಯೊಬ್ಬರು ಪಾಲ್ಗೊಂಡಿದ್ದರು



ಸತ್ಯಾಂಶ ಹೊರಬರುವುದೇ ಎಚ್‌ಡಿಕೆ ಪ್ರಶ್ನೆ

ಬಾಗಲಕೋಟೆ: 'ರಾಜಕಾರಣಿಗಳ ವಿರುದ್ಧದ ಭ್ರಷ್ಟಾಚಾರ ಪ್ರಕರಣಗಳಲ್ಲಿ ಯಾರಿಗೆ ಶಿಕ್ಷೆ ಆಗಿದೆ? ಬಿಜೆಪಿ, ಕಾಂಗ್ರೆಸ್ ನಾಯಕರ ಬೆಂಬಲವಿರುವಾಗ ತನಿಖೆಯಿಂದ ಸತ್ಯಾಂಶ ಹೊರಬರುವುದೇ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಪ್ರಶ್ನಿಸಿದರು.

ಮಂಗಳವಾರ ಬಾದಾಮಿ ತಾಲ್ಲೂಕಿನ ಆಡಗಲ್ ಗ್ರಾಮದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿದ್ದರಾಮಯ್ಯ ಸರ್ಕಾರದಲ್ಲಾದ ಭ್ರಷ್ಟಾಚಾರ ಪ್ರಕರಣಗಳನ್ನು ಲೋಕಾಯುಕ್ತ ತನಿಖೆಗೆ ಒಪ್ಪಿಸುತ್ತಿರುವ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಿ, 'ಲಾಲೂ ಪ್ರಸಾದ ಯಾದವ್ ಬಿಟ್ಟರೆ ಯಾರಿಗೂ ಶಿಕ್ಷೆಯಾಗಿಲ್ಲ' ಎಂದರು.

'ಪಿಎಸ್‌ಐ ಹಗರಣದಲ್ಲಿ ಬಂಧಿತ ವ್ಯಕ್ತಿ ಮುಖ್ಯಮಂತ್ರಿ ಬೊಮ್ಮಾಯಿ ಅವರ ಸ್ವಾಗತದ ಫ್ಲೆಕ್ಸ್ ಹಾಕುತ್ತಾನೆ. ಕಾಂಗ್ರೆಸ್ ಮುಖಂಡರದ್ದೂ ಇದೆ. ಅವರ ರಕ್ಷಣೆ ಇರುವಾಗ ತನಿಖೆಯಿಂದ ಯಾವ ಫಲಿತಾಂಶವೂ ಬರುವುದಿಲ್ಲ' ಎಂದರು.

ಎಲ್ಲರೊಂದಿಗೆ ಚರ್ಚಿಸಿ ನಿರ್ಣಯ • ಕೆಲವೇ ದಿನಗಳಲ್ಲಿ ಹೆಸರು ಘೋಷಣೆ

ಪಕ್ಷದ ಅಭ್ಯರ್ಥಿ ನಾನೇ: ಭವಾನಿ ರೇವಣ್ಣ

ಪ್ರಜಾವಾಣಿ ವಾರ್ತೆ

ಹಾಸನ: 'ಹಾಸನ ವಿಧಾನಸಭಾ ಕ್ಷೇತ್ರದಿಂದ ಜೆಡಿಎಸ್ ಅಭ್ಯರ್ಥಿ ನಾನೇ' ಎಂದು ಭವಾನಿ ರೇವಣ್ಣ ಸಮಾರಂಭವೊಂದರಲ್ಲಿ ಹೇಳಿಕೊಂಡಿದ್ದು, ಜಿಲ್ಲೆಯ ರಾಜಕೀಯ ವಲಯದಲ್ಲಿ ತೀವ್ರ ಚರ್ಚೆಗೆ ದಾರಿ ಮಾಡಿದೆ.


ಭವಾನಿ ರೇವಣ್ಣ

ತಾಲ್ಲೂಕಿನ ಕಕ್ಕೇನಹಳ್ಳಿಯಲ್ಲಿ ಅಣ್ಣಪ್ಪ ಸ್ವಾಮಿ ದೇವಾಲಯ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿರುವ ಅವರು, 'ಜೆಡಿಎಸ್‌ನಿಂದ ನನ್ನನ್ನು ಅಭ್ಯರ್ಥಿ ಮಾಡಬೇಕು ಎಂದು ಎಲ್ಲರೂ ಚರ್ಚಿಸಿ ನಿರ್ಣಯಿಸಿದ್ದಾರೆ. ಕೆಲವೇ ದಿನಗಳಲ್ಲಿ ಹೆಸರು ಘೋಷಣೆಯಾಗಲಿದೆ' ಎಂದಿದ್ದಾರೆ.

'ಜನರ ಪರಿಚಯವಿದ್ದರೆ, ಊರಿನ ಪರಿಚಯವಾಗುತ್ತದೆ. ಮುಂದಿನ ದಿನಗಳಲ್ಲಿ ಕೆಲಸ ಮಾಡಲು ಅನುಕೂಲವಾಗುತ್ತದೆ ಎಂದೇ ಕ್ಷೇತ್ರ ಪ್ರವಾಸ ಮಾಡುತ್ತಿದ್ದೇನೆ. ಭಗವಂತ ನನಗೆ ಆಶೀರ್ವಾದ ಮಾಡಲಿ ಎಂದು ಬೇಡುವೆ. ಮತ್ತೊಮ್ಮೆ ಈ ಊರಿಗೆ ಬಂದು ನಿಮ್ಮನ್ನು ಭೇಟಿ ಮಾಡುವೆ' ಎಂದು ಅವರು ಭರವಸೆ ನೀಡಿದ್ದಾರೆ.

ತಮ್ಮ ಮಾತಿನ ಆರಂಭದಲ್ಲಿ ಗ್ರಾಮಕ್ಕೆ ಈ ಹಿಂದೆ ಶಾಸಕ ಎಚ್.ಡಿ.ರೇವಣ್ಣ ಅವರಿಂದ ಆಗಿರುವ ಅಭಿವೃದ್ಧಿ ಕೆಲಸಗಳನ್ನು ಪ್ರಸ್ತಾಪಿಸಿರುವ ಅವರು, 'ಕಳೆದ ಬಾರಿ ಹಾಸನ ಕ್ಷೇತ್ರ ಕೈತಪ್ಪಿ ಹೋಗಿದ್ದರಿಂದ ಅನೇಕ ಕೆಲಸಗಳು ಹಾಗೆಯೇ ಉಳಿದಿದ್ದು, ಪೂರ್ಣಗೊಳಿಸಬೇಕಿದೆ. 90 ದಿನಗಳಲ್ಲಿ ಚುನಾವಣೆ ಮುಗಿದು ಹೋಗಲಿದ್ದು, ನನಗೆ ಆಶೀರ್ವಾದ ಮಾಡಿ' ಎಂದೂ ಕೋರಿದ್ದಾರೆ.

ಸದ್ಯ ಭವಾನಿ ಅವರ ಕುಟುಂಬದಲ್ಲಿ, ಜೆಡಿಎಸ್ ವರಿಷ್ಠ ಎಚ್‌.ಡಿ.ದೇವೇಗೌಡ ರಾಜ್ಯಸಭೆ ಸದಸ್ಯರಾಗಿದ್ದಾರೆ. ಭವಾನಿ ಅವರ ಪತಿ ಎಚ್‌.ಡಿ.ರೇವಣ್ಣ ಶಾಸಕರು. ಅವರ ಹಿರಿಯ ಮಗ ಸೂರಜ್ ರೇವಣ್ಣ ವಿಧಾನ ಪರಿಷತ್ ಸದಸ್ಯ, ಕಿರಿಯ ಮಗ ಪ್ರಜ್ವಲ್ ರೇವಣ್ಣ ಸಂಸದರು. ರೇವಣ್ಣ ಅವರ ಸಹೋದರ ಎಚ್.ಡಿ. ಕುಮಾರಸ್ವಾಮಿ ಮತ್ತು ಅನಿತಾ ದಂಪತಿ ಶಾಸಕರಾಗಿದ್ದಾರೆ.

ನನಗೇ ಟಿಕೆಟ್: ಸ್ವರೂಪ್

ಹಾಸನ: 'ಕ್ಷೇತ್ರದಲ್ಲಿ ಚುನಾವಣೆ ಸಂಬಂಧ ಸಂಚರಿಸುತ್ತಿದ್ದು, ಉತ್ತಮ ಬೆಂಬಲ ವ್ಯಕ್ತವಾಗುತ್ತಿದೆ. ಪಕ್ಷದ ಗೆಲುವು ಶತಸಿದ್ಧ. ವರಿಷ್ಠರು ನನಗೇ ಟಿಕೆಟ್ ಕೊಡುವರೆಂಬ ಭರವಸೆ ಇದೆ' ಎಂದು ಟಿಕೆಟ್ ಆಕಾಂಕ್ಷಿ ಎಚ್‌.ಪಿ ಸ್ವರೂಪ್ ಪ್ರತಿಕ್ರಿಯಿಸಿದ್ದಾರೆ.


ಎಚ್‌.ಪಿ ಸ್ವರೂಪ್

'ಭವಾನಿ ಅವರ ಹೇಳಿಕೆ ಕುರಿತು ಸ್ನೇಹಿತರು, ಹಿತೈಷಿಗಳು ಕರೆ ಮಾಡಿ ಕೇಳುತ್ತಿದ್ದಾರೆ. ಟಿಕೆಟ್ ಅಂತಿಮವಾಗಿಲ್ಲ ಎಂದೇ ಹೇಳುತ್ತಿದ್ದೇನೆ. ಕಾರ್ಯಕರ್ತರೂ ಗೊಂದಲಕ್ಕೆ ಒಳಗಾಗಬಾರದು' ಎಂದು ಕೋರಿದ್ದಾರೆ.

'ಅಭ್ಯರ್ಥಿ ಕುರಿತು ಅಧಿಕೃತ ಘೋಷಣೆ ಹೊರಬಿದ್ದಿಲ್ಲ. ಜಿಲ್ಲೆಯ ಹಾಲಿ ಶಾಸಕರ ಕ್ಷೇತ್ರಗಳನ್ನು ಹೊರತುಪಡಿಸಿ ಹಾಸನ, ಅರಸೀಕೆರೆ, ಅರಕಲಗೂಡು ಕ್ಷೇತ್ರಗಳ ಟಿಕೆಟ್ ಯಾರಿಗೆ ಎಂಬುದನ್ನು ವರಿಷ್ಠರೇ ನಿರ್ಧರಿಸುತ್ತಾರೆ' ಎಂದಿದ್ದಾರೆ. 'ದೇವೇಗೌಡರು ಹಾಗೂ ರೇವಣ್ಣ ಅವರ ಆಶೀರ್ವಾದ ನಮ್ಮ ಕುಟುಂಬದ ಮೇಲಿದೆ. ಆರು ಬಾರಿ ಟಿಕೆಟ್ ಪಡೆದಿದ್ದ ನಮ್ಮ ತಂದೆ ಎಚ್‌.ಎಸ್.ಪ್ರಕಾಶ್, ನಾಲ್ಕು ಬಾರಿ ಶಾಸಕರಾಗಿದ್ದರು. ಅವರ ಸಾವಿನ ನಂತರವೂ ರೇವಣ್ಣ ಬೆಂಬಲವಾಗಿ ನಿಂತಿದ್ದು, ಸಕ್ರಿಯವಾಗಿ ರಾಜಕೀಯದಲ್ಲಿ ಮುಂದುವರೆಯುವಂತೆ ಹಲವು ಬಾರಿ ಸಲಹೆ ನೀಡಿದ್ದರು' ಎಂದಿದ್ದಾರೆ.

'ಪ್ರತಿಸ್ಪರ್ಧಿ ನೋಡಿ ಪ್ರತಿಕ್ರಿಯೆ'

ಹಾಸನ: 'ಜೆಡಿಎಸ್‌ನಲ್ಲಿ ಆಕಾಂಕ್ಷಿಗಳಾದ ಭವಾನಿ ರೇವಣ್ಣ, ಬಾಗೂರು ಮಂಜೇಗೌಡ, ಎಚ್. ಪಿ ಸ್ವರೂಪ್ ಪೈಕಿ ಯಾರು ಸ್ಪರ್ಧಿಸುತ್ತಾರೆ ಎಂಬುದು ಮೊದಲು ಖಚಿತವಾಗಬೇಕು. ಆಗಷ್ಟೇ ಪ್ರತಿಕ್ರಿಯಿಸುವೆ' ಎಂದು ಹಾಸನದ ಹಾಲಿ ಬಿಜೆಪಿ ಶಾಸಕ ಪ್ರೀತಂ ಜೆ.ಗೌಡ ಹೇಳಿದ್ದಾರೆ.


ಪ್ರೀತಂ ಜೆ.ಗೌಡ

'ಈ ಕ್ಷೇತ್ರದಲ್ಲಿ ಪಕ್ಷದಿಂದ ಮತ್ತೆ ನನಗೇ ಟಿಕೆಟ್ ನೀಡುವ ಬಗ್ಗೆ ಇನ್ನೂ ಖಚಿತವಾಗಿಲ್ಲ. ವರಿಷ್ಠರ ಸೂಚನೆ ಮೇರೆಗೆ ಸ್ಪರ್ಧೆ ನಿರ್ಧಾರವಾಗಲಿದೆ' ಎಂದಿದ್ದಾರೆ.

ಪ್ರಜಾ ಮತ ಜನತಂತ್ರದ ಹಬ್ಬ

ಕರ್ನಾಟಕ ವಿಧಾನಸಭಾ ಚುನಾವಣೆ - 2023

ಭವಾನಿ ರೇವಣ್ಣ ಹಾಸನದಿಂದ ಸ್ಪರ್ಧಿಸುವ ವಿಚಾರದಲ್ಲಿ ಪಕ್ಷವೇ ತೀರ್ಮಾನ ತೆಗೆದುಕೊಳ್ಳಲಿದೆ

ಎಚ್‌.ಡಿ. ಕುಮಾರಸ್ವಾಮಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

ಭವಾನಿ ರೇವಣ್ಣ ಸ್ಪರ್ಧಿಸುವ ವಿಚಾರ ದೊಡ್ಡವರಿಗೆ ಬಿಟ್ಟದ್ದು. ನಾನು ಶಾಸಕನಾಗಬೇಕೆಂದಿದ್ದೆ. ಆದರೆ, ದೇವೇಗೌಡರು ಹಾಸನದಿಂದ ಸ್ಪರ್ಧಿಸುವಂತೆ ಹೇಳಿದ್ದರಿಂದ ಸಂಸದನಾದೆ.

ಪ್ರಜ್ವಲ್ ರೇವಣ್ಣ, ಸಂಸದ

ಸುದ್ದಿ 2 ನಿಮಿಷ

ಗಂಜಲ ಹಾಕಿ ವಿಧಾನಸೌಧ ತೊಳೆಯುತ್ತೇವೆ: ಡಿಕೆಶಿ

ಬೆಂಗಳೂರು: 'ಬಿಜೆಪಿ ಸರ್ಕಾರ ಇಡೀ ರಾಜ್ಯಕ್ಕೆ ಕಳಂಕ ತಂದಿದ್ದು, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ಸಚಿವರು ವಿಧಾನಸೌಧದಿಂದ ಗಂಟುಮೂಟೆ ಕಟ್ಟಿಕೊಂಡು ಹೊರಡಲಿ. ನಾವು ಗಂಜಲ ತಂದು ವಿಧಾನಸೌಧವನ್ನು ಶುದ್ಧ ಮಾಡುತ್ತೇವೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿದ ಅವರು, 'ಪ್ರಜಾಧ್ವನಿ ಯಾತ್ರೆ ಸಂದರ್ಭದಲ್ಲಿ ಜನರ ಹೃದಯ ತಲುಪುವ ಯೋಜನೆಗಳನ್ನು ಪಕ್ಷ ಘೋಷಿಸಿರುವುದರ ಬಗ್ಗೆ ಬಿಜೆಪಿಯವರು ಸಂಕಟದಿಂದ ಅಪಸ್ವರ ಎತ್ತಿದ್ದಾರೆ. ಸರ್ಕಾರದ ಆಯಸ್ಸು ಇನ್ನು 40 ದಿನ ಮಾತ್ರ. ಯಾರಿಂದ ವಸೂಲಿ ಮಾಡುವುದು ಬಾಕಿ ಇದೆಯೊ ಅದನ್ನು ಮಾಡಿಕೊಂಡು ಟೆಂಟ್ ಖಾಲಿ ಮಾಡಿ' ಎಂದು ಬಿಜೆಪಿಯವರನ್ನು ಉದ್ದೇಶಿಸಿ ಹೇಳಿದರು.



'ಸಚಿವ ಸುಧಾಕರ್ ಅವರ ತಲೆ ಮೇಲೆ ಭ್ರಷ್ಟಾಚಾರ ಆರೋಪಗಳ ಪರ್ವತವೇ ಇದೆ. ಆದರೂ ಮಾಧುಸ್ವಾಮಿ, ಮುಖ್ಯಮಂತ್ರಿ ಯಾಕೆ ಮಾತನಾಡುತ್ತಿಲ್ಲ? ಆಪರೇಷನ್ ಕಮಲದಿಂದ ಬಂದವರಿಂದಲೇ ಮಾತನಾಡಿಸುತ್ತಿರುವುದೇಕೆ? ನಾವು ಅವರನ್ನು ಮರಳಿ ಪಕ್ಷಕ್ಕೆ ತೆಗೆದುಕೊಳ್ಳುವುದಿಲ್ಲ' ಎಂದರು.

'ರಾಮನಗರದಲ್ಲಿ ಇದೇ 27ರಂದು ನಡೆಯಬೇಕಾಗಿದ್ದ ಪ್ರಜಾಧ್ವನಿ ಯಾತ್ರೆಯನ್ನು ಮುಂದೂಡಿದ್ದೇವೆ' ಎಂದರು.

ಪಕ್ಷದ ನಿರ್ಧಾರಕ್ಕೆ ಬದ್ಧ: ಸಚಿವ ಆರಗ

ಬೆಂಗಳೂರು: 'ಮುಂಬರುವ ಚುನಾವಣೆಯಲ್ಲಿ ಸ್ಪರ್ಧಿಸುವ ವಿಚಾರದಲ್ಲಿ ಪಕ್ಷದ ವರಿಷ್ಠರು ಕೈಗೊಳ್ಳುವ ನಿರ್ಧಾರಕ್ಕೆ ಬದ್ಧನಾಗಿರುತ್ತೇನೆ' ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಹೇಳಿದರು.

ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮುಂದಿನ ಚುನಾವಣೆಯಲ್ಲಿ ಸ್ಪರ್ಧಿಸುವ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ಪಕ್ಷದ ನಿರ್ಧಾರಕ್ಕೆ ಬದ್ಧವಾಗಿರುವವನು ನಾನು. ಯಾವತ್ತೂ ಅಧಿಕಾರಕ್ಕೆ ಅಂಟಿಕೊಂಡಿಲ್ಲ. ಮುಂದಿನ ಚುನಾವಣೆಯಲ್ಲಿ ಟಿಕೆಟ್ ನೀಡಿದರೆ ಸ್ಪರ್ಧಿಸುತ್ತೇನೆ. ಬೇಡ ಎಂದರೆ ಕಣಕ್ಕಿಳಿಯುವುದಿಲ್ಲ' ಎಂದರು.

'ಈವರೆಗೆ ಒಂಬತ್ತು ಚುನಾವಣೆಗಳಲ್ಲಿ ಸ್ಪರ್ಧಿಸಿದ್ದೇನೆ. ಐದು ಚುನಾವಣೆಯಲ್ಲಿ ಸೋತಿದ್ದು, ನಾಲ್ಕು ಬಾರಿ ಗೆದ್ದಿದ್ದೇನೆ. ಸೋತಾಗ ಕುಗ್ಗಿಲ್ಲ, ಗೆದ್ದಾಗ ಹಿಗ್ಗಿಲ್ಲ. ಅವಕಾಶ ಸಿಕ್ಕಾಗ ಪ್ರಾಮಾಣಿಕವಾಗಿ ಕೆಲಸ ಮಾಡಿದ್ದೇನೆ. ಸೋತಾಗಲೂ ಪಕ್ಷ ಸಂಘಟನೆಯಲ್ಲಿ ಸಕ್ರಿಯವಾಗಿದ್ದೆ' ಎಂದು ಹೇಳಿದರು.

ಭ್ರಷ್ಟಾಚಾರ: ಸಮಗ್ರ ತನಿಖೆಗೆ ಸಿದ್ದರಾಮಯ್ಯ ಸವಾಲು

ಪ್ರಜಾವಾಣಿ ವಾರ್ತೆ

ತುಮಕೂರು: 'ನಾನು ಮುಖ್ಯಮಂತ್ರಿ ಆಗಿದ್ದ ಸಮಯದಲ್ಲಿ ₹35 ಸಾವಿರ ಕೋಟಿ ಭ್ರಷ್ಟಾಚಾರ ನಡೆದಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಆರೋಪಿಸಿದ್ದಾರೆ. ಈ ಸಂಬಂಧ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ನೇತೃತ್ವದಲ್ಲಿ ಆಯೋಗ ರಚಿಸಿ ತನಿಖೆ ಮಾಡಿಸಬೇಕು' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಒತ್ತಾಯಿಸಿದ್ದಾರೆ.

ನಗರದ ಗಾಜಿನ ಮನೆಯಲ್ಲಿ ಮಂಗಳವಾರ ಕಾಂಗ್ರೆಸ್ 'ಪ್ರಜಾ ಧ್ವನಿ' ಬಸ್ ಯಾತ್ರೆ ಅಂಗವಾಗಿ ಹಮ್ಮಿಕೊಂಡಿದ್ದ ಕಾರ್ಯಕರ್ತರ ಸಮಾವೇಶದಲ್ಲಿ ಅವರು ಮಾತನಾಡಿದರು.

'ನನ್ನ ಸರ್ಕಾರದ ಅವಧಿಯಲ್ಲಿ ನಡೆದಿದೆ ಎನ್ನಲಾದ ಭ್ರಷ್ಟಾಚಾರ ಹಾಗೂ ಕಳೆದ ಮೂರೂವರೆ ವರ್ಷದ ಬಿಜೆಪಿ ನೇತೃತ್ವದ ಸರ್ಕಾರದ ಅವಧಿಯಲ್ಲಿ ನಡೆದಿರುವ ಭ್ರಷ್ಟಾಚಾರದ ತನಿಖೆಯನ್ನು ನ್ಯಾಯಮೂರ್ತಿಗೆ ವಹಿಸಬೇಕು. ಇಬ್ಬರಲ್ಲಿ ಯಾರು ಭ್ರಷ್ಟಾಚಾರ ಮಾಡಿದ್ದಾರೆ ಎಂಬುದು ಜನತೆಗೆ ಗೊತ್ತಾಗುತ್ತದೆ. ಬೊಮ್ಮಾಯಿ ಅವರಿಗೆ ಧೈರ್ಯ, ಧಮ್ಮಿದ್ದರೆ ಈ ಸವಾಲು ಸ್ವೀಕರಿಸಲಿ' ಎಂದು ಪಂಥಾಹ್ವಾನ ನೀಡಿದರು.

'ಶಿಕ್ಷಣ ಮಂತ್ರಿ ನಾಗೇಶ್ ಅಯೋಗ್ಯ'

'ಶಾಲಾ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಅವರು ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣ ಕೊಡುವುದು ಬಿಟ್ಟು ಗೋಡೆಗೆ ಕೇಸರಿ ಬಣ್ಣ ಬಳಿಸುತ್ತಿದ್ದಾರೆ. ಅವನೊಬ್ಬ ಅಯೋಗ್ಯ ಶಿಕ್ಷಣ ಮಂತ್ರಿ' ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ.ಹರಿಪ್ರಸಾದ್ ಏಕವಚನದಲ್ಲಿ ವಾಗ್ದಾಳಿ ನಡೆಸಿದರು.

ಸಿದ್ಧಗಂಗಾ ಮಠದಲ್ಲಿ ಶಿಕ್ಷಣ ಪಡೆದವರು ಸರಿ ಇಲ್ಲ ಎನ್ನುತ್ತಾರೆ. ಇವರು ಇನ್ನೆಂತಹ ಶಿಕ್ಷಣ ಸಚಿವರು ಎಂದು ತರಾಟೆಗೆ ತೆಗೆದುಕೊಂಡರು.

ಕೊಬ್ಬರಿಗೆ ಪ್ರೋತ್ಸಾಹ ಧನ: ಭರವಸೆ

ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದರೆ ಕೊಬ್ಬರಿಗೆ ಪ್ರೋತ್ಸಾಹ ಧನ ನೀಡಲಾಗುವುದು ಎಂದು ಸಿದ್ದರಾಮಯ್ಯ ಭರವಸೆ ನೀಡಿದರು.

ರೈತರಿಗೆ ಬಡ್ಡಿ ರಹಿತವಾಗಿ ನೀಡುತ್ತಿರುವ ಸಾಲದ ಮೊತ್ತವನ್ನು ₹3 ಲಕ್ಷದಿಂದ ₹5 ಲಕ್ಷಕ್ಕೆ ಹೆಚ್ಚಿಸಲಾಗುವುದು. ಶೇ 3ರಷ್ಟು ಬಡ್ಡಿ ದರದಲ್ಲಿ ನೀಡುತ್ತಿರುವ ಸಾಲದ ಮೊತ್ತವನ್ನು ₹10 ಲಕ್ಷದಿಂದ ₹20 ಲಕ್ಷಕ್ಕೆ ಏರಿಕೆ ಮಾಡಲಾಗುವುದು ಎಂದು ಹೇಳಿದರು.

ಕೋಲಿ, ಕಬ್ಬಲಿಗ ಸೇರಿ ಇತರೆ ಉಪಜಾತಿಗಳು: ಭರವಸೆ

'ಶೀಘ್ರವೇ ಎಸ್‌ಟಿಗೆ ಸೇರ್ಪಡೆ'

ಪ್ರಜಾವಾಣಿ ವಾರ್ತೆ

ಕಲಬುರಗಿ: 'ಕೋಳಿ, ಕೋಲಿ, ಕಬ್ಬಲಿಗ ಸೇರಿ ಇತರೆ ಉಪಜಾತಿಗಳನ್ನು ಪರಿಶಿಷ್ಟ ಪಂಗಡಕ್ಕೆ (ಎಸ್‌ಟಿ) ಸೇರ್ಪಡೆ ಮಾಡುವ ಕಾಲ ಸಮೀಪವಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಜಿಲ್ಲೆಯ ಅಫಜಲಪುರ ತಾಲ್ಲೂಕಿನ ದೇವಲ ಗಾಣಗಾಪುರದಲ್ಲಿ ಮಂಗಳವಾರ ಹೇರೂರ ಶಿಕ್ಷಣ ಸಂಸ್ಥೆ ವತಿಯಿಂದ ನಡೆದ ಕಾರ್ಯಕ್ರಮದಲ್ಲಿ ದಿ.ವಿಠ್ಠಲ ಹೇರೂರ ಅವರ ಕಂಚಿನ ಪ್ರತಿಮೆ ಅನಾವರಣಗೊಳಿಸಿ ಅವರು ಮಾತನಾಡಿದರು.

'ಉಪಜಾತಿಗಳ ಕುಲಶಾಸ್ತ್ರ ಅಧ್ಯಯನದ ಎಲ್ಲ ವಿವರಗಳನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗಿದೆ. ಕೇಂದ್ರ ಬುಡಕಟ್ಟು ವ್ಯವಹಾರಗಳ ಸಚಿವ ಅರ್ಜುನ ಮುಂಡಾ ಅವರನ್ನು ಭೇಟಿಯಾಗಿ, ಈ ಬಗ್ಗೆ ಮನವರಿಕೆ ಮಾಡಲಾಗಿದೆ' ಎಂದರು.

ಗಾಣಗಾಪುರ ಕ್ಷೇತ್ರ ಅಭಿವೃದ್ಧಿ: 'ಕಾಶಿ ವಿಶ್ವನಾಥ ಮತ್ತು ಉಜ್ಜಯಿನಿ, ಕಾಳಹಸ್ತಿ ಮಾದರಿಯಲ್ಲಿ ಜಿಲ್ಲೆಯ ಗಾಣಗಾಪುರ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಸರ್ಕಾರ ಬದ್ಧವಿದೆ. ಈಗಾಗಲೇ ₹ 5 ಕೋಟಿ ನೀಡಲಾಗಿದೆ. ಜಿಲ್ಲಾಡಳಿತವು ಕ್ಷೇತ್ರದ ಅಭಿವೃದ್ಧಿಗೆ ₹ 67 ಕೋಟಿ ವೆಚ್ಚದ ವಿಸ್ತೃತ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸಿದ್ದು, ಬಜೆಟ್‌ನಲ್ಲಿ ಹಣ ಒದಗಿಸಲಾಗುವುದು' ಎಂದರು.

ಇದಕ್ಕೂ ಮುನ್ನ ಬಸವರಾಜ ಬೊಮ್ಮಾಯಿ ಅವರು ಗಾಣಗಾಪುರದ ದತ್ತ ಮಹಾರಾಜರ ದೇವಾಲಯದಲ್ಲಿ ಪೂಜೆ ಸಲ್ಲಿಸಿದರು. ಅರ್ಚಕರು ಪಂಚಲೋಹ ಮತ್ತು ಬೆಳ್ಳಿ ವಿಗ್ರಹವನ್ನು ಕಾಣಿಕೆಯಾಗಿ ನೀಡಿದರು.

ಬಲಿಜ ಸಮುದಾಯ: ರಾಜಕೀಯ, ಉದ್ಯೋಗದಲ್ಲಿ 2ಎ ಮೀಸಲಾತಿಗೆ ಆಗ್ರಹ

ಮೈಸೂರು: 'ಬಲಿಜ ಸಮುದಾಯಕ್ಕೆ ರಾಜಕೀಯ ಮತ್ತು ಉದ್ಯೋಗ ಕ್ಷೇತ್ರದಲ್ಲಿ 2ಎ ಮೀಸಲಾತಿಗೆ ಆಗ್ರಹಿಸಿ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಜ.27ರಂದು 'ಬಲಿಜ ಸಂಕಲ್ಪ ಸಭೆ' ಆಯೋಜಿಸಲಾಗಿದೆ' ಎಂದು ಯೋಗಿ ನಾರೇಯಣ ಬಣಜಿಗ(ಬಲಿಜ) ಸಂಘದ ಗೌರವಾಧ್ಯಕ್ಷ ಎಚ್‌.ಎ.ವೆಂಕಟೇಶ್ ತಿಳಿಸಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, '2ಎ ಪ್ರವರ್ಗದಲ್ಲಿದ್ದ ಬಲಿಜರನ್ನು ವೈಜ್ಞಾನಿಕ ಮಾನದಂಡವಿಲ್ಲದೆ 3ಎ ಗೆ ವರ್ಗಾಯಿಸಿದ್ದನ್ನು ವಿರೋಧಿಸಿ ನಡೆಸಿದ ಸತತ ಹೋರಾಟದಿಂದ 2011ರಲ್ಲಿ ಶಿಕ್ಷಣದಲ್ಲಿ 2ಎ ಮೀಸಲಾತಿ ದೊರೆಯಿತು. ಆದರೆ ಇದೂ ಅಪೂರ್ಣವೇ' ಎಂದು ಪ್ರತಿಪಾದಿಸಿದರು.

'ಪ್ರತಿ 10ವರ್ಷಕ್ಕೊಮ್ಮೆ ಸಮುದಾಯದ ಸ್ಥಿತಿ–ಗತಿಗಳನ್ನು ಅರಿತು ಮಿಸಲಾತಿ ಪರಿಷ್ಕರಿಸುವ ಕೆಲಸ ನಡೆದಿಲ್ಲ. 40ರಿಂದ 50 ಲಕ್ಷ ಜನಸಂಖ್ಯೆಯುಳ್ಳ ಬಲಿಜ ಸಮುದಾಯದಲ್ಲಿ ಜನಪ್ರತಿನಿಧಿಗಳೇ ಇಲ್ಲ. ಸರ್ಕಾರಿ ಗುಮಾಸ್ತರ ಕೆಲಸವೂ ಸಿಕ್ಕಿಲ್ಲ' ಎಂದು ವಿಷಾದಿಸಿದರು.

ಇದೇ ಸಂದರ್ಭದಲ್ಲಿ 'ಬಲಿಜ ಸಂಕಲ್ಪ ಸಭೆ' ಪೋಸ್ಟರ್ ಬಿಡುಗಡೆಗೊಳಿಸಲಾಯಿತು.

ಚುಟುಕು ಸುದ್ದಿ

'ಸಚಿವ ಮಾಧುಸ್ವಾಮಿ ಹೇಳಿರುವುದು ಬಿಎಸ್‌ವೈ ಕುಟುಂಬಕ್ಕೆ'

ಸೋಮವಾರಪೇಟೆ: 'ಅಪ್ಪ, ಮಕ್ಕಳು, ಮೊಮ್ಮಕ್ಕಳು ಮತ್ತು ಅವರ ಪತ್ನಿಯರು ಹಣ ಮಾಡುವುದಕ್ಕೆ ಇಳಿದಿದ್ದಾರೆ' ಎಂಬ ಸಚಿವ ಮಾಧುಸ್ವಾಮಿ ಹೇಳಿಕೆಗೆ ಪ್ರತಿಕ್ರಿಯಿಸಿರುವ ಸಂಸದ ಪ್ರಜ್ವಲ್ ರೇವಣ್ಣ,'ಯಡಿಯೂರಪ್ಪ ಅವರ ಕುಟುಂಬ ಎನ್ನಲು ಹೋಗಿ, ಬಾಯಿ ತಪ್ಪಿನಿಂದ ದೇವೇಗೌಡರ ಕುಟುಂಬ ಎಂದಿರಬಹುದು. ಸಚಿವರಿಗೆ ವಯಸ್ಸಾಗಿದೆ. ಅದಕ್ಕೆ ಬಾಯಿತಪ್ಪಿ ಮಾತನಾಡಿದ್ದಾರೆ' ಎಂದರು.

'ಬಿಜೆಪಿಯ ಪಾಪದ ಪುರಾಣ' ಪುಸ್ತಕ ಬಿಡುಗಡೆ

ದೊಡ್ಡಬಳ್ಳಾಪುರ: ಬಿಜೆಪಿ ಸರ್ಕಾರದ ಶೇ 40ರಷ್ಟು ಕಮಿಷನ್ ಭ್ರಷ್ಟಾಚಾರದ ಕುರಿತ 'ಬಿಜೆಪಿ ಪಾಪದ ಪುರಾಣ ಪುಸ್ತಕ'ವನ್ನು ಇದೇ 27ರಂದು ಬೆಂಗಳೂರಿನಲ್ಲಿ ಬಿಡುಗಡೆ ಮಾಡಲಾಗುವುದು. ಇದನ್ನು ಮತದಾರರ ಮನೆಗಳಿಗೆ ತಲುಪಿಸಲು ವ್ಯವಸ್ಥೆ ಮಾಡಲಾಗುವುದು ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ತಿಳಿಸಿದರು.

ಪಠಾಣ್: ಚಿತ್ರಮಂದಿರದ ಮೇಲೆ ಕಲ್ಲು, ನಾಲ್ವರ ವಶ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಹಿಂದಿ ಚಲನಚಿತ್ರ 'ಪಠಾಣ್' ಪ್ರದರ್ಶನ ವಿರೋಧಿಸಿ, ನಗರದ ಸ್ವರೂಪ ಚಿತ್ರಮಂದಿರದ ಮೇಲೆ ಮಂಗಳವಾರ ರಾತ್ರಿ ಕೆಲವು ಕಿಡಿಗೇಡಿಗಳು ಕಲ್ಲು ತೂರಾಟ ನಡೆಸಿದರು. ಈ ವೇಳೆ ಸ್ಥಳಕ್ಕೆ ಬಂದ ಪೊಲೀಸರು ನಾಲ್ವರು ಯುವಕರನ್ನು ವಶಕ್ಕೆ ಪಡೆದಿದ್ದಾರೆ.

'ಶಾರೂಖ್ ಖಾನ್ ಹಾಗೂ ದೀಪಿಕಾ ಪಡುಕೋಣೆ ಅಭಿನಯದ 'ಪಠಾಣ್' ಚಿತ್ರದಲ್ಲಿ ಅಶ್ಲೀಲ ದೃಶ್ಯಗಳಿವೆ. ಇಂಥ ಚಿತ್ರ ಪ್ರದರ್ಶಿಸಬಾರದು' ಎಂದು ಯುವಕರು ಸಿನಿಮಾ ಥೇಟರ್ ಮುಂದೆ ಗಲಾಟೆ ಶುರು ಮಾಡಿದರು. ಅದಾದ ಬಳಿಕವೂ ಸಾಯಂಕಾಲದ ಪ್ರದರ್ಶನ ಆರಂಭಿಸಿದ್ದರಿಂದ ಕಲ್ಲು ತೂರಾಟ ನಡೆಸಿದರು ಎಂದು ಪೊಲೀಸರು ತಿಳಿಸಿದ್ದಾರೆ.

ಛತ್ರಪತಿ ಶಿವಾಜಿ, ಹಿಂದೂ ದೇವತೆಗಳ ಅಶ್ಲೀಲ ಚಿತ್ರಣ: ಜಾಲತಾಣದಲ್ಲಿ ಪೋಸ್ಟ್

ಬೆಳಗಾವಿ: ಛತ್ರಪತಿ ಶಿವಾಜಿ ಹಾಗೂ ಹಿಂದೂ ದೇವತೆಗಳ ಚಿತ್ರಗಳಿಗೆ ಅಶ್ಲೀಲ ಚಿತ್ರಗಳನ್ನು ಅಂಟಿಸಿ ಸಾಮಾಜಿಕ ಜಾಲತಾಣದಲ್ಲಿ ಹರಿಬಿಡಲಾಗಿದೆ. ಈ ಚಿತ್ರಗಳು ಮಂಗಳವಾರ ನಗರದ ಹಲವರ ಮೊಬೈಲ್‌ಗಳಿಗೂ ಬಂದಿವೆ.

ಸಾಮಾಜಿಕ ಜಾಲತಾಣಗಳಲ್ಲಿ ಇಸ್ಲಾಮ್ ಜಿಂದಾಬಾದ್ 786, ಕಿಂಗ್ ಕಿ ಜಾನ್, ಇಟ್ಸ್ ಅರ್ಮಾನ್ ಟೈಗರ್, ಆರ್. ಎಕ್ಸ್.ಇಮ್ರಾನ್, ಪ್ರಸಾದ್... ಎಂಬ ಹೆಸರಿನ ಖಾತೆಗಳಲ್ಲಿ ಈ ಪೋಸ್ಟರ್‌ಗಳು ಅಪ್ಲೋಡ್ ಆಗಿವೆ. ಕೆಲವು ಎರಡು ದಿನಗಳ ಹಿಂದೆ ಅಪ್ಲೋಡ್ ಮಾಡಿದ್ದು, ಇನ್ನು ಕೆಲವನ್ನು ಮಂಗಳವಾರವೇ ಹಾಕಲಾಗಿದೆ.

ಈ ಪೋಸ್ಟ್‌ಗಳಲ್ಲಿ 'ಪೋರ್ನ್‌ಸ್ಟಾರ್'ಗಳ ದೇಹಕ್ಕೆ ಶಿವಾಜಿ ಭಾವಚಿತ್ರ ಅಂಟಿಸಿ ಅವಮಾನಿಸಲಾಗಿದೆ. ಉರ್ದು, ಪರ್ಷಿಯನ್ ಭಾಷೆಯಲ್ಲಿ ಅಶ್ಲೀಲ ಪದ ಬಳಸಲಾಗಿದೆ. ಈ ಪೋಸ್ಟ್‌ಗಳಿಗೆ ಲೈಕ್, ಶೇರ್, ಫಾಲೊ ಹಾಗೂ ಕಮೆಂಟ್‌ಗಳನ್ನೂ ಮಾಡಲಾಗಿದೆ. ಶಿವ–ಪಾರ್ವತಿ, ಶ್ರೀರಾಮ–ಹನುಮಂತ, ಲಕ್ಷ್ಮಿ–ಸರಸ್ವತಿಯರ ಫೋಟೋಗಳನ್ನೂ ಅಶ್ಲೀಲವಾಗಿ ತಿರುಚಿ ಅಪ್ಲೋಡ್ ಮಾಡಲಾಗಿದೆ.

ಬಂಧನಕ್ಕೆ ಆಗ್ರಹ

'ಶಿವಾಜಿ ಮಹಾರಾಜರ ಫೋಟೊ ಬಳಸಿ ಅವಮಾನ ಮಾಡಿದ ದುರುಳರನ್ನು ತಕ್ಷಣ ಬಂಧಿಸಬೇಕು. ಅವರ ಮೇಲೆ ಸಣ್ಣಪುಟ್ಟ ಕೇಸ್‌ಗಳನ್ನು ಹಾಕಿ ಕೈತೊಳೆದುಕೊಳ್ಳದೇ ಉಗ್ರ ಶಿಕ್ಷೆ ಆಗುವಂತೆ ಎಚ್ಚರಿಕೆ ವಹಿಸಬೇಕು. ಸಾಮಾಜಿಕ ಶಾಂತಿ ಕದಡುವ ಹಾಗೂ ಮಹಾತ್ಮರಿಗೆ ಅವಮಾನ ಮಾಡುವವರಿಗೆ ಉತ್ತರ ಪ್ರದೇಶ ಮಾದರಿಯಲ್ಲಿ ಶಿಕ್ಷೆ ಕೊಡಬೇಕು' ಎಂದು ಶಾಸಕ ಅಭಯ ಪಾಟೀಲ ಆಗ್ರಹಿಸಿದರು.

ವಿವಿಧ ಸಮಾಜದ ಮುಖಂಡರೊಂದಿಗೆ ನಗರ ಪೊಲೀಸ್ ಕಮಿಷನರ್ ಡಾ.ಎಂ.ಬಿ. ಬೋರಲಿಂಗಯ್ಯ ಅವರನ್ನು ಭೇಟಿ ಮಾಡಿದ ಶಾಸಕ, 'ಶಿವಾಜಿ ಮಹಾರಾಜರು ಶಿವ ಸ್ವರೂಪ. ಅವರ ಚಿತ್ರಗಳನ್ನು ಬಳಸಿ ಅತ್ಯಂತ ಅಶ್ಲೀಲವಾಗಿ ಅವಮಾನಿಸಲಾಗಿದೆ. ಇದನ್ನು ಸಹಿಸಲಸಾಧ್ಯ. ತಕ್ಷಣ ಕ್ರಮ ಕೈಗೊಳ್ಳಬೇಕು' ಎಂದೂ ಒತ್ತಾಯಿಸಿದರು.

'ಪುರುಷೋತ್ತಮ ಸನ್ಮಾನ'ಕ್ಕೆ ಗುಜರಾತ್‌ನ ಮಗನ್‌ಭಾಯ್ ಆಯ್ಕೆ

ಶಿವಮೊಗ್ಗ: ತೀರ್ಥಹಳ್ಳಿಯ ಪುರುಷೋತ್ತಮರಾವ್ ಕೃಷಿ ಸಂಶೋಧನಾ ಪ್ರತಿಷ್ಠಾನದಿಂದ ಸಾವಯವ ಕೃಷಿಕ ಪುರುಷೋತ್ತಮ ರಾಯರು ಹಾಗೂ ಶಾಂತಾ ದಂಪತಿಯ ನೆನಪಿನಲ್ಲಿ ನೀಡುವ 'ಪುರುಷೋತ್ತಮ ಸನ್ಮಾನ'ಕ್ಕೆ ಈ ಬಾರಿ ಗುಜರಾತ್‌ನ ರೈತ ಮಗನ್‌ಭಾಯ್ ಹಮೀರ್‌ಭಾಯ್ ಆಯ್ಕೆಯಾಗಿದ್ದಾರೆ.

ಜ. 27ರಂದು ಬೆಳಿಗ್ಗೆ 10.30ಕ್ಕೆ ತೀರ್ಥಹಳ್ಳಿಯ ಗೋಪಾಲಗೌಡ ರಂಗಮಂದಿರದಲ್ಲಿ 'ಪುರುಷೋತ್ತಮ ಸನ್ಮಾನ' ಕಾರ್ಯಕ್ರಮ ನಡೆಯಲಿದೆ. ಸಾವಯವ ಕೃಷಿಯಲ್ಲಿ ಸಾಧನೆ ಮಾಡುವ ರೈತರನ್ನು ಗುರುತಿಸಿ ಪ್ರತಿಷ್ಠಾನವು ರಾಷ್ಟ್ರ ಮಟ್ಟದಲ್ಲಿ ಪುರಸ್ಕಾರ ನೀಡಿ ಗೌರವಿಸುತ್ತಿದೆ.


ಮಗನ್‌ಭಾಯ್

ಮರುಭೂಮಿಯಾಗಿರುವ ಕಛ್ ಪ್ರದೇಶದ ಗಾಂಧಿಧಾಮ್ ಜಿಲ್ಲೆಯ ಅಂಜರ್ ತಾಲ್ಲೂಕಿನ ನಿಂಗಲ್ ಗ್ರಾಮದಲ್ಲಿ ವೈವಿಧ್ಯಮಯ ಬೆಳೆಗಳನ್ನು ಬೆಳೆದು ಸಾಧನೆ ಮಾಡಿರುವ ಮಗನ್‌ಭಾಯ್ ಅವರನ್ನು ಈ ವರ್ಷ ಸನ್ಮಾನಿಸಲಾಗುತ್ತಿದೆ.

ನಿಧನ ವಾರ್ತೆ

ಹಾರ್ಯಾಡಿ ಚಂದ್ರಶೇಖರ ಕೆದ್ಲಾಯ

ಬ್ರಹ್ಮಾವರ (ಉಡುಪಿ ಜಿಲ್ಲೆ): ನಿವೃತ್ತ ಅಧ್ಯಾಪಕ, ಗಾಯಕ ಚಂದ್ರಶೇಖರ ಕೆದ್ಲಾಯ ಹಾರ್ಯಾಡಿ (72) ಮಂಗಳವಾರ ಬ್ರಹ್ಮಾವರದಲ್ಲಿ ನಿಧನರಾದರು. ಅವರಿಗೆ ಪತ್ನಿ, ಇಬ್ಬರು ಪುತ್ರಿಯರು ಮತ್ತು ಬಂಧುಗಳು ಇದ್ದಾರೆ.

ಬ್ರಹ್ಮಾವರದ ಅವರ ಮನೆಯಲ್ಲಿ ಬುಧವಾರ ಬೆಳಿಗ್ಗೆ 9ರಿಂದ 11ರವರೆಗೆ ಸಾರ್ವಜನಿಕ ದರ್ಶನಕ್ಕೆ ಅವಕಾಶ ಕಲ್ಪಿಸಿದ್ದು, ನಂತರ ಹಾರ್ಯಾಡಿಯಲ್ಲಿ ಅಂತ್ಯಸಂಸ್ಕಾರ ನಡೆಯಲಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.

ಕುಂದಾಪುರ ತಾಲ್ಲೂಕಿನ ಹೆಸ್ಕುತ್ತೂರು ಗ್ರಾಮದ ಹಾರ್ಯಾಡಿಯಲ್ಲಿ ಜನಿಸಿದ್ದ ಇವರು, ಹಂಗಾರಕಟ್ಟೆಯಲ್ಲಿ ಶಿಕ್ಷಕ ವೃತ್ತಿ ಜೀವನ ಆರಂಭಿಸಿ, ಮಂಗಳೂರಿನ ಕೆನರಾ ಹೈಸ್ಕೂಲ್‌ನಲ್ಲಿ 4 ವರ್ಷ, ನಂತರ ಮೂರು ದಶಕಗಳ ಕಾಲ ಬ್ರಹ್ಮಾವರದ ನಿರ್ಮಲ ಪ್ರೌಢ ಶಾಲೆಯಲ್ಲಿ ಕನ್ನಡ ಅಧ್ಯಾಪಕರಾಗಿ ಸೇವೆ ಸಲ್ಲಿಸಿದ್ದರು. ಸಂಗೀತ, ಗಮಕ, ನಾಟಕಗಳ ಸಂಗೀತ ನಿರ್ದೇಶನ, ನೃತ್ಯರೂಪಕಗಳ ನಿರ್ದೇಶನಗಳ ಮೂಲಕ ಪ್ರಸಿದ್ಧ ಪಡೆದಿದ್ದರು.



ಕವಿ ಗೋಪಾಲಕೃಷ್ಣ ಅಡಿಗರ 'ಕಟ್ಟುವೆವು ನಾವು ಹೊಸ ನಾಡೊಂದನು, ರಸದ ಬೀಡೊಂದನು' ಕವನವನ್ನು ತಮ್ಮ ಗಾಯನ ಮೂಲಕ ಜನಪ್ರಿಯಗೊಳಿಸಿದ್ದು ಇವರ ಹೆಗ್ಗಳಿಕೆ.

ತನಿಖಾಧಿಕಾರಿಗೆ ₹ 76 ಲಕ್ಷ ಲಂಚ: ದೂರು

ಪ್ರಜಾವಾಣಿ ವಾರ್ತೆ

ಕಲಬುರಗಿ: ಪಿಎಸ್‌ಐ ನೇಮಕಾತಿ ಅಕ್ರಮ ಪ್ರಕರಣದಿಂದ ಪಾರು ಮಾಡಲು ತಾನು ಸಿಐಡಿ ಡಿವೈಎಸ್ಪಿ ಶಂಕರಗೌಡ ಪಾಟೀಲ ಅವರಿಗೆ ₹ 76 ಲಕ್ಷ ನೀಡಿದ್ದಾಗಿ ಪ್ರಕರಣದ ಪ್ರಮುಖ ಆರೋಪಿ ಆರ್. ಡಿ. ಪಾಟೀಲ ಲೋಕಾಯುಕ್ತರಿಗೆ ದೂರು ನೀಡಿದ್ದಾನೆ.

ದೂರಿನ ಜೊತೆ 8.04 ನಿಮಿಷದ ಆಡಿಯೊದ ಪೆನ್ ಡ್ರೈವ್ ದಾಖಲೆಯಾಗಿ ಕೊಟ್ಟಿದ್ದು, ಈ ಸಂಬಂಧ 'ಆರ್.ಡಿ. ಪಾಟೀಲ ಯುವ ಬ್ರಿಗೇಡ್ ಅಫಜಲಪುರ' ಹೆಸರಿನ ಫೇಸ್‌ಬುಕ್ ಪೇಜ್‌ನಲ್ಲಿ ಪಾಟೀಲ ಮಾತನಾಡಿದ ವಿಡಿಯೊ ಅಪ್‌ಲೋಡ್ ಆಗಿದೆ.

'ಶಂಕರಗೌಡ ಪಾಟೀಲ ಅವರು ಪ್ರಕರಣ ಮುಂದುವರಿಸದಿರಲು ₹ 3 ಕೋಟಿ ಹಣಕ್ಕೆ ಬೇಡಿಕೆ ಇಟ್ಟಿದ್ದರು. ಆದರೆ, ನಾನು ₹ 76 ಲಕ್ಷ ಹಣ ಕೊಡುತ್ತೇನೆ ಎಂದು ಹೇಳಿ ಬ್ಯಾಂಕ್ ಆಫ್ ಬರೋಡ ಶಾಖೆಯಿಂದ ಹಣ ಡ್ರಾ ಮಾಡಿಸಿ, ನನ್ನ ಅಳಿಯ ಶ್ರೀಕಾಂತ ಮೂಲಕ ಅವರಿಗೆ ತಲುಪಿಸಿದ್ದೆ. ನಾನು ಜಾಮೀನು ಪಡೆದು ಹೊರ ಬಂದ ಬಳಿಕವೂ ಹಣ ನೀಡುವಂತೆ ಸಿಐಡಿ ಅಧಿಕಾರಿಗಳು ಕಿರುಕುಳ ನೀಡಿದ್ದಾರೆ' ಎಂದು ವಿಡಿಯೊದಲ್ಲಿ ಹೇಳಿದ್ದಾನೆ. ಇದನ್ನು ಶಂಕರಗೌಡ ಪಾಟೀಲ ಅಲ್ಲಗಳೆದಿದ್ದಾರೆ.

'ಆರ್.ಡಿ. ಪಾಟೀಲ ಜೊತೆ ನಾನು ಮಾತನಾಡಿದ್ದು ಜುಲೈ ತಿಂಗಳಲ್ಲಿ. ಎಸಿಬಿಯವರೂ ಇದರ ಬಗ್ಗೆ ತನಿಖೆ ನಡೆಸಿ, ಏನೂ ಹುರುಳಿಲ್ಲ ಎಂದಿದ್ದಾರೆ. ತನಿಖಾಧಿಕಾರಿಗಳ ನೈತಿಕತೆ ಕುಗ್ಗಿಸಲು ಯತ್ನ ನಡೆದಿದೆ. ನನ್ನ ಹಿಂದೆ ಹಲವು ಬಾರಿ ಪಾಟೀಲ ತನ್ನ ಹಿಂಬಾಲಕರನ್ನು ಛೂ ಬಿಟ್ಟು ಹಲ್ಲೆ ಮಾಡಲೂ ಯತ್ನಿಸಿದ್ದ' ಎಂದು ಶಂಕರಗೌಡ ಪಾಟೀಲ 'ಪ್ರಜಾವಾಣಿ'ಗೆ ತಿಳಿಸಿದರು.

ಆರ್.ಡಿ. ಪಾಟೀಲ ಬಗ್ಗೆ ತನಿಖೆ ಪ್ರಗತಿಯಲ್ಲಿದೆ. ಪಾಟೀಲ ತನ್ನ ಆರೋಪಕ್ಕೆ ಪೂರಕವಾಗಿ ದಾಖಲೆ ಸಲ್ಲಿಸಿದರೆ ಅಧಿಕಾರಿ ವಿರುದ್ಧವೂ ತನಿಖೆ ನಡೆಸಲಾಗುವುದು

ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

ಜಾಮೀನು ನಕಾರ

ಕಲಬುರಗಿ: ಪಿಎಸ್‌ಐ ನೇಮಕಾತಿ ಅಕ್ರಮದ ಆರೋಪಿ ಆರ್‌.ಡಿ. ಪಾಟೀಲ ತಂಡದವರು ಬ್ಲೂಟೂತ್ ಮೂಲಕ ನೀಡಿದ ಉತ್ತರ ಕೇಳಿ ಪರೀಕ್ಷೆಯಲ್ಲಿ ಉತ್ತೀರ್ಣಗೊಂಡ ಆರೋಪಿ ಜೇವರ್ಗಿ ತಾಲ್ಲೂಕಿನ ಬದನಿಹಾಳ ಗ್ರಾಮದ ನಿವಾಸಿ ಸೋಮನಾಥ ಸಾಹೇಬಗೌಡ ಬಿರಾದಾರ ಎಂಬಾತನ ಜಾಮೀನು ಅರ್ಜಿಯನ್ನು ಇಲ್ಲಿನ ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯವು ತಿರಸ್ಕರಿಸಿದೆ.

ಬುಧವಾರ, ಜನವರಿ 25, 2023 | ₹ 6.00

ಪ್ರಜಾ ವಾ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿದ್ಧತಾ ಸಭೆಯಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ವಿವರಣೆ

ಏರೋ ಇಂಡಿಯಾ ವೈಮಾನಿಕ ಪ್ರದರ್ಶನ: 731 ಸಂಸ್ಥೆಗಳ ನೋಂದಣಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರಿನ ಯಲಹಂಕದ ವಾಯುನೆಲೆಯಲ್ಲಿ ಫೆಬ್ರುವರಿ 13ರಿಂದ 17ರ ವರೆಗೆ ನಡೆಯಲಿರುವ ಏರೋ ಇಂಡಿಯಾ ವೈಮಾನಿಕ ವಸ್ತು ಪ್ರದರ್ಶನದಲ್ಲಿ ಭಾಗಿಯಾಗಲು 731 ಸಂಸ್ಥೆಗಳು ಈಗಾಗಲೇ ಹೆಸರು ನೋಂದಣಿ ಮಾಡಿಕೊಂಡಿವೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ತಿಳಿಸಿದರು.

ಮಂಗಳವಾರ ನಡೆದ ವೈಮಾನಿಕ ಪ್ರದರ್ಶನದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ‘35 ಸಾವಿರ ಚದರ ಮೀಟರ್ ಪ್ರದೇಶದಲ್ಲಿ ನಡೆಯಲಿರುವ ಈ ಪ್ರದರ್ಶನದಲ್ಲಿ ಭಾರತದ ವೈಮಾನಿಕ ಕ್ಷೇತ್ರದ ಪರಾಕ್ರಮದ ಅರಿವು ಇಡೀ ಜಗತ್ತಿಗೆ ಆಗಲಿದೆ. ಸದೃಢ ಹಾಗೂ ಸ್ವಾವಲಂಬಿ ನವ ಭಾರತದ ಉದಯಕ್ಕೆ ಈ ಪ್ರದರ್ಶನ ವೇದಿಕೆ ಆಗಲಿದೆ’ ಎಂದರು.



ನವದೆಹಲಿಯಲ್ಲಿ ಮಂಗಳವಾರ ನಡೆದ ಏರೋ ಇಂಡಿಯಾ 2023 ಸಿದ್ಧತಾ ಸಭೆಯಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಮಾತನಾಡಿದರು. ಸೇನಾ ಪಡೆಗಳ ಮುಖ್ಯಸ್ಥ ಜನರಲ್ ಅನಿಲ್ ಚೌಹಾಣ್ ಮತ್ತು ರಕ್ಷಣಾ ಕಾರ್ಯದರ್ಶಿ ಗಿರಿಧರ್ ಅರಮನೆ ಇದ್ದರು — ಪಿಟಿಐ ಚಿತ್ರ

‘ಇದೊಂದು ಕೇವಲ ಕಾರ್ಯಕ್ರಮವಲ್ಲ. ದೇಶದ ರಕ್ಷಣಾ ಹಾಗೂ ವೈಮಾನಿಕ ಕ್ಷೇತ್ರಗಳ ಸಾಧನೆಗಳನ್ನು ಪ್ರತಿಬಿಂಬಿಸುವ ವೇದಿಕೆಯೂ ಆಗಲಿದೆ. ಪ್ರದರ್ಶನದಲ್ಲಿ ವಿವಿಧ ಒಪ್ಪಂದಗಳಿಗೆ ಸಹಿ ಹಾಕಲಾಗುವುದು. ಇದು ಅತೀ ದೊಡ್ಡ ವೈಮಾನಿಕ ಪ್ರದರ್ಶನ ಆಗಲಿದೆ’ ಎಂದು ಅವರು ಹೇಳಿದರು.

ಭಾರತದ ರಕ್ಷಣಾ ಉದ್ಯಮವು ಪರಿವರ್ತನೆಯ ಹಾದಿಯಲ್ಲಿ ಸಾಗುತ್ತಿದೆ. ಖಾಸಗಿ ವಲಯದ ಸಕ್ರಿಯ ಭಾಗವಹಿಸುವಿಕೆ ಆ ಬದಲಾವಣೆಗೆ ದೊಡ್ಡ ವೇಗವರ್ಧಕವಾಗಿದೆ ಎಂದೂ ಅವರು ಹೇಳಿದರು.

ವೈಮಾನಿಕ ಪ್ರದರ್ಶನದ ಮೂಲಕ ಇತರ ರಾಷ್ಟ್ರಗಳೊಂದಿಗೆ ದೇಶದ ಸಂಬಂಧವನ್ನು ಇನ್ನಷ್ಟು ಬಲಪಡಿಸುವ ಗುರಿ ಇರಿಸಿಕೊಳ್ಳಲಾಗಿದೆ ಎಂದು ಅವರು ತಿಳಿಸಿದರು.

‘ಕರ್ನಾಟಕ ರಾಜ್ಯವು ಹಲವು ವರ್ಷಗಳಿಂದ ವೈಮಾನಿಕ ಪ್ರದರ್ಶನವನ್ನು ಯಶಸ್ವಿಯಾಗಿ ಆಯೋಜಿಸುತ್ತಿದೆ. ಇದು ಕರ್ನಾಟಕವನ್ನು ಏರೋಸ್ಪೇಸ್ ಉದ್ಯಮದ ಕೇಂದ್ರ ಬಿಂದುವನ್ನಾಗಿ ಪರಿವರ್ತಿಸುತ್ತಿದೆ. ದೇಶದ ಆರ್ಥಿಕ ಪ್ರಗತಿಗೆ ದೊಡ್ಡ ಕೊಡುಗೆ ನೀಡುತ್ತಿರುವ ರಾಜ್ಯಗಳಲ್ಲಿ ಕರ್ನಾಟಕವೂ ಒಂದು’ ಎಂದು ಅವರು ಹೇಳಿದರು.

ಮೈಸೂರು ರಸ್ತೆ–ಕೆಂಗೇರಿ ಮೆಟ್ರೊ ರೈಲು ಸಂಚಾರ ನಾಲ್ಕು ದಿನ ಸ್ಥಗಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೆಟ್ರೊ ರೈಲು ನೇರಳೆ ಮಾರ್ಗದಲ್ಲಿ ಮೈಸೂರು ರಸ್ತೆಯಿಂದ ಕೆಂಗೇರಿ ತನಕ ನಾಲ್ಕು ದಿನ ಮೆಟ್ರೊ ರೈಲು ಸಂಚಾರ ಸ್ಥಗಿತಗೊಳ್ಳಲಿದೆ.

ಕೆಂಗೇರಿಯಿಂದ ಚೆಲ್ಲಘಟ್ಟದ ತನಕದ ಮಾರ್ಗದ ವಿಸ್ತರಣೆಗೆ ಸಂಬಂಧಿಸಿದ ಕಾಮಗಾರಿಗಾಗಿ ಜ.27ರಿಂದ(ಶುಕ್ರವಾರ) ಜ.30ರ (ಸೋಮವಾರ) ತನಕ ಸಂಚಾರ ಸ್ಥಗಿತಗೊಳ್ಳಲಿದೆ. ಬೈಯಪ್ಪನಹಳ್ಳಿಯಿಂದ ಮೈಸೂರು ರಸ್ತೆ ತನಕ ರೈಲುಗಳ ಸೇವೆ ಲಭ್ಯವಿರಲಿದೆ. ಹಸಿರು ಮಾರ್ಗದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ, ವೇಳಾಪಟ್ಟಿಯಂತೆ ರೈಲುಗಳು ಕಾರ್ಯಾಚರಣೆ ಮಾಡಲಿವೆ.



‘ಜ.31ರ ಮಂಗಳವಾರ ಬೆಳಿಗ್ಗೆ 5 ಗಂಟೆಯಿಂದ ವೇಳಾಪಟ್ಟಿಯಂತೆ ರೈಲುಗಳ ಸಂಚಾರ ಪುನರ್ ಆರಂಭವಾಗಲಿದೆ. ಪ್ರಯಾಣಿಕರಿಗೆ ಆಗುವ ಅನಾನುಕೂಲಕ್ಕೆ ವಿಷಾದಿಸುತ್ತೇವೆ’ ಎಂದು ಬಿಎಂಆರ್‌ಸಿಎಲ್ ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ ತಿಳಿಸಿದ್ದಾರೆ.

ಮೆಟ್ರೊ ರೈಲಿನಲ್ಲಿ ನಿತ್ಯ ಸರಾಸರಿ 5.5 ಲಕ್ಷ ಜನ ಪ್ರಯಾಣಿಸುತ್ತಿದ್ದು, ಈ ಪೈಕಿ ಮೈಸೂರು ರಸ್ತೆ-ಕೆಂಗೇರಿ ನಡುವೆಯೇ ಅಂದಾಜು 35 ಸಾವಿರದಿಂದ 40 ಸಾವಿರ ಜನ ಪ್ರಯಾಣಿಸುತ್ತಾರೆ. ನಾಲ್ಕು ದಿನ ಅದರಲ್ಲೂ ವಾರಾಂತ್ಯದಲ್ಲಿ ಸಂಚಾರ ಸ್ಥಗಿತಗೊಳ್ಳುವುದರಿಂದ ಪ್ರಯಾಣಿಕರು ತೊಂದರೆಗೆ ಸಿಲುಕಲಿದ್ದಾರೆ. ಈ ಮಾರ್ಗದಲ್ಲಿ ವಾಹನ ದಟ್ಟಣೆಯೂ ಹೆಚ್ಚಾಗುವ ಸಾಧ್ಯತೆ ಇದೆ.

ಒಟ್ಟಾರೆ ನಿತ್ಯ ₹1 ಕೋಟಿಯಿಂದ ₹1.2 ಕೋಟಿ ವರಮಾನ ಬರುತ್ತಿದ್ದು, ₹12 ಲಕ್ಷದಿಂದ ₹15 ಲಕ್ಷ ವರಮಾನ ಈ ಮಾರ್ಗದಿಂದ ಬರುತ್ತಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ಹೇಳುತ್ತಾರೆ.

‘ದಲಿತ ಸಾಹಿತ್ಯದ ತಾತ್ವಿಕತೆ’ ಪಠ್ಯಕ್ಕೆ ಕೊಕ್

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಬಿ.ಎ ಪದವಿಯ ಮೂರನೇ ಸೆಮಿಸ್ಟರ್‌ನ ಪಠ್ಯಪುಸ್ತಕದ ನಾಲ್ಕನೇ ಅಧ್ಯಾಯ ‘ದಲಿತ ಸಾಹಿತ್ಯದ ತಾತ್ವಿಕತೆ’ ಪಾಠವನ್ನು ಪಠ್ಯದಿಂದ ತೆಗೆದುಹಾಕಲಾಗಿದೆ.

ಈ ಲೇಖನದಲ್ಲಿ ಕೆಲ ಜಾತಿ ಸೂಚಕ ಆಕ್ಷೇಪಾರ್ಹ ಪದಬಳಕೆ, ಮಾಹಿತಿ ದೋಷ ಇದ್ದವು. ಸಮಾಜದ ಯಾವುದೇ ಸಮುದಾಯದ ಭಾವನೆಗಳಿಗೆ ಧಕ್ಕೆ ಉಂಟಾಗಬಾರದು ಎನ್ನುವ ಕಾರಣಕ್ಕೆ ಪಠ್ಯದಿಂದ ತೆಗೆಯಲಾಗಿದೆ. ಕನ್ನಡ ಸ್ನಾತಕ ಅಧ್ಯಯನ ಮಂಡಳಿಯ ಸಭೆಯ ತೀರ್ಮಾನ, ಕುಲಪತಿ, ಕುಲಸಚಿವರ ಅನುಮೋದನೆ, ಸಿಂಡಿಕೇಟ್ ಸಭೆಯ ನಿರ್ಣಯದಂತೆ ಕ್ರಮ ಕೈಗೊಳ್ಳಲಾಗಿದೆ. ಸಮಾಜದ ಯಾವುದೇ ಸಮುದಾಯದ ಭಾವನೆಗಳಿಗೆ ಧಕ್ಕೆಯಾಗದಂತೆ ಪಠ್ಯ ರೂಪಿಸಲು ಅಧ್ಯಯನ ಮಂಡಳಿಗೆ ಸೂಚನೆ ನೀಡಲಾಗಿದೆ ಎಂದು ವಿಶ್ವವಿದ್ಯಾಲಯದ ಪ್ರಕಟಣೆ ಹೇಳಿದೆ.

ನಿಗಮಗಳ ಖಾಸಗೀಕರಣಕ್ಕೆ ವಿರೋಧ: ಸಾರಿಗೆ ನೌಕರರ ಧರಣಿ

ವೇತನ ಶೇ 25 ಹೆಚ್ಚಳಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ



ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ಮುಖಂಡರು ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು —ಪ್ರಜಾವಾಣಿ ಚಿತ್ರ

ಬೆಂಗಳೂರು: ಸಾರಿಗೆ ನೌಕರರ ವೇತನವನ್ನು ಶೇ 25ರಷ್ಟು ಹೆಚ್ಚಿಸಬೇಕು ಮತ್ತು ಸಾರಿಗೆ ನಿಗಮಗಳನ್ನು ಖಾಸಗೀಕರಣಗೊಳಿಸುವ ಹುನ್ನಾರ ಕೈಬಿಡುವುದು ಸೇರಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಸಾರಿಗೆ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ನೇತೃತ್ವದಲ್ಲಿ ಮುಖಂಡರು ನಗರದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು.

ಸ್ವಾತಂತ್ರ್ಯ ಉದ್ಯಾನ ಮತ್ತು ರಾಜ್ಯದ ವಿವಿಧೆಡೆ ಇರುವ ನಿಗಮಗಳ 40 ವಿಭಾಗೀಯ ಕಚೇರಿಗಳ ಎದುರು ನೌಕರರ ಮುಖಂಡರು ಧರಣಿ ನಡೆಸಿದರು. ಪ್ರತಿಭಟನೆಯಿಂದಾಗಿ ಬಸ್‌ಗಳ ಸೇವೆಯಲ್ಲಿ ಯಾವುದೇ ವ್ಯತ್ಯಯ ಆಗಲಿಲ್ಲ.

‘2020ರ ಜನವರಿ 1ಕ್ಕೆ ವೇತನ ಪರಿಷ್ಕರಣೆ ಆಗಬೇಕಿತ್ತು. 3 ವರ್ಷಗಳಿಂದ ಸಬೂಬುಗಳನ್ನು ಹೇಳಿಕೊಂಡು ಸರ್ಕಾರ ಕಾಲ ತಳ್ಳುತ್ತಿದೆ. 2021ರ ಸೆಪ್ಟೆಂಬರ್‌ನಲ್ಲಿ ಸಾರಿಗೆ ಸಚಿವರನ್ನು ಭೇಟಿಯಾದಾಗ ಬೇಡಿಕೆ ಈಡೇರಿಕೆ ಭರವಸೆ ನೀಡಿದ್ದರು. 2022ರ ನವೆಂಬರ್‌ನಲ್ಲಿ ಜಂಟಿ ಕ್ರಿಯಾಸಮಿತಿ ನಿಯೋಗ ಭೇಟಿಯಾದಾಗಲೂ 24 ಗಂಟೆಗಳಲ್ಲಿ ಬಗೆಹರಿಸುವುದಾಗಿ ಸಚಿವ ಬಿ. ಶ್ರೀರಾಮುಲು ಅವರು ತಿಳಿಸಿದ್ದರು. ಆದರೆ, ಈವರೆಗೆ ಯಾವುದೇ ಪ್ರಯತ್ನಗಳು ನಡೆದಿಲ್ಲ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

‘ಇದು ಸರ್ಕಾರಕ್ಕೆ ಕೊನೆಯ ಎಚ್ಚರಿಕೆಯಾಗಿದೆ. ಸ್ಪಂದಿಸದಿದ್ದರೆ ಹೋರಾಟ ತೀವ್ರ ಸ್ವರೂಪ ಪಡೆದುಕೊಳ್ಳಲಿದೆ’ ಎಂದು ಕೆಎಸ್‌ಆರ್‌ಟಿಸಿ ಸ್ಟಾಫ್ ವರ್ಕರ್ಸ್ ಫೆಡರೇಷನ್ ಅಧ್ಯಕ್ಷ ಎಚ್.ವಿ.ಅನಂತಸುಬ್ಬರಾವ್ ತಿಳಿಸಿದರು.

‘ಜಂಟಿ ಕ್ರಿಯಾ ಸಮಿತಿಯಿಂದ 16 ಬೇಡಿಕೆಗಳ ಪ್ರಣಾಳಿಕೆಯನ್ನು ಸಾರಿಗೆ ನಿಗಮಗಳ ಆಡಳಿತ ವರ್ಗಕ್ಕೆ ಬಹುದಿನಗಳ ಹಿಂದೆಯೇ ನೀಡಲಾಗಿದೆ. ಇದುವರೆಗೆ ಆಶ್ವಾಸನೆಗಳು ಸಿಗುತ್ತಿವೆ ಹೊರತು, ಬೇಡಿಕೆ ಈಡೇರುತ್ತಿಲ್ಲ. ಈ ಮಧ್ಯೆ ವೇತನ ಪರಿಷ್ಕರಣೆ ಇಲ್ಲದೆ ನೌಕರರು ಸಂಕಷ್ಟಕ್ಕೆ ಸಿಲುಕಿದ್ದು, ಕುಟುಂಬ ನಿರ್ವಹಣೆ ಕಷ್ಟವಾಗುತ್ತಿದೆ. ಕೂಡಲೇ ಸರ್ಕಾರ ಈ ನಿಟ್ಟಿನಲ್ಲಿ ಮುಂದಾಗಬೇಕು ಎಂದು ಒತ್ತಾಯಿಸಿದರು.

ಅಖಿಲ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಮಹಾಮಂಡಳಿ ಮಹಾ ಪ್ರಧಾನ ಕಾರ್ಯದರ್ಶಿ ಬಿ. ಜಯದೇವರಾಜೇ ಅರಸು ಮಾತನಾಡಿ, ‘ಇದುವರೆಗೆ ಜಂಟಿ ಕ್ರಿಯಾ ಸಮಿತಿಯಲ್ಲಿ ಆರು ಸಂಘಟನೆಗಳಿದ್ದವು. ಈಚೆಗೆ ರಚನೆಯಾದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಸಂಘ ಕೂಡ ನಮ್ಮೊಂದಿಗೆ ಕೈಜೋಡಿಸಿದೆ. ಈ ಎಲ್ಲ ಸಂಘಟನೆಗಳು ಶೀಘ್ರ ಸಭೆ ಸೇರಿ ಸರ್ಕಾರಕ್ಕೆ ಗಡುವು ನೀಡುವ ಬಗ್ಗೆ ತೀರ್ಮಾನ ಕೈಗೊಳ್ಳಲಿವೆ’ ಎಂದರು.

ಮಂಡ್ಯ ಉಸ್ತುವಾರಿ ಸಚಿವರಾಗಿ ಸಚಿವ ಅಶೋಕ ನೇಮಕ

ಬೆಂಗಳೂರು: ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ಅಬಕಾರಿ ಸಚಿವ ಕೆ. ಗೋಪಾಲಯ್ಯ ಅವರನ್ನು ದಿಢೀರ್ ಬದಲಿಸಿ, ಆ ಸ್ಥಾನಕ್ಕೆ ಕಂದಾಯ ಸಚಿವ ಕೆ. ಅಶೋಕ ಅವರನ್ನು ನೇಮಿಸಲಾಗಿದೆ.

ಹಳೆ ಮೈಸೂರು ಭಾಗದಲ್ಲಿ ಒಕ್ಕಲಿಗರ ಪ್ರಾಬಲ್ಯವಿದೆ. ಗೋಪಾಲಯ್ಯ ಜೆಡಿಎಸ್‌ಗೆ ದ್ರೋಹ ಬಗೆದು ಬಿಜೆಪಿ ಸೇರಿದ್ದಾರೆ ಎಂಬ ಕೋಪ ಈ ಭಾಗದಲ್ಲಿ ದಟ್ಟವಾಗಿದೆ. ಹೀಗಾಗಿ, ಅವರನ್ನೇ ಮುಂದುವರಿಸಿದರೆ ಚುನಾವಣೆಯಲ್ಲಿ ಬಿಜೆಪಿಗೆ ಮುಳುವಾಗಬಹುದು ಎಂಬ ಕಾರಣಕ್ಕೆ ಮುಖ್ಯಮಂತ್ರಿ ಈ ಬದಲಾವಣೆ ಮಾಡಿದ್ದಾರೆ ಎಂದು ವಿಶ್ಲೇಷಿಸಲಾಗಿದೆ. ಈ ಹಿಂದೆ 2 ಬಾರಿ ಅಶೋಕ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದರು.

ಶಾಂತವೇರಿ ಗೋಪಾಲಗೌಡ ಜನ್ಮಶತಮಾನೋತ್ಸವ ಇದೇ 28ಕ್ಕೆ

ಬೆಂಗಳೂರು: ರಾಜ್ಯದ ಆದರ್ಶ ರಾಜಕಾರಣಿಯಾಗಿದ್ದ ಮಾಜಿ ಶಾಸಕ ದಿವಂಗತ ಶಾಂತವೇರಿ ಗೋಪಾಲಗೌಡರ ಜನ್ಮಶತಮಾನೋತ್ಸವ ಸಮಾರಂಭ ಇದೇ 28ರಂದು ನಗರದ ಪುರಭವನದಲ್ಲಿ ನಡೆಯಲಿದೆ ಎಂದು ಜನ್ಮಶತಮಾನೋತ್ಸವ ಆಚರಣೆ ಸಮಿತಿ ಅಧ್ಯಕ್ಷರೂ ಆಗಿರುವ ಗೃಹ ಸಚಿವ ಆರಗ ಜ್ಞಾನೇಂದ್ರ ತಿಳಿಸಿದರು.

ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ವಿವರ ನೀಡಿದ ಅವರು, ‘ಅಂದು ಸಂಜೆ 4 ಗಂಟೆಯಿಂದ ಆರಂಭವಾಗುವ ಕಾರ್ಯಕ್ರಮವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉದ್ಘಾಟಿಸುವರು. ರಾಜ್ಯಸಭೆ ಸದಸ್ಯ ಎಚ್.ಡಿ. ದೇವೇಗೌಡ ಅವರು ಶಾಂತವೇರಿ ಗೋಪಾಲಗೌಡರ ಕುರಿತ ಕಿರುಪರಿಚಯದ ಪುಸ್ತಕ ಬಿಡುಗಡೆ ಮಾಡುವರು. ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ. ಸುನಿಲ್ ಕುಮಾರ್, ಶಾಸಕ ಕೆ.ಆರ್. ರಮೇಶ್ ಕುಮಾರ್, ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಚಂದ್ರಶೇಖರ ಕಂಬಾರ, ಗೋಪಾಲಗೌಡರ ಮಗ ರಾಮಮನೋಹರ ಶಾಂತವೇರಿ ಹಾಗೂ ಸಮಿತಿ ಉಪಾಧ್ಯಕ್ಷ ಜಿ.ಎ. ಪುರುಷೋತ್ತಮಗೌಡ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು’ ಎಂದರು.

ಗೋಪಾಲಗೌಡರ ಕೊನೆಯ ದಿನಗಳಲ್ಲಿ ಆರೈಕೆ ಮಾಡಿದ್ದ ವಾಟಾಳ್ ನಾಗರಾಜ್, ರೇಖಾ ವಿಷ್ಣುಮೂರ್ತಿ, ಲೇಖಕ ಕೋಣಂದೂರು ವೆಂಕಪ್ಪಗೌಡ ಅವರ ಪತ್ನಿ ನಳಿನಿ ವೆಂಕಪ್ಪಗೌಡ, ಕನ್ನಡ ಜನಶಕ್ತಿ ಅಧ್ಯಕ್ಷ ಸಿ.ಕೆ. ರಾಮೇಗೌಡ ಅವರನ್ನು ಸಮಾರಂಭದಲ್ಲಿ ಸನ್ಮಾನಿಸಲಾಗುವುದು ಎಂದು ತಿಳಿಸಿದರು.

ಶಾಂತವೇರಿ ಗೋಪಾಲಗೌಡರ ಹೆಸರಿನಲ್ಲಿ ಅತ್ಯುತ್ತಮ ರೈತ ಹಾಗೂ ಅತ್ಯುತ್ತಮ ಶಾಸಕ ಪ್ರಶಸ್ತಿ ಆರಂಭಿಸಲು ಮುಖ್ಯಮಂತ್ರಿಯವರು ಕೋರಿದ್ದಾರೆ. ಮುಂದಿನ ದಿನಗಳಲ್ಲಿ ಈ ಪ್ರಶಸ್ತಿಗಳನ್ನು ಆರಂಭಿಸಲಾಗುವುದು ಎಂದು ಹೇಳಿದರು.

ಪತ್ನಿಯಿಂದ ಜೀವನಾಂಶ ಕೋರಿಕೆ: ಅರ್ಜಿ ತಿರಸ್ಕೃತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೋವಿಡ್ ಪರಿಣಾಮ ಉದ್ಯೋಗ ಕಳೆದುಕೊಂಡಿದ್ದೇನೆ. ನನಗೆ ಯಾವುದೇ ಆದಾಯವಿಲ್ಲ. ಆದ ಕಾರಣ ಜೀವನ ನಿರ್ವಹಣೆಗೆ ಪತ್ನಿಯಿಂದ ಜೀವನಾಂಶ ಕೊಡಿಸಬೇಕು’ ಎಂದು ಕೋರಲಾಗಿದ್ದ ಅರ್ಜಿದಾರರೊಬ್ಬರ ಮನವಿಯನ್ನು ಹೈಕೋರ್ಟ್ ತಿರಸ್ಕರಿಸಿದೆ.



ಈ ಸಂಬಂಧ ಬೆಂಗಳೂರಿನ ಕನಕಪುರ ರಸ್ತೆಯ ನಿವಾಸಿಯೊಬ್ಬರು ಸಲ್ಲಿಸಿದ್ದ ಅರ್ಜಿಯನ್ನು ತಿರಸ್ಕರಿಸಿರುವ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ, ‘ದುಡಿಯಲು ಸಾಮರ್ಥ್ಯ ಹೊಂದಿರುವ ಪತಿಗೆ ಜೀವನಾಂಶ ನೀಡುವಂತೆ ಪತ್ನಿಗೆ ಆದೇಶಿಸಿದರೆ ಅದು ಸೋಮಾರಿತನವನ್ನು ಪ್ರೋತ್ಸಾಹಿಸಿದಂತಾಗುತ್ತದೆ’ ಎಂದು ಅಭಿಪ್ರಾಯಪಟ್ಟಿದೆ.

‘ಉದ್ಯೋಗ ಹಾಗೂ ಆದಾಯವಿಲ್ಲದ ಕಾರಣ ಪತ್ನಿಗೆ ಜೀವನಾಂಶ ನೀಡಲಾಗದ ಸ್ಥಿತಿಯಲ್ಲಿದ್ದೇನೆ. ಆದ್ದರಿಂದ, ಪತ್ನಿಯೇ ಜೀವನಾಂಶ ನೀಡಬೇಕು ಎಂಬ ಪತಿಯ ವಾದ ದೋಷಪೂರಿತವಾಗಿದೆ. ಈ ಪ್ರಕರಣವನ್ನು ಗಮನಿಸಿದರೆ ಪತಿ ತನ್ನ ಪತ್ನಿಯಿಂದ ಜೀವನಾಂಶ ಪಡೆದು ಆರಾಮಾಗಿ ಜೀವನ ನಡೆಸಲು ನಿರ್ಧರಿಸಿ ದಂತಿದೆ. ತನ್ನ ಹಾಗೂ ಪತ್ನಿ ಸೇರಿದಂತೆ ಮಗುವಿನ ಜೀವನ ನಿರ್ವಹಣೆಗೆ ಪತಿ ದುಡಿಯಬೇಕು. ಇದು ಆತನ ಆದ್ಯ ಕರ್ತವ್ಯ’ ಎಂದು ನ್ಯಾಯಪೀಠ ಹೇಳಿದೆ.

‘ಅರ್ಜಿದಾರ ಪತಿ ದುಡಿಯಲು ಸಾಮರ್ಥ್ಯವಿರುವ ವ್ಯಕ್ತಿ. ಯಾವುದೇ ಅಂಗವೈಕಲ್ಯ ಅಥವಾ ದೌರ್ಬಲ್ಯದಿಂದ ನರಳುತ್ತಿಲ್ಲ. ಹಿಂದೂ ವಿವಾಹ ಕಾಯ್ದೆಯ ಕಲಂ 24ರ ಅಡಿಯಲ್ಲಿ ಜೀವನಾಂಶ ಪಡೆಯಲು ಯಾವುದೇ ಲಿಂಗ ಭೇದವಿಲ್ಲ ಎಂಬ ಕಾರಣಕ್ಕೆ ದುಡಿಯಲು ಸಾಮರ್ಥ್ಯವಿರುವ ಪತಿಗೆ ಪತ್ನಿಯಿಂದ ಜೀವನಾಂಶ ವಿತರಣೆಗೆ ಆದೇಶಿಸಿದರೆ, ಸೋಮಾರಿತನಕ್ಕೆ ಪ್ರೋತ್ಸಾಹಿಸಿದಂತಾಗುತ್ತದೆ. ಕೋವಿಡ್-19 ರ ಕಾರಣ ಉದ್ಯೋಗ ಕಳೆದುಕೊಂಡ ಎಂಬ ಕಾರಣಕ್ಕೆ ಪತಿ ಆದಾಯ ಗಳಿಸಲು ಸಮರ್ಥನಾಗಿಲ್ಲ ಎಂದು ಹೇಳಲಾಗದು’ ಎಂದು ನ್ಯಾಯಪೀಠ ವಿವರಿಸಿದೆ.


ಶಾಲಾ ವಿದ್ಯಾರ್ಥಿ ಮೇಲೆ ಹಲ್ಲೆ, ಸುಲಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಟನ್‌ಪೇಟೆ ಠಾಣೆ ವ್ಯಾಪ್ತಿಯ ಶಾಲಾ ವಿದ್ಯಾರ್ಥಿಯೊಬ್ಬರ ಮೇಲೆ ಹಲ್ಲೆ ಮಾಡಲಾಗಿದ್ದು, ಕೃತ್ಯ ಎಸಗಿದ್ದ ಆರೋಪದಡಿ ಬೇರೆ ಶಾಲೆ ವಿದ್ಯಾರ್ಥಿಗಳು ಹಾಗೂ ಇತರರ ವಿರುದ್ಧ ಪ್ರಕರಣ ದಾಖಲಾಗಿದೆ.

‘₹ 100 ಸುಲಿಗೆ ವಿಚಾರವಾಗಿ ವಿದ್ಯಾರ್ಥಿ ಮೇಲೆ ಹಲ್ಲೆ ಮಾಡಲಾಗಿದೆ. ಇದರ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದೆ. ಅದನ್ನು ನೋಡಿದ್ದ ಪ್ರಾಂಶುಪಾಲರು, ಠಾಣೆಗೆ ದೂರು ನೀಡಿದ್ದಾರೆ’ ಎಂದು ಪೊಲೀಸರು ಮಾಹಿತಿ ನೀಡಿದರು.


‘ಗಾಯಾಳು ಹಾಗೂ ಆರೋಪಿಗಳು ಎಲ್ಲರೂ ಬಾಲಕರು. ಹೀಗಾಗಿ, ಹೆಚ್ಚಿನ ಮಾಹಿತಿ ಬಹಿರಂಗಪಡಿಸಲಾಗದು’ ಎಂದು ಅವರು ಹೇಳಿದರು.





ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ತಂತ್ರಜ್ಞಾನ
ಕೃತಕ ಮಿಂಚನ್ನು ಸೃಷ್ಟಿಸಿ, ನೆಲಕ್ಕೆ ಸಿಡಿಲು ಬಡಿಯದಂತೆ ತಡೆಯುವ ವಿಶಿಷ್ಟ ಪ್ರಯೋಗ ನಡೆದಿದೆ

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
60,978 ▲	18,118 ▼	₹ 59,100 (ಬೆಂಗಳೂರು) ▲	₹70,300 (ಬೆಂಗಳೂರು) ▼	81.70 ▼

ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ವರದಿ: ಕುಸಿಯುತ್ತಿರುವ ಗುಣಮಟ್ಟ

ನದಿ ನೀರು ನೇರ ಸೇವನೆಗೆ ಅಯೋಗ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಪ್ರಮುಖ ಜೀವನದಿಗಳೆನಿಸಿರುವ ಕೃಷ್ಣಾ, ಕಾವೇರಿ, ತುಂಗಾ, ಭದ್ರಾ, ಕಬಿನಿ, ಶಿಂಷಾ, ಮಲಪ್ರಭಾ, ಘಟಪ್ರಭಾ, ಭೀಮಾ, ಹೇಮಾವತಿ, ನೇತ್ರಾವತಿ, ಯಗಚಿ, ಕಾರಂಜಾ ಸೇರಿದಂತೆ ಯಾವುದೇ ನದಿಗಳ ನೀರನ್ನು ಸಂಸ್ಕರಿಸದೇ ಕುಡಿಯುವಂತಿಲ್ಲ. ಕೆಲವು ನದಿಗಳ ನೀರು ಸ್ನಾನಕ್ಕೂ ಬಳಸಲಾಗದ ಸ್ಥಿತಿ ತಲುಪಿವೆ.

ರಾಷ್ಟ್ರೀಯ ನೀರಿನ ಗುಣಮಟ್ಟ ಯೋಜನೆಯಡಿ ನದಿ ಮತ್ತು ಕೆರೆಗಳ ನೀರಿನ ಗುಣಮಟ್ಟದ 2022ರ ಏಪ್ರಿಲ್‌ನಿಂದ ನವೆಂಬರ್‌ವರೆಗಿನ ವರದಿಯನ್ನು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಮಂಗಳವಾರ ಪ್ರಕಟಿಸಿದೆ.

ರಾಜ್ಯದ 17 ನದಿಗಳ ಹರಿವಿನಲ್ಲಿ ವಿವಿಧ ಜಿಲ್ಲೆಗಳಲ್ಲಿ 103 ತಪಾಸಣೆ ಕೇಂದ್ರಗಳನ್ನು ಮಾಲಿನ್ಯ ನಿಯಂತ್ರಣ ಮಂಡಳಿ ಸ್ಥಾಪಿಸಿದೆ. ಅಲ್ಲಿಂದ ನೀರಿನ ಮಾದರಿ ಸಂಗ್ರಹಿಸಿ, ಅಧ್ಯಯನ ನಡೆಸಿ ಗುಣಮಟ್ಟವನ್ನು ದಾಖಲಿಸುತ್ತದೆ. ಐದು ವರ್ಗಗಳಲ್ಲಿ ನೀರಿನ ಮಟ್ಟವನ್ನು ಗುರುತಿಸಲಾಗಿದೆ. ಬೀದರ್‌ನಲ್ಲಿ ಮಾತ್ರ ಕಾರಂಜಾ ನದಿಯ ಮಾದರಿ ಸಂಗ್ರಹಿಸದ ಕಾರಣ, ಆ ಸ್ಥಳದ ಕುರಿತಾದ ವರದಿ ಲಭ್ಯವಿಲ್ಲ.

ಧರ್ಮಸ್ಥಳದಲ್ಲಿ ಹರಿಯುವ ನೇತ್ರಾವತಿ ನದಿ ನೀರು ಅಕ್ಟೋಬರ್‌ನಲ್ಲಿ ಸ್ನಾನಕ್ಕೆ ಯೋಗ್ಯವಾಗಿತ್ತು. ಆದರೆ, ನವೆಂಬರ್ ವರದಿಯಲ್ಲಿ ಕಲ್ಮಶ ಹೆಚ್ಚಾಗಿದ್ದು, 'ಬಿ' ವರ್ಗದಿಂದ 'ಸಿ' ವರ್ಗಕ್ಕೆ ಕುಸಿದಿದೆ. ಪರಿಣಾಮ, ಹೊರಾಂಗಣದಲ್ಲಿ ಈ ನೀರು ಸ್ನಾನಕ್ಕೂ ಯೋಗ್ಯವಲ್ಲವೆಂದು ವರದಿ ಹೇಳಿದೆ.

ಮಂಗಳೂರು ಸಮೀಪದ ಉಪ್ಪಿನಂಗಡಿಯಲ್ಲಿ ನೇತ್ರಾವತಿಗೆ ಸೇರುವ ಮುನ್ನ ಕುಮಾರಧಾರಾ ನದಿ, ಕಲಬುರಗಿಯಲ್ಲಿ ಕಾಗಿಣಾ ನದಿ, ಸುವರ್ಣವತಿ ಜಲಾಶಯದ ನೀರು ಚಾಮರಾಜನಗರದ ಅಟ್ಟಿಗುಲ್ಲಿಪುರ, ಭದ್ರಾ ನದಿಯ ನೀರು ಭದ್ರಾವತಿ ಎಂಪಿಎಂ ಬಳಿ ಕಲ್ಮಶ ಹೆಚ್ಚಿಸಿಕೊಂಡು 'ಬಿ' ವರ್ಗದಿಂದ 'ಸಿ' ವರ್ಗಕ್ಕೆ ಕುಸಿದಿವೆ.

ರಾಮನಗರದಲ್ಲಿ ಸಂಗಮ ಹಾಗೂ ಕನಕಪುರದಲ್ಲಿ ಅರ್ಕಾವತಿ, ಸಂಗಮದಲ್ಲಿ ಕಾವೇರಿ, ಕಲಬುರಗಿಯ ಸೇಡಂ, ಶಹಾಬಾದ್ ಸೇತುವೆ ಹಾಗೂ ಬೆಣ್ಣೆತೊರಾ ಜಲಾಶಯದಲ್ಲಿ ಕಾಗಿಣಾ, ಜೇವರ್ಗಿ, ಫಿರೋಜಾಬಾದ್, ಗಾಣಗಾಪುರದಲ್ಲಿ ಭೀಮಾ, ಮೈಸೂರಿನ ಕಟ್ಟೆಮಳಲವಾಡಿ ಹಾಗೂ ಹುಣಸೂರು ನಗರದಲ್ಲಿ ಲಕ್ಷ್ಮಣತೀರ್ಥ, ದಾವಣಗೆರೆಯ ಹರಿಹರದಲ್ಲಿ ತುಂಗಭದ್ರಾ, ತುಮಕೂರಿನ ಎಡೆಯೂರು ಬಳಿ ಶಿಂಷಾ ನದಿ ನೀರು ವನ್ಯಜೀವಿಗಳು ಕುಡಿಯಲು ಹಾಗೂ ಮೀನುಗಾರಿಕೆಗೆ ಮಾತ್ರ ಯೋಗ್ಯವಾಗಿವೆ. ಬೆಂಗಳೂರು ಹೊರವಲಯದ ಸರ್ಜಾಪುರದಲ್ಲಿ ಹರಿಯುವ ದಕ್ಷಿಣ ಪಿನಾಕಿನಿ ನದಿ 'ಇ' ವರ್ಗದಲ್ಲಿದ್ದು, ಲೋಹಯುಕ್ತ, ಕಲ್ಮಶಕಾರಕವಾಗಿದೆ.

8ನೇ ಪುಟ ನೋಡಿ

ಬೆಂಗಳೂರಿನ 66 ಕೆರೆಗಳ ನೀರು ಮಾತ್ರ ವನ್ಯಜೀವಿಗಳು ಕುಡಿಯಲು ಯೋಗ್ಯ!

ಬೆಂಗಳೂರು ನಗರದ 106 ಕೆರೆಗಳಲ್ಲಿ ಮಾಲಿನ್ಯ ನಿಯಂತ್ರಣ ಮಂಡಳಿ ನೀರಿನ ಗುಣಮಟ್ಟವನ್ನು ಪರೀಕ್ಷಿಸುತ್ತಿದೆ. ಇದರಲ್ಲಿ 66 ಕೆರೆಗಳ ನೀರು ಮಾತ್ರ ವನ್ಯಜೀವಿಗಳು ಕುಡಿಯಲು ಮತ್ತು ಮೀನುಗಾರಿಕೆಗೆ ಯೋಗ್ಯ. ಉಳಿದ ಕೆರೆಗಳಲ್ಲಿ ಲೋಹ, ಒಳಚರಂಡಿ ತ್ಯಾಜ್ಯ ಸೇರಿಕೊಂಡು ಕಲ್ಮಶದ ತಾಣವಾಗಿವೆ.

ರಾಜರಾಜೇಶ್ವರಿನಗರ ವ್ಯಾಪ್ತಿಯ ಸುಬ್ರಮಣ್ಯಪುರ, ಮಲ್ಲತ್ತಹಳ್ಳಿ, ದೊರೆಕೆರೆ, ಹೊಸಕೆರೆಹಳ್ಳಿ, ಶಿವಪುರ, ಕರಿಹೋಬನಹಳ್ಳಿ, ದಾಸರಹಳ್ಳಿ ವ್ಯಾಪ್ತಿಯ ಗಂಗೊಂಡನಹಳ್ಳಿ, ಅಂದ್ರಹಳ್ಳಿ, ಕಾಚೋಹಳ್ಳಿ, ವಿಶ್ವನೀಡಂ, ಮಾಚೋಹಳ್ಳಿ, ದೊಡ್ಡಬಿದರಕಲ್ಲು, ಬೊಮ್ಮನಹಳ್ಳಿ ವ್ಯಾಪ್ತಿಯ ಮಡಿವಾಳ, ಹುಳಿಮಾವು, ಸಿಂಗಸಂದ್ರ, ಪರಪ್ಪನ ಅಗ್ರಹಾರ, ಹರಳೂರು, ಮಹದೇವಪುರ ವ್ಯಾಪ್ತಿಯ ಕಲ್ಕೆರೆ, ಸಾದರಮಂಗಲ, ಗರುಡಾಚಾರ್ ಪಾಳ್ಯ, ರಾಂಪುರ, ವಿಭೂತಿಪುರ, ಯಲಹಂಕ ವ್ಯಾಪ್ತಿಯ ಚೆಲ್ಲಕೆರೆ, ಸಿಂಗಾಪುರ, ನರಸೀಪುರ, ರಾಚೇನಹಳ್ಳಿ, ಕೋಗಿಲು, ಪೂರ್ವ ಭಾಗದ ಹಲಸೂರು, ಬೈರಸಂದ್ರ ಕೆರೆಗಳು ಲೋಹಯುಕ್ತ ಕಲ್ಮಶದ ತಾಣಗಳಾಗಿವೆ. ಎ,ಬಿ,ಸಿ ವರ್ಗದಲ್ಲಿ ಯಾವುದೇ ಕೆರೆಗಳಿಲ್ಲ. 'ಡಿ' ವರ್ಗದಲ್ಲಿ 66 ಹಾಗೂ 'ಇ' ವರ್ಗದಲ್ಲಿ 40 ಕೆರೆಗಳಿವೆ. ಅಕ್ಟೋಬರ್‌ಗೆ ಹೋಲಿಸಿದರೆ ನವೆಂಬರ್‌ನಲ್ಲಿ 'ಇ' ವರ್ಗದಲ್ಲಿ ಕೆರೆಗಳ ಸಂಖ್ಯೆ ಹೆಚ್ಚಾಗಿದೆ.

ನದಿಗಳ ನೀರಿನ ಗುಣಮಟ್ಟ (ನವೆಂಬರ್ 2022)

103 ತಪಾಸಣೆ ಕೇಂದ್ರಗಳು

0 ಎ ವರ್ಗ — ಕುಡಿಯುವ ನೀರಿನ ಮೂಲ. ಅದಕ್ಕೆ ಮೊದಲು ಸಾಂಪ್ರದಾಯಿಕ ಸಂಸ್ಕರಣೆ ಅಗತ್ಯ.

19 ಬಿ ವರ್ಗ — ಹೊರಾಂಗಣದಲ್ಲಿ ಸ್ನಾನಕ್ಕೆ ಬಳಸಬಹುದು.

67 ಸಿ ವರ್ಗ — ಕುಡಿಯುವ ನೀರಿನ ಮೂಲ. ಆದರೆ, ಮೊದಲು ಸೋಂಕುರಹಿತಗೊಳಿಸಿ ನಂತರ ಸಾಂಪ್ರದಾಯಿಕ ಸಂಸ್ಕರಣೆ ಮಾಡಬೇಕು.

15 ಡಿ ವರ್ಗ — ವನ್ಯಜೀವಿಗೆ ಕುಡಿಯಲು ಹಾಗೂ ಮೀನುಗಾರಿಕೆಗೆ ಯೋಗ್ಯ

1 ಇ ವರ್ಗ — ಲೋಹ, ಕಲ್ಮಶಯುಕ್ತವಾಗಿದ್ದು, ಸಂಸ್ಕರಿಸಿ ನೀರಾವರಿ, ಕೈಗಾರಿಕೆಗೆ ಬಳಸಬಹುದು

ಹೆಚ್ಚುವರಿ ಶಿಕ್ಷಕರ ಕೌನ್ಸೆಲಿಂಗ್ ಪ್ರಕ್ರಿಯೆ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಚ್ಚುವರಿ ಶಿಕ್ಷಕರ ವರ್ಗಾವಣೆಗೆ ಆರಂಭಿಸಲಾಗಿದ್ದ ಕೌನ್ಸೆಲಿಂಗ್ ಪ್ರಕ್ರಿಯೆಯನ್ನು ರದ್ದುಗೊಳಿಸಿ, ಈಗಾಗಲೇ ನೀಡಲಾಗಿದ್ದ ಸ್ಥಳ ನಿಯುಕ್ತಿ ಆದೇಶಗಳನ್ನು ಹಿಂಪಡೆಯಲು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಆಯುಕ್ತರು ಸುತ್ತೋಲೆ ಹೊರಡಿಸಿದ್ದಾರೆ.

ವಿದ್ಯಾರ್ಥಿಗಳು ಕಡಿಮೆ ಇರುವ ರಾಜ್ಯದ ಪ್ರೌಢ ಹಾಗೂ ಪ್ರಾಥಮಿಕ ಶಾಲೆಗಳಲ್ಲಿನ 10,500 ಶಿಕ್ಷಕರನ್ನು 'ಹೆಚ್ಚುವರಿ' ಎಂದು ಶಿಕ್ಷಣ ಇಲಾಖೆ ಪಟ್ಟಿ ಮಾಡಿತ್ತು. ಸರ್ಕಾರ ಒಂದರಿಂದ ಐದನೇ ತರಗತಿಯವರೆಗೆ 40 ವಿದ್ಯಾರ್ಥಿಗಳಿಗೆ, ಆರರಿಂದ ಎಂಟನೇ ತರಗತಿಯವರೆಗೆ 35 ವಿದ್ಯಾರ್ಥಿಗಳಿಗೆ ಒಬ್ಬ ಶಿಕ್ಷಕರಂತೆ ಅನುಪಾತ ನಿಗದಿ ಮಾಡಿದೆ. ಈ ಅನುಪಾತಕ್ಕೆ ಅನುಗುಣವಾಗಿ ರಾಜ್ಯದ ವಿವಿಧ ಶಾಲೆಗಳಲ್ಲಿ ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದಾರೆ.

8ನೇ ಪುಟ ನೋಡಿ

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಬಿಬಿಸಿ ಸಾಕ್ಷ್ಯಚಿತ್ರ ಪ್ರದರ್ಶನಕ್ಕೆ ತಡೆ

ವಿದ್ಯುತ್, ಇಂಟರ್‌ನೆಟ್ ಸಂಪರ್ಕ ತೆಗೆದ ಜೆಎನ್‌ಯು

ನವದೆಹಲಿ (ಪಿಟಿಐ): 'ಜವಾಹರ್‌ಲಾಲ್ ನೆಹರೂ ವಿಶ್ವವಿದ್ಯಾಲಯದ (ಜೆಎನ್‌ಯು) ಆಡಳಿತ ಮಂಡಳಿಯು ಮಂಗಳವಾರ ಜೆಎನ್‌ಯು ವಿದ್ಯಾರ್ಥಿಗಳ ಒಕ್ಕೂಟದ ಕಚೇರಿಯ ವಿದ್ಯುತ್ ಮತ್ತು ಇಂಟರ್‌ನೆಟ್ ಸಂಪರ್ಕ ಕಡಿತ ಮಾಡುವ ಮೂಲಕ ಬಿಬಿಸಿಯ ಸಾಕ್ಷ್ಯಚಿತ್ರ ಪ್ರದರ್ಶನಕ್ಕೆ ತಡೆಯೊಡ್ಡಿದೆ' ಎಂದು ಒಕ್ಕೂಟವು ಆರೋಪಿಸಿದೆ.

ಆದರೆ, ವಿದ್ಯಾರ್ಥಿಗಳು ಈ ಸಾಕ್ಷ್ಯಚಿತ್ರವನ್ನು ಆನ್‌ಲೈನ್ ಅಪ್ಲಿಕೇಷನ್ ಮೂಲಕ ತಮ್ಮ ಮೊಬೈಲ್‌ಫೋನ್‌ಗಳಲ್ಲಿ ಡೌನ್‌ಲೋಡ್ ಮಾಡಿಕೊಂಡು ವೀಕ್ಷಿಸಿದ್ದಾರೆ ಎಂದು ಅಖಿಲ ಭಾರತ ವಿದ್ಯಾರ್ಥಿ ಸಂಘದ (ಎಐಎಸ್‌ಎ) ರಾಷ್ಟ್ರ ಘಟಕದ ಅಧ್ಯಕ್ಷ ಎನ್. ಸಾಯಿ ಬಾಲಾಜಿ ಹೇಳಿದ್ದಾರೆ.

'ವಿಶ್ವವಿದ್ಯಾಲಯದ ಆವರಣದಲ್ಲಿ ಪೊಲೀಸರು ಸಿವಿಲ್ ದಿರಿಸಿನಲ್ಲಿ ಓಡಾಡುತ್ತಿದ್ದಾರೆ' ಎಂದೂ ಅವರು ತಿಳಿಸಿದ್ದಾರೆ.

'ವಿದ್ಯಾರ್ಥಿ ಒಕ್ಕೂಟದ ಕಚೇರಿಯ ಎದುರು ಸಾಕ್ಷ್ಯಚಿತ್ರ ವೀಕ್ಷಿಸುತ್ತಿದ್ದ ವಿದ್ಯಾರ್ಥಿಗಳ ಮೇಲೆ ಕಲ್ಲುತೂರಾಟ ನಡೆಸಲಾಗಿದೆ. ಕತ್ತಲಾಗಿದ್ದರಿಂದ ಕಲ್ಲು ಎಸೆದವರ ಗುರುತು ಪತ್ತೆಹಚ್ಚಲು ಸಾಧ್ಯವಾಗಿಲ್ಲ' ಎಂದು ಸಾಕ್ಷ್ಯಚಿತ್ರ ವೀಕ್ಷಣೆಗೆ ತೆರಳಿದ್ದ ಅಸ್ರಾರ್ ಅಹ್ಮದ್ ಎಂಬುವರು ತಿಳಿಸಿದ್ದಾರೆ.

'ವಿಶ್ವವಿದ್ಯಾಲಯದ ಪ್ರಮುಖ ವಿದ್ಯುತ್ ಲೈನ್‌ನಲ್ಲಿ ದೋಷವುಂಟಾಗಿದ್ದು, ಪರಿಶೀಲಿಸಲಾಗುತ್ತಿದೆ. ವಿದ್ಯುತ್ ಸಮಸ್ಯೆಯನ್ನು ಶೀಘ್ರ ಪರಿಹರಿಸುವುದಾಗಿ ಎಂಜಿನಿಯರಿಂಗ್ ವಿಭಾಗವು ಹೇಳಿದೆ' ಎಂದು ಜೆಎನ್‌ಯುನ ಆಡಳಿತ ಮಂಡಳಿಯ ಹೆಸರು ಬಹಿರಂಗಪಡಿಸಲು ಇಚ್ಛಿಸದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

7B ನೇ ಪುಟ ನೋಡಿ
ಇನ್ನೊಂದು ಸುದ್ದಿ 9

ಹೈದರಾಬಾದ್ ವಿ.ವಿಯಲ್ಲಿ ಪ್ರದರ್ಶನ

ಸಾಕ್ಷ್ಯಚಿತ್ರದ ಮೊದಲ ಸಂಚಿಕೆಯನ್ನು ಹೈದರಾಬಾದ್ ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿ ಸಂಘಟನೆಯೊಂದು ಪ್ರದರ್ಶಿಸಿದೆ. ಅನುಮತಿ ಪಡೆಯದೇ ಸಾಕ್ಷ್ಯಚಿತ್ರ ಪ್ರದರ್ಶಿಸಿದ ಕುರಿತು ವಿಶ್ವವಿದ್ಯಾಲಯವು ಆಂತರಿಕ ವಿಚಾರಣೆ ಆರಂಭಿಸಿದೆ.

'ಫ್ರಟರ್ನಿಟಿ ಮೂವ್‌ಮೆಂಟ್' ವಿದ್ಯಾರ್ಥಿ ಸಂಘಟನೆಯು, ವಿಶ್ವವಿದ್ಯಾಲಯದ ವಾಣಿಜ್ಯ ಸಂಕೀರ್ಣದ ಬಳಿ ಶನಿವಾರ ಸಂಜೆ ಸಾಕ್ಷ್ಯಚಿತ್ರವನ್ನು ಪ್ರದರ್ಶಿಸಿದೆ. ಈ ಬಗ್ಗೆ ಎಬಿವಿಪಿ ಸದಸ್ಯರು ವಿಶ್ವವಿದ್ಯಾಲಯದ ರಿಜಿಸ್ಟ್ರಾರ್‌ಗೆ ಮಂಗಳವಾರ ದೂರು ನೀಡಿದ್ದರು. ಆನಂತರ ವಿಶ್ವವಿದ್ಯಾಲಯವು ಈ ಬಗ್ಗೆ ವಿಚಾರಣೆಗೆ ಆದೇಶಿಸಿದೆ ಎಂದು ಮೂಲಗಳು ಹೇಳಿವೆ. ಸಾಕ್ಷ್ಯಚಿತ್ರ ಪ್ರದರ್ಶನಕ್ಕೆ ವಿದ್ಯಾರ್ಥಿ ಸಂಘಟನೆಯು ವಿಶ್ವವಿದ್ಯಾಲಯದ ಅನುಮತಿ ಪಡೆದಿರಲಿಲ್ಲ ಎಂದು ವಿಶ್ವವಿದ್ಯಾಲಯದ ಮೂಲಗಳು ಹೇಳಿವೆ ಎಂದು ಪಿಟಿಐ ವರದಿ ಮಾಡಿದೆ.

> **ಈ ಸಾಕ್ಷ್ಯಚಿತ್ರವನ್ನು ನಿಷೇಧ ಮಾಡಿಲ್ಲ ಅಥವಾ ಈ ಸಂಬಂಧ ನಮಗೆ ಯಾವುದೇ ಅಧಿಕೃತ ಸುತ್ತೋಲೆ ಬಂದಿಲ್ಲ. ಪ್ರದರ್ಶನ ಕುರಿತು ವರದಿ ಬಂದ ನಂತರ ಕ್ರಮದ ಬಗ್ಗೆ ಯೋಚಿಸುತ್ತೇವೆ**
> **ಹೈದರಾಬಾದ್ ವಿಶ್ವವಿದ್ಯಾಲಯ**

ದಯಾಮರಣ ನಿಯಮ ಇನ್ನಷ್ಟು ಸರಳ

ನವದೆಹಲಿ (ಪಿಟಿಐ): ದಯಾ ಮರಣಕ್ಕೆ ಸಂಬಂಧಿಸಿದಂತೆ 2018ರಲ್ಲಿ ಐತಿಹಾಸಿಕ ತೀರ್ಪು ನೀಡಿದ್ದ ಸುಪ್ರೀಂ ಕೋರ್ಟ್,'ಮರಣ ಇಚ್ಛೆಯ ಉಯಿಲು' (ಲಿವಿಂಗ್ ವಿಲ್) ಕುರಿತ ಮಾರ್ಗಸೂಚಿಯನ್ನು ಇನ್ನಷ್ಟು ಸರಳೀಕರಿಸಿದೆ. 9



ಔಷಧಿ ಖರೀದಿ: ತಡೆಹಿಡಿದಿದ್ದ ಟೆಂಡರ್ ಡಿಸೆಂಬರ್‌ನಲ್ಲಿ ಅಂತಿಮ

ಕಪ್ಪುಪಟ್ಟಿಯಲ್ಲಿದ್ದರೂ ಗುತ್ತಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರು ತಿಂಗಳ ಹಿಂದೆ ತಡೆಹಿಡಿದಿದ್ದ ಟೆಂಡರ್ ಪ್ರಕ್ರಿಯೆಯೊಂದನ್ನು ಡಿಸೆಂಬರ್‌ನಲ್ಲಿ ಅಂತಿಮಗೊಳಿಸಿರುವ ಕರ್ನಾಟಕ ವೈದ್ಯಕೀಯ ಸರಬರಾಜು ನಿಗಮ (ಕೆಎಸ್‌ಎಂಎಸ್‌ಸಿಎಲ್), ಕಳಪೆ ಗುಣಮಟ್ಟ ಹಾಗೂ ಟೆಂಡರ್ ಷರತ್ತಿನಂತೆ ಔಷಧ ಪೂರೈಸದ ಕಾರಣಕ್ಕಾಗಿ ವಿವಿಧ ರಾಜ್ಯಗಳಲ್ಲಿ ಕಪ್ಪುಪಟ್ಟಿಯಲ್ಲಿರುವ ಕಂಪನಿಯೊಂದರಿಂದ ₹ 25 ಕೋಟಿ ಮೌಲ್ಯದ ಔಷಧಿ ಖರೀದಿಗೆ ಕಾರ್ಯಾದೇಶ ನೀಡಿದೆ.

ರಾಜ್ಯದ ಸರ್ಕಾರಿ ಆಸ್ಪತ್ರೆಗಳು, ಚಿಕಿತ್ಸಾಲಯಗಳಿಗೆ ಪೂರೈಸಲು ₹ 45 ಕೋಟಿ ಮೌಲ್ಯದ ಔಷಧಿ ಹಾಗೂ ವೈದ್ಯಕೀಯ ಉಪಕರಣಗಳ ಖರೀದಿಗೆ 2022ರಲ್ಲಿ ನಿಗಮವು ಟೆಂಡರ್ ಪ್ರಕ್ರಿಯೆ ಆರಂಭಿಸಿತ್ತು. ಆದರೆ, ವಿವಿಧ ರಾಜ್ಯಗಳು ಹಾಗೂ ಕೇಂದ್ರ ಸರ್ಕಾರದ ಸಂಸ್ಥೆಗಳು ಕಪ್ಪುಪಟ್ಟಿಗೆ ಸೇರಿಸಿರುವ ಕಂಪನಿಗಳಿಗೆ ಟೆಂಡರ್ ಪ್ರಕ್ರಿಯೆಯಲ್ಲಿ ಮನ್ನಣೆ ನೀಡುತ್ತಿರುವ ಕುರಿತು ಮುಖ್ಯಮಂತ್ರಿಯವರಿಗೆ ದೂರು ಸಲ್ಲಿಕೆಯಾಗಿತ್ತು. ಈ ಕಾರಣದಿಂದ ಜೂನ್ ತಿಂಗಳಲ್ಲಿ ಟೆಂಡರ್ ಪ್ರಕ್ರಿಯೆಯನ್ನೇ ತಡೆಹಿಡಿಯಲಾಗಿತ್ತು.

ತಡೆ ಹಿಡಿದ ಟೆಂಡರ್ ಪ್ರಕ್ರಿಯೆಗೆ ನವೆಂಬರ್ ಕೊನೆಯ ವಾರ ಮರುಜೀವ ನೀಡಿದ್ದ ಕೆಎಸ್‌ಎಂಎಸ್‌ಸಿಎಲ್, ಡಿಸೆಂಬರ್ ಮೊದಲ ವಾರ ಕಾರ್ಯಾದೇಶ ವಿತರಿಸಿದೆ. ಛತ್ತೀಸಗಢ, ರಾಜಸ್ಥಾನ, ಮಧ್ಯಪ್ರದೇಶ, ಕೇರಳ, ಉತ್ತರಪ್ರದೇಶ ಸೇರಿದಂತೆ ಹಲವು ರಾಜ್ಯಗಳಲ್ಲಿ ಕಪ್ಪುಪಟ್ಟಿ ಸೇರಿದ್ದ ಯುನಿಕ್ಯೂರ್ ಇಂಡಿಯಾ ಲಿಮಿಟೆಡ್ ಎಂಬ ಕಂಪನಿಗೆ ₹ 25.15 ಕೋಟಿ ಮೌಲ್ಯದ 30 ಔಷಧಿಗಳ ಪೂರೈಕೆಗೆ 2022ರ ಡಿಸೆಂಬರ್ 6ರಂದು ಕಾರ್ಯಾದೇಶ ನೀಡಲಾಗಿದೆ.

8ನೇ ಪುಟ ನೋಡಿ

ವೃದ್ಧರ ಸತ್ಯ ವಾಕ್ಯಕ್ಕೆ ತಲೆದೂಗಿದ ನ್ಯಾಯಪೀಠ

ಹೈಕೋರ್ಟ್ ಇರುವುದೇ ಧರ್ಮ ಸಂಸ್ಥಾಪನೆಗಾಗಿ...

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೈಕೋರ್ಟ್ ಇರುವುದೇ ಧರ್ಮ ಸಂಸ್ಥಾಪನೆಗಾಗಿ. ಇಲ್ಲಿ ಕಡೆಗೂ ಉಳಿಯುವುದು ಧರ್ಮ ಮಾತ್ರ. ತಾಯಿ, ತಂಗಿ, ಅಕ್ಕ, ತಮ್ಮ ಯಾರೂ ಲೆಕ್ಕಕ್ಕೆ ಬರೋಲ್ಲ...!

ನ್ಯಾಯಾಂಗ ನಿಂದನೆ ಮೊಕದ್ದಮೆಯೊಂದರಲ್ಲಿ ಆರೋಪಿ ಸ್ಥಾನದಲ್ಲಿದ್ದ 74 ವರ್ಷದ ಹಿರಿಯರೊಬ್ಬರು ಕೋರ್ಟ್ ಕಟಕಟೆಯಲ್ಲಿ ನುಡಿದ ಸತ್ಯಕ್ಕೆ ತಲೆದೂಗಿದ ನ್ಯಾಯಪೀಠ ಹೇಳಿದ ಮಾತುಗಳಿವು.

ಮೈಸೂರು ಕಸಬಾ ಹೋಬಳಿ ವ್ಯಾಪ್ತಿಯಲ್ಲಿನ 1.23 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಹೈಕೋರ್ಟ್‌ನಲ್ಲಿ ಮೇಲ್ಮನವಿ ಬಾಕಿ ಇದ್ದು ಯಥಾಸ್ಥಿತಿ ಕಾಯ್ದುಕೊಂಡು ಹೋಗುವಂತೆ ಪ್ರಕರಣದ ಉಭಯ ಪಕ್ಷಗಾರರಿಗೆ ಆದೇಶಿಸಲಾಗಿತ್ತು. ಆದರೆ, ಪಕ್ಷಗಾರರಲ್ಲಿ ಒಬ್ಬರಾದ ಸಿ.ಜಯರಾಂ (74) ಕೋರ್ಟ್ ಆದೇಶ ಉಲ್ಲಂಘಿಸಿ



ಜಮೀನನ್ನು ಮಾರಾಟ ಮಾಡಿದ್ದಾರೆ ಎಂದು ಆರೋಪಿಸಿ ಮೈಸೂರಿನ ಜಯಲಕ್ಷ್ಮಿಪುರಂನ ವಿನಾಯಕನಗರದ ನಿವಾಸಿ ವಾಸು ಅವರು ನ್ಯಾಯಾಂಗ ನಿಂದನೆ ಮೊಕದ್ದಮೆ ದಾಖಲಿಸಿದ್ದರು.

ಪ್ರಕರಣವನ್ನು ನ್ಯಾಯಮೂರ್ತಿಗಳಾದ ಬಿ.ವೀರಪ್ಪ ಹಾಗೂ ಕೆ.ಎಸ್. ಹೇಮಲೇಖಾ ಅವರಿದ್ದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು. ಸಾಮಾನ್ಯವಾಗಿ ಕೋರ್ಟ್ ಕಟಕಟೆ ಪ್ರವೇಶಿಸಿ ಹೇಳಿಕೆ ನೀಡುವಾಗ ಕಕ್ಷಿದಾರರ ಪರ ವಕೀಲರು, ಅವರು ಏನನ್ನು ಹೇಳಬೇಕು ಎಂಬುದನ್ನು ಮುಂಚಿತವಾಗಿಯೇ ತಿಳಿಸಿ ಪೂರ್ವ ತಯಾರಿ ನೀಡಿರುತ್ತಾರೆ. ಅದರಂತೆಯೇ ಪಕ್ಷಗಾರರೂ ಕಟಕಟೆಯಲ್ಲಿ ಹೇಳಿಕೊಟ್ಟಂತೆ ಉತ್ತರಿಸುವುದು ವಾಡಿಕೆ.

ಪ್ರಕರಣದ ಸಂಖ್ಯೆಯನ್ನು ಕರೆದ ಕೂಡಲೇ ಜಯರಾಂ ಅವರಿಗೆ ನ್ಯಾಯಮೂರ್ತಿ ವೀರಪ್ಪ, ಕಟಕಟೆ ಪ್ರವೇಶಿಸುವಂತೆ ಸೂಚಿಸಿದರು. ಕೈಮುಗಿದುಕೊಂಡು ಬಂದು ನಿಂತ ಜಯರಾಂಗೆ ಕೋರ್ಟ್ ಅಧಿಕಾರಿ, 'ಸತ್ಯವನ್ನೇ ನುಡಿಯುತ್ತೇನೆ...' ಎಂಬ ಪ್ರಮಾಣ ಬೋಧಿಸಿದರು.


ದೋಷಾರೋಪ ಹೊರಿಸುವ ಪ್ರಕ್ರಿಯೆಯನ್ನು ಆರಂಭಿಸಿದ ವೀರಪ್ಪನವರು ಜಯರಾಂಗೆ, 'ನೋಡಿ ನೀವು, ಈ ಪ್ರಕರಣದಲ್ಲಿ ಯಥಾಸ್ಥಿತಿ ಕಾಯ್ದುಕೊಂಡು ಹೋಗುವಂತೆ ಕೋರ್ಟ್ ಆದೇಶಿಸಿದ್ದರೂ ಆಸ್ತಿ ಮಾರಾಟ ಮಾಡಿದ್ದೀರಿ ಎಂದು ಆರೋಪಿಸಲಾಗಿದೆ, ಹೌದಾ' ಎಂದು ಪ್ರಶ್ನಿಸಿದರು.

ಕೂಡಲೇ ಜಯರಾಂ, 'ಹೌದು ಸ್ವಾಮಿ' ಎಂದರು. ಇದನ್ನು ಕೇಳಿದ ವೀರಪ್ಪನವರು ನಗುತ್ತಲೇ, 'ನೋಡಿ ನೀವು ತಪ್ಪು ಮಾಡಿದ್ದೀನಿ ಎಂದು ಒಪ್ಪಿಕೊಂಡರೆ ಜೈಲಿಗೆ ಹೋಗುತ್ತೀರಿ' ಎಂದರು. ತಕ್ಷಣವೇ ಎಚ್ಚೆತ್ತುಕೊಂಡ ಜಯರಾಂ 'ಇಲ್ಲಾ ಸ್ವಾಮಿ, ನಾನು ತಪ್ಪು ಮಾಡಿಲ್ಲ' ಎಂದು ಉಲ್ಟಾ ಹೊಡೆದರು.

ಆಗ ನ್ಯಾಯಮೂರ್ತಿಗಳು ಜಯರಾಂ ಪರ ವಕೀಲ ಪಿ.ಎನ್. ಮನಮೋಹನ್ ಮತ್ತು ಅರ್ಜಿದಾರರ ಪರ ವಕೀಲೆ ಸಾಕ್ಷಿ ಅವರತ್ತ ತಿರುಗಿ, 'ನೋಡಿ, ಈ ವಯೋವೃದ್ಧರು ಮುಗ್ದತೆಯಿಂದ ಸತ್ಯವನ್ನೇ ನುಡಿದಿದ್ದಾರೆ. ಕೋರ್ಟ್ ಕೂಡಾ ಸತ್ಯವನ್ನು ಎತ್ತಿ ಹಿಡಿಯಬೇಕಾಗುತ್ತದೆ' ಎಂದು ಪ್ರತಿಕ್ರಿಯಿಸಿದರು.

ನಂತರ ಸಾಕ್ಷಿ ಅವರಿಗೆ ವೀರಪ್ಪನವರು, 'ನೋಡಮ್ಮಾ, ಅವರು ಸತ್ಯ ಒಪ್ಪಿಕೊಂಡಿದ್ದಾರೆ. ಇಬ್ಬರೂ ಕೂಡಿಕೊಂಡು ಸೌಹಾರ್ದವಾಗಿ ಪ್ರಕರಣ ಬಗೆಹರಿಸಿಕೊಳ್ಳಿ. ಅಕಸ್ಮಾತ್ ನಾನು ಅವರಿಗೆ ಜೈಲು ಶಿಕ್ಷೆಯನ್ನು ಒಂದೇ ದಿನಕ್ಕೆ ಸೀಮಿತಗೊಳಿಸಿದರೆ ನಿಮ್ಮ ಆಸ್ತಿಯೇ ಕೈಬಿಡುತ್ತದೆ, ಯೋಚಿಸಿ' ಎಂದು ಸೂಚಿಸಿ ವಿಚಾರಣೆ ಮುಂದೂಡಿದರು.





ಬ್ಯಾಟರಾಯನಪುರದ ಎಪಿಎಂಸಿ ಮಾರುಕಟ್ಟೆ ಮೈದಾನದಲ್ಲಿ ಕೇಸರಿ ಫೌಂಡೇಷನ್ ವತಿಯಿಂದ ಆಯೋಜಿಸಿದ್ದ 'ಬ್ಯಾಟರಾಯನಪುರ ಶ್ರೀನಿವಾಸ ಕಲ್ಯಾಣೋತ್ಸವ' ವಿಜೃಂಭಣೆಯಿಂದ ನೆರವೇರಿತು.

ಬ್ಯಾಟರಾಯನಪುರ: ವೈಭವದ ಶ್ರೀನಿವಾಸ ಕಲ್ಯಾಣೋತ್ಸವ

ಪ್ರಜಾವಾಣಿ ವಾರ್ತೆ

ಯಲಹಂಕ: ಬ್ಯಾಟರಾಯನಪುರದ ಎಪಿಎಂಸಿ ಮಾರುಕಟ್ಟೆ ಮೈದಾನದಲ್ಲಿ ಕೇಸರಿ ಫೌಂಡೇಷನ್ ವತಿಯಿಂದ ಆಯೋಜಿಸಿದ್ದ 'ಬ್ಯಾಟರಾಯನ-ಪುರ-ಶ್ರೀನಿವಾಸ ಕಲ್ಯಾಣೋತ್ಸವ' ವಿಜೃಂಭಣೆಯಿಂದ ನಡೆಯಿತು.

ತಿರುಪತಿಯಲ್ಲಿನ ಅರ್ಚಕರ ತಂಡವು ಕಲ್ಯಾಣೋತ್ಸವವನ್ನು ನಡೆಸಿಕೊಟ್ಟಿತು. ತಿರುಮಲ ತಿರುಪತಿ ಆಸ್ಥಾನ ಗಾಯಕರಾದ ಕೃಷ್ಣ ಅವರು ನಡೆಸಿಕೊಟ್ಟ ಸಂಗೀತಕಾರ್ಯಕ್ರಮ ಜನರನ್ನು ಮಂತ್ರಮುಗ್ಧರನ್ನಾಗಿಸಿತು.

ಕಲ್ಯಾಣೋತ್ಸವದ ಮಹಾಮಂಗಳಾರತಿ ವೇಳೆ ಸಾವಿರಾರು ಮಹಿಳೆಯರು ಏಕಕಾಲದಲ್ಲಿ ದೀಪಹಚ್ಚಿ ಮಹಾಆರತಿ ಬೆಳಗಿದ ದೃಶ್ಯ ವಿಶೇಷವಾಗಿತ್ತು. ಭಕ್ತಾದಿಗಳೆಲ್ಲರಿಗೂ ತಿರುಪತಿಯ ಲಡ್ಡು ಪ್ರಸಾದ ವಿತರಿಸಲಾಯಿತು.

ಶಾಸಕ ಬಿ.ಎಸ್.ಯಡಿಯೂರಪ್ಪ ಮಾತನಾಡಿ, 'ಎಲ್ಲರಿಗೂ ತಿರುಪತಿಗೆ ತೆರಳಿ ಶ್ರೀನಿವಾಸ ಕಲ್ಯಾಣೋತ್ಸವ ವೀಕ್ಷಿಸಲು ಸಾಧ್ಯವಿಲ್ಲ. ಈ ದಿಸೆಯಲ್ಲಿ ಕೇಸರಿ ಫೌಂಡೇಷನ್ ವತಿಯಿಂದ ಅಲ್ಲಿನ ಮಾದರಿಯಲ್ಲಿಯೇ ಬ್ಯಾಟ-ರಾಯನಪುರದಲ್ಲಿ ಎಲ್ಲ ಸಿದ್ಧತೆಗಳ-ನ್ನು ಮಾಡಿಕೊಂಡು ಕಲ್ಯಾಣೋತ್ಸವ ನೆರವೇರಿಸುವ ಮೂಲಕ ಜನರ ಧಾರ್ಮಿಕ ಸೇವೆಗೆ ಅವಕಾಶ ಕಲ್ಪಿಸಿರುವುದು ಶ್ಲಾಘನೀಯ ಕಾರ್ಯವಾಗಿದೆ' ಎಂದರು.

ಕೇಸರಿ ಫೌಂಡೇಷನ್ ಅಧ್ಯಕ್ಷ ಎಚ್.ಸಿ.ತಮ್ಮೇಶ್ ಗೌಡ ಮಾತನಾಡಿ, 'ಕ್ಷೇತ್ರದ ಅಭಿವೃದ್ಧಿಯಾಗಬೇಕೆಂಬ ಸಂಕಲ್ಪದೊಂದಿಗೆ ಈ ಐತಿಹಾಸಿಕ ಧಾರ್ಮಿಕ ಕಾರ್ಯಕ್ರಮ ಆಯೋಜಿಸಲಾಗಿದೆ' ಎಂದು ತಿಳಿಸಿದರು.

ಶಾಸಕ ಎಸ್.ಆರ್. ವಿಶ್ವನಾಥ್, ಸಿದ್ಧಗಂಗಾ ಮಠದ ಸಿದ್ಧಲಿಂಗ ಸ್ವಾಮೀಜಿ, ಪಂಚಮಸಾಲಿ ಮಠದ ವಚನಾನಂದ ಸ್ವಾಮೀಜಿ, ಸ್ಫಟಿಕಪುರಿ ಮಹಾಸಂಸ್ಥಾನ ಮಠದ ನಂಜಾವಧೂತ ಸ್ವಾಮೀಜಿ ಇದ್ದರು.

ಬಿಜೆಪಿ, ಕಾಂಗ್ರೆಸ್ ಟಿಕೆಟ್‌ಗೆ ಭಾರಿ ಪೈಪೋಟಿ

ಪ್ರಜಾ ಮತ ಜನತಂತ್ರದ ಹಬ್ಬ | ಕರ್ನಾಟಕ ವಿಧಾನಸಭಾ ಚುನಾವಣೆ - 2023

ಕ್ಷೇತ್ರ ಸ್ಥಿತಿ-ಗತಿ

• ಎಸ್.ರವಿಪ್ರಕಾಶ್

ಬೆಂಗಳೂರು: ನಗರದ ಪ್ರತಿಷ್ಠಿತ ವಿಧಾನಸಭಾ ಕ್ಷೇತ್ರಗಳಲ್ಲಿ ರಾಜಾಜಿನಗರವೂ ಒಂದು. ಮಧ್ಯಮ ಮತ್ತು ಕೆಳಮಧ್ಯಮ ವರ್ಗದವರೇ ಹೆಚ್ಚಿನ ಸಂಖ್ಯೆಯಲ್ಲಿರುವ ಈ ಕ್ಷೇತ್ರ ಬಿಜೆಪಿಯ ಭದ್ರಕೋಟೆ ಎನಿಸಿದೆ. ಈ ಬಾರಿ ಬಿಜೆಪಿ ಮತ್ತು ಕಾಂಗ್ರೆಸ್‌ನಲ್ಲಿ ಟಿಕೆಟ್ ಆಕಾಂಕ್ಷಿಗಳ ಪೈಪೋಟಿ ತೀವ್ರವಾಗಿದೆ.

1978 ರಿಂದ ಈಚೆಗೆ ನಡೆದ ಚುನಾವಣೆಗಳಲ್ಲಿ ಕಾಂಗ್ರೆಸ್ ಎರಡೇ ಸಲ (1989 ಮತ್ತು 2004) ಈ ಕ್ಷೇತ್ರದಲ್ಲಿ ಗೆಲುವು ಕಂಡಿದೆ. ಜನತಾ ಪಕ್ಷ ಒಮ್ಮೆ ಗೆದ್ದಿತ್ತು. ಸಿಪಿಐನ ಎಂ.ಎಸ್.ಕೃಷ್ಣನ್ ಅವರು ಎರಡು ಬಾರಿ ಈ ಕ್ಷೇತ್ರದಲ್ಲಿ ಗೆಲುವು ಕಂಡಿದ್ದರು. ಸಣ್ಣ ಮತ್ತು ಮಧ್ಯಮ ಗಾತ್ರದ ಸಾಕಷ್ಟು ಕೈಗಾರಿಕೆಗಳಿವೆ. ಹೀಗಾಗಿ ಇಲ್ಲಿ ಕಾರ್ಮಿಕರ ಸಂಖ್ಯೆಯೂ ಹೆಚ್ಚು.

ಮೂಲಸೌಕರ್ಯಗಳ ಸಮಸ್ಯೆಗಳು ಅಕ್ಕಪಕ್ಕದ ವಿಧಾನಸಭಾ ಕ್ಷೇತ್ರಗಳಿಗಿಂತಲೂ ಇಲ್ಲಿ ಕೊಂಚ ಹೆಚ್ಚಾಗಿಯೇ ಇವೆ. ಅದರಲ್ಲೂ ಪಶ್ಚಿಮ ಕಾರ್ಡ್ ರಸ್ತೆಯಲ್ಲಿ ಮೇಲ್ಸೇತುವೆ ಇನ್ನೂ ಪೂರ್ಣಗೊಂಡಿಲ್ಲ. ಕೆಲವು ಕಡೆಗಳಲ್ಲಿ ಸಂಚಾರಕ್ಕೆ ಅನುವು ಮಾಡಿದ್ದರೆ, ಇನ್ನು ಕೆಲವು ಕಡೆಗಳಲ್ಲಿ ಕಾಮಗಾರಿ ಪೂರ್ಣಗೊಂಡಿಲ್ಲ. ಮತ್ತೊಂದೆಡೆ ಲುಲು ಮಾಲ್ ಸ್ಥಾಪನೆಯಿಂದ ಏಕ ವಾಹನಗಳ ಸಂಚಾರಕ್ಕೆ ಇನ್ನಿಲ್ಲದ ಸಮಸ್ಯೆ ಆಗಿದೆ. ರಸ್ತೆಗಳ ಗುಂಡಿಗಳೂ ಸೇರಿ ಹಲವು ಸಮಸ್ಯೆಗಳು ಕ್ಷೇತ್ರವನ್ನು ಕಾಡುತ್ತಿವೆ.

ಈ ಕ್ಷೇತ್ರವನ್ನು ಐದು ಬಾರಿ ಗೆದ್ದಿರುವ ಬಿಜೆಪಿಯ ಎಸ್.ಸುರೇಶ್ ಕುಮಾರ್ ಮತ್ತೊಮ್ಮೆ ಸ್ಪರ್ಧೆಗೆ ಸಿದ್ಧರಾಗಿದ್ದಾರೆ. ಸಚಿವ ಸ್ಥಾನದಿಂದ ನಿರ್ಗಮಿಸಿದ ಬಳಿಕ ಅವರು ಸುಮ್ಮನೆ ಕುಳಿತಿಲ್ಲ. ಕಳೆದ ಕೆಲವು ತಿಂಗಳಿಂದ ಕ್ಷೇತ್ರದ ಮತದಾರರನ್ನು ತಮ್ಮದೇ ವಿಶಿಷ್ಟ ಶೈಲಿಯ ಮೂಲಕ ಸಂಪರ್ಕಿಸುವ ಕೆಲಸದಲ್ಲಿ ನಿರತರಾಗಿದ್ದಾರೆ. ಆದರೆ, ಈ ಬಾರಿ ಬಿಜೆಪಿಯಲ್ಲಿ ಟಿಕೆಟ್ ಆಕಾಂಕ್ಷಿಗಳ ಸಂಖ್ಯೆಯೂ ಹೆಚ್ಚಾಗಿದೆ.

ಬಿಜೆಪಿಯಲ್ಲಿ ಹಿಂದೆ ನಗರ ಸಂಘಟನಾ ಕಾರ್ಯದರ್ಶಿ ಆಗಿದ್ದ ರಘುನಾಥ್ ಎಸ್, ಮಾಜಿ ಕಾರ್ಪೊರೇಟರ್‌ಗಳಾದ ಮಂಜುನಾಥ್ ಮತ್ತು ರಂಗಣ್ಣ ಬಿಜೆಪಿ ಟಿಕೆಟ್ ಪಡೆಯಲು ಪ್ರಯತ್ನಿಸುತ್ತಿರುವವರಲ್ಲಿ ಮುಂಚೂಣಿಯಲ್ಲಿದ್ದಾರೆ. 'ಸುರೇಶ್ ಅವರು ಒಟ್ಟು ಐದು ಬಾರಿ ಬಿ ಫಾರ್ಮ್ ಪಡೆದು ಐದು ಬಾರಿ ಶಾಸಕರಾಗಿದ್ದಾರೆ. ಈ ಬಾರಿ ಹೊಸಬರಿಗೆ ಟಿಕೆಟ್ ಕೊಡಬೇಕು. 22 ವರ್ಷಗಳಿಂದ ಪಕ್ಷಕ್ಕೆ ಕೆಲಸ ಮಾಡಿರುವ ನನಗೂ ಒಂದು ಬಾರಿ ಅವಕಾಶ ಕೊಡುವ ಬಗ್ಗೆ ಪರಿಗಣಿಸಿ' ಎಂದು ರಘುನಾಥ್ ಬೇಡಿಕೆ ಇಟ್ಟಿದ್ದಾರೆ ಎಂದು ಮೂಲಗಳು ಹೇಳಿವೆ.


ಕಾಂಗ್ರೆಸ್‌ನಲ್ಲೂ ಟಿಕೆಟ್‌ಗೆ ಭಾರಿ ಪೈಪೋಟಿ ನಡೆದಿದೆ. ಮಾಜಿ ಮೇಯರ್ ಪದ್ಮಾವತಿ, ಮಂಜುಳಾ ನಾಯ್ಡು, ಭವ್ಯ ನರಸಿಂಹಮೂರ್ತಿ ಮತ್ತು ರಘುವೀರಗೌಡ ಎಂಬುವರು ಟಿಕೆಟ್ ಆಕಾಂಕ್ಷಿಗಳು. ರಘುವೀರ್ ಅವರು ಈಗಾಗಲೇ ಕ್ಷೇತ್ರದ ಜನರನ್ನು ಧರ್ಮಸ್ಥಳ, ಚಾಮುಂಡಿಬೆಟ್ಟ ಮುಂತಾದ ಧಾರ್ಮಿಕ ಕ್ಷೇತ್ರಗಳಿಗೆ ಕಳುಹಿಸುವ ಮೂಲಕ ಗಮನ ಸೆಳೆಯುವ ಪ್ರಯತ್ನ ನಡೆಸಿದ್ದಾರೆ.

ಜೆಡಿಎಸ್‌ನಿಂದ ಬಿಜೆಪಿಗೆ ಪಕ್ಷಾಂತರಗೊಂಡು ವಿಧಾನಪರಿಷತ್ ಸದಸ್ಯರಾದವರೊಬ್ಬರು ಈ ಕ್ಷೇತ್ರದಿಂದ ಕಾಂಗ್ರೆಸ್ ಟಿಕೆಟ್‌ಗೆ ಪ್ರಯತ್ನ ನಡೆಸಿದ್ದಾರೆ. ಟಿಕೆಟ್ ಖಾತರಿ ಅದರೆ ಅವರು ಕಾಂಗ್ರೆಸ್‌ಗೆ ಪಕ್ಷಾಂತರ ಮಾಡುವ ಸಾಧ್ಯತೆಯೂ ಇದೆ. ಇವರು ಡಿ.ಕೆ.ಶಿವಕುಮಾರ್ ಸಂಪರ್ಕದಲ್ಲಿದ್ದಾರೆ. ಜೆಡಿಎಸ್ ಈಗಾಗಲೇ ಗಂಗಾಧರಮೂರ್ತಿ ಎಂಬುವರಿಗೆ ಟಿಕೆಟ್ ಘೋಷಿಸಿದೆ.

ರಾಜಾಜಿನಗರ



ಎಸ್.ಸುರೇಶ್ ಕುಮಾರ್
ಹಾಲಿ ಶಾಸಕ (ಬಿಜೆಪಿ)



ಹಾಲಿ ಮತದಾರರ ವಿವರ

1,01,976 ಪುರುಷರು
99,304 ಮಹಿಳೆಯರು
7 ತೃತೀಯ ಲಿಂಗಿಗಳು
2,0,287 ಒಟ್ಟು

ಚುನಾವಣೆ ಮತಗಳ ವಿವರ

ಪಕ್ಷಗಳು	2018	2013	2008
ಬಿಜೆಪಿ	56,271	39,291	49,655
ಕಾಂಗ್ರೆಸ್	46,818	24,524	34,995
ಜೆಡಿಎಸ್	9,168	20,909	7,422

'ಬಿಜೆಪಿಯಲ್ಲಿ ನಾನೊಂದು ತೀರಾ, ನೀನೊಂದು ತೀರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಜೆಪಿಯಲ್ಲಿ ಆಂತರಿಕ ಭಿನ್ನಾಭಿಪ್ರಾಯ ಮುಗಿಲು ಮುಟ್ಟಿದೆ. ಯಡಿಯೂರಪ್ಪ– ಬೊಮ್ಮಾಯಿ ನಾನೊಂದು ತೀರಾ, ನೀನೊಂದು ತೀರ ದಂತಾಗಿದ್ದಾರೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಮಂಡ್ಯಕ್ಕೆ ಬಂದಾಗ ಯಡಿಯೂರಪ್ಪ ಇದೇ ಕಾರಣಕ್ಕೆ ತಪ್ಪಿಸಿಕೊಂಡರು' ಎಂದು ಕೆಪಿಸಿಸಿ ಮಾಧ್ಯಮ ಉಪಾಧ್ಯಕ್ಷ ರಮೇಶ್ ಬಾಬು ಹೇಳಿದರು.

ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಂ. ಲಕ್ಷ್ಮಣ್ ಜೊತೆ ಸುದ್ದಿಗೋಷ್ಠಿ-ಯಲ್ಲಿ ಮಂಗಳವಾರ ಮಾತನಾಡಿದ ಅವರು, 'ಬಿಜೆಪಿಯಲ್ಲಿ ಗುಂಪುಗಾರಿಕೆ ಹೆಚ್ಚಾಗಿದ್ದು, ದೆಹಲಿಯ ಕಾರ್ಯಕಾರಿಣಿ ಸಭೆಯ ಸಮಯದಲ್ಲಿ 30 ಶಾಸಕರು ಸಹಿ ಮಾಡಿ ಬೊಮ್ಮಾಯಿ ಅವರ ನಾಯಕತ್ವ ಬದಲಾಗಬೇಕು ಎಂದು ಪತ್ರ ಬರೆದಿದ್ದಾರೆ. ಇದನ್ನು ಬರೆದಿರುವವರು ಯಡಿಯೂರಪ್ಪನವರ ಬೆಂಬಲಿಗರು. ಅವರು ಬೊಮ್ಮಾಯಿ ಅವರ ನೇತೃತ್ವದಲ್ಲಿ ಚುನಾವಣೆಗೆ ಹೋಗಲು ಸಿದ್ಧರಿಲ್ಲ' ಎಂದರು.

'ನಳಿನ್ ಕುಮಾರ್, ಸಿ.ಟಿ. ರವಿ ಅವರದ್ದು ಒಂದು ತಂಡ, ಯತ್ನಾಳ್ ಅವರದ್ದು ಮತ್ತೊಂದು ತಂಡ, ಬೊಮ್ಮಾಯಿ ಅವರದ್ದು, ಯಡಿಯೂರಪ್ಪ ಅವರದ್ದು ಪ್ರತ್ಯೇಕ ತಂಡ. ಉಸ್ತುವಾರಿ ಅರುಣ್ ಸಿಂಗ್ ಅವರಿಗೆ ತಮ್ಮ ಪಕ್ಷದ ನಾಯಕರ ಜತೆ ವ್ಯವಹಾರ ಮಾಡಲು ಸಮಯ ಸಾಲುತ್ತಿಲ್ಲ' ಎಂದು ಟೀಕಿಸಿದರು.

'ಯೋಗ್ಯತೆ ಇದ್ದರೆ ದಾಖಲೆಗಳ ಸಹಿತ ಬಿಜೆಪಿಯವರು ಚರ್ಚೆಗೆ ಬರಲಿ. ನಾವು ಚರ್ಚೆಗೆ ಸಿದ್ಧ' ಎಂದು ಸಚಿವ ಡಾ.ಕೆ. ಸುಧಾಕರ್ ಆರೋಪಕ್ಕೆ ಎಂ. ಲಕ್ಷ್ಮಣ್ ತಿರುಗೇಟು ನೀಡಿದರು.

'2013ರಿಂದ 2018ರವರೆಗಿನ ಸಿಎಜಿ ವರದಿ ಉಲ್ಲೇಖಿಸಿ ₹ 35 ಸಾವಿರ ಕೋಟಿ ಮೊತ್ತದ ಭ್ರಷ್ಟಾಚಾರ ನಡೆದಿದೆ ಎಂದು ಸುಧಾಕರ್ ಸುಳ್ಳು ಹೇಳಿದ್ದಾರೆ. ಚಿಕ್ಕಬಳ್ಳಾಪುರದ ಜನರ ಪ್ರಕಾರ, ಸುಧಾಕರ್ ಅವರ ಅಕ್ರಮಗಳ ಬಗ್ಗೆ ಸುಮಾರು 40 ದೂರುಗಳಿವೆ. ಕೋವಿಡ್ ಸಮಯದಲ್ಲಿ ಪ್ರತಿ ಉಪಕರಣ ಖರೀದಿಯಲ್ಲಿ ಅಕ್ರಮ ಮಾಡಿದ್ದಾರೆ' ಎಂದು ಆರೋಪಿಸಿದರು.

ಕಾರ್ಯಕರ್ತೆಯರ ಪ್ರತಿಭಟನೆ ಮುಂದುವರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು:ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಅಂಗನವಾಡಿ ಕಾರ್ಯ-ಕರ್ತೆಯರು ಹಾಗೂ ಸಹಾಯಕಿಯರು ನಡೆಸುತ್ತಿರುವ ಪ್ರತಿಭಟನೆ ಮಂಗಳವಾರ ಎರಡನೇ ದಿನ ಪೂರೈಸಿತು.

'ಅಂಗನವಾಡಿ ಕಾರ್ಯಕರ್ತೆ-ಯರನ್ನು ಸರ್ಕಾರಿ ಶಿಕ್ಷಕಿಯರೆಂದು ಪರಿಗಣಿಸಬೇಕು. ಅನ್ನದ ಕೇಂದ್ರಗ-ಳಾಗಿರುವ ಅಂಗನವಾಡಿಗಳನ್ನು ಅಕ್ಷರ ಕೇಂದ್ರಗಳಾಗಿ ಮಾರ್ಪಡಿಸಬೇಕು. ಗ್ರ್ಯಾಚ್ಯುಟಿ ಪಾವತಿಸಬೇಕು' ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಸೋಮವಾರದಿಂದ (ಜ. 23) ಅನಿರ್ದಿಷ್ಟಾವಧಿ ಪ್ರತಿಭಟನೆ ಆರಂಭವಾಗಿದೆ.

ರಾಜ್ಯ ಹಲವು ಜಿಲ್ಲೆಗಳಿಂದ ನಗರಕ್ಕೆ ಬಂದಿರುವ ಕಾರ್ಯಕರ್ತೆ-ಯರು ಹಾಗೂ ಸಹಾಯಕಿಯರು ಉದ್ಯಾನದಲ್ಲಿ ಹಗಲು–ರಾತ್ರಿ ಕುಳಿತು ಪ್ರತಿಭಟನೆ ಮುಂದುವರಿಸಿದ್ದಾರೆ. ಉದ್ಯಾನದಲ್ಲೇ ಊಟ, ನಿದ್ದೆ ಮಾಡುತ್ತಿದ್ದಾರೆ. ಮಂಗಳವಾರವೂ ಪ್ರತಿಭಟನೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರತಿಭಟನಕಾರರು ಪಾಲ್ಗೊಂಡಿದ್ದರು.

'ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರ ಬಗ್ಗೆ ಸರ್ಕಾರ ನಿರ್ಲಕ್ಷ್ಯ ಧೋರಣೆ ತೋರುತ್ತಿದೆ. ಬೇಡಿಕೆ ಈಡೇರಿಕೆಗೆ ಹಲವು ಬಾರಿ ಹೋರಾಟ ನಡೆಸಿದರೂ ಸ್ಪಂದಿಸುತ್ತಿಲ್ಲ. ಬೇಡಿಕೆ ಈಡೇರಿಸುವ ಬಗ್ಗೆ ಲಿಖಿತ ಭರವಸೆ ಸಿಗುವವರೆಗೂ ಉದ್ಯಾನ ಬಿಟ್ಟು ಹೋಗುವುದಿಲ್ಲ' ಎಂದು ಸಂಘದ ರಾಜ್ಯ ಘಟಕದ ಅಧ್ಯಕ್ಷೆ ಎಸ್. ವರಲಕ್ಷ್ಮಿ ಹೇಳಿದರು.



ಪ್ರತಿಭಟನೆ ನಡೆಸುತ್ತಿರುವ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ರಸ್ತೆಯಲ್ಲಿ ಕುಳಿತು ಊಟ ಮಾಡಿದರು – ಪ್ರಜಾವಾಣಿ ಚಿತ್ರ

ಕಾಂಗ್ರೆಸ್ ಕಾರ್ಯಕರ್ತರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಯಲಹಂಕ: ಅಗತ್ಯ ವಸ್ತುಗಳ ಬೆಲೆ ಏರಿಕೆ ಹಾಗೂ ಭ್ರಷ್ಟಾಚಾರ ಖಂಡಿಸಿ, ಕೇಂದ್ರ ಮತ್ತು ರಾಜ್ಯ ಬಿಜೆಪಿ ಸರ್ಕಾರದ ವಿರುದ್ಧ ಯಲಹಂಕ ಮತ್ತು ಬ್ಯಾಟ-ರಾಯನಪುರ ಕ್ಷೇತ್ರಗಳ ಕಾಂಗ್ರೆಸ್ ಕಾರ್ಯಕರ್ತರು ವಿವಿಧ ವೃತ್ತಗಳಲ್ಲಿ ಪ್ರತಿಭಟನೆ ನಡೆಸಿದರು.

ಯಲಹಂಕದ ಕೋಗಿಲು ವೃತ್ತ, ಸಂತೆ ವೃತ್ತ ಮತ್ತು ಎನ್‌ಇಎಸ್ ವೃತ್ತದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವೈ.ಆರ್. ಶ್ರೀಧರ್ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿದ ಕಾಂಗ್ರೆಸ್ ಕಾರ್ಯಕರ್ತರು, ಬಿಜೆಪಿ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ಪಾಲಿಕೆ ಮಾಜಿ ಸದಸ್ಯರಾದ ವೈ.ಎನ್.ಅಶ್ವಥ್, ಪದ್ಮಾವತಿ ಅಮರನಾಥ್, ಮುಖಂಡ ಗೋಪಿ ಪಾಲ್ಗೊಂಡಿದ್ದರು.

ಬ್ಯಾಟರಾಯನಪುರ ಕ್ಷೇತ್ರದ ಹೆಬ್ಬಾಳ ಫ್ಲೈ ಓವರ್ ಸಮೀಪದ ಎಸ್ಟೀಂ ಮಾಲ್ ಬಳಿ ಶಾಸಕ ಕೃಷ್ಣಬೈರೇಗೌಡ ನೇತೃತ್ವದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಬ್ಯಾಟರಾಯನಪುರದ ಬಿಬಿಎಂಪಿ ಕಛೇರಿ, ಸಾದಹಳ್ಳಿ ಗೇಟ್, ಕೊಡಿಗೇಹಳ್ಳಿ, ತಿಂಡ್ಲು, ಬಾಗಲೂರು ಮುಖ್ಯರಸ್ತೆ, ಹೆಗಡೆನಗರ, ನಾಗವಾರ ಹಾಗೂ ವಿದ್ಯಾರಣ್ಯಪುರದ ನಂಜಪ್ಪ ವೃತ್ತದಲ್ಲಿ ಪ್ರತಿಭಟನೆ ನಡೆಸಿದರು.

ಕಾಂಗ್ರೆಸ್ ಮುಖಂಡರಾದ ಎನ್. ಎನ್.ಶ್ರೀನಿವಾಸಯ್ಯ, ಎಂ.ಜಯ-ಗೋಪಾಲಗೌಡ, ಎನ್.ಕೆ.ಮಹೇಶ್ ಕುಮಾರ್ ಉಪಸ್ಥಿತರಿದ್ದರು.



ಯಲಹಂಕದ ಕೋಗಿಲು ವೃತ್ತದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವೈ.ಆರ್.ಶ್ರೀಧರ್ ನೇತೃತ್ವದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಕೆಪಿಎಸ್‌ಸಿ: ಷಡಕ್ಷರಿ ಸ್ವಾಮಿ ನೇಮಕ ಪ್ರಶ್ನಿಸಿದ್ದ ಪಿಐಎಲ್ ವಿಲೇವಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ಅಧ್ಯಕ್ಷರನ್ನಾಗಿ ಷಡಕ್ಷರಿ ಸ್ವಾಮಿ ಅವರನ್ನು ನೇಮಿಸಿ ರಾಜ್ಯ ಸರ್ಕಾರ 2019ರಲ್ಲಿ ಹೊರಡಿಸಿದ್ದ ಆದೇಶ ರದ್ದುಪಡಿಸಬೇಕು ಎಂದು ಕೋರಿ ಸಲ್ಲಿಸಲಾಗಿದ್ದ ಅರ್ಜಿಯನ್ನು ಹೈಕೋರ್ಟ್ ವಿಲೇವಾರಿ ಮಾಡಿದೆ.

ಈ ಕುರಿತಂತೆ ಮಾಹಿತಿ ಹಕ್ಕು ಕಾರ್ಯಕರ್ತ ಟಿ.ನರಸಿಂಹ ಮೂರ್ತಿ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅಡ್ವೊಕೇಟ್ ಜನರಲ್ ಪ್ರಭುಲಿಂಗ ಕೆ. ನಾವದಗಿ, 'ಷಡಕ್ಷರಿ ಸ್ವಾಮಿ ಸದ್ಯ ಕೆಪಿಎಸ್‌ಸಿ ಅಧ್ಯಕ್ಷರಾಗಿಲ್ಲ. ಅವರ ಸ್ಥಾನಕ್ಕೆ ಮತ್ತೊಬ್ಬರನ್ನು ನೇಮಿಸಲಾಗಿದೆ. ಇದರಿಂದ ಅರ್ಜಿ ವಿಚಾರಣಾ ಮಾನ್ಯತೆ ಕಳೆದುಕೊಂಡಿದೆ' ಎಂದರು.

ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, 'ಪ್ರಕರಣದಲ್ಲಿ ಹೆಚ್ಚಿನ ವಿಚಾರಣೆ ಅಗತ್ಯವಿಲ್ಲ. ಆದರೆ, ಕೆಪಿಎಸ್‌ಸಿ ಅಧ್ಯಕ್ಷ ಹಾಗೂ ಸದಸ್ಯರ ನೇಮಕಾತಿಗೆ ನಿಯಮ ರೂಪಿಸುವಂತೆ ಸರ್ಕಾರಕ್ಕೆ ಹೈಕೋರ್ಟ್ 2016ರ ಜ. 21ರಂದು ಹೊರಡಿಸಿರುವ ಆದೇಶ ಜಾರಿ ಕುರಿತು ಅರ್ಜಿದಾರರು ಪರ್ಯಾಯ ಪರಿಹಾರ ಕ್ರಮ ಕೈಗೊಳ್ಳಬಹುದು' ಎಂದು ನಿರ್ದೇಶಿಸಿತು.

ಮತ್ತೊಮ್ಮೆ ನೋಟಿಸ್: 'ನ್ಯಾಯಾಲಯದ ಆದೇಶದ ಹೊರತಾಗಿಯೂ ಶೋಧನಾ ಸಮಿತಿ ರಚನೆ ಮಾಡದೆ ಕೆಪಿಎಸ್‌ಸಿ ಅಧ್ಯಕ್ಷ ಮತ್ತು ಸದಸ್ಯರನ್ನು ನೇಮಿಸಲಾಗಿದೆ' ಎಂದು ಆರೋಪಿಸಿ 2020ರಲ್ಲಿ ಸಲ್ಲಿಸಿರುವ ಬೇರೊಂದು ಅರ್ಜಿಗೆ ಸಂಬಂಧಿಸಿದಂತೆ ಕೆಪಿಎಸ್‌ಸಿಗೆ ಮತ್ತೊಮ್ಮೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದ ನ್ಯಾಯಪೀಠ ವಿಚಾರಣೆಯನ್ನು ಫೆಬ್ರುವರಿ 20ಕ್ಕೆ ಮುಂದೂಡಿತು.

'ಬಾಲಗಂಗಾಧರನಾಥ ಸ್ವಾಮೀಜಿ ಕೊಡುಗೆ ಅಪಾರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಾಡಿನಲ್ಲಿ ಸಾಕ್ಷರತೆ ಪ್ರಮಾಣ ವೃದ್ಧಿ, ಸಾಮಾಜಿಕ ಹಾಗೂ ಧಾರ್ಮಿಕ ಕ್ಷೇತ್ರಗಳ ಬೆಳವಣಿಗೆಗೆ ಬಾಲಗಂಗಾಧರ-ನಾಥ ಸ್ವಾಮೀಜಿ ಅವರ ಕೊಡುಗೆ ಅಪಾರ' ಎಂದು ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ಅವರು ಸ್ಮರಿಸಿದರು.

ಸುಂಕದಕಟ್ಟೆಯ ಗಂಗಾಧರಪ್ಪ ಕಾಂಪ್ಲೆಕ್ಸ್ ಬಳಿ ಬಾಲಗಂಗಾಧರನಾಥ ಸ್ವಾಮೀಜಿ ಅವರ ಪುತ್ಥಳಿಯನ್ನು ಅನಾವರಣಗೊಳಿಸಿದ ಅವರು, ಬಾಲಗಂಗಾಧರನಾಥ ಸ್ವಾಮೀಜಿ ಅವರ ಜಯಂತ್ಯುತ್ಸವ ಹಾಗೂ ಸಂಸ್ಮರಣೋತ್ಸವಕ್ಕೆ ಚಾಲನೆ ನೀಡಿದರು.

'ಶಿಕ್ಷಣದ ಮೂಲಕ ಸಮಾಜವನ್ನು ಸಮೃದ್ಧಗೊಳಿಸುವ ಕನಸು ಕಂಡ ಅವರು, ಅದನ್ನು ಸಾಕಾರಗೊಳಿಸಲು ಸುದೀರ್ಘ ಸೇವೆ ಸಲ್ಲಿಸಿದರು. ಅವರು ಸ್ವಸ್ಥ ಸಮಾಜ ನಿರ್ಮಾಣದಲ್ಲಿ ಅಗ್ರಗಣ್ಯರಾಗಿದ್ದಾರೆ. ಅನ್ನದಾಸೋಹದ ಜತೆಗೆ ಮನುಷ್ಯನ ವಿಕಾಸಕ್ಕೆ ಪೂರಕವಾದ ಉತ್ಕೃಷ್ಟ ಶಿಕ್ಷಣ ನೀಡುತ್ತಿರುವ ಮಠದ ಕಾರ್ಯವೈಖರಿ ಹಾಗೂ ಗುರುಗಳ ಸಾಮಾಜಿಕ ಕಳಕಳಿಗೆ ಅಬ್ದುಲ್ ಕಲಾಂ ಅವರು ಮೆಚ್ಚುಗೆ ವ್ಯಕ್ತಪಡಿಸಿದ್ದ-ರು. ಅವರು ಮಠಕ್ಕೆ ಸಾಕಷ್ಟು ಬಾರಿ ಭೇಟಿ ನೀಡಿದ್ದರು' ಎಂದು ನಿರ್ಮಲಾನಂದನಾಥ ಸ್ವಾಮೀಜಿ ನೆನೆದರು.

ಶಾಂತಿಧಾಮ ಹಾಗೂ ಎನ್‌ಪಿಎಸ್ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಜಿ.ಗಂಗಾಧರಯ್ಯ, 'ಬಾಲಗಂಗಾಧರ-ನಾಥ ಸ್ವಾಮೀಜಿ ಅವರು ಬದುಕಿನುದ್ದಕ್ಕೂ ನಿರಂತರ ಕಾಯಕದಲ್ಲಿ ನಿಷ್ಠೆ ಮೆರೆದು, ಸದ್ದಿಲ್ಲದೇ ದಾಸೋಹ ಸಂಸ್ಕೃತಿಯನ್ನು ಜಗತ್ತಿಗೆ ಸಾರಿದರು. ಈ ಮೂಲಕ ಲಕ್ಷಾಂತರ ಮಕ್ಕಳ ಭವಿಷ್ಯಕ್ಕೆ ಬೆಳಕಾದರು' ಎಂದರು.

ಎನ್‌ಪಿಎಸ್ ಸಮೂಹ ಶಿಕ್ಷಣ ಸಂಸ್ಥೆಗಳ ಉಪಾಧ್ಯಕ್ಷ ಧನಂಜಯ ಗೌಡ, 'ಮಠಮಾನ್ಯಗಳು ಇರುವುದು ಜನರ ಸೇವೆಗಾಗಿ, ಸಮಾಜದ ಒಳಿತಿಗಾಗಿ ಎಂಬ ಮೇಲ್ಪಂಕ್ತಿಯನ್ನು ಹಾಕಿಕೊಟ್ಟವರು ಬಾಲಗಂಗಾಧರನಾಥ ಸ್ವಾಮೀಜಿ. ಅವರ ಆಶಯದಂತೆ ಬಡವರಿಗೆ ಕೈಗೆಟುಕುವ ದರದಲ್ಲಿ ಶಿಕ್ಷಣ ಒದಗಿಸಲಾಗುತ್ತಿದೆ' ಎಂದು ಹೇಳಿದರು.

ಸಂಸದ ಡಿ.ಕೆ. ಸುರೇಶ್, ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ವಿಜಯನಗರ ಶಾಖೆಯ ಸೌಮ್ಯನಾಥ ಸ್ವಾಮೀಜಿ, ನಗರಸಭೆ ಮಾಜಿ ಅಧ್ಯಕ್ಷ ಹನುಮಂತರಾಯಪ್ಪ ಅವರು ಇದ್ದರು.



ಬಾಲಗಂಗಾಧರನಾಥ ಸ್ವಾಮೀಜಿ ಅವರ ಜಯಂತೋತ್ಸವ ಹಾಗೂ ಸಂಸ್ಮರಣೋತ್ಸವಕ್ಕೆ ನಿರ್ಮಲಾನಂದನಾಥ ಸ್ವಾಮೀಜಿ ಚಾಲನೆ ನೀಡಿದರು. (ಎಡದಿಂದ ಬಲಕ್ಕೆ) ಮುಖ್ಯ ಶಿಕ್ಷಕಿ ಅನಿಲಾ, ಪ್ರಾಂಶುಪಾಲೆ ಶ್ರೀದೇವಿ, ಶಾಲೆಯ ಅಧ್ಯಕ್ಷ ಜಿ. ಗಂಗಾಧರಯ್ಯ, ಶಾಲೆಯ ಉಪಾಧ್ಯಕ್ಷ ಜಿ. ಧನಂಜಯ, ಪ್ರಾಂಶುಪಾಲೆ ಪುಷ್ಪಾ ಇದ್ದಾರೆ.

ಬೆಂಗಳೂರು ರೇಸ್

ಆಲ್ ಅಟ್ರ್ಯಾಕ್ಟೀವ್ ಗೆಲ್ಲುವ ನಿರೀಕ್ಷೆ

ಬೆಂಗಳೂರು ರೇಸ್ ಕೋರ್ಸ್ 160ನೇ ವರ್ಷದ ಕಮೆಮೋರೇಷನ್ ಟ್ರೋಫಿ ಬುಧವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಆಲ್ ಅಟ್ರ್ಯಾಕ್ಟೀವ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:30ಕ್ಕೆ ಪ್ರಾರಂಭವಾಗಲಿರುವ ದಿನದ ಒಂಬತ್ತು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ.

1ನೇ ರೇಸ್: ಫ್ಲೆಮಿಂಗೋ ರೋಡ್ 6, ಚೈನ್ ಆಫ್ ಥಾಟ್ಸ್ 4, ಟೈಗರ್ ರಿಟರ್ನ್ಸ್ 5
2ನೇ ರೇಸ್: ಆರೋವೆಟ್ 1, ಮಿಸ್ಟಿಕಲ್ ಮರ್ಕಬಾ 10, ಸದರ್ನ್ ಅರಿಸ್ಟೋಕ್ರಾಟ್ 8
3ನೇ ರೇಸ್: ಮೆಮೋರಬಲ್ ಟೈಮ್ 5, ಸ್ಟೆಲ್ಲಾರ್ ಗೋಲ್ಡ್ 2, ಮೈ ವಿಶನ್ 4
4ನೇ ರೇಸ್: ಝೇರ್ವಿಚ್ 1, ಮೇಬಾಚ್ 2, ಅಕ್ವಾಮ್ಯಾಟಿಕ್ 3
5ನೇ ರೇಸ್: ಸ್ಟಾರ್ ಗ್ಲೋರಿ 3, ಗೋಲ್ಡನ್ ಗೆಸ್ಟ್ 2, ನಾಟಿ ಡ್ಯಾನ್ಸರ್ 1
6ನೇ ರೇಸ್: ಝೂರಿ 7, ಫಿಯರ್‌ಲೆಸ್ ಜೋಯಿ 3, ಕ್ಯಾಟ್ ವಿಸ್ಕರ್ಸ್ 1
7ನೇ ರೇಸ್: ಆಲ್ ಅಟ್ರ್ಯಾಕ್ಟೀವ್ 3, ಮೂನ್ಸ್ ಬ್ಲೆಸ್ಸಿಂಗ್ 6, ಇಂಪೀರಿಯಲ್ ಬ್ಲ್ಯೂ 5
8ನೇ ರೇಸ್: ಆಲ್ವೇಸ್ ಹ್ಯಾಪಿ 7, ಅಡ್ಜೆಸ್ಟ್‌ಮೆಂಟ್ 2, ಸೋಫಿಯಾ 5
9ನೇ ರೇಸ್: ಕಿಂಗ್ಸ್ ಸ್ಪೀಚ್ 3, ಪನಾಮಾ 1, ಕ್ಲಾಸಿಕ್ ಚಾರ್ಮ್ 6

ಉತ್ತಮ ಬೆಟ್: ಝೂರಿ

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
5,6,7,8,9	1,2,3	4,5,6	7,8,9

ಲಖನೌ: ಬಹುಮಹಡಿ ಕಟ್ಟಡ ಕುಸಿತ

ಲಖನೌ (ಪಿಟಿಐ): ಇಲ್ಲಿನ ಹಜರತ್ ಗಂಜ್‌ನಲ್ಲಿ ಮಂಗಳವಾರ ಬಹುಮಹಡಿ ವಸತಿ ಕಟ್ಟಡವೊಂದು ಕುಸಿದುಬಿದ್ದು, ಹಲವರು ಕಟ್ಟಡದ ಅವಶೇಷಗಳಡಿ ಸಿಲುಕಿರುವ ಸಾಧ್ಯತೆ ಇದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ರಕ್ಷಣಾ ಕಾರ್ಯಾಚರಣೆ ನಡೆಯುತ್ತಿದೆ. 9 ಮಂದಿಯನ್ನು ರಕ್ಷಿಸಲಾಗಿದೆ.



ಸುಭಾಷಿತ

ಮಾತನಾಡುವಷ್ಟೇ ಮಾತನಾಡದೆ ಇರುವುದೂ ಅಗತ್ಯ.
–ಕೆ.ಪಿ.ಪೂರ್ಣಚಂದ್ರ ತೇಜಸ್ವಿ

ಬಿಬಿಸಿ ಸಾಕ್ಷ್ಯಚಿತ್ರಕ್ಕೆ ಅಡ್ಡಿ ಕೇಂದ್ರದ ಕ್ರಮ ಅಸಮಂಜಸ

ಬಿಬಿಸಿ ಸಿದ್ಧಪಡಿಸಿರುವ 'ಇಂಡಿಯಾ: ದಿ ಮೋದಿ ಕ್ವೆಶ್ಚನ್' ಸಾಕ್ಷ್ಯಚಿತ್ರವನ್ನು ಭಾರತದಲ್ಲಿ ತಡೆಹಿಡಿದಿರುವುದಕ್ಕೆ ಕೇಂದ್ರ ಸರ್ಕಾರ ಉಲ್ಲೇಖಿಸಿರುವ ಯಾವ ಕಾರಣವೂ ಸರಿಯಾಗಿಲ್ಲ, ಸಮಂಜಸವಾಗಿಲ್ಲ. ಕೇಂದ್ರ ವಾರ್ತಾ ಮತ್ತು ಪ್ರಸಾರ ಸಚಿವಾಲಯವು ಮಾಹಿತಿ ತಂತ್ರಜ್ಞಾನ ನಿಯಮ-2021ರ ಅಡಿಯಲ್ಲಿ ವಿಶೇಷ ಅಧಿಕಾರವನ್ನು ಬಳಸಿ, ಈ ಸಾಕ್ಷ್ಯಚಿತ್ರವನ್ನು ತಡೆಹಿಡಿಯುವಂತೆ ಯುಟ್ಯೂಬ್‌ಗೆ, ಸಾಕ್ಷ್ಯಚಿತ್ರಕ್ಕೆ ಸಂಬಂಧಿಸಿದ ವೆಬ್ ಕೊಂಡಿಗಳನ್ನು ತಡೆಹಿಡಿಯುವಂತೆ ಟ್ವಿಟರ್‌ಗೆ ಸೂಚನೆ ರವಾನಿಸಿದೆ ಎಂದು ಮೂಲಗಳನ್ನು ಉಲ್ಲೇಖಿಸಿ ವರದಿಯಾಗಿದೆ. ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಅಂದಿನ ಸರ್ಕಾರವು 'ಕಿಸ್ಸಾ ಕುರ್ಸಿ ಕಾ' ಸಿನಿಮಾ ಮೇಲೆ ನಿಷೇಧ ಹೇರಿದ್ದ ಮಾದರಿಯಲ್ಲಿ ಇದೆ ಈಗಿನ ಕ್ರಮ. 2002ರಲ್ಲಿ ಗುಜರಾತ್‌ನಲ್ಲಿ ನಡೆದ ಗಲಭೆಗಳಲ್ಲಿ ನೂರಾರು ಮಂದಿ, ಅವರಲ್ಲಿ ಬಹುತೇಕರು ಮುಸ್ಲಿಮರು, ಹತ್ಯೆಗೀಡಾದರು. ಸಾಕ್ಷ್ಯಚಿತ್ರವು ಈ ಗಲಭೆಯ ಕುರಿತಾಗಿದೆ. ಆಗ ಗುಜರಾತ್ ಮುಖ್ಯಮಂತ್ರಿ ಆಗಿದ್ದ ನರೇಂದ್ರ ಮೋದಿ ಅವರು ಹಿಂಸಾಚಾರವನ್ನು ನಿಯಂತ್ರಣಕ್ಕೆ ತರಲು ಅಗತ್ಯವಾದ ಕ್ರಮಗಳನ್ನು ಕೈಗೊಳ್ಳಲಿಲ್ಲ ಎಂಬ ಆರೋಪ ಎದುರಿಸಿದ್ದಾರೆ. ಬ್ರಿಟನ್ ಸರ್ಕಾರದ ವರದಿ, ಸಂದರ್ಶನ ಹಾಗೂ ತನಿಖೆಯನ್ನು ಆಧರಿಸಿ ಈ ಸಾಕ್ಷ್ಯಚಿತ್ರ ಸಿದ್ಧಪಡಿಸಲಾಗಿದೆ. ಮೋದಿ ಅವರು ಟೀಕೆಗೆ ಗುರಿಯಾದಾಗ ಅವರ ಬೆಂಬಲಿಗರು, ತಮ್ಮ ನಾಯಕರನ್ನು ಸಮರ್ಥಿಸಿಕೊಳ್ಳುವ ಹಾಗೂ ಟೀಕೆಗೆ ಪ್ರತಿಕ್ರಿಯಿಸುವ ಅವಕಾಶ ಇದ್ದೇ ಇದೆ. ಈ ಸಾಕ್ಷ್ಯಚಿತ್ರವು 'ಸುಪ್ರೀಂ ಕೋರ್ಟ್‌ನ ಅಧಿಕಾರ ಹಾಗೂ ವಿಶ್ವಾಸಾರ್ಹತೆಯ ಮೇಲೆ ವಿನಾಕಾರಣವಾಗಿ ಹಾಗೂ ಅಸಮಂಜಸವಾಗಿ ಕಟು ಮಾತುಗಳನ್ನು ಆಡುವ ಯತ್ನ' ಎಂಬ ಒಂದು ಕಾರಣವನ್ನು ಸಚಿವಾಲಯ ನೀಡಿದೆ ಎಂದು ವರದಿಯಾಗಿದೆ. ತನ್ನದು 'ಇದ್ದ ಪ್ರಕರಣಗಳ ವಿಚಾರದಲ್ಲಿ, ಮೋದಿ ಅವರು ದೋಷಿ ಅಲ್ಲ ಎಂದು ಕೋರ್ಟ್ ಹೇಳಿದ್ದರೂ, ಇಡೀ ವಿದ್ಯಮಾನದ ಕುರಿತು ಮಾಧ್ಯಮಗಳು ತಮ್ಮದೇ ಆದ ಚಿತ್ರಣ ನೀಡಬಾರದು ಎಂದೇನೂ ಇಲ್ಲ. ಕಾನೂನಿಗೆ ಉತ್ತರದಾಯಿ ಆಗುವುದಕ್ಕೂ, ನೈತಿಕ ಹಾಗೂ ರಾಜಕೀಯ ಉತ್ತರದಾಯಿತ್ವ ತೋರಿಸುವುದಕ್ಕೂ ವ್ಯತ್ಯಾಸವಿದೆ. ಹಿಂಸಾಚಾರವನ್ನು ನಿಯಂತ್ರಿಸಲು ಮೋದಿ ಅವರು ವಿಫಲರಾಗಿದ್ದನ್ನು ಅಂದಿನ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು 'ರಾಜಧರ್ಮವನ್ನು ಪಾಲಿಸಬೇಕು' ಎಂದು ಸಾರ್ವಜನಿಕವಾಗಿ ಹೇಳುವ ಮೂಲಕ ಟೀಕಿಸಿದ್ದರು. ಮೋದಿ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಬದಲಿಸಲು ವಾಜಪೇಯಿ ಬಯಸಿದ್ದರು ಎಂದು ಕೆಲವು ವರದಿಗಳು ಹೇಳುತ್ತವೆ.



ಭಾರತದಲ್ಲಿ ನಡೆದ ಘಟನೆಯ ಬಗ್ಗೆ ತನಿಖೆ ನಡೆಸಲು ತಾನು ಸಮರ್ಥ ಎಂದು ಬ್ರಿಟಿಷ್ ಸರ್ಕಾರ ಭಾವಿಸಿದ್ದು ಹೇಗೆ?

ಸುಪ್ರೀಂ ಕೋರ್ಟ್ ಅನ್ನು ಪ್ರಸ್ತಾಪ ಮಾಡಿರುವುದು ಆ ಸಾಕ್ಷ್ಯಚಿತ್ರವನ್ನು ತಡೆಹಿಡಿಯುವ ತೀರ್ಮಾನಕ್ಕೆ ಒಂದು ಕಾರಣ ಎನ್ನುವುದಾದರೆ, ಸುಪ್ರೀಂ ಕೋರ್ಟ್‌ನ ತೀರ್ಮಾನಗಳ ಬಗ್ಗೆ ಪ್ರಶ್ನೆಗಳನ್ನು ಎತ್ತಿರುವ ಉಪರಾಷ್ಟ್ರಪತಿ ಜಗದೀಪ್ ಧನಕರ್ ಅವರ ಮಾತುಗಳನ್ನೂ ತಡೆಹಿಡಿಯಬೇಕಾಗುತ್ತದೆ. ಈ ಸಾಕ್ಷ್ಯಚಿತ್ರವು ದೇಶದ ವಿವಿಧ ಸಮುದಾಯಗಳ ನಡುವೆ ಭೇದವನ್ನು ಹರಡುತ್ತದೆ, ದೇಶದ ಸಾರ್ವಭೌಮತ್ವ ಹಾಗೂ ಏಕತೆಯನ್ನು ಹಾಳುಮಾಡುತ್ತದೆ ಎಂಬುದು ಕೂಡ ಸರಿಯಾದ ಕಾರಣ ಅಲ್ಲ. ಆದರೆ ಇಲ್ಲಿ ಎರಡು ಪ್ರಶ್ನೆಗಳು ಮೂಡುತ್ತವೆ. ಬ್ರಿಟಿಷ್ ಸರ್ಕಾರವು ಹಿಂದೊಂದು ಕಾಲಘಟ್ಟದಲ್ಲಿ ತನ್ನ ಆಳ್ವಿಕೆಗೆ ಒಳಪಟ್ಟಿದ್ದ, ಆದರೆ ಈಗ ಸ್ವತಂತ್ರಗೊಂಡಿರುವ ನಾಡೊಂದರಲ್ಲಿ ನಡೆದ ಘಟನೆಯ ಬಗ್ಗೆ ತನಿಖೆ ನಡೆಸಲು ತಾನು ಸಮರ್ಥ ಎಂದು ಭಾವಿಸಿದ್ದು ಹೇಗೆ? ಅಲ್ಲಿ ಕೆಲವರು 'ದೋಷಿ'ಗಳು ಎಂದು ತೀರ್ಮಾನಿಸಲು ಅದಕ್ಕೆ ಅಧಿಕಾರ ಬಂದಿದ್ದು ಹೇಗೆ? ಈ ಪ್ರಶ್ನೆಗಳನ್ನು ಕೇಂದ್ರ ಸರ್ಕಾರವು ಬ್ರಿಟಿಷ್ ಸರ್ಕಾರದ ಮುಂದೆ ಇರಿಸಬೇಕು. ಕೇಂದ್ರ ಸರ್ಕಾರ ಈಗ ತಾಳಿರುವ ನಿಲುವನ್ನು ವಿರೋಧ ಪಕ್ಷಗಳೆಲ್ಲ ಟೀಕಿಸಿವೆ. ಕೇಂದ್ರದ ಕ್ರಮವು ಅಭಿವ್ಯಕ್ತಿಯನ್ನು ಹತ್ತಿಕ್ಕುವ ಕ್ರಮ. ಅಭಿವ್ಯಕ್ತಿ ಸ್ವಾತಂತ್ರ್ಯ ಇರುವ ಉದಾರವಾದಿ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಇಂತಹ ಕ್ರಮಗಳಿಗೆ ಅವಕಾಶ ಇರಬಾರದು. ಮೋದಿ ಅವರನ್ನು ಒಳ್ಳೆಯ ರೀತಿಯಲ್ಲಿ ಚಿತ್ರಿಸಲಾಗಿಲ್ಲ ಎಂಬ ಕಾರಣಕ್ಕಾಗಿಯೇ ಈ ಸಾಕ್ಷ್ಯಚಿತ್ರವನ್ನು ತಡೆಹಿಡಿಯಲಾಗಿದೆ ಎಂಬುದು ಸ್ಪಷ್ಟ. ತಡೆಹಿಡಿಯುವ ತೀರ್ಮಾನದ ಸಮರ್ಥನೆಗಾಗಿ ಇತರ ಕಾರಣಗಳನ್ನು ಹೆಕ್ಕಿಕೊಳ್ಳಲಾಗಿದೆ, ಅಷ್ಟೇ. ಪ್ರಧಾನಿ ಮೋದಿ ಅವರು ತಮ್ಮ ಕುರಿತಾಗಿ ಜನರ ನಡುವೆ ಬಹಳ ದೊಡ್ಡ ಚಿತ್ರಣವೊಂದನ್ನು ರೂಪಿಸಿಕೊಂಡಿದ್ದಾರೆ ಎಂಬುದು ನಿಜ. ಈ ಸಾಕ್ಷ್ಯಚಿತ್ರವನ್ನು ಉಪೇಕ್ಷಿಸಬೇಕಿತ್ತು. ಸಾಕ್ಷ್ಯಚಿತ್ರವನ್ನು ತಡೆಹಿಡಿಯುವ ತೀರ್ಮಾನವು ಅಂತರರಾಷ್ಟ್ರೀಯ ಮಟ್ಟದಲ್ಲಿ ಮೋದಿ ಅವರ ಹೆಸರಿಗೆ ಧಕ್ಕೆ ತರುತ್ತದೆ. ಏಕೆಂದರೆ, ಈಗಿನ ಕ್ರಮದ ಕಾರಣದಿಂದಾಗಿ, ಸಾಕ್ಷ್ಯಚಿತ್ರದಲ್ಲಿ ಏನಿದೆ ಎಂಬುದನ್ನು ನೋಡಲು ಬಯಸುವವರ ಸಂಖ್ಯೆಯು ಮತ್ತಷ್ಟು ಹೆಚ್ಚಾಗುತ್ತದೆ.

ದಿನದ ಟ್ವೀಟ್

ಅವಕಾಶ ಒದಗಿಸಿ



ಅಮೆರಿಕದಲ್ಲಿ 80,000 ಭಾರತೀಯರು ಕೆಲಸ ಕಳೆದುಕೊಂಡಿದ್ದಾರೆ. ಅವರೆಲ್ಲ ಇನ್ನು ಎರಡು ತಿಂಗಳೊಳಗೆ ಹೊಸ ಕೆಲಸ ಹುಡುಕಿಕೊಳ್ಳಬೇಕು ಅಥವಾ ಆ ದೇಶವನ್ನು ಬಿಡಬೇಕು. ಇವರಲ್ಲಿ ಹಲವರು ಮೋದಿ ಅವರ ಅಭಿಮಾನಿಗಳು. ಮೋದಿ ಅವರ ಆಡಳಿತವು ಕನಿಷ್ಠಪಕ್ಷ ಇಲ್ಲಿ ಅವರಿಗೆ ಉತ್ತಮ ಕೆಲಸದ ಅವಕಾಶಗಳನ್ನು ಒದಗಿಸಬೇಕು. ಈ ಬಗ್ಗೆ ಪ್ರಧಾನಿ ಕಾಳಜಿ ವಹಿಸುವರೇ? ಕಾದು ನೋಡೋಣ.

ಸಂಘಮಿತ್ರ, ಚಿತ್ರನಿರ್ಮಾಪಕಿ, ಲೇಖಕಿ

ಕಿಡಿನುಡಿ



ಶಿವರಾಮ ಕಾರಂತ ಬಡಾವಣೆ ನಿರ್ಮಾಣಕ್ಕೆ ಬಿಡಿಎ ಮುಂದಿನ ಕ್ರಮಗಳನ್ನು ಪ್ರಕಟಿಸಿದೆ. ಕಾರಂತರು ತಮ್ಮ ಹೆಸರಲ್ಲಿ ಇದೇನು ನಡೆಯುತ್ತಿದೆ ಎಂದು ದಿಗ್ಭ್ರಮೆಗೆ ಒಳಗಾಗುತ್ತಿದ್ದರು– ಜಮೀನನ್ನು ಅನಗತ್ಯವಾಗಿ ಕಿತ್ತುಕೊಳ್ಳುವುದು, ಭೂಸ್ವಾಧೀನ ಮತ್ತು ನಿವೇಶನ ಮಂಜೂರಾತಿಯಲ್ಲಿ ಭ್ರಷ್ಟಾಚಾರ (ಬಿಡಿಎಯಲ್ಲಿ ಇದು ಈಗ ಮಾಮೂಲಾಗಿದೆ) ಮತ್ತು ಅಂತಿಮವಾಗಿ, ಹೊಸ ಮಾಲೀಕರು ಸೃಷ್ಟಿಯಾಗಿರುತ್ತಾರೆ ಹಾಗೂ ಕೆಲವೇ ಮನೆಗಳ ನಿರ್ಮಾಣ ಆಗಿರುತ್ತದೆ.

ಅಶ್ವಿನ್ ಮಹೇಶ್, ನಗರ ಯೋಜನಾ ತಜ್ಞ

25 ವರ್ಷಗಳ ಹಿಂದೆ

ಭಾನುವಾರ, 25-1-1998

• ಬಾಬರಿ ಮಸೀದಿ ಧ್ವಂಸ ಘಟನೆಗೆ ಕಾಂಗ್ರೆಸ್ ಬೇಷರತ್ ಕ್ಷಮಾಪಣೆ

ನವದೆಹಲಿ, ಜ. 24– ಬಾಬರಿ ಮಸೀದಿಯನ್ನು ರಕ್ಷಿಸುವಲ್ಲಿ ವಿಫಲಗೊಂಡಿದ್ದಕ್ಕಾಗಿ ಕಾಂಗ್ರೆಸ್ ಪಕ್ಷವು ರಾಷ್ಟ್ರದ ಬೇಷರತ್ ಕ್ಷಮಾಪಣೆ ಕೋರಿದೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಆಗಿನ ಪ್ರಧಾನಿಯಾಗಿದ್ದ ಪಿ.ವಿ.ನರಸಿಂಹ ರಾವ್ ಅವರಿಗೆ ಈ ಬಾರಿ ಸ್ಪರ್ಧಿಸಲು ಟಿಕೆಟ್ ನಿರಾಕರಿಸುತ್ತಿರುವುದಾಗಿ ಪಕ್ಷದ ಅಧ್ಯಕ್ಷ ಸೀತಾರಾಂ ಕೇಸರಿ ಇಂದು ಇಲ್ಲಿ ತಮ್ಮ ನಿಲುವನ್ನು ಸ್ಪಷ್ಟಪಡಿಸಿದರು.

ಬರುವ ಲೋಕಸಭೆ ಚುನಾವಣೆಯ ಅಂಗವಾಗಿ ಪಕ್ಷದ ಪ್ರಣಾಳಿಕೆಯನ್ನು ಬಿಡುಗಡೆ ಮಾಡಿದ ನಂತರ ವರದಿಗಾರರ ಪ್ರಶ್ನೆಗಳಿಗೆ ಅವರು ಉತ್ತರಿಸುತ್ತಿದ್ದರು.

• ಇದು ತೀರಾ ಅನ್ಯಾಯ: ರಾವ್ ತೀಕ್ಷ್ಣ ಪ್ರತಿಕ್ರಿಯೆ

ನವದೆಹಲಿ, ಜ. 24– 'ಬಾಬರಿ ಮಸೀದಿ ಧ್ವಂಸ ಪ್ರಕರಣದ ಹಿನ್ನೆಲೆಯಲ್ಲಿ ಲೋಕಸಭೆಗೆ ಸ್ಪರ್ಧಿಸಲು ತಮಗೆ ಟಿಕೆಟ್ ನೀಡದಿರುವುದು ಸಮರ್ಥನೀಯವಲ್ಲ ಮತ್ತು ನ್ಯಾಯೋಚಿತವಲ್ಲ' ಎಂದು ಮಾಜಿ ಪ್ರಧಾನಿ ಪಿ.ವಿ. ನರಸಿಂಹ ರಾವ್ ಅವರು ಹೇಳಿದ್ದಾರೆ.

ಟಿಕೆಟ್ ನೀಡುವುದಿಲ್ಲ ಎಂದು ಕಾಂಗ್ರೆಸ್ ಅಧ್ಯಕ್ಷ ಸೀತಾರಾಂ ಕೇಸರಿ ಅವರು ನೀಡಿದ ಹೇಳಿಕೆಗೆ ಪ್ರತಿಕ್ರಿಯೆ ವ್ಯಕ್ತಪಡಿಸಿದ ಅವರು, 'ಟಿಕೆಟ್ ನಿರಾಕರಣೆಗೆ ಇದೊಂದು ಕಾರಣವೇ ಅಲ್ಲ' ಎಂದರು. ಕೇಸರಿ ಅವರು ಮಾಡಿದ ಆರೋಪಗಳಿಗೆ 'ಇದು ತಪ್ಪು, ಅಸತ್ಯ, ಅನ್ಯಾಯ, ನಿಜಸ್ಥಿತಿಗೆ ವಿರೋಧಾಭಾಸದಿಂದ ಕೂಡಿದೆ' ಎಂದರು.

50 ವರ್ಷಗಳ ಹಿಂದೆ

ಗುರುವಾರ, 25-1-1973

• ವಿಯೆಟ್ನಾಂನಲ್ಲಿ ಫಿರಂಗಿಗಳು ಶನಿವಾರ ಮಧ್ಯರಾತ್ರಿಯಿಂದ ಸ್ತಬ್ಧ

ಸೈಗಾನ್, ಜ. 24– ಕಳೆದ 12 ವರ್ಷಗಳಿಂದ ನಡೆಯುತ್ತಿರುವ ವಿಯೆಟ್ನಾಂ ಯುದ್ಧ ಭಾರತೀಯ ಕಾಲಮಾನ ಭಾನುವಾರ ಬೆಳಿಗ್ಗೆ (ಜಿ.ಎಂ.ಟಿ. ವೇಳೆ ಶನಿವಾರ ಮಧ್ಯರಾತ್ರಿ) ನಿಲ್ಲುತ್ತದೆ.

ಸುಮಾರು 10 ಲಕ್ಷಕ್ಕೂ ಹೆಚ್ಚು ಜನರನ್ನು ಬಲಿ ತೆಗೆದುಕೊಂಡಿರುವ ವಿಯೆಟ್ನಾಂನಲ್ಲಿ ಆರ್ಭಟಿಸುತ್ತಿದ್ದ ಯುದ್ಧ ಫಿರಂಗಿಗಳು ಶನಿವಾರ ಮಧ್ಯರಾತ್ರಿ ಮೌನವಾಗುವುವೆಂದು ಇಂದು ವಾಷಿಂಗ್ಟನ್, ಹಾನಾಯ್ ಮತ್ತು ಸೈಗಾನ್‌ನಲ್ಲಿ ಏಕಕಾಲದಲ್ಲಿ ಹೊರಡಿಸಲಾದ ಪ್ರಕಟಣೆಗಳು ತಿಳಿಸಿವೆ.

• ನಾಟಕಕಾರ ಗಿರೀಶ ಕಾರ್ನಾಡ್‌ಗೆ ಅಕಾಡೆಮಿ ಪ್ರಶಸ್ತಿ

ನವದೆಹಲಿ, ಜ. 24– ಸಂಗೀತ, ನೃತ್ಯ ಮತ್ತು ನಾಟಕ ಕ್ಷೇತ್ರಗಳಲ್ಲಿ ಗಣನೀಯ ಸೇವೆಗಾಗಿ 1972ರ ಅಕಾಡೆಮಿ ಪ್ರಶಸ್ತಿಗೆ ಆಯ್ಕೆಯಾದ ಒಟ್ಟು 12 ಮಂದಿ ಉನ್ನತ ಕಲಾವಿದರಲ್ಲಿ ಕನ್ನಡ ನಾಟಕಕಾರ ಗಿರೀಶ ಕಾರ್ನಾಡ ಅವರೂ ಸೇರಿದ್ದಾರೆ. ಕರ್ನಾಟಕದ ಹಾಡುಗಾರಿಕೆಯಲ್ಲಿ ಟಿ. ಮುಕ್ತಾ ಅವರಿಗೆ ಈ ಬಾರಿಯ ಪ್ರಶಸ್ತಿ ಲಭ್ಯವಾಗಿದೆ.

ಕ್ರಿಕೆಟ್: ಸ್ಪಿನ್ ಬೌಲಿಂಗ್ ಕೌಶಲ ಉಳಿವಿಗೆ ಬೇಕಿದೆ ಯೋಜನೆ

ಕರ್ನಾಟಕ: ಸ್ಪಿನ್ ವೈಭವ ಮರಳೀತೆ?



ವಿಶ್ಲೇಷಣೆ

ಗಿರೀಶ ದೊಡ್ಡಮನಿ

ವಿದ್ವತ್ ಕಾವೇರಪ್ಪ, ವೈಶಾಖ ವಿಜಯಕುಮಾರ್ ಮತ್ತು ವಾಸುಕಿ ಕೌಶಿಕ್...

ಕರ್ನಾಟಕದ ಈ ಮೂವರು ಮಧ್ಯಮವೇಗಿಗಳು ದೇಶಿ ಕ್ರಿಕೆಟ್‌ನಲ್ಲಿ ದೂಳೆಬ್ಬಿಸುತ್ತಿದ್ದಾರೆ. ವಿನಯಕುಮಾರ್, ಅಭಿಮನ್ಯು ಮಿಥುನ್ ಮತ್ತು ಅರವಿಂದ್ ಅವರ ವಿದಾಯದಿಂದ ತೆರವಾದ ಸ್ಥಾನಗಳನ್ನು ತುಂಬುವ ಭರವಸೆ ಮೂಡಿಸಿದ್ದಾರೆ.

ಆದರೆ ರಾಜ್ಯದ ಸ್ಪಿನ್ ಬೌಲಿಂಗ್ ವಿಭಾಗದ ಸ್ಥಿತಿ ಇದಕ್ಕೆ ತದ್ವಿರುದ್ಧವಾಗಿದೆ. ಸದ್ಯ ತಂಡದಲ್ಲಿರುವ ಆಫ್‌ಸ್ಪಿನ್ನರ್ ಕೃಷ್ಣಪ್ಪ ಗೌತಮ್ ಮತ್ತು ಲೆಗ್‌ಸ್ಪಿನ್ನರ್ ಶ್ರೇಯಸ್ ಗೋಪಾಲ್ ಅವರ ನಂತರ ಯಾರು ಎಂಬ ಪ್ರಶ್ನೆ ಮೂಡಿದೆ. ಕಳೆದೆರಡು ಋತುಗಳಲ್ಲಿ ಅವರಿಬ್ಬರೂ ಬೌಲಿಂಗ್‌ನಲ್ಲಿ ದೊಡ್ಡಮಟ್ಟದ ಸಾಧನೆ ಮಾಡಿಲ್ಲ. ಆದರೆ ಅವರು ಉತ್ತಮವಾಗಿ ಬ್ಯಾಟಿಂಗ್ ಮಾಡುತ್ತಿರುವುದರಿಂದ 'ಆಲ್‌ರೌಂಡರ್' ಆಗಿ ತಂಡದಲ್ಲಿ ಉಳಿದಿದ್ದಾರೆ ಎನ್ನುವುದು ನಿಸ್ಸಂಶಯ. ಬೆಂಚ್‌ನಲ್ಲಿರುವ ಕೆಲವು ಯುವಸ್ಪಿನ್ನರ್‌ಗಳಿಗೆ ಅವಕಾಶ ಸಿಗುತ್ತಿಲ್ಲ ಎನ್ನುವುದೂ ಸುಳ್ಳಲ್ಲ. ಜೂನಿಯರ್ ವಿಭಾಗದಲ್ಲಿ ಸ್ಪಿನ್ ಪ್ರತಿಭೆಗಳ ಸಂಖ್ಯೆ ಕ್ಷೀಣಿಸುತ್ತಿದ್ದು, ರಣಜಿ ಕ್ರಿಕೆಟ್ ಪಂದ್ಯದಲ್ಲಿ ಆಡುವಂತಹ ಭರವಸೆಯ ಸ್ಪಿನ್ನರ್‌ಗಳು ಸಿಗುತ್ತಿಲ್ಲ ಎಂದೂ ಹೇಳಲಾಗುತ್ತಿದೆ. ರಾಜ್ಯದ ಕೆಲವು ಹಿರಿಯ ತರಬೇತುದಾರರೇ ಈ ಮಾತು ಹೇಳುತ್ತಾರೆ. ಈ ಸಮಸ್ಯೆಗೆ ಕಾರಣಗಳನ್ನು ಹುಡುಕುತ್ತ ಹೊರಟರೆ ಕೆಲವು ವಿಷಯಗಳು ಗಮನ ಸೆಳೆಯುತ್ತವೆ.

ಪ್ರಮುಖವಾಗಿ ಟಿ20 ಕ್ರಿಕೆಟ್ ಮಾದರಿಯ ವಿಜೃಂಭಣೆ. ಈ ಮಾದರಿಯಲ್ಲಿ ಕಲಾತ್ಮಕ ಕೌಶಲಕ್ಕಿಂತಲೂ ಪ್ರತೀ ಎಸೆತವನ್ನೂ ಬೌಂಡರಿಯಾಚೆ ಕಳಿಸುವುದಕ್ಕೆ ಬ್ಯಾಟರ್‌ಗಳು ಮಹತ್ವ ಕೊಡುತ್ತಾರೆ. ಅದರಲ್ಲೂ ಕೊನೆಯ ಐದು ಓವರ್‌ಗಳಲ್ಲಿ 70–80 ರನ್‌ಗಳನ್ನು ಸೂರೆ ಮಾಡುತ್ತಾರೆ. 20 ಓವರ್‌ಗಳಲ್ಲಿ 200ಕ್ಕೂ ಹೆಚ್ಚು ರನ್ ಗಳಿಸುವುದು ಸಾಮಾನ್ಯ ಸಂಗತಿಯಾಗಿದೆ.

ಈ ಮಾದರಿ ಆರಂಭವಾದಾಗ ಬೌಲರ್‌ಗಳಿಗೆ ಉಳಿಗಾಲವಿಲ್ಲ ಎಂದೇ ಚರ್ಚೆಗಳಾಗಿದ್ದವು. ಆದರೆ ಮನರಂಜನೆ ಮತ್ತು ಪ್ರಾಯೋಜಕತ್ವದ ಹಣದ ಪ್ರವಾಹ ಹರಿಸುವಲ್ಲಿ 'ಚುಟುಕು' ಮಾದರಿ 'ಬೃಹತ್' ಯಶಸ್ಸು ಗಳಿಸಿತು. ಇಲ್ಲಿ ಹೆಚ್ಚು ದಂಡನೆಗೊಳಗಾದ ಸ್ಪಿನ್ನರ್‌ಗಳನ್ನು ನೋಡಿದ್ದ ಹೊಸಪೀಳಿಗೆಯ ಮಕ್ಕಳು ಬ್ಯಾಟಿಂಗ್‌ನತ್ತಲೇ ವಾಲುತ್ತಿದ್ದಾರೆ. ಆಲ್‌ರೌಂಡರ್ ಎನಿಸಿಕೊಳ್ಳುವ ಸಲುವಾಗಿ ಒಂದಿಷ್ಟು ಆಫ್‌ಬ್ರೇಕ್, ಗೂಗ್ಲಿ, ಲೆಗ್‌ಬ್ರೇಕ್ ಕಲಿತು 'ಸಾಂದರ್ಭಿಕ ಬೌಲರ್' ಆಗುತ್ತಿದ್ದಾರೆ. ಆದರೆ ಪರಿಣತ ಸ್ಪಿನ್ನರ್ ಆಗಿ ಬೆಳೆಯುವ ಮಹತ್ವಾಕಾಂಕ್ಷೆಯಿಂದ ತರಬೇತಿಗೆ ಬರುವ ಮಕ್ಕಳು ಕಡಿಮೆ. ತಮ್ಮ ಮಕ್ಕಳು 'ಬಿಗ್ ಹಿಟ್ಟರ್' ಆಗಬೇಕು ಇಲ್ಲವೇ 'ಡೆತ್ ಓವರ್' ಪರಿಣತ ವೇಗಿ ಆಗಬೇಕು ಎಂದು ಬಯಸುವ ಪಾಲಕರೇ ಹೆಚ್ಚು. ಎಲ್ಲರಿಗೂ ಈಗ ಹಣದ ಥೈಲಿಯ ಮೇಲೆಯೇ ಕಣ್ಣು ಎಂದು ಕೆಲವು ತರಬೇತಿದಾರರು ಹೇಳುತ್ತಾರೆ.

ಆದರೂ ಕಳೆದ ಎರಡು ದಶಕಗಳಲ್ಲಿ ಆರ್. ಅಶ್ವಿನ್, ರವೀಂದ್ರ ಜಡೇಜ, ಯಜುವೇಂದ್ರ ಚಾಹಲ್, ಕುಲದೀಪ್ ಯಾದವ್, ಅಕ್ಷರ್ ಪಟೇಲ್, ಆಸ್ಟ್ರೇಲಿಯಾದ ಆ್ಯಡಂ ಜಂಪಾ, ಶ್ರೀಲಂಕಾದ ವಣಿಂದು ಹಸರಂಗಾ, ಅಫ್ಗಾನಿಸ್ತಾನದ ರಶೀದ್ ಖಾನ್ ಮತ್ತು ಬಾಂಗ್ಲಾದ ಶಕೀಬ್ ಅಲ್ ಹಸನ್ ಅವರಂತಹ ಸ್ಪಿನ್ನರ್‌ಗಳು ಟಿ20 ಮಾದರಿಯಲ್ಲಿಯೂ ಮಿಂಚಿದ್ದಾರೆ. ಹೆಚ್ಚು ರನ್ ಕೊಟ್ಟರೂ ವಿಕೆಟ್ ಗಳಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಇನ್ನೊಂದು ಕಾರಣವೆಂದರೆ, ಇತ್ತೀಚಿನ ದಿನಗಳಲ್ಲಿ ಪಂದ್ಯಗಳು ನಡೆಯುವ ಸಮಯ. ಇತ್ತೀಚೆಗಷ್ಟೇ ಆರ್. ಅಶ್ವಿನ್ ಈ ವಿಷಯದ ಕುರಿತು ಮಾತನಾಡಿರುವುದು ಗಮನಾರ್ಹ. ಮುಂಬರುವ ಏಕದಿನ ವಿಶ್ವಕಪ್ ಕ್ರಿಕೆಟ್ ಪಂದ್ಯಗಳನ್ನು ಬೆಳಿಗ್ಗೆ 11.30ಕ್ಕೆ ಆರಂಭಿಸಬೇಕು. ಇದರಿಂದಾಗಿ ರಾತ್ರಿ ವೇಳೆಯ ಇಬ್ಬನಿಯಿಂದಾಗುವ ತೊಂದರೆಯನ್ನು ಬೌಲರ್‌ಗಳು ತಪ್ಪಿಸಿಕೊಳ್ಳಬಹುದು ಮತ್ತು ವಿಶೇಷವಾಗಿ ಸ್ಪಿನ್ನರ್‌ಗಳಿಗೆ ಉತ್ತಮ ಅವಕಾಶ ನೀಡಿದಂತಾಗುತ್ತದೆ. ಅಲ್ಲದೆ ಸಮಬಲದ ಸ್ಪರ್ಧೆ ಏರ್ಪಡುತ್ತದೆ ಎಂಬುದು ಅವರ ವಾದ.

ಕಳೆದ ಟಿ20 ವಿಶ್ವಕಪ್ ಪಂದ್ಯಗಳನ್ನು ನೋಡಿದರೆ ಅಶ್ವಿನ್ ಅವರ ಮಾತುಗಳ ಮಹತ್ವ ಅರಿವಾಗುತ್ತದೆ. ಆ ಟೂರ್ನಿಯಲ್ಲಿ ಟಾಸ್ ಗೆದ್ದ ತಂಡಗಳು ಮೊದಲಿಗೆ ಬೌಲಿಂಗ್ ಆಯ್ಕೆ ಮಾಡಿಕೊಂಡಿದ್ದೇ ಹೆಚ್ಚು. ರಾತ್ರಿಯಾದಂತೆ ಇಬ್ಬನಿಯಿಂದಾಗಿ ಬೌಲರ್‌ಗಳಿಗೆ ಚೆಂಡನ್ನು ಗ್ರಿಪ್ ಮಾಡುವುದೇ ಸವಾಲಾಗುತ್ತದೆ. ಅಂಥದ್ದರಲ್ಲಿ ಸ್ಪಿನ್ ಬೌಲಿಂಗ್ ಇನ್ನೂ ಕ್ಲಿಷ್ಟ. ಆದ್ದರಿಂದ ಟಾಸ್ ಗೆದ್ದವರಿಗೇ ಪಂದ್ಯ ಜಯಿಸುವ ಅವಕಾಶಗಳು ಹೆಚ್ಚು. ಆದರೆ ಮುಸ್ಸಂಜೆ ವೇಳೆ ಪಂದ್ಯ ನಡೆದರೆ ಸಿಗುವ ಅಪಾರ ಪ್ರಮಾಣದ ಪ್ರಾಯೋಜಕತ್ವದಿಂದ ದೊರೆಯುವ ಆರ್ಥಿಕ ಲಾಭವನ್ನು ಆಯೋಜಕರು ಬಿಟ್ಟುಕೊಡುತ್ತಾರೆಯೇ?

ಇನ್ನೊಂದೆಡೆ, 2011– 2014ರ ಅವಧಿಯಲ್ಲಿ ಕ್ರಿಕೆಟ್ ರಂಗದಲ್ಲಿ ಬಹಳಷ್ಟು ಬದಲಾವಣೆಗಳಾದವು. ಆ ಸಂದರ್ಭದಲ್ಲಿ ಭಾರತ ತಂಡವು ಆಸ್ಟ್ರೇಲಿಯಾ ಹಾಗೂ ಇಂಗ್ಲೆಂಡ್‌ನಲ್ಲಿ ಹೀನಾಯವಾಗಿ ಸೋತಿತ್ತು. ಆದ್ದರಿಂದ ವಿದೇಶಿ ಪಿಚ್‌ಗಳ ಮಾದರಿಯಲ್ಲಿಯೇ ಭಾರತದಲ್ಲಿಯೂ ಸಿದ್ಧತೆಗಳು ಆರಂಭವಾದವು. 'ಪೇಸ್ ಪಿಚ್'ಗಳು ಪ್ರಾಮುಖ್ಯ ಪಡೆದವು. ಅದರಿಂದಾಗಿ ವೇಗದ ಬೌಲಿಂಗ್ ವಿಭಾಗ ಸಮೃದ್ಧವಾಯಿತು. ಸ್ಪಿನ್ನರ್‌ಗಳಿಗೆ 'ಆಲ್‌ರೌಂಡರ್' ಆಗಲೇಬೇಕಾದ ಅನಿವಾರ್ಯ ಸೃಷ್ಟಿಯಾಯಿತು.

ಐಪಿಎಲ್‌ನಿಂದಾಗಿ ವಿದೇಶದ ತಂಡಗಳ ಆಟಗಾರರಿಗೆ ಭಾರತದ ಪಿಚ್, ವಾತಾವರಣ ಮತ್ತಿತರ ವಿಷಯಗಳಿಗೆ ಹೊಂದಿಕೊಳ್ಳುವುದು ಸುಲಭವಾಗಿದೆ. ಇದರಿಂದಾಗಿ ಅವರಿಗೆ ಭಾರತದ ಸ್ಪಿನ್ನರ್‌ಗಳ ಬಗ್ಗೆ ಆತಂಕ ಕಡಿಮೆಯಾಗಿದೆ. ಭಾರತದವರಿಗಿಂತಲೂ ಚೆನ್ನಾಗಿ ಸ್ಪಿನ್ ಎಸೆತಗಳನ್ನು ಆಡುವ ಸಾಮರ್ಥ್ಯ ವಿದೇಶಿಗರಲ್ಲಿ ಬೆಳೆದಿರುವುದು ಸುಳ್ಳಲ್ಲ. ದಶಕದ ಹಿಂದೆ ಇಂಗ್ಲೆಂಡ್‌ನ ಬ್ಯಾಟರ್ ಕೆವಿನ್ ಪೀಟರ್ಸನ್ ಅವರು, ಸ್ಪಿನ್ ಎಸೆತಗಳನ್ನು ಆಡುವ ಬಗೆಯನ್ನು ಭಾರತದ ರಾಹುಲ್ ದ್ರಾವಿಡ್ ಅವರಿಂದ ಕಲಿತಿದ್ದರು. ಈ ಕುರಿತು ತಮಗೆ ದ್ರಾವಿಡ್ ಮಾಡಿದ್ದ ಇ–ಮೇಲ್ ಬಗ್ಗೆ ಕೆವಿನ್ ತಮ್ಮ ಆತ್ಮಕತೆಯಲ್ಲಿ ಬರೆದಿದ್ದಾರೆ. ಬೆಂಗಳೂರಿನ ದ್ರಾವಿಡ್ ದೇಶಿ ಕ್ರಿಕೆಟ್‌ನಲ್ಲಿ ಆಡುವಾಗ ನೆಟ್ಸ್‌ನಲ್ಲಿ ಮತ್ತು ಪಂದ್ಯಗಳಲ್ಲಿ ಉತ್ತಮ ಸ್ಪಿನ್ನರ್‌ಗಳನ್ನು ಎದುರಿಸಿದ್ದರಿಂದ ಅಂತರರಾಷ್ಟ್ರೀಯ ಮಟ್ಟದಲ್ಲಿಯೂ ಶ್ರೇಷ್ಠ ಬೌಲರ್‌ಗಳ ಮುಂದೆ ಯಶಸ್ವಿಯಾಗಿದ್ದರು.

'ನಮ್ಮದು ಸ್ಪಿನ್ ಬೌಲಿಂಗ್ ತವರು. ಆದರೆ ನಮ್ಮಲ್ಲಿ ಮುತ್ತಯ್ಯ ಮುರಳೀಧರನ್ ಅಥವಾ ಶೇನ್ ವಾರ್ನ್ ಅಂತಹವರು ಇಲ್ಲ. ಸಾಂಪ್ರದಾಯಿಕ ಸ್ಪಿನ್ ಕೌಶಲ ಮರೆಯಾಗುತ್ತಿದೆ' ಎಂದು ಮೂರು ವರ್ಷಗಳ ಹಿಂದೆಯೇ ಮಾಜಿ ಸ್ಪಿನ್ನರ್ ಮುರಳೀ ಕಾರ್ತಿಕ್ ಆತಂಕ ವ್ಯಕ್ತಪಡಿಸಿದ್ದರು.

ಸ್ಪಿನ್ ಬೌಲಿಂಗ್ ಭಾರತದ ಶಕ್ತಿ ಮತ್ತು ಅಸ್ಮಿತೆ. ಅದರಲ್ಲೂ ಆರು ದಶಕಗಳ ಹಿಂದೆ ಬಿ.ಎಸ್. ಚಂದ್ರಶೇಖರ್, ಎರಪಳ್ಳಿ ಪ್ರಸನ್ನ, ಬಿಷನ್ ಸಿಂಗ್ ಬೇಡಿ ಮತ್ತು ವೆಂಕಟರಾಘವನ್ ಅವರ ಸಾಧನೆಯು ಸುವರ್ಣಾಕ್ಷರಗಳಲ್ಲಿ ದಾಖಲಾಗಿದೆ. ಭಾರತವನ್ನು ಸ್ಪಿನ್ ಶಕ್ತಿಯನ್ನಾಗಿ ರೂಪಿಸುವಲ್ಲಿ ಕರ್ನಾಟಕದ ಚಂದ್ರಶೇಖರ್, ಪ್ರಸನ್ನ, ಅನಿಲ್ ಕುಂಬ್ಳೆ, ಸುನೀಲ್ ಜೋಶಿಯವರ ಕಾಣಿಕೆ ಅಮೂಲ್ಯವಾದದ್ದು. ರಾಷ್ಟ್ರೀಯ ತಂಡದಲ್ಲಿ ಆಡದಿದ್ದರೂ ಬಿ. ವಿಜಯಕೃಷ್ಣ, ಆನಂದ್ ಕಟ್ಟಿ, ಆರ್. ಅನಂತ್ ಅವರ ಹೆಸರು ಇವತ್ತಿಗೂ ಪ್ರಚಲಿತ.

ಒಳ್ಳೆಯ ಸ್ಪಿನ್ನರ್‌ಗಳು ಇರುವ ತಂಡದಲ್ಲಿ ಚುರುಕಾದ ವಿಕೆಟ್‌ಕೀಪರ್‌ಗಳೂ ಸಿದ್ಧಗೊಳ್ಳುತ್ತಾರಂತೆ. ಸೈಯ್ಯದ್ ಕಿರ್ಮಾನಿ, ಸದಾನಂದ ವಿಶ್ವನಾಥ್, ತಿಲಕ್ ನಾಯ್ಡು ಮತ್ತು ಸೋಮಶೇಖರ್ ಶಿರಗುಪ್ಪಿ ಅವರ ಪ್ರತಿಭೆಯನ್ನು ಒರೆಗೆ ಹಚ್ಚಿದ್ದು ಆಯಾ ಕಾಲಘಟ್ಟದ ಸ್ಪಿನ್ನರ್‌ಗಳೇ ಅಲ್ಲವೇ? ಇವತ್ತು ಕರ್ನಾಟಕ ತಂಡದಲ್ಲಿ ವಿಕೆಟ್‌ಕೀಪರ್‌ಗಳು ಅಸ್ಥಿರ ಪ್ರದರ್ಶನ ನೀಡುತ್ತಿರುವುದಕ್ಕೆ ಈ ಸಂಗತಿಯೂ ಒಂದು ಕಾರಣ. ರಾಜ್ಯದ ಪ್ರಮುಖ ಸ್ಪಿನ್ನರ್‌ಗಳಲ್ಲಿ ಒಬ್ಬರಾದ ರಘುರಾಮ್ ಭಟ್ ಅವರೇ ರಾಜ್ಯ ಕ್ರಿಕೆಟ್ ಸಂಸ್ಥೆಗೆ ಅಧ್ಯಕ್ಷರಾಗಿರುವ ಈ ಹೊತ್ತಿನಲ್ಲಿ ರಾಜ್ಯದಲ್ಲಿ ಮತ್ತೆ ಸ್ಪಿನ್ ವೈಭವ ಮರಳುವುದೇ?



ಚುರುಮುರಿ



ನೈತಿಕ ನೀತಿ

• ಮಣ್ಣೆರಾಜು

'ಶಾಲಾಕಾಲೇಜುಗಳಲ್ಲಿ ನೈತಿಕ ಶಿಕ್ಷಣ ಕಡ್ಡಾಯ ಆಗಬೇಕು. ನಮ್ಮ ಮಕ್ಕಳು ನೀತಿವಂತ ಪ್ರಜೆಗಳಾಗಬೇಕು...' ಸುಮಿ ಆಸೆಪಟ್ಟಳು.

'ಹೌದು, ಕನ್ನಡ, ಇಂಗ್ಲಿಷ್, ಗಣಿತ, ವಿಜ್ಞಾನ, ದೈಹಿಕ ಶಿಕ್ಷಣ ಟೀಚರ್‌ಗಳಂತೆ ನೈತಿಕತೆ ಸಬ್ಜೆಕ್ಟ್ ಟೀಚರ್‌ಗಳನ್ನೂ ಸರ್ಕಾರ ನೇಮಿಸಬೇಕಾಗುತ್ತದೆ' ಅಂದ ಶಂಕ್ರಿ.

'ನೈತಿಕ ಶಿಕ್ಷಣದ ಸಿಲೆಬಸ್ ಸಿದ್ಧಪಡಿಸಲು ನೈತಿಕತೆ ಪರಿಣತರ ಸಮಿತಿ ರಚಿಸಬೇಕು. ಸಮಿತಿ ಸದಸ್ಯರ ನೈತಿಕತೆಯ ಮಟ್ಟ ಅಳೆದು ಆಯ್ಕೆ ಮಾಡುವ ನೈತಿಕ ತಜ್ಞರನ್ನು ಆಯ್ಕೆ ಮಾಡುವುದು ಸವಾಲಿನ ಕೆಲಸ ಅಲ್ವೇನ್ರೀ?'

'ಬಲಪಂಥದ ನೈತಿಕ ಶಿಕ್ಷಣ ಬೇಕೋ ಎಡಪಂಥದ ನೈತಿಕ ಶಿಕ್ಷಣ ಬೇಕೋ ಎಂದು ನಿರ್ಧಾರ ಮಾಡುವುದು ಅದಕ್ಕಿಂತ ದೊಡ್ಡ ಸವಾಲಾಗಬಹುದು!'

'ವಿರುದ್ಧ ದಿಕ್ಕಿಗೆ ಎಳೆದಾಡುವ ಎರಡೂ ಪಂಥಗಳ ಆಶಯಗಳ ಸರಾಸರಿ ಸಾರಾಂಶವನ್ನು ಮಕ್ಕಳಿಗೆ ಪಾಠವಾಗಿ ಬೋಧಿಸುವ ಸಮರ್ಥ ನೈತಿಕತೆಯ ಶಿಕ್ಷಕರು ಬೇಕಾಗುತ್ತದೆ. ನೈತಿಕತೆಯಲ್ಲಿ ಪದವಿ ಪಡೆದ ಪರಿಣತ, ಪ್ರಜ್ಞಾವಂತ ಶಿಕ್ಷಕರನ್ನು ಸರ್ಕಾರ ನೇಮಕ ಮಾಡಬೇಕಾಗುತ್ತದೆ'.

'ಅಂಥಾ ನೈತಿಕ ಪದವಿ ನೀಡುವಂತಹ ನೈತಿಕ ಯೂನಿವರ್ಸಿಟಿ ನಮ್ಮಲ್ಲಿ ಯಾವುದೂ ಇದ್ದಂತಿಲ್ಲ ಕಣ್ರೀ... ಸರ್ಕಾರ ಪ್ರತ್ಯೇಕ ನೈತಿಕ ಯೂನಿವರ್ಸಿಟಿ ಸ್ಥಾಪಿಸಿ, ನೈತಿಕ ಪದವಿ ಪಡೆಯಲು ಅವಕಾಶ ಕಲ್ಪಿಸಬೇಕು'.

'ನೈತಿಕ ಯೂನಿವರ್ಸಿಟಿ ಸ್ಥಾಪನೆ ಮಾಡಲು ಸರ್ಕಾರಕ್ಕೆ ನೈತಿಕ ಕಾಳಜಿ ಇರಬೇಕು. ಆಡಳಿತ ನಡೆಸಲು ನೈತಿಕ ಪ್ರಜ್ಞೆಯ ಪ್ರಜಾನಾಯಕರನ್ನು ಮತದಾರರು ಚುನಾಯಿಸಬೇಕಾಗುತ್ತದೆ. ಇಲ್ಲವೆ, ಆಯ್ಕೆಯಾದ ಮೇಲಾದರೂ ನಾಯಕರಿಗೆ ನೈತಿಕತೆಯ ಪಾಠ ಕಲಿಸಬೇಕಾಗುತ್ತದೆ. ಸದ್ಯಕ್ಕೆ ಇದು ಬೆಕ್ಕಿಗೆ ಗಂಟೆ ಕಟ್ಟುವ ಇಲಿಗಳ ಕಥೆಯಾಗಿದೆ'.

'ಪ್ರಜಾನಾಯಕರ ಭ್ರಷ್ಟಾಚಾರ, ದುಷ್ಟಾಚಾರ, ಬಾಯಿತುರಿಕೆ ಬೈಗುಳದ ನಡವಳಿಕೆ ಹೀಗೇ ಮುಂದುವರಿದರೆ ವ್ಯವಸ್ಥೆಯು ಯಥಾ ರಾಜಾ ತಥಾ ಪ್ರಜಾ ಎಂಬಂತೆ ಆಗುತ್ತದೆ...' ಅಂದ ಶಂಕ್ರಿ.

ಸಂಗತ

ವೋಟೆಂಬ ಪರಮ ಅಹಿಂಸಾ ಅಸ್ತ್ರ

ಪ್ರಜಾಸತ್ತೆಯಲ್ಲಿ ಮತದಾನವು ಒಂದು ದಿವ್ಯಶಕ್ತಿ. ಈ ಅನನ್ಯ ಅವಕಾಶವನ್ನು ಪ್ರಜೆಗಳು ಯಾವುದೇ ಕಾರಣಕ್ಕೂ ಕಳೆದುಕೊಳ್ಳಬಾರದು

• ಬಿ.ಎಸ್.ಭಗವಾನ್

ಪ್ರತಿವರ್ಷ ಜನವರಿ 25, 'ಮತದಾರರ ದಿನ'. ಈ ದಿನವನ್ನು ಭಾರತದ ಚುನಾವಣಾ ಆಯೋಗವು ಮತದಾರರಿಗೇ ಸಮರ್ಪಿಸಿದೆ. ದೇಶದಾದ್ಯಂತ ಮತದಾರರಲ್ಲಿ ಜಾಗೃತಿ ಮೂಡಿಸಿ, ಚುನಾವಣೆಯಲ್ಲಿ ಮತದಾನದ ಹಕ್ಕನ್ನು ತಪ್ಪದೇ ಚಲಾಯಿಸಲು ಪ್ರೇರೇಪಿಸುವುದೇ ಆಯೋಗದ ಧ್ಯೇಯ. 'ಚುನಾವಣೆ ಜನರಿಗೆ ಸೇರಿದ್ದು', 'ಒಳ್ಳೆಯ ಮಂದಿ ವೋಟು ಚಲಾಯಿಸದಿರುವ ಮೂಲಕ ಕೆಟ್ಟ ಸರ್ಕಾರವನ್ನು ಆಯ್ಕೆ ಮಾಡಿಕೊಳ್ಳುತ್ತಾರೆ' ಎಂಬಂಥ ಘೋಷಣೆಗಳು ನಮ್ಮನ್ನು ಎಚ್ಚರಿಸುತ್ತವೆ.

2011ರ ಜನವರಿ 25ರಿಂದ ಇದರ ಆಚರಣೆ ಶುರುವಾಗಿದೆ. ಮತದಾನವು ಪ್ರಜಾಪ್ರಭುತ್ವದ ಮೂಲ ಸ್ತಂಭ. ಮತದಾನದ ಹಕ್ಕಿನ ಅರಿವು ಜನರಿಗೆ ಸಮರ್ಥ ಪ್ರಭುತ್ವವನ್ನು ಆರಿಸಿಕೊಳ್ಳಲು ಕೀಲಿ ಕೈ. ವಯಸ್ಸು ಹದಿನೆಂಟು ವರ್ಷಗಳು ತುಂಬಿ ಮತದಾನಕ್ಕೆ ಅರ್ಹತೆ ಗಳಿಸಿದ ಹೊಸ ಮತದಾರರಲ್ಲಿ ಹುರುಪಿನಷ್ಟೆ ಹೊಣೆಗಾರಿಕೆಯೂ ಪುಟಿಯಬೇಕಿದೆ.

ನಾಗರಿಕರು ತಮ್ಮ ಸ್ಥಾಪಿತ ಆಯ್ಕೆಯ ಹಕ್ಕನ್ನು ನಿರ್ಲಕ್ಷಿಸಿದರೆ ಪ್ರಜೆತನವನ್ನು ಅಪಮಾನಿಸಿದಂತೆ. ಒಂದೊಂದು ಮತವೂ ಅಮೂಲ್ಯ ಸ್ವತ್ತು. ಆಡಳಿತ ಕ್ರಮ ಸದ್ಯ ಇರಬಹುದಾದ ಓರೆಕೋರೆಗಳನ್ನು ದಾಟಿ ಸುಧಾರಣೆಗಳತ್ತ ಹೊರಳಬಹುದೆಂಬ ಕನಸುಗಳು ಅದರಲ್ಲಿ ಸಾಂದ್ರಗೊಂಡಿರುತ್ತವೆ. ಯಾವುದೇ ದೇಶದಲ್ಲಿ ನಾಗರಿಕ ಅಶಾಂತಿಯಿರಬಹುದು, ಕೊರೊನಾದಂಥ ಖಂಡಾಂತರ ವ್ಯಾಧಿ ಬಾಧಿಸಿರಬಹುದು, ನೈಸರ್ಗಿಕ ವಿಕೋಪಗಳು ಎಡೆಬಿಡದೆ ಕಾಡಿರಬಹುದು ಅಥವಾ ಅತಿವೃಷ್ಟಿ, ಅನಾವೃಷ್ಟಿಯಿಂದ ಕ್ಷಾಮ ತಲೆದೋರಿರಬಹುದು. ಆದರೆ ಚುನಾವಣಾ ಪ್ರಕ್ರಿಯೆ ಸಾಗಲೇಬೇಕು. ಹಾಗೆ ನೋಡಿದರೆ ಅಂತಹ ಸಂದಿಗ್ಧಗಳೇ ಜರೂರಾಗಿ ದಕ್ಷ ನಾಯಕತ್ವ ಬಯಸುತ್ತವೆ. ಜನಧ್ವನಿಯು ಅಭಿವೃದ್ಧಿ, ವಿಕಾಸ ತರಬಲ್ಲದು. ಮತದಾನದಲ್ಲಿ ಭಾಗಿಯಾಗುವುದೆಂದರೆ ನಮ್ಮ ಅಭಿಪ್ರಾಯವನ್ನೂ ದಾಖಲಿಸುವುದು. ಆಡಳಿತವನ್ನು ನಿಕಷಕ್ಕೆ ಒಡ್ಡುವ ಕೆಲಸವನ್ನು ಚುನಾವಣೆಗಳು ಮಾಡುತ್ತವೆ. ಮತ ಹಾಕದೆ ಸುಧಾರಣೆಯನ್ನು ಬಯಸುವುದು ಹೇಗೆ?

ಯಾರೇ ಬಂದರೂ ರಾಗಿ ಬೀಸುವುದು ತಪ್ಪುವುದಿಲ್ಲ ಎಂದೋ, ಬರೋರೆ ಬರೋದು ಎಂದೋ ವೋಟು ಹಾಕದೆ ನಿರ್ಲಿಪ್ತರಾದರೆ ಬಹುಜನರ ಆಶೋತ್ತರಗಳಿಗೂ ಭಂಗವಾಗುತ್ತದೆ. ಈ ನ್ಯೂನತೆಯ ಬಿಸಿ ಗ್ರಾಮ ಪಂಚಾಯಿತಿ ಮಟ್ಟದಿಂದ ಅಂತರರಾಷ್ಟ್ರೀಯ ಮಟ್ಟದವರೆಗೂ ತಟ್ಟುತ್ತದೆ. ಜಾತಿ, ಧರ್ಮ, ಬಡತನ, ಸಿರಿತನ, ಪಂಗಡ, ಹೆಣ್ಣು, ಗಂಡೆಂಬ ಭೇದವೆಣಿಸದೆ ನಮ್ಮ ಸಂವಿಧಾನವು ಮತದಾನದ ಹಕ್ಕು ನೀಡಿದೆ. ಈ ಅನನ್ಯ ಅವಕಾಶವನ್ನು ಪ್ರಜೆಗಳು ಕಳೆದುಕೊಳ್ಳಬಾರದು.

ನಮ್ಮ ಆಯ್ಕೆಗಳು ಸರ್ವರಿಗೂ ನ್ಯಾಯ ಮತ್ತು ಸಮಾನತೆಯನ್ನು ತರುತ್ತವೆ ಎಂಬ ವಿಶ್ವಾಸದಿಂದ ಮತ ಚಲಾಯಿಸಬೇಕು. ಪ್ರಜಾಸತ್ತೆಯಲ್ಲಿ ಮತದಾನವು ಒಂದು ದಿವ್ಯಶಕ್ತಿ. ಅಮೆರಿಕದ ರಾಜನೀತಿಜ್ಞ ಥಾಮಸ್ ಜಫರಸನ್ ಅವರು ಹೇಳುವಂತೆ, ಸರ್ಕಾರ ರಚನೆಯಾಗುವುದು ಜನರ ಬಹುಮತದಿಂದಲ್ಲ, ಭಾಗಿಯಾಗುವವರ ಬಹುಮತದಿಂದ. ಸಾಮಾನ್ಯ ಜನರಲ್ಲಿ ಅಸಾಮಾನ್ಯ ಸಾಧ್ಯತೆಗಳಿವೆ ಎಂಬ ದೃಢನಿಶ್ಚಯವೇ ಪ್ರಜಾಪ್ರಭುತ್ವ ಪ್ರಕ್ರಿಯೆಯ ಅಸ್ತಿಭಾರ. ತಮ್ಮ ಗ್ರಾಮಕ್ಕೆ ರಸ್ತೆ ಆಗಿಲ್ಲ, ಸೇತುವೆ ಕಟ್ಟಿಲ್ಲ ಅಥವಾ ಕುಡಿಯುವ ನೀರಿನ ವ್ಯವಸ್ಥೆ ಸಮರ್ಪಕವಾಗಿಲ್ಲ ಎಂಬ ಕಾರಣಕ್ಕೆ ಚುನಾವಣೆಯನ್ನು ವಿರೋಧಿಸಿದರೆ ಅದು ಬಹಿಷ್ಕಾರವಲ್ಲ, ನಿಶ್ಚಿತವಾಗಿ ಅದು ನಾವೇ ಹೇರಿಕೊಂಡ ಶರಣಾಗತಿ.

ಚುನಾವಣೆಯು ನಾಗರಿಕರಿಗೆ ಒಂದು ನಿರ್ದಿಷ್ಟ ಅವಧಿಗೆ ತಮ್ಮ ಪ್ರತಿನಿಧಿಯನ್ನು ಆರಿಸುವ ಹಕ್ಕನ್ನು ನೀಡುತ್ತದೆ. ವೋಟಿಗಿಂತ ಉಚಿತ ಹಾಗೂ ಶಕ್ತಿಯುತ ಪರಮ ಅಹಿಂಸಾ ಅಸ್ತ್ರ ಇನ್ನೊಂದಿಲ್ಲ. ಮತದಾನ ನಮ್ಮ ಅಸ್ತಿತ್ವಕ್ಕಾಗಿ, ನಮ್ಮ ಪ್ರಗತಿಗಾಗಿ. ಸ್ಪರ್ಧಿಸುವವರ ಪೈಕಿ ಯಾರೂ ಅರ್ಹರಲ್ಲ ಎನ್ನಿಸಿದರೆ ಅದನ್ನೂ ವೋಟಿನ ಮೂಲಕವೇ ಧ್ವನಿಯುತಗೊಳಿಸಬಹುದಲ್ಲ. ಇದಂತೂ ಒಂದು ವಿಶಿಷ್ಟವಾದ ಜನ ಇಂಗಿತ. ಉಮೇದುವಾರರಲ್ಲಿ ಆತ್ಮಾವಲೋಕನಕ್ಕೂ ದಾರಿಯಾಗುವ ಕಡೆಗಣಿಸಬಾರದ ವಿಶಿಷ್ಟ ಜನಾದೇಶವಿದು.



ಚುನಾವಣೆಗಳು ಮುಕ್ತವಾಗಿ, ನೀತಿಯುತವಾಗಿ ನಡೆಯುವಂತೆ ನೋಡಿಕೊಳ್ಳುವ ಜವಾಬ್ದಾರಿ ಪ್ರತಿಯೊಬ್ಬರ ಮೇಲೂ ಇದೆ. ಏಕೆಂದರೆ ಮತ ಚಲಾಯಿಸದ ಒಂದೊಂದು ಪ್ರಸಂಗವೂ ಒಂದು ಕ್ರಮಬದ್ಧ ವೋಟನ್ನು ನಿಷ್ಕ್ರಿಯಗೊಳಿಸುತ್ತದೆ. ಆ ವೋಟು ನಮ್ಮದೇ ಆಗಿದ್ದರೆ ನಮಗೆ ಏನನ್ನಿಸುತ್ತದೆ? ಒಂದು ವೋಟಿನಿಂದ ಯಾವ ಒಳಿತು ತಾನೆ ಆದೀತು ಅಂತ ಮೂಗೆಳೆಯುವವರು ಕನಿಷ್ಠತಮ ಅದರಿಂದ ಹಾನಿಯೇನಿಲ್ಲವಲ್ಲ ಎಂದಾದರೂ ಮತಗಟ್ಟೆಗೆ ಧಾವಿಸಬೇಕು. ಮತಗಟ್ಟೆ ಅಧಿಕಾರಿಗಳು ಹಾಗೂ ಮತ ಎಣಿಕೆ ಅಧಿಕಾರಿಗಳಿಗೆ ತರಬೇತಿ ನೀಡಲಾಗುತ್ತದೆ. ಸಭೆಗಳ ಮೇಲೆ ಸಭೆಗಳಾಗುತ್ತವೆ. ಆದರೆ ತಿರಸ್ಕೃತವಾಗದಂತೆ ಹೇಗೆ ಮತ ಚಲಾಯಿಸಬೇಕು ಎನ್ನುವುದರ ಸಾಂಕೇತಿಕ ಪ್ರಾತ್ಯಕ್ಷಿಕೆ ಕೂಡ ಏರ್ಪಡುವುದಿಲ್ಲ. ಸಮೂಹ ಮಾಧ್ಯಮಗಳಿಗೂ ಈ ದಿಸೆಯಲ್ಲಿ ಅಷ್ಟಾಗಿ ಆಸ್ಥೆಯಿಲ್ಲ. ಹಾಗಾಗಿಯೆ ಈ ವಿದ್ಯುನ್ಮಾನ ಯುಗದಲ್ಲೂ ಚುನಾವಣೆಗಳಿಗೆ ಅಸಿಂಧುಗೊಳ್ಳುವ ಮತಗಳಿಂದ ಮುಕ್ತಿಯಿಲ್ಲ.

ವಿಪರ್ಯಾಸವೆಂದರೆ, ನಮ್ಮಿಂದ ಆಯ್ಕೆಗೊಂಡ ಜನಪ್ರತಿನಿಧಿಗಳೂ ವೋಟು ಚಲಾಯಿಸುವಲ್ಲಿ ಲೋಪವೆಸಗುವುದು. ರಾಷ್ಟ್ರಪತಿ, ಉಪರಾಷ್ಟ್ರಪತಿ ಚುನಾವಣೆಗಳಲ್ಲಿ ಹಾಗೂ ರಾಜ್ಯಸಭೆ, ವಿಧಾನ ಪರಿಷತ್‌ಗೆ ಸದಸ್ಯರನ್ನು ಆಯ್ಕೆ ಮಾಡುವಲ್ಲಿ ತಿರಸ್ಕೃತ ಮತಗಳು! ಶಾಸನಸಭೆಗೆ ಸ್ಪರ್ಧಿಸುವ ಉಮೇದುವಾರರು ಪ್ರಚಾರಕ್ಕೆ ಬರುತ್ತಾರೆ ಅನ್ನಿ. ನೀವು ನಾಳೆ ಆಯ್ಕೆಗೊಂಡರೆ ನಿಮ್ಮ ಮತ ತಿರಸ್ಕೃತವಾಗದೆಂದು ಭರವಸೆ ನೀಡುವಿರಾ ಎನ್ನೋಣವೆ?

ವಾಚಕರ ವಾಣಿ

ಆತ್ಮಾವಲೋಕನ ಮಾಡಿಕೊಳ್ಳಬೇಕಾದವರು ಯಾರು?

'ಬಿಜೆಪಿ ಸರ್ಕಾರದ ದುರಾಡಳಿತವನ್ನು ಕಾಂಗ್ರೆಸ್ ನಾಯಕರು ಟೀಕೆ ಮಾಡುತ್ತಿದ್ದಾರೆ. ಆದರೆ ಇಂತಹ ಸರ್ಕಾರ ಬರಲು ಕಾರಣರಾದವರು ಆತ್ಮಾವಲೋಕನ ಮಾಡಿಕೊಳ್ಳಬೇಕು' ಎಂದಿದ್ದಾರೆ ಜೆಡಿಎಸ್ ನಾಯಕ ಎಚ್.ಡಿ.ಕುಮಾರಸ್ವಾಮಿ (ಪ್ರ.ವಾ., ಜ. 24). ಐದು ವರ್ಷಗಳ ಹಿಂದೆ ಬಿಜೆಪಿ ಅಧಿಕಾರಕ್ಕೆ ಬರಬಾರದೆಂದೇ ಕಾಂಗ್ರೆಸ್ ಪಕ್ಷವು ಕುಮಾರಸ್ವಾಮಿ ಅವರನ್ನು ಮುಖ್ಯಮಂತ್ರಿಯನ್ನಾಗಿ ಮಾಡಿತು. ಆದರೆ ನಂತರದ ಬೆಳವಣಿಗೆಯಲ್ಲಿ, ಕಾಂಗ್ರೆಸ್ ಮತ್ತು ಜೆಡಿಎಸ್‌ನ ಕೆಲವು ಶಾಸಕರು ಬಿಜೆಪಿ ಜೊತೆ ಕೈಜೋಡಿಸಿ ಕುಮಾರಸ್ವಾಮಿ ನೇತೃತ್ವದ ಸರ್ಕಾರವನ್ನು ಪದಚ್ಯುತ ಗೊಳಿಸಿದರು. ಇದು ಈಚಿನ ಇತಿಹಾಸ. ಆದರೆ ಅದಕ್ಕೂ ಹಿಂದೆ ತಮ್ಮ ಪಕ್ಷದ ಜಾತ್ಯತೀತ ಮೌಲ್ಯವನ್ನೇ ಕಸದ ರೀತಿಯಲ್ಲಿ ಕಡೆಗಣಿಸಿ, ಬಿಜೆಪಿ ಜೊತೆಗೆ ಹೋದವರು ಕುಮಾರಸ್ವಾಮಿಯವರೇ ಅಲ್ಲವೆ?!

ನಂತರ ಅದೇ ಬಿಜೆಪಿಯು ಜೆಡಿಎಸ್ ಪಕ್ಷಕ್ಕೆ ವಿಶ್ವಾಸದ್ರೋಹದ ಪಟ್ಟ ಕಟ್ಟಿ, ಜೆಡಿಎಸ್ ಪಕ್ಷವನ್ನು ನಾಶ ಮಾಡಲು ಯತ್ನಿಸಿತು. ಇಲ್ಲೆಲ್ಲ ಕುಮಾರಸ್ವಾಮಿ ಅವರ ವಿವೇಚನಾರಹಿತ ಅಧಿಕಾರದಾಹವು ರಾಜ್ಯದ ಜನರಿಗೆ ಆಶ್ಚರ್ಯ ಮತ್ತು ನೋವು ಉಂಟುಮಾಡಿತು. ಬಿಜೆಪಿ ರಾಜ್ಯದಲ್ಲಿ ತಳವೂರಲು ಕಾರಣರಾದದ್ದೇ ಕುಮಾರಸ್ವಾಮಿ ಅವರ ಈ ದುಡುಕು ನಿರ್ಧಾರ. ಇದು ಕೂಡ ನಮ್ಮ ರಾಜ್ಯದ ಇತಿಹಾಸವೇ ಅಲ್ಲವೆ?! ರಾಜ್ಯದ ಜನರು ಇದೆಲ್ಲವನ್ನೂ ಬಲ್ಲರು. ಆದ್ದರಿಂದ ಇತಿಹಾಸಕ್ಕೆ ಅಪಚಾರವಾಗುವಂತೆ ಯಾರೂ ಮಾತಾಡಬಾರದು.

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

ಎಫ್‌ಬಿಐ ಮಾದರಿ ನಡೆ

ಅಮೆರಿಕದ ಅತ್ಯುನ್ನತ ತನಿಖಾ ಸಂಸ್ಥೆಯಾದ ಎಫ್‌ಬಿಐ (ಫೆಡರಲ್ ಬ್ಯೂರೊ ಆಫ್ ಇನ್‌ವೆಸ್ಟಿಗೇಷನ್) ದೇಶದ ಅಧ್ಯಕ್ಷ ಜೋ ಬೈಡನ್ ಅವರ ನಿವಾಸದಲ್ಲಿ ಶೋಧ ನಡೆಸಿ, ಸುಮಾರು 20 ಮಹತ್ವದ ವರ್ಗೀಕೃತ ದಾಖಲೆ ಪತ್ರಗಳನ್ನು ವಶಪಡಿಸಿಕೊಂಡಿದೆ ಎಂಬ ವರದಿಯನ್ನು ಓದಿ ಆಶ್ಚರ್ಯದ ಜೊತೆಗೆ ತುಂಬಾ ಸಂತೋಷ ಕೂಡ ಆಯಿತು. ಬೈಡನ್ ಅವರು 2009ರಿಂದ 2017ರ ಜನವರಿವರೆಗೆ ದೇಶದ ಉಪಾಧ್ಯಕ್ಷರಾಗಿದ್ದವರು. ಈ ಅವಧಿಯಲ್ಲಿ ನಡೆದಿದೆ ಎನ್ನಲಾದ ಹಗರಣಗಳಿಗೆ ಸಂಬಂಧಪಟ್ಟ ಹಾಗೆ ಈ ಶೋಧ ನಡೆದಿದೆ ಎಂದು ಹೇಳಲಾಗುತ್ತಿದೆ. ಅದರ ಸತ್ಯಾಸತ್ಯತೆ ಏನೇ ಇರಲಿ ಅದು ನಮಗೆ ಮುಖ್ಯವಲ್ಲ. ಆದರೆ ಜಗತ್ತಿನ ಅತ್ಯಂತ ಪ್ರಭಾವಶಾಲಿ ಹುದ್ದೆಯಲ್ಲಿರುವ ಅಮೆರಿಕದ ಅಧ್ಯಕ್ಷರ ವಿರುದ್ಧವೇ ಅದೇ ದೇಶದ ತನಿಖಾ ಸಂಸ್ಥೆಯು ತನಿಖೆ ನಡೆಸಿ, ದಾಖಲೆಗಳನ್ನು ವಶಪಡಿಸಿಕೊಂಡಿರುವುದು ನಿಜಕ್ಕೂ ಐತಿಹಾಸಿಕವಾದುದು. ನಮ್ಮ ದೇಶದ ಸಿಬಿಐ ಸೇರಿದಂತೆ, ವಿಶ್ವದ ಎಲ್ಲ ತನಿಖಾ ಸಂಸ್ಥೆಗಳಿಗೂ ಇದು ಮಾದರಿ ನಡೆಯಾಗಿದೆ. ಅಲ್ಲದೆ ಇದು ಆ ಸಂಸ್ಥೆಯ ವಿಶ್ವಾಸಾರ್ಹತೆಗೆ ಹಿಡಿದ ಕನ್ನಡಿಯಾಗಬಲ್ಲದು.

ಕೆ.ವಿ.ವಾಸು, ಮೈಸೂರು

ಎದುರಾಳಿಯ ಸೋಲನ್ನೇ ಬಯಸದವರು!

'ಡಿ.ಕೆ.ಶಿವಕುಮಾರ್ ಹಾಗೂ ಸಿದ್ದರಾಮಯ್ಯ ಸ್ವಲ್ಪ ಉಸಿರಾಡುತ್ತಿದ್ದಾರೆ. ಪ್ರತಿಭಟನೆ ಮಾಡುತ್ತಿದ್ದಾರೆ. ಈ ಬಾರಿ ಚುನಾವಣೆ ಮುಗಿದ ಬಳಿಕ ಅವರಿಬ್ಬರ ಉಸಿರೂ ನಿಲ್ಲುತ್ತದೆ' ಎಂದು ಬಿಜೆಪಿ ಮುಖಂಡ ಬಿ.ಎಸ್.ಯಡಿಯೂರಪ್ಪ ಹೇಳಿದ್ದಾರೆ (ಕಿಡಿನುಡಿ, ಪ್ರ.ವಾ., ಜ. 24). ಎದುರಾಳಿ ಬಲವಾಗಿದ್ದಾಗಲೇ ಹೋರಾಟವು ಕಳೆ ಕಟ್ಟುವುದು. ಆದ್ದರಿಂದ ಈ ಕಾಂಗ್ರೆಸ್ ಮುಖಂಡರ ಆಯಸ್ಸು ವೃದ್ಧಿಸಲಿ ಮತ್ತು ಆರೋಗ್ಯ ಚೆನ್ನಾಗಿ ಇರಲಿ ಎಂದು ಆಶಿಸುವುದೇ ನಿಜವಾದ ಹೋರಾಟಗಾರನ ಲಕ್ಷಣ.

ಇಂತಹ ಗುಣವು ಜವಾಹರಲಾಲ್ ನೆಹರೂ ಅವರಲ್ಲಿ ಇತ್ತು. ಪ್ರಧಾನಿಯಾಗಿದ್ದ ನೆಹರೂ ಅವರನ್ನು, ರಾಮ ಮನೋಹರ ಲೋಹಿಯಾ ಅವರಷ್ಟು ಸಂಸತ್ತಿನ ಒಳಗೆ ಮತ್ತು ಹೊರಗೆ ಟೀಕೆ ಮಾಡುತ್ತಿದ್ದವರು ಬೇರೆ ಸಿಗಲಾರರು. ಚುನಾವಣೆ ಯೊಂದರಲ್ಲಿ ಲೋಹಿಯಾ ಸೋತಾಗ, ನೆಹರೂ ಅವರು 'ರಾಮಮನೋಹರ ಲೋಹಿಯಾ ಇಲ್ಲದ ಪಾರ್ಲಿಮೆಂಟ್ ಅಪೂರ್ಣ' ಎಂದು ಅವರ ಸೋಲಿಗೆ ವಿಷಾದಿಸಿದ್ದರು. ಉಪಚುನಾವಣೆಯಲ್ಲಿ ಲೋಹಿಯಾ ಗೆದ್ದು ಪಾರ್ಲಿಮೆಂಟ್ ಪ್ರವೇಶಿಸಿದಾಗ, 'ಈಗ ಪಾರ್ಲಿಮೆಂಟ್ ಪೂರ್ಣವಾಯಿತು' ಎಂದು ನೆಹರೂ ಸಂಭ್ರಮಿಸಿದರು. ಎದುರಾಳಿಯ ಸೋಲನ್ನೇ ಬಯಸದ ಅಂದಿನ ರಾಜಕೀಯ ಧುರೀಣರ ನಡೆ, ಎದುರಾಳಿಯ ಸಾವನ್ನು ಬಯಸುವ ಇಂದಿನ ರಾಜಕೀಯ ವ್ಯಕ್ತಿಗಳಿಗೆ ಮಾದರಿಯಾಗಬೇಕಿದೆ.

ಸಿ.ಚಿಕ್ಕತಿಮ್ಮಯ್ಯ ಹಂದನಕೆರೆ, ಬೆಂಗಳೂರು

ಮೊಳೆಯಲಿ ಕರ್ತವ್ಯವೆಂಬ ಅರಿವಿನ ಬೀಜ

ಖಾನಾಪುರ ತಾಲ್ಲೂಕಿನ ನಾವಗಾ ಗ್ರಾಮದ ಹೊರವಲಯದಲ್ಲಿ 90 ವರ್ಷದ ವೃದ್ಧೆಯೊಬ್ಬರನ್ನು ನಿತ್ರಾಣ ಸ್ಥಿತಿಯಲ್ಲಿ ಬಿಟ್ಟು ಹೋಗಿರುವ ವರದಿಯನ್ನು (ಪ್ರ.ವಾ., ಜ. 24) ಓದಿದಾಗ, ಪಾಪಪ್ರಜ್ಞೆಯು ಕಾಡದಿರುವ ಮಟ್ಟಿಗೆ ಮನುಷ್ಯ ಅಧೋಗತಿಗೆ ಇಳಿದಿರುವುದು ನಾಚಿಕೆಗೇಡಿನ ಸಂಗತಿ ಎನಿಸಿತು.

ನಮ್ಮನ್ನು ಸಾಕಿ–ಸಲಹಿದ ಹೆತ್ತವರಿಗೆ ಊರುಗೋಲಾಗಿ ನಿಲ್ಲಬೇಕು. ದೈಹಿಕವಾಗಿ, ಮಾನಸಿಕವಾಗಿ ಮತ್ತು ಭಾವನಾತ್ಮಕವಾಗಿ ಅವರ ಬಗೆಗೆ ಕಾಳಜಿ ವಹಿಸಬೇಕು ಮತ್ತು ಬೆಂಬಲವನ್ನು ನೀಡಬೇಕು. ಇದು, ಮಕ್ಕಳ ಕರ್ತವ್ಯವೆಂಬ ಮನುಷ್ಯತ್ವದ ಅರಿವಿನ ಬೀಜವನ್ನು ಎಲ್ಲರೊಳಗೆ ಬಿತ್ತಬೇಕಾಗಿದೆ.

ಪ್ರವೀಣ ನಾಗಪ್ಪ ಯಲವಿಗಿ, ಹಾವೇರಿ

ಮಾನವ– ಪ್ರಾಣಿ ಸಂಘರ್ಷ: ಅರಿಯಿರಿ ಕಾರಣ

ಇತ್ತೀಚಿನ ದಿನಗಳಲ್ಲಿ ವನ್ಯಮೃಗಗಳ ದಾಳಿಯ ಪ್ರಸಂಗಗಳು ಹೆಚ್ಚುತ್ತಿವೆ. ದಾಳಿಯಾದ ಸ್ಥಳಗಳಲ್ಲಿ ಹುಲಿ, ಚಿರತೆಗಳನ್ನು ಸೆರೆಹಿಡಿಯಲು ಸಾಮಾನ್ಯವಾಗಿ ಬೋನುಗಳನ್ನು ಇರಿಸಲಾಗುತ್ತದೆ. ಆದರೆ ವನ್ಯಜೀವಿಗಳು ಏಕೆ ನಾಡಿನತ್ತ ಬರುತ್ತಿವೆ ಹಾಗೂ ಅವುಗಳ ದಾಳಿ ಪ್ರಕರಣಗಳು ಏಕೆ ಹೆಚ್ಚುತ್ತಿವೆ ಎಂಬುದನ್ನು ನಾವು ತಿಳಿದುಕೊಳ್ಳುತ್ತಿಲ್ಲ. ದಾಳಿಗಳು ಸಂಭವಿಸುವ ಪ್ರದೇಶಗಳಲ್ಲಿ ವನ್ಯಜೀವಿಗಳಿಗಿರುವ ಅಡಚಣೆಗಳೇನು ಎಂಬುದನ್ನು ಸ್ಥಳೀಯರು ಮತ್ತು ಅರಣ್ಯಾಧಿಕಾರಿಗಳು ಮೊದಲು ತಿಳಿದುಕೊಳ್ಳಬೇಕು. ಇಂತಹ ದಾಳಿಗಳು ಮರುಕಳಿಸದಂತೆ ಎಲ್ಲ ಕ್ರಮಗಳನ್ನೂ ಕೈಗೊಳ್ಳಬೇಕು.

ಗುರುಸ್ವಾಮಿ ಜೆ., ಕುಳ್ಳೂರು, ಚಾಮರಾಜನಗರ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಅಮೆರಿಕದಲ್ಲಿ ಬಂದೂಕುದಾಳಿ ಹಾವಳಿ



ಬಂದೂಕು ದಾಳಿಯಿಂದ ಹತ್ಯೆಗೀಡಾದವರ ಗೌರವಾರ್ಥ, ಕ್ಯಾಲಿಫೋರ್ನಿಯಾದ ಸಿಟಿಹಾಲ್ ಎದುರು ಮಂಗಳವಾರ ಮೊಂಬತ್ತಿ ಬೆಳಗಿಸಲಾಯಿತು —ಎಎಫ್‌ಪಿ ಚಿತ್ರ

ಪ್ರಜಾವಾಣಿ ವಾರ್ತೆ

ಕ್ಯಾಲಿಫೋರ್ನಿಯಾದ ಕ್ಲಬ್ ಒಂದರಲ್ಲಿ ಬಂದೂಕು-ಧಾರಿಯೊಬ್ಬ ಬೇಕಾಬಿಟ್ಟಿ ಗುಂಡು ಹಾರಿಸಿ 11 ಜನರನ್ನು ಶನಿವಾರ ಹತ್ಯೆ ಮಾಡಿದ್ದ. ಒಂಬತ್ತು ಜನರನ್ನು ಗಾಯಗೊಳಿಸಿದ್ದ. ಅದಾಗಿ, ಮೂರನೇ ದಿನ ಅಂದರೆ ಮಂಗಳವಾರ ಸ್ಯಾನ್‌ಫ್ರಾನ್ಸಿಸ್ಕೊದ ತೋಟವೊಂದರಲ್ಲಿ ವ್ಯಕ್ತಿಯೊಬ್ಬ ನಾಲ್ಕು ಜನರನ್ನು ಕೊಂದಿದ್ದಾನೆ ಮತ್ತು ಇನ್ನೊಂದು ಪ್ರಕರಣದಲ್ಲಿ ಮತ್ತೊಬ್ಬ ಬಂದೂಕುಧಾರಿ ಮೂವರನ್ನು ಕೊಂದಿದ್ದಾನೆ. ಎಂಟು ದಿನದಲ್ಲಿ ಸಾಮೂಹಿಕ ಬಂದೂಕುದಾಳಿಯ ಮೂರು ಪ್ರಕರಣಗಳಾಗಿವೆ. ಪ್ಯೂ ರಿಸರ್ಚ್ ಸೆಂಟರ್ ನಡೆಸಿದ್ದ ಸಮೀಕ್ಷೆಯೊಂದರಲ್ಲಿ ದೇಶವು ಎದುರಿಸುತ್ತಿರುವ ಅತ್ಯಂತ ದೊಡ್ಡ ಸಮಸ್ಯೆ ಯಾವುದು ಎಂಬ ಪ್ರಶ್ನೆ ಕೇಳಲಾಗಿತ್ತು. ಶೇ 48ರಷ್ಟು ಮಂದಿ ಬಂದೂಕು ಹಿಂಸೆಯೇ ಅತ್ಯಂತ ದೊಡ್ಡ ಸಮಸ್ಯೆ ಎಂದಿದ್ದರು. ಶೇ 24ರಷ್ಟು ಮಂದಿ ದೊಡ್ಡ ಸಮಸ್ಯೆ ಎಂದಿದ್ದರು.

ಅಮೆರಿಕದಲ್ಲಿ ನಡೆಯುತ್ತಿರುವ ಸಾಮೂಹಿಕ ಬಂದೂಕುದಾಳಿಗಳನ್ನು ಗಮನಿಸಿದರೆ ಈ ಜನರ ಪ್ರತಿಕ್ರಿಯೆ ಸಮರ್ಪಕವಾಗಿದೆ ಎನಿಸುತ್ತದೆ. 2022ರಲ್ಲಿ 648 ಬಂದೂಕುದಾಳಿ ಪ್ರಕರಣಗಳು ನಡೆದಿವೆ. ಬಂದೂಕು ದಾಳಿಗಳಿಗೆ ಇಂತಹುದೇ ಕಾರಣ ಎಂದು ಹೇಳಲಾಗದು. ಆಟಿಕೆಗಳಿಗಿಂತ ಸುಲಭವಾಗಿ ಬಂದೂಕುಗಳು ದೊರೆಯುವುದು ಈ ರೀತಿಯ ಹತ್ಯಾಕಾಂಡಗಳಿಗೆ ಮುಖ್ಯ ಕಾರಣ. ತಮ್ಮ ವ್ಯಕ್ತಿತ್ವವೇ ಶ್ರೇಷ್ಠ ಎಂಬ ಅತಿಯಾದ ಭ್ರಮೆ ಇನ್ನೊಂದು ಕಾರಣ. ಎಲ್ಲರಿಂದ ದೂರವಾದ ವ್ಯಕ್ತಿಗಳು ತಮ್ಮ ವ್ಯಕ್ತಿತ್ವಕ್ಕೂ ಮಹತ್ವ ಇದೆ ಎಂದು ತೋರಿಸಬೇಕು ಎಂಬ ಭ್ರಮೆಯಲ್ಲಿಯೂ ಬಂದೂಕು ಕೈಗೆತ್ತಿಕೊಳ್ಳುತ್ತಾರೆ. ಬಿಳಿಯರೇ ಶ್ರೇಷ್ಠ ಎಂಬ ಭಾವನೆಯಿಂದಾಗಿ ಕೂಡ ಬಂದೂಕುದಾಳಿಗಳು ನಡೆದಿವೆ. ಮಾನಸಿಕ ಸಮಸ್ಯೆಯೂ ಇಂತಹ ಹತ್ಯೆಗಳಿಗೆ ಕಾರಣವಾಗಿದೆ.

ಇತ್ತೀಚಿನ ವರ್ಷಗಳಲ್ಲಿ ಬಂದೂಕುದಾಳಿಯ ಹೆಚ್ಚುತ್ತಲೇ ಇದೆ. ಹಾಗಾಗಿ ಬಂದೂಕು ಮಾರಾಟಕ್ಕೆ ಕಡಿವಾಣ ಹಾಕಬೇಕು ಎಂಬ ಸಲಹೆಗಳು ಕೇಳಿಬಂದಿವೆ. ಇದರ ಪರಿಣಾಮವಾಗಿ ಬಂದೂಕುಗಳು ಮುಂದೆ ದೊರೆಯಲಿಕ್ಕಿಲ್ಲ ಎಂದು ಭಾವಿಸಿದ ಜನರು ಹೆಚ್ಚು ಹೆಚ್ಚಾಗಿ ಬಂದೂಕು ಖರೀದಿ ಮಾಡುತ್ತಿದ್ದಾರೆ.

ಸೆಂಟರ್ ಫಾರ್ ಡಿಸೀಸ್ ಕಂಟ್ರೋಲ್ ಆ್ಯಂಡ್ ಪ್ರಿವೆನ್ಷನ್ ನಡೆಸಿದ ಅಧ್ಯಯನದಲ್ಲಿ ಸಾಮೂಹಿಕ ಬಂದೂಕು ದಾಳಿಗೆ ಸಂಬಂಧಿಸಿ ಕುತೂಹಲಕರ ಅಂಶಗಳು ತಿಳಿದು ಬಂದಿವೆ. 2014ರಿಂದ 2019ರ ವರೆಗೆ ನಡೆದ 128 ಸಾಮೂಹಿಕ ಬಂದೂಕು ದಾಳಿಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿತ್ತು. ದಾಳಿಕೋರರ ಗುರುತು ಪತ್ತೆಯಾಗದ ಪ್ರಕರಣಗಳನ್ನು ಅಧ್ಯಯನದಿಂದ ಹೊರಗೆ ಇರಿಸಲಾಗಿತ್ತು. ಹೀಗಾಗಿ ಅಧ್ಯಯನಕ್ಕೆ 110 ಪ್ರಕರಣಗಳು ದೊರಕಿದ್ದವು.


110 ಪ್ರಕರಣಗಳ ಪೈಕಿ 65 ಪ್ರಕರಣಗಳಲ್ಲಿ (ಶೇ 59.1) ದಾಳಿ ನಡೆಸಿದ ವ್ಯಕ್ತಿಯ ಸಂಗಾತಿ ಅಥವಾ ಕುಟುಂಬದ ಸದಸ್ಯರೇ ಮೃತಪಟ್ಟಿದ್ದಾರೆ ಇಲ್ಲವೇ ಗಾಯಗೊಂಡಿದ್ದಾರೆ. 10 ಪ್ರಕರಣಗಳ (ಶೇ 9.1) ಬಂದೂಕುಧಾರಿಗಳಿಗೆ ಕೌಟುಂಬಿಕ ಹಿಂಸೆ ಎಸಗಿದ ಹಿನ್ನೆಲೆ ಇತ್ತು. ಉಳಿದ ಶೇ 31.8ರಷ್ಟು ಪ್ರಕರಣಗಳಿಗೆ ಮಾತ್ರ ಕೌಟುಂಬಿಕ ಹಿಂಸೆಯ ಹಿನ್ನೆಲೆ ಇರಲಿಲ್ಲ. 12 ಪ್ರಕರಣಗಳಲ್ಲಿ ಒಬ್ಬರಿಗಿಂತ ಹೆಚ್ಚು ಬಂದೂಕು ಧಾರಿಗಳಿದ್ದರು. ಮೂರು ಪ್ರಕರಣಗಳಲ್ಲಿ ಭಾಗಿಯಾದವರು ಹಿಂದೆ ಕೌಟುಂಬಿಕ ಹಿಂಸೆ ಎಸಗಿದವರು. ಎರಡು ಪ್ರಕರಣಗಳಿಗೆ ಕೌಟುಂಬಿಕ ಹಿಂಸೆಯ ನಂಟು ಇತ್ತು.


ಹಾಗಾಗಿ, ಕೌಟುಂಬಿಕ ಹಿಂಸೆಯೇ ಇಂತಹ ದಾಳಿಗಳಿಗೆ ಮುಖ್ಯ ಕಾರಣ ಎಂಬ ನಿರ್ಧಾರಕ್ಕೆ ಅಧ್ಯಯನವು ಬಂದಿತ್ತು. ಈ ಕಾರಣಕ್ಕಾಗಿಯೇ ಕೌಟುಂಬಿಕ ದೌರ್ಜನ್ಯ ಪ್ರಕರಣಗಳಲ್ಲಿ ಶಿಕ್ಷೆಗೆ ಒಳಗಾದ ವ್ಯಕ್ತಿಗೆ ಬಂದೂಕು ಮಾರುವುದಕ್ಕೆ ನಿರ್ಬಂಧವೂ ಇದೆ.

ಸಾರ್ವಜನಿಕ ಬಂದೂಕು ದಾಳಿ ಏರಿಕೆ

ಎಲ್ಲಾ ದಾಳಿಗಳನ್ನು ಅಮೆರಿಕವು ಸಾರ್ವಜನಿಕ ಬಂದೂಕು ದಾಳಿ ಎಂದು ಪರಿಗಣಿಸುವುದಿಲ್ಲ. ಈ ಕಾರಣದಿಂದಲೇ, ಇಂತಹ ದಾಳಿಗಳ ಬಗ್ಗೆ ಜಾಗತಿಕ ಅಧ್ಯಯನ ಸಂಸ್ಥೆಗಳು ನೀಡುವ ಅಂಕಿಅಂಶಗಳಿಗೂ ಮತ್ತು ಅಮೆರಿಕದ ಸರ್ಕಾರವು ನೀಡುವ ಅಂಕಿಅಂಶಗಳಿಗೂ ತಾಳೆಯಾಗುವುದಿಲ್ಲ. 2022ರಲ್ಲಿ ಅಮೆರಿಕದಾದ್ಯಂತ ಒಟ್ಟು 648 ‘ಸಾರ್ವಜನಿಕ ಬಂದೂಕು ದಾಳಿ’ ಪ್ರಕರಣಗಳು ನಡೆದಿವೆ ಎಂದು ನ್ಯೂಯಾರ್ಕ್ ಟೈಮ್ಸ್ ವರದಿ ಮಾಡಿದೆ. 2022ಕ್ಕೆ ಸಂಬಂಧಿಸಿದ ವರದಿಯನ್ನು ಎಫ್‌ಬಿಐ ಇನ್ನೂ ಬಿಡುಗಡೆ ಮಾಡಿಲ್ಲ. ಅಮೆರಿಕದಲ್ಲಿ ಬಂದೂಕು ಮತ್ತು ಪಿಸ್ತೂಲು ಬಳಸಿಕೊಂಡು ನಡೆಸಿದ ಕೃತ್ಯಗಳ ವಾರ್ಷಿಕ ಸರಾಸರಿ ಸಂಖ್ಯೆ 2 ಲಕ್ಷದಷ್ಟಿದೆ. 2021ರಲ್ಲಿ ಇಂತಹ ಒಟ್ಟು 2.08 ಲಕ್ಷ ಕೃತ್ಯಗಳು ನಡೆದಿವೆ. ಆದರೆ ಇವುಗಳಲ್ಲಿ ‘ಸಾರ್ವಜನಿಕ ಬಂದೂಕು ದಾಳಿ’ ಪ್ರಕರಣಗಳ ಸಂಖ್ಯೆ 61 ಮಾತ್ರ ಎನ್ನುತ್ತದೆ ಎಫ್‌ಬಿಐ. ಯಾವುದೇ ಬಂದೂಕು ದಾಳಿಯನ್ನು ‘ಸಾರ್ವಜನಿಕ ಬಂದೂಕು ದಾಳಿ’ ಅಥವಾ ‘ಬಂದೂಕಿನಿಂದ ಸಾಮೂಹಿಕ ಹತ್ಯೆ’ ಎಂದು ಪರಿಗಣಿಸಲು ಅಮೆರಿಕದ ಫೆಡರಲ್ ಬ್ಯೂರೊ ಆಫ್ ಇನ್ವೆಸ್ಟಿಗೇಷನ್ಸ್ (ಎಫ್‌ಬಿಐ) ಈ ಮಾನದಂಡಗಳನ್ನು ಅನುಸರಿಸುತ್ತದೆ.


- ಸಾರ್ವಜನಿಕ ಪ್ರದೇಶದಲ್ಲಿ ದಾಳಿ ನಡೆದಿರಬೇಕು
- ದಾಳಿಯು ಸಂಪೂರ್ಣವಾಗಿ ಅಪ್ರಚೋದಿತವಾಗಿರಬೇಕು
- ಯಾವುದೋ ಬೇರೆ ಅಪರಾಧ ಕೃತ್ಯಗಳಿಗೆ ಪೂರಕವಾಗಿ ಅಥವಾ ಪ್ರತಿಕ್ರಿಯೆಯಾಗಿ ಇಂತಹ ದಾಳಿ ನಡೆದಿರಬಾರದು
- ದಾಳಿಕೋರನು ನಿರ್ದಿಷ್ಟ ಗುಂಪು, ವರ್ಗ, ಜನಾಂಗದ ಜನರನ್ನು ಗುರಿ ಮಾಡಿಕೊಂಡು ದಾಳಿ ನಡೆಸಿರಬೇಕು (ಉದಾಹರಣೆಗೆ ಶಾಲೆಗಳು, ಚರ್ಚ್‌ಗಳನ್ನು ಗುರಿ ಮಾಡಿಕೊಂಡು ದಾಳಿ ನಡೆಸುವುದು)
- ಸ್ವತ್ತುಗಳಿಗೆ ಹಾನಿ ಮಾಡುವುದು ದಾಳಿಯ ಗುರಿಯಾಗಿರದೆ, ಜನರನ್ನು ಕೊಲ್ಲುವುದು ಅಥವಾ ಗಾಯವನ್ನುಂಟು ಮಾಡುವುದು ದಾಳಿಯ ಗುರಿಯಾಗಿರಬೇಕು
- ಗ್ಯಾಂಗ್‌ವಾರ್‌ಗಳು, ಸ್ವಯಂರಕ್ಷಣೆ ಉದ್ದೇಶದ ದಾಳಿ, ಆಸ್ತಿ ವ್ಯಾಜ್ಯದ ಕಾರಣ ನಡೆದ ದಾಳಿ, ದರೋಡೆ ಅಥವಾ ಕಳ್ಳತನ ಮೊದಲಾದ ಅಪರಾಧ ಕೃತ್ಯಗಳ ಸಂದರ್ಭದಲ್ಲಿ ನಡೆಯುವ ದಾಳಿಯಾಗಿರಬಾರದು





2.08 ಲಕ್ಷ
2021ರಲ್ಲಿ ಅಮೆರಿಕದಲ್ಲಿ ಬಂದೂಕು/ಪಿಸ್ತೂಲು ಬಳಸಿಕೊಂಡು ನಡೆದ ಅಪರಾಧ ಮತ್ತು ಹತ್ಯೆ ಕೃತ್ಯಗಳ ಸಂಖ್ಯೆ

61
2021ರಲ್ಲಿ ಅಮೆರಿಕದಲ್ಲಿ ನಡೆದ ‘ಸಾರ್ವಜನಿಕ ಬಂದೂಕು ದಾಳಿ’ ಪ್ರಕರಣಗಳ ಸಂಖ್ಯೆ



ಪಿಸ್ತೂಲು ಖರೀದಿಗೆ ಪರವಾನಗಿ ಬೇಕಿಲ್ಲ

ಅಮೆರಿಕದಲ್ಲಿ ಜನರು ಶಸ್ತ್ರಾಸ್ತ್ರ ಹೊಂದುವುದಕ್ಕೆ ಸಂಬಂಧಪಟ್ಟ ಕಠಿಣ ನಿಯಮಗಳು ಇಲ್ಲ. ಬಂದೂಕು ಅಥವಾ ಪಿಸ್ತೂಲು ಇಟ್ಟುಕೊಳ್ಳುವುದಕ್ಕೆ ಪರವಾನಗಿಯೇ ಬೇಕಿಲ್ಲ. ಅಮೆರಿಕದ ನಾಗರಿಕರೊಬ್ಬರು ಇಂತಹ ಆಯುಧಗಳನ್ನು ಇಟ್ಟುಕೊಳ್ಳುವುದಕ್ಕೆ ಸಂಬಂಧಪಟ್ಟಂತೆ ‘ಪಿಸ್ತೂಲು ನಿಯಂತ್ರಣ ಕಾಯ್ದೆ–1968’ ಜಾರಿಯಲ್ಲಿದೆ. 18 ವರ್ಷ ವಯಸ್ಸಿನ ಅಮೆರಿಕದ ಯಾವುದೇ ನಾಗರಿಕ ರೈಫಲ್ ಅಥವಾ ಶಾಟ್‌ಗನ್ ಖರೀದಿಸಬಹುದು. 21 ವರ್ಷ ವಯಸ್ಸು ದಾಟಿದವರು ಪಿಸ್ತೂಲುಗಳನ್ನು ಖರೀದಿಸಬಹುದು. ಅರ್ಜಿ ಸಲ್ಲಿಸಿ, ₹7,000 ಪಾವತಿಸಿದರೆ ಸಾಕು. ಆನ್‌ಲೈನ್‌ನಲ್ಲಿ ಪಾವತಿಸಿ ಖರೀದಿಸಲು ಅವಕಾಶವಿದೆ. ಅಧಿಕೃತ ಮಾರಾಟಗಾರರಿಂದ ಮಾತ್ರ ಖರೀದಿ ಮಾಡಬೇಕು ಎಂದಷ್ಟೇ ಕಾಯ್ದೆ ಉಲ್ಲೇಖಿಸುತ್ತದೆ. ವಿವಿಧ ರಾಜ್ಯಗಳು ಈ ವಯಸ್ಸಿನ ಮಿತಿಯನ್ನು ಹೆಚ್ಚಿಸಬಹುದೇ ವಿನಾ, ಕಡಿಮೆ ಮಾಡುವಂತಿಲ್ಲ.

ಅಪರಾಧ ಕೃತ್ಯಗಳಲ್ಲಿ ಒಂದು ವರ್ಷಕ್ಕಿಂತ ಹೆಚ್ಚು ಅವಧಿ ಜೈಲುವಾಸ ಅನುಭವಿಸಿ-ದವರಿಗೆ, ಮಾನಸಿಕ ಅಸ್ವಸ್ಥರಿಗೆ ಪಿಸ್ತೂಲು ಖರೀದಿಸುವುದಕ್ಕೆ ನಿರ್ಬಂಧ ವಿಧಿಸಲಾಗಿದೆ. ಮರಿಜುವಾನಾದಂತಹ ಮಾದಕ ವಸ್ತುಗಳು ಸೇರಿದಂತೆ ಕಾನೂನುಬಾಹಿರ ವಸ್ತುಗಳನ್ನು ಇರಿಸಿ ಕೊಂಡವರಿಗೆ ಶಸ್ತ್ರಗಳನ್ನು ಖರೀದಿಸಲು ಅವಕಾಶವಿಲ್ಲ. ವಲಸಿಗರು, ಪ್ರವಾಸಿ ವೀಸಾದಡಿ ಅಮೆರಿಕಕ್ಕೆ ಬಂದವರು, ಪೌರತ್ವ ತ್ಯಜಿಸಿದವರಿಗೆ ಶಸ್ತ್ರಾಸ್ತ್ರ ಮಾರಾಟ ಮಾಡುವಂತಿಲ್ಲ.

ಕಠಿಣ ನಿಯಮ ಜಾರಿಗೆ ಪ್ರಬಲ ಲಾಬಿ ಅಡ್ಡಿ


‘ನಾನು ಅಮೆರಿಕದ ಅಧ್ಯಕ್ಷನಾಗಿರುವವರೆಗೆ, ಪಿಸ್ತೂಲು ಹೊಂದುವ ನಿಮ್ಮ ಹಕ್ಕುಗಳನ್ನು (ಎರಡನೇ ತಿದ್ದುಪಡಿ) ರಕ್ಷಿಸುತ್ತೇನೆ’ ಎಂದು ಅಮೆರಿಕದ ಹಿಂದಿನ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದರು. ನಂತರ ಅಧಿಕಾರಕ್ಕೆ ಬಂದ ಜೋ ಬೈಡನ್, ಬಂದೂಕು ಖರೀದಿ ನಿಯಮಗಳಲ್ಲಿ ಒಂದಿಷ್ಟು ಬದಲಾವಣೆಗಳನ್ನು ಮಾಡಿದ್ದನ್ನು ಬಿಟ್ಟರೆ, ದೇಶದಲ್ಲಿ ಶಸ್ತ್ರಾಸ್ತ್ರ ಪರವಾನಗಿ ವ್ಯವಸ್ಥೆಯನ್ನು ಜಾರಿಗೊಳಿಸುವ ಸಾಹಸಕ್ಕೆ ಮುಂದಾಗಲಿಲ್ಲ. ಅಮೆರಿಕದಲ್ಲಿ ಯಾವ ಸರ್ಕಾರ ಅಧಿಕಾರಕ್ಕೆ ಬಂದರೂ ಶಸ್ತ್ರಾಸ್ತ್ರ ಬಳಕೆ ನಿಯಮಗಳನ್ನು ಕಠಿಣಗೊಳಿಸಲು ಸಾಧ್ಯವಾಗುವುದಿಲ್ಲ. ಇದರ ಹಿಂದೆ ಶಸ್ತ್ರಾಸ್ತ್ರ ಉದ್ಯಮದ ಬೃಹತ್ ಲಾಬಿ ಸದಾ ಕೆಲಸ ಮಾಡು-ತ್ತಿರುತ್ತದೆ.

ಅಮೆರಿಕನ್ನರು ಶಸ್ತ್ರಾಸ್ತ್ರಗಳನ್ನು ಹೊಂದುವ ಅಧಿಕಾರವನ್ನು ಸಂವಿಧಾನವೇ ನೀಡಿದೆ. ಸಂವಿಧಾನಕ್ಕೆ ಎರಡನೇ ತಿದ್ದುಪಡಿ ತರುವ ಮೂಲಕ ಅದಕ್ಕೆ ಕಾನೂನಿನ ಮಾನ್ಯತೆ ನೀಡಲಾಗಿತ್ತು. ಇದು ಅಮೆರಿಕದ ಕ್ರಾಂತಿಯ ಚೈತನ್ಯವನ್ನು ಪ್ರತಿನಿಧಿಸುವ ಸಂಕೇತ ಎಂದೇ ಭಾವಿಸಲಾಗಿದೆ. ಅಮೆರಿಕನ್ನರ ಈ ಭಾವನೆಯನ್ನೇ ಬಂಡವಾಳ ಮಾಡಿಕೊಂಡಿರುವ ಅಮೆರಿಕದ ‘ನ್ಯಾಷನಲ್ ರೈಫಲ್ಸ್ ಅಸೋಸಿಯೇಷನ್’ (ಎನ್‌ಆರ್‌ಎ) ಸಂಸ್ಥೆಯು, ಶಸ್ತ್ರಾಸ್ತ್ರ ನಿಯಂತ್ರಣಕ್ಕೆ ಕಠಿಣ ಕಾನೂನುಗಳನ್ನು ಜಾರಿ ಮಾಡಲು ಬಿಡುತ್ತಿಲ್ಲ.

ಪ್ರತಿ ಬಾರಿ ಅಮೆರಿಕದ ಚುನಾವಣೆ ಎದುರಾದಾಗ, ಶಸ್ತ್ರಾಸ್ತ್ರ ನಿಯಂತ್ರಣ ವಿಚಾರವು ಮುನ್ನೆಲೆಗೆ ಬರುತ್ತದೆ. ಬಂದೂಕುಗಳ ಮೇಲೆ ನಿಯಂತ್ರಣ ಹೇರುವಂತಹ ಯಾವುದೇ ಕಾನೂನು ಜಾರಿಯಾಗದಂತೆ ಎನ್‌ಆರ್‌ಎ ನೋಡಿಕೊಳ್ಳುತ್ತದೆ. ಪಕ್ಷವೊಂದರ ಪರವಾಗಿ ಚುನಾವಣಾ ಪ್ರಚಾರಕ್ಕೆ ದೊಡ್ಡ ಮೊತ್ತದ ಹಣವನ್ನು ವ್ಯಯಿಸುತ್ತದೆ. ಆ ಮೂಲಕ ತನ್ನ ಪ್ರಭಾವ ಸ್ಥಾಪಿಸುತ್ತದೆ.

ಆಧಾರ: ಎಫ್‌ಬಿಐನ ‘ಆ್ಯಕ್ಟಿವ್ ಶೂಟರ್ ಇನ್ಸಿಡೆಂಟ್ಸ್ ಇನ್ ಅಮೆರಿಕ’ ವಾರ್ಷಿಕ ವರದಿಗಳು 2020 ಮತ್ತು 2021, ನ್ಯೂಯಾರ್ಕ್ ಟೈಮ್ಸ್ ವರದಿ, ಹಾರ್ವರ್ಡ್ ವಿವಿ, ಪ್ಯೂ ರಿಸರ್ಚ್ ಸೆಂಟರ್

ಕೆಸಿಸಿಯಲ್ಲಿ ‘ಅಪ್ಪು’ ಸಂಭ್ರಮಾಚರಣೆ



ಸುದೀಪ್

ಕನ್ನಡ ಚಲನಚಿತ್ರ ಕಪ್ (ಕೆಸಿಸಿ) ಇದೇ ಮೊದಲ ಬಾರಿಗೆ ರಾಜಧಾನಿಯಿಂದ ಹೊರಗೆ ಹೆಜ್ಜೆ ಇಟ್ಟಿದೆ. ಕೆಸಿಸಿ ಮೂರನೇ ಆವೃತ್ತಿ ಮೈಸೂರಿನ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ಫೆಬ್ರುವರಿ 11 ಹಾಗೂ 12ರಂದು ನಡೆಯಲಿದೆ.

‘ಪುನೀತ್ ಅವರನ್ನು ನಾವು ಯಾವತ್ತಿದ್ದರೂ ಸಂಭ್ರಮಿಸಲು ಇಚ್ಛಿಸುತ್ತೇವೆ. ಈ ಬಾರಿಯ ಕೆಸಿಸಿಯಲ್ಲಿ ಅದ್ಧೂರಿಯಾಗಿ ಪುನೀತ್ ಅವರನ್ನು ಸಂಭ್ರಮಿಸಿಕೊಳ್ಳಲಿದ್ದೇ-ವೆ. ಖಂಡಿತವಾಗಿಯೂ, ಕೆಸಿಸಿಯಲ್ಲಿ ಪುನೀತ್ ಅವರ ನಿಧನದಿಂದ ಉಂಟಾದ ಶೂನ್ಯಸ್ಥಿತಿಯನ್ನು ಯಾರಿಂದಲೂ ತುಂಬಲು ಸಾಧ್ಯವಿಲ್ಲ’ ಎಂದು ಕೆಸಿಸಿ ಹೊಸ ಆವೃತ್ತಿ ಬಗ್ಗೆ ಸುದೀಪ್ ಮಾತಿಗಿಳಿದರು.

‘ಕೆಸಿಸಿ ಮೂರನೇ ಆವೃತ್ತಿಯಲ್ಲಿ ಆರು ತಂಡಗಳಿದ್ದು, ಜ.26ರಂದು ಆಟಗಾರರ ಆಯ್ಕೆ ಪ್ರಕ್ರಿಯೆ ನಡೆಯಲಿದೆ. ಕೆಸಿಸಿಯಲ್ಲಿ ಪಾಲ್ಗೊಳ್ಳಲು ಇಲ್ಲಿಯವರೆಗೂ 9 ಅಂತರರಾಷ್ಟ್ರೀಯ ಕ್ರಿಕೆಟ್ ಆಟಗಾರರು ಒಪ್ಪಿಗೆ ಸೂಚಿಸಿದ್ದು, ಈ ಪೈಕಿ ಆರು ಆಟಗಾರರನ್ನು ಆಯ್ಕೆ ಮಾಡಲಾಗುವುದು. ಆರು ತಂಡಗಳ ನಾಯಕರು ಯಾರು ಎನ್ನುವುದೂ ಜ.26ಕ್ಕೆ ತಿಳಿಯಲಿದೆ. ಈ ಬಾರಿಯ ಕೆಸಿಸಿಯಲ್ಲಿ ಶಿವರಾಜ್‌ಕುಮಾರ್ ಅವರು ಆಟ ಆಡುವುದು ಅನುಮಾನ. ಕ್ರಿಕೆಟ್ ಮೇಲೆ ಆಸಕ್ತಿ ಇರುವ ಬೇರೆ ಭಾಷೆಯ ನಟರು, ರಾಜಕಾರಣಿಗಳು, ಕಾರ್ಪೊರೇಟ್ ಕಂಪನಿಯವರೂ ಈ ಬಾರಿ ಕೆಸಿಸಿಯ ತಂಡಗಳಲ್ಲಿ ಇರಲಿದ್ದಾರೆ. ಕನ್ನಡ ಚಿತ್ರರಂಗದ ಪ್ರತಿಯೊಬ್ಬರನ್ನೂ ನಾವು ಆಹ್ವಾನಿಸಿದ್ದೇವೆ. ಬರದೇ ಇರುವವರ ಬಗ್ಗೆ ತಲೆಕೆಡಿಸಿಕೊಳ್ಳುವುದಿ-ಲ್ಲ’ ಎನ್ನುತ್ತಾರೆ ನಟ ಸುದೀಪ್. ‘ಮುಂದಿನ ದಿನಗಳಲ್ಲಿ ಫ್ಲಡ್‌ಲೈಟ್ಸ್ ವ್ಯವಸ್ಥೆ ಇರುವ ಎಲ್ಲ ನಗರಗಳಿಗೂ ಕೆಸಿಸಿ ಹೆಜ್ಜೆ ಇಡಲಿದೆ. ಕೋವಿಡ್ ಕಾರಣದಿಂದಾಗಿ ಕಳೆದೆರಡು ವರ್ಷ ಕೆಸಿಸಿ ನಡೆದಿರಲಿಲ್ಲ. 2023ರ ಅಂತ್ಯದಲ್ಲಿ ನಾಲ್ಕನೇ ಆವೃತ್ತಿ ಆಯೋಜಿಸುವ ಯೋಚನೆ ಇದೆ’ ಎಂದು ಹೇಳುತ್ತಾರೆ ಸುದೀಪ್.

ಟ್ರೈಲರ್ ಹಾದಿಯಲ್ಲಿ ‘19.20.21’

ಸರ್ಕಾರ, ಮೂಲನಿವಾಸಿಗಳು, ವ್ಯವಸ್ಥೆಯ ಜೊತೆಗಿನ ಸಂಘರ್ಷ, ಸಮಸ್ಯೆಗಳ ಸುತ್ತ ಹೆಣೆದಿರುವ ಕತೆ ‘19.20.21’. ಮಂಸೋರೆ ನಿರ್ದೇಶನದ ಚಿತ್ರವಿದು. ಚಿತ್ರದ ಟೀಸರ್‌ಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಜ. 27ರಂದು ಟ್ರೈಲರ್ ಬಿಡುಗಡೆಯಾಗ-ಲಿದೆ. ಸಾಮಾಜಿಕ ಥ್ರಿಲ್ಲರ್ ಕಥಾಹಂದರವನ್ನು ಈ ಚಿತ್ರ ಒಳಗೊಂಡಿದೆ. ರಂಗಭೂಮಿ ಕಲಾವಿದ ಶೃಂಗ ಬಿ.ವಿ. ಚಿತ್ರದ ಮುಖ್ಯ ಭೂಮಿಕೆಯಲ್ಲಿದ್ದಾರೆ. ಬಾಲಾಜಿ ಮನೋಹರ್, ಸಂಪತ್, ಎಂ.ಡಿ.ಪಲ್ಲವಿ, ಮಹದೇವ್ ಹಡಪದ್, ಉಗ್ರಂ ಸಂದೀಪ್ ಅವರು ತಾರಾಗಣದಲ್ಲಿದ್ದಾರೆ.

ಹರಿವು, ನಾತಿಚರಾಮಿ, ಆ್ಯಕ್ಟ್–1978ನಂತಹ ಭಿನ್ನ ಮತ್ತು ಪ್ರಬಲ ವಿಷಯಗಳನ್ನೊಳಗೊಂಡ ಚಿತ್ರಗಳನ್ನು ನೀಡಿರುವ ನಿರ್ದೇಶಕ ಮಂಸೋರೆ ಈ ಚಿತ್ರದ ಮೂಲಕವೂ ಅಂಥದ್ದೇ ಕಥೆಯನ್ನು ಹೇಳಲು ಹೊರಟಿದ್ದಾರೆ. ನೈಜ ಘಟನೆಗಳನ್ನು ಆಧರಿಸಿ ಈ ಚಿತ್ರದ ಕಥೆಯಿದೆ ಎಂಬ ಸುಳಿವನ್ನು ಟೀಸರ್ ನೀಡಿದೆ.



ಸಂಪತ್ ಮೈತ್ರೇಯ



ಎಂ.ಡಿ. ಪಲ್ಲವಿ

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net/

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಬಾಲಿವುಡ್ ನಟ ಶಾರುಕ್ ಖಾನ್ ಅವರ ಅಭಿನಯದ ‘ಪಠಾಣ್’ ಚಿತ್ರವನ್ನು ನಿಷೇಧಿಸಬೇಕು ಎಂಬ ವಿವಾದದ ನಡುವೆಯೇ, ಅವರು ಮದುವೆ ಸಮಾರಂಭವೊಂ-ದರಲ್ಲಿ ನೃತ್ಯ ಮಾಡಿದ್ದಾರೆ ಎನ್ನಲಾದ ವಿಡಿಯೊ ತುಣುಕು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ‘ಶಾರುಕ್ ಯಾರು. ತನ್ನ 60ನೇ ವಯಸ್ಸಿನಲ್ಲಿ ಯಾರದ್ದೋ ಮದುವೆ ಮಂಟಪದಲ್ಲಿ ಒಂದಿಷ್ಟು ಹಣ ಸಂಪಾದನೆಗಾಗಿ ಕುಣಿಯುವ ಕಾರ್ಮಿಕ. ಇದು ಶಾರುಕ್ ಯೋಗ್ಯತೆ. ಇದುವೇ ಆತನ ನಿಜವಾದ ವೃತ್ತಿ. ದುಡ್ಡಿನಿಂದ ಗೌರವವನ್ನು ಖರೀದಿಸಲಾಗದು’ ಎಂದು ಸಾಮಾಜಿಕ ಜಾಲತಾಣ ಬಳಕೆದಾರರೊಬ್ಬರು ಈ ವಿಡಿಯೊ ಜೊತೆಗೆ ಬರೆದಿದ್ದಾರೆ. ಆದರೆ, ಇದು ನಿಜವಲ್ಲ. ಈ ವಿಡಿಯೊದಲ್ಲಿರುವುದು ಶಾರುಕ್ ಹೋಲುವ ವ್ಯಕ್ತಿ.



ಶಾರುಕ್ ಅವರ ಚಹರೆಯನ್ನು ಹೋಲುವ ಇಬ್ರಾಹಿಂ ಖಾದ್ರಿ ಎಂಬುವರು ತಮ್ಮ ಇನ್‌ಸ್ಟಾಗ್ರಾಮ್ ಖಾತೆಯಲ್ಲಿ 52 ಸೆಕೆಂಡ್‌ನ ಈ ವಿಡಿಯೊವನ್ನು 2022ರ ಜುಲೈ 12ರಂದು ಅಪ್‌ಲೋಡ್ ಮಾಡಿದ್ದಾರೆ. ಇವರನ್ನೇ, ಬಾಲಿವುಡ್ ನಟ ಶಾರುಕ್ ಎಂದು ತಪ್ಪಾಗಿ ಅರ್ಥೈಸಿಕೊಂಡು ಪೋಸ್ಟ್ ಹಾಕಲಾಗಿದೆ ಎಂದು ‘ಇಂಡಿಯಾಟುಡೇ’ ವೆಬ್‌ಸೈಟ್ ವರದಿ ಮಾಡಿದೆ. ‘ಪಠಾಣ್’ ಚಿತ್ರವನ್ನು ನಿಷೇಧಿಸಬೇಕು ಎಂಬ ಅಭಿಯಾನವನ್ನು ಈ ವಿಡಿಯೊ ಜೊತೆ ತಳಕು ಹಾಕಲಾಗಿದೆ. ಈ ಹಿಂದೆ, ಶಾರುಕ್ ಅವರು ಜೈಲಿನಲ್ಲಿದ್ದ ತಮ್ಮ ಪುತ್ರ ಆರ್ಯನ್ ಅವರನ್ನು ಭೇಟಿಯಾಗಿದ್ದಾರೆ ಎನ್ನಲಾದ ವಿಡಿಯೊ ಸಹ ಹರಿದಾಡಿತ್ತು. ಶಾರುಕ್ ಹಾಗೂ ಅವರ ಪುತ್ರನನ್ನು ಹೋಲುವ ರೀತಿ, ಖಾದ್ರಿ ಹಾಗೂ ಅವರ ಸ್ನೇಹಿತ ಕಾಣಿಸಿಕೊಂಡಿದ್ದ ವಿಡಿಯೊವನ್ನೇ ನೈಜ ಎಂದು ಬಿಂಬಿಸಿ ಹಂಚಿಕೊಳ್ಳಲಾಗಿತ್ತು ಎಂದು ವೆಬ್‌ಸೈಟ್ ವರದಿ ಮಾಡಿದೆ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಬುಧವಾರ ಜನವರಿ 25, 2023

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯನ ಶಿಶಿರ ಋತು ತಿಥಿ: ಮಾಘ ಶುಕ್ಲ ಚತುರ್ಥಿ ಗಂ 12-35, ನಕ್ಷತ್ರ: ಪೂರ್ವಾಭಾದ್ರಾ ಗಂ. 20-05 ಯೋಗ: ಪರಿಘ ಗಂ. 18-15, ಕರಣ: ವಿಷ್ಟಿ ಗಂ. 12-35, ಮಕರ ಮಾಸದ 11 ನೇ ದಿನ. ರಾಹುಕಾಲ : ಮಧ್ಯಾಹ್ನ 12-00 -01-30
ಸೂರ್ಯೋದಯ : 07-01 ಸೂರ್ಯಾಸ್ತ : 06-24
ಮುಸ್ಲಿಂ ದಿನಾಂಕ : 02 ರಜಬ್
ಅದೃಷ್ಟ ಸಂಖ್ಯೆ : 1, 7

ಮೇಷ: ರಾಜಕೀಯ ವಿದ್ಯಮಾನಗಳಿಂದ ಓಡಾಟ ಅಧಿಕಗೊಳ್ಳುವುದು. ರಿಯಲ್ ಎಸ್ಟೇಟುದಾರರಿಗೆ ಉತ್ತಮ ಧನಲಾಭವಿರುವ ಅವಕಾಶಗಳಿಂದ ವ್ಯವಹಾರಗಳು ವೃದ್ಧಿ. ಹಣಕಾಸಿನ ಪರಿಸ್ಥಿತಿ ಉತ್ತಮಪಡಿಸಿಕೊಳ್ಳುವಿರಿ.

ವೃಷಭ: ನೂತನ ಕೆಲಸ ಕಾರ್ಯಗಳ ಆರಂಭಕ್ಕೆ ಮತ್ತು ಒಡಂಬಡಿಕೆಗಳಿಗೆ ಇಂದು ಸೂಕ್ತ ಕಾಲವಾಗಿರುತ್ತದೆ. ಕಾರ್ಯಗಳ ಒತ್ತಡದ ನಡುವೆಯೂ ಕುಟುಂಬದ ಸಮಸ್ಯೆಯತ್ತ ಗಮನ ನೀಡುವುದನ್ನು ಮರೆಯದಿರಿ.

ಮಿಥುನ: ಹೊಸ ವ್ಯವಹಾರದಲ್ಲಿ ಸ್ನೇಹಿತರ ಸಹಾಯ ಸಹಕಾರ ದೊರೆಯಲಿದೆ. ಖಾದಿ ಉದ್ಯಮದವರಿಗೆ ಸರ್ಕಾರದಿಂದ ಸೌಲಭ್ಯ ದೊರೆಯುವ ಅವಕಾಶಗಳಿದೆ. ಮಂಗಳ ಕಾರ್ಯದ ಯಶಸ್ಸಿಗಾಗಿ ಶ್ರೀ ಅನ್ನಪೂರ್ಣೇಶ್ವರಿಯನ್ನು ಧ್ಯಾನಿಸಿ.

ಕರ್ಕಾಟಕ: ಸರಿಯಾದ ಪರಿಶೀಲನೆ ಇಲ್ಲದೆ ಯಾವ ಕೆಲಸಗಳಲ್ಲೂ ಹೂಡಿಕೆ ಸಲ್ಲದು. ಚಿತ್ರ ವಿತರಕರಿಗೆ ಹೆಚ್ಚಿನ ವರಮಾನದ ಸಾಧ್ಯತೆ ಇದೆ. ಶ್ರೀ ಲಕ್ಷ್ಮಿ ಅಷ್ಟೋತ್ತರದ ಪಠಣೆಯಿಂದ ಸಂಪತ್ತು ಅಭಿವೃದ್ಧಿಯಾಗುವುದು.

ಸಿಂಹ: ಪ್ರಭಾವಶಾಲಿ ವ್ಯಕ್ತಿಯೊಂದಿಗಿನ ಭೇಟಿಯನ್ನು ತಳ್ಳಿ ಹಾಕದೆ ಅವರಿಂದ ವೃತ್ತಿ ಕ್ಷೇತ್ರಕ್ಕೆ ಲಾಭ ಉಂಟಾಗುವಂತೆ ನೋಡಿಕೊಳ್ಳುವ ಪ್ರಯತ್ನಮಾಡಿ. ನಿಮ್ಮ ವ್ಯವಹಾರ ಕ್ಷೇತ್ರಕ್ಕೆ ಸಂಬಂಧಿಸಿದ ರಕ್ಷಣಾ ದೇವತೆ ಆರಾಧಿಸಿ.

ಕನ್ಯಾ: ಧಾರ್ಮಿಕವಾಗಿ ಹೆಚ್ಚಿನ ಏಕಾಗ್ರತೆ ಹಾಗೂ ಧ್ಯಾನಗಳಿಂದ ಮಾನಸಿಕವಾಗಿ ಸದೃಢರಾಗುವಿರಿ. ಅಗತ್ಯ ವಸ್ತುಗಳ ಖರೀದಿಗೆ ಹಣ ವಿನಿಯೋ-ಗವಾಗುವುದು. ದಿನಗೂಲಿ ನೌಕರರಿಗೆ ಅನುಕೂಲಕರ ವಾತಾವರಣ ಸಿಗಲಿವೆ.

ತುಲಾ: ನಿನ್ನೆಯ ದಿನಕ್ಕಿಂತ ಕಾರ್ಯಭಾರದ ಒತ್ತಡ ಕಡಿಮೆಯಾಗುವುದು. ಮನೆಯವರೊಡನೆ ವಾಸಸ್ಥಳದ ಬದಲಾವಣೆ ಮಾಡಲು ಚರ್ಚೆ ನಡೆಸುವಿರಿ. ಔಷಧ ಖರೀದಿಗೆ ಯೋಚಿಸಬೇಡಿ, ಹಣಕ್ಕಿಂತ ಆರೋಗ್ಯವೇ ಮುಖ್ಯ.

ವೃಶ್ಚಿಕ: ವೃತ್ತಿ ತರಬೇತಿ ಹೊಂದಿರುವವರಿಗೆ ಈ ದಿನ ಒಂದು ಹಂತದ ಕೆಲಸ ಸಿಗಲಿದೆ. ಸಂಸ್ಥೆಯ ಆಂತರಿಕ ವಿಷಯಗಳಿಗೆ ಗಮನ ಕೊಡದಿರುವುದು ಒಳ್ಳೆಯದು. ಮೊಮ್ಮಕ್ಕಳ ಆಗಮನದಿಂದ ದೇಹಾಲಸ್ಯ ದೂರಾಗುವುದು.

ಧನು: ಕಳೆದುಹೋಗಿದ್ದ ವಸ್ತುಗಳು ಮತ್ತೆ ಪತ್ತೆಯಾಗಲಿದೆ. ಅದರಿಂದಾಗಿ ಸಂತಸ ಇಮ್ಮಡಿಗೊಳ್ಳುವುದು. ವ್ಯಾಪಾರಸ್ಥರು ಹೊಸ ತರದ ಯೋಜನೆಗಳನ್ನು ರೂಪಿಸಿಕೊಳ್ಳುವುದರಿಂದ ಹೆಚ್ಚಿನ ಗ್ರಾಹಕರ ಪರಿಚಯ ಪಡೆಯಬಹುದು.

ಮಕರ: ನಿರಾತಂಕವಾಗಿ ಕೊಟ್ಟ ಕೆಲಸ ಮಾಡಿಮುಗಿಸುವಿರಿ. ಪತ್ರಕರ್ತರಿಗೆ ಗಣ್ಯ ವ್ಯಕ್ತಿಗಳ ಭೇಟಿ ಹಾಗೂ ಅವರ ಸಂದರ್ಶನ ನಡೆಸುವ ಅವಕಾಶ ದೊರೆಯಲಿದೆ. ಧರ್ಮ ಕಾರ್ಯಗಳಲ್ಲಿ ಭಾಗವಹಿಸುವ ಯೋಗ ಸಿಗುವುದು.

ಕುಂಭ: ಈ ದಿನ ಸಾರ್ವಜನಿಕ ಹಿತಾಸಕ್ತಿಗಾಗಿ ಹಣ ಸಂಗ್ರಹ ಮಾಡುವುದು ಗೌರವಕ್ಕೆ ಚ್ಯುತಿಯನ್ನು ತರುತ್ತದೆ. ವೃತ್ತಿಗೆ ಬಹಳಷ್ಟು ಸಮಯವನ್ನು ಮೀಸಲಿಡ ಬೇಕಾಗಬಹುದು. ಮನೆಯ ದುರಸ್ತಿ ಕಾರ್ಯ ನಡೆಯುವುದು.

ಮೀನ: ಶಸ್ತ್ರವೈದ್ಯ ವೃತ್ತಿಯರಿಗೆ ಸೌಲಭ್ಯಗಳು ಹೆಚ್ಚಲಿದೆ. ನಿರುದ್ಯೋಗಿಗಳು ಬಂದ ಅವಕಾಶ ಒಪ್ಪಿಕೊಳ್ಳುವುದು ಸದ್ಯದ ಪರಿಸ್ಥಿತಿಗೆ ಉತ್ತಮ ಕಾಣುತ್ತದೆ. ಮದುವೆಯ ವಿಷಯದಲ್ಲಿ ಯೋಚಿಸಿ ನಿರ್ಧಾರ ತೆಗೆದುಕೊಳ್ಳಿರಿ.

ಬೆರಗಿನ ಬೆಳಕು



ಗುರುರಾಜ ಕರಜಗಿ

ನಿಜವಾದ ಸುಖಿ

ಜಗದ ಕಲ್ಯಾಣದೊಳಗಾತ್ಮಕಲ್ಯಾಣವನು |
ಜಗದ ಬೀದಿಗಳೊಳು ನಿಜಾತ್ಮಯಾತ್ರೆಯನು ||
ಜಗದ ಜೀವಿತದಿ ನಿಜ ಜೀವಿತದ ಪೂರ್ತಿಯನು |
ಬಗೆಯಲರಿತವನೆ ಸುಖಿ – ಮಂಕುತಿಮ್ಮ || 807 ||

ಪದ-ಅರ್ಥ: ಕಲ್ಯಾಣದೊಳಗಾತ್ಮಕಲ್ಯಾಣವನು = ಕಲ್ಯಾಣದೊಳಗೆ + ಆತ್ಮ + ಕಲ್ಯಾಣವನು, ಬೀದಿಗಳೊಳು = ಬೀದಿಗಳಲ್ಲಿ, ನಿಜಾತ್ಮಯಾತ್ರೆಯನು = ನಿಜ + ಆತ್ಮ + ಯಾತ್ರೆಯನು, ಬಗೆಯಲರಿತವನೆ = ಬಗೆಯಲು(ತಿಳಿಯಲು) + ಅರಿತವನೆ.

ವಾಚ್ಯಾರ್ಥ: ಜಗತ್ತಿನ ಕಲ್ಯಾಣದೊಳಗೆ ತನ್ನ ಆತ್ಮದ ಕಲ್ಯಾಣವನ್ನು, ತನ್ನ ಸ್ವಂತದ ಆತ್ಮದ ಯಾತ್ರೆಯನ್ನು ಜಗತ್ತಿನ ವ್ಯವಹಾರಗಳಲ್ಲಿ, ಜಗತ್ತಿನ ಜೀವನದ ವಿಧಾನಗಳಲ್ಲಿ ತನ್ನ ಜೀವಿತದ ಸಾಧನೆಯನ್ನು ಮಾಡಲು ತಿಳಿದವನೆ ಸುಖಿ.

ವಿವರಣೆ: ಶಿಶುನಾಳ ಶರೀಫ್‌ನ ಒಂದು ಬೆಡಗಿನ ತತ್ವಪದ ಹೀಗಿದೆ. ಸಂಸಾರದಿ ಸದ್ಗತಿ ಹೊಂದಿ
ಹವಣರಿತು ಮಾಯೆಯ ಜಯಿಸಿ
ಮರಣಗೆಲಿದವನೆ ಶಿವಯೋಗಿ || ಪ ||
ಭವಭಾರ ಕರ್ಮಗಳನು
ಬಯಸದೆ ಬ್ರಹ್ಮದೆ ಬೆರೆತು
ಬ್ರಹ್ಮಜ್ಞಾನವು ದೊರೆವತನಕ
ತ್ರಿನಯನನಾಶ್ರಯವ ಹಿಡಿದು
ಆವುದನು ಅರಿಯದೆ ಮುನ್ನ
ಅನುವರಿತು ಸವಿಗರಿದು
ವಿಷಯಗಳನೇ ನಿರಾಕರಿಸಿ
ಜವಗೆ ಸಿಕ್ಕದೆ ನಡೆವನೆ ಶಿವಯೋಗಿ .....


ಇದು ಒಬ್ಬ ಮಹಾನ್ ಶಿವಯೋಗಿ ಸಂಸಾರದಲ್ಲೇ ಇದ್ದು ಸರಿಯಾದ ನಡತೆಯಿಂದ ಮಾಯೆಯನ್ನು, ಮರಣವನ್ನು ಗೆದ್ದವನ ನಡೆ. ಅವನು ಸಂಸಾರದಲ್ಲೇ ಇದ್ದವನು, ತನ್ನ ನಡತೆಯಿಂದ ಮಾಯೆಯನ್ನು ಗೆದ್ದವನು. ಕರ್ಮದಲ್ಲೇ ಆತ ಇದ್ದಾನೆ, ಆದರೆ ಕರ್ಮದ ಫಲವನ್ನು ಅಪೇಕ್ಷಿಸದೆ, ಬ್ರಹ್ಮಜ್ಞಾನ ದೊರೆಯುವ ತನಕ ತ್ರಿನಯನನ ಅಂದರೆ ಶಿವನಿಗೆ ಶರಣು ಹೋಗಿ, ವಿಷಯಗಳನ್ನು ನಿರಾಕರಿಸಿ, ಯಮಪಾಶದಿಂದ ಪಾರಾಗುತ್ತಾನೆ ಶಿವಯೋಗಿ. ಅವನು ಮುಕ್ತನಾಗುತ್ತಾನೆ. ಈ ಪದದ ಸಾರ ತುಂಬ ಚೆನ್ನಾಗಿದೆ. ನಾನು ಮುಕ್ತನಾಗಬೇಕಾದರೂ ಅದಕ್ಕೆ ಸಾಧನವಾಗುವುದು ಇದೇ ಪ್ರಪಂಚ. ಪ್ರಪಂಚದಲ್ಲೇ ಇದ್ದು, ಸಾಧನೆ ಮಾಡಿ ಅದರಿಂದ ವಿಮುಕ್ತಿ ಹೊಂದಬೇಕು. ಕಗ್ಗ ಹೇಳುತ್ತದೆ, ನನ್ನ ಕಲ್ಯಾಣವನ್ನು ಜಗತ್ತಿನ ಕಲ್ಯಾಣದಲ್ಲೇ ಕಾಣಬೇಕು. ಯಾಕೆಂದರೆ ನಾನು ಅದರ ಹೊರಗಿಲ್ಲ. ನನ್ನ ಆತ್ಮದ ಉತ್ಕರ್ಷವಾಗುವುದು ಈ ಜಗತ್ತಿನ ವ್ಯವಹಾರಗಳ-ಲ್ಲೇ. ತನ್ನ ಜೀವನದ ಪರಮಸಾಧನೆ ಆಗುವುದೂ ಈ ಜಗದ ಜೀವಿತದಲ್ಲೇ. ಇದೊಂದು ಉಜ್ಜೀವನದ ಬಗೆ. ಇದೊಂದು ರೀತಿಯಲ್ಲಿ ಈಜಿ ನದಿದಾಟುವ ಬಗೆ. ನದಿ ದಾಟಬೇಕಾದರೆ ನೀರಿಗೇ ಹಾರಬೇಕು. ನೀರನ್ನು ಹಿಂದೆ ತಳ್ಳಿದಾಗ ಮುಂದೆ ಪ್ರಯಾಣ. ಅಂತೆಯೇ ಪ್ರಪಂಚದಲ್ಲೇ ಇರಬೇಕು. ಅದಕ್ಕೆ ಅಂಟಿಕೊಳ್ಳದೆ, ಹಿಂದೆ ತಳ್ಳುತ್ತ ಮುಂದೆ ಸಾಗುವ, ಅದರಲ್ಲೇ ಆನಂದವನ್ನು ಕಾಣುವವನೇ ನಿಜವಾದ ಸುಖಿ.

ಪದಬಂಧ 5210

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಆ ಮನೆ ಮುಂದಿರುವ ಗಜ (2)
3.ಈತ ಹಾಸ್ಯಗಾರ (4)
5.ಪರುಷ ಹಿಡಿದಿರುವ ಗಂಡು ವ್ಯಕ್ತಿ! (3)
7.ಹಜಾರವನ್ನು ಹೀಗೂ ಹೇಳುವರು (4)
9.ಬೈಯ್ಯಲು ಸೂಕ್ತವಾದ ವಿಸ್ತಾರವಾದ ಜಾಗ! (3)
10.ಸರದ ಹತ್ತಿರವಿರುವ ಕಬ್ಬಿಣದ ಸಲಾಕೆ (3)
11.ಸೂರ್ಯನ ಇನ್ನೊಂದು ಹೆಸರು (4)
13.ನಡುಕ ಇಲ್ಲಿ ಕಾಣುತ್ತಿದೆ (3)
15.ಕರದಲ್ಲಿರುವ ಚಿನ್ನ (4)
16. ಅನುಗ್ರಹದಲ್ಲಿರುವ ಆಕಾಶಚರ ಕಾಣುತ್ತಿದೆಯೇ? (2)

ಮೇಲಿಂದ ಕೆಳಕ್ಕೆ
2.ಒನಪು ತೋರಿದಾಗ ಬಂದಿರುವ ಸ್ಮರಣೆ (3)
3.ಇತರರಿಂದ ಬೇರೆಯಾಗಿಸುವ ಗುಣ (3)
4.ಪರಿಷ್ಕೃತವಾಗದಿರುವ ಪ್ರತಿ (3)
6.ಮಾಲು ತರುವಾಗ ತಲೆಗೆ ಸುತ್ತಿಕೊಂಡ ಬಟ್ಟೆ (3)
8.ಛಾಯೆ ಇಲ್ಲಿ ಬಿದ್ದಿದೆ (3)
9. ಬದಿಯಲ್ಲಿರುವ ಜೈನರ ದೇವಾಲಯ (3)
10.ಹತ್ತಿರಕ್ಕೊಂದು ಪರ್ಯಾಯ ಪದ (3)
12.ತಿರುಗಿಸಿದರೂ ಇದು ಬಂಗಾರ (3)
13.ಕೊನೆಗೆ ಬೆಲೆಯಿದ್ದಾಗ ಕಾಣಿಸಿರುವ ಕಣಿವೆ (3)
14.ಉಗುರಿನ ತುದಿ (3)



5209ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅವಕಾಶ 3.ವಿಕೋಪ
4.ವಸ್ತುಸ್ಥಿತಿ 6.ವ್ಯಸನ
7.ಅಧಿಕಾರಿ
8.ತಪ್ಪಲೆ 9.ಸರಸ್ವತಿ
12.ಬುದ್ಧಿದ 13.ವನಚರ
15.ಗಹ್ವರ 16.ಮಹಾರಾಜ

ಮೇಲಿಂದ ಕೆಳಕ್ಕೆ:
1.ಅಪವ್ಯಯ 2.ಶವ
3.ವಿಭ್ರಮ 5.ತಿಜೋರಿ
7.ಅಲೆ 8.ತತಿ
9.ಸದ್ಭಾವ 10.ಮದಗಜ
11.ಅಧರ 14.ಠಮ

ಸುಡೊಕು 5596


	7			2		3		
3		6	5		8			
	4			7		2		6
	6				5			9
9		1		8			6	2
4			2			1		
		2	3		7		5	4
7	1					6		
5		3	4		2			1

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5595ಸುಡೊಕು

4	9	7	1	8	3	5	2	6
2	3	1	4	6	5	9	7	8
6	8	5	7	9	2	4	1	3
9	2	4	6	7	8	1	3	5
5	7	3	2	4	1	8	6	9
8	1	6	3	5	9	7	4	2
1	6	9	5	2	7	3	8	4
3	4	8	9	1	6	2	5	7
7	5	2	8	3	4	6	9	1

ತಂತ್ರಜ್ಞಾನ



ಸೂರ್ಯನ ಬೆಳಕಿನಿಂದ ಜಲಜನಕ ಆಮ್ಲಜನಕ

ನೇಸರ ಕಾಡನಕುಪ್ಪೆ

ಇತ್ತೀಚಿನ ದಿನಗಳಲ್ಲಿ ವಿದ್ಯುಚ್ಚಾಲಿತ ವಾಹನಗಳ ಬಳಕೆ ಹೆಚ್ಚಾಗುತ್ತಿದೆ. ಸಾಂಪ್ರದಾಯಿಕ ಇಂಧನದ ಬೆಲೆ ಹೆಚ್ಚಳ; ಜೊತೆಗೆ ಕೊಂಚ ಪರಿಸರ ಕಾಳಜಿ ಇದಕ್ಕೆ ಕಾರಣ. ಭೂಮಿಯ ವಾತಾವರಣದಲ್ಲಿ ಹೇರಳವಾಗಿರುವ ಜಲಜನಕದಂತಹ ಅನಿಲಗಳನ್ನು ಬಳಸಿಕೊಂಡೂ ವಾಹನ ಚಾಲನೆ, ವಿದ್ಯುತ್ ಉತ್ಪಾದನೆಗೆ ಆದ್ಯತೆ ಈಗ ಹೆಚ್ಚಿದೆ. ಈ ಹಿನ್ನೆಲೆಯಲ್ಲಿ ಹೊಸ ಸಂಶೋಧನೆಯೊಂದಾಗಿದೆ. ಸೂರ್ಯನ ಬೆಳಕನ್ನು ಬಳಸಿಕೊಂಡು ನೀರನ್ನು ಆಮ್ಲಜನಕ ಹಾಗೂ ಜಲಜನಕವಾಗಿ ಬೇರ್ಪಡಿಸಿ ಶಕ್ತಿಯಾಗಿ ಬಳಸಿಕೊಳ್ಳುವ ಹೊಸ ತಂತ್ರಜ್ಞಾನ ದೊರೆತಿದೆ. ಅಮೆರಿಕದ ಮಿಶಿಗನ್ ವಿಶ್ವವಿದ್ಯಾನಿಲಯದ ಪರಿಸರ ಹಾಗೂ ಇಂಧನ ವಿಜ್ಞಾನಿಗಳು ಈ ಸಂಶೋಧನೆಯ ರೂವಾರಿಗಳು.

ಸಸ್ಯಗಳು ಪತ್ರಹರಿತ್ತನ್ನು ಬಳಸಿಕೊಂಡು ದ್ಯುತಿಸಂಶ್ಲೇಷಣ ಕ್ರಿಯೆಯನ್ನು ನಡೆಸುವ ಪ್ರಕ್ರಿಯೆಯನ್ನೇ ನಕಲು ಮಾಡಿ, ಕೃತಕವಾದ ಫಲಕಗಳನ್ನು ಸೃಷ್ಟಿಸಿದ್ದಾರೆ. ಈ ಫಲಕಗಳ ಮೇಲೆ ನೀರನ್ನು ಹರಿಸಿ ಸೂರ್ಯನ ಶಾಖವನ್ನು ಬಳಸಿಕೊಂಡು ವಿಭಜಿಸಿ, ಅನಿಲವನ್ನು ಪರಿಣಾಮಕಾರಿಯಾಗಿ ಸಂಗ್ರಹಿಸುವ ಸಾಧನಗಳನ್ನು ಅಳವಡಿಸಿದ್ದಾರೆ.

ನೀರನ್ನು ಯಾವುದೇ ಶಾಖದ ಮೂಲದಿಂದಲೂ ಆವಿ ಮಾಡಬಹುದು. ಆದಿಮಾನವನೂ ಸೌದೆಯಿಂದ ನೀರನ್ನು ಕಾಯಿಸಿ ಪ್ರಯೋಗಿಸಿದ್ದನು. ಈಗಲೂ ಈ ಪುರಾತನ ಪದ್ಧತಿ ಚಾಲ್ತಿಯಲ್ಲಿದೆ. ಕೈಗಾರಿಕಾ ಯುಗದ ಬಳಿಕ ಕಲ್ಲಿದ್ದಲು, ಪೆಟ್ರೋಲಿಯಂ ಇಂಧನಗಳನ್ನು ಬಳಸಿ ನೀರನ್ನು ಕಾಯಿಸುವ ವಿಧಾನ ಪ್ರಸಿದ್ಧವಾಯಿತು. ಆದರೆ, ಇಲ್ಲಿನ ಸವಾಲಿರುವುದು ಕೇವಲ ನೀರನ್ನು ಕಾಯಿಸುವುದಲ್ಲ. ನೀರನ್ನು ಕಾಯಿಸಿದರೆ ನೀರು ಬಿಸಿಯಾಗಿ ದ್ರವರೂಪವನ್ನು ಬದಲಿಸಿಕೊಳ್ಳುವುದೇ ಹೊರತು ಆಮ್ಲಜನಕ, ಜಲಜನಕವಾಗಿ ಪರಿವರ್ತನೆಯಾಗದು. ಅದು ಕೇವಲ ಅನಿಲರೂಪ ಪಡೆಯುತ್ತದೆಯಷ್ಟೇ. ಅದು ತಂಪಾದಾಗ ಮತ್ತೆ ನೀರಾಗಿ ರೂಪ ಪಡೆಯುತ್ತದೆ. ಶಾಖದ ಮೂಲಕವೇ ಆಮ್ಲಜನಕ ಹಾಗೂ ಜನಜನಕವನ್ನು ಬೇರ್ಪಡಿಸಬೇಕಾದರೆ ನೀರನ್ನು 500ರಿಂದ 2000 ಡಿಗ್ರಿ ಸೆಲ್ಷಿಯಸ್ ವರೆಗೆ ಕಾಯಿಸಬೇಕಾಗುತ್ತದೆ. ಈ ಪ್ರಕ್ರಿಯೆ ತೀರಾ ದುಬಾರಿ ಹಾಗೂ ಪರಿಸರಕ್ಕೆ ಹಾನಿಕಾರಿ. ಅಲ್ಲದೇ, ಬೇರ್ಪಟ್ಟ ಅನಿಲದ ಬಳಕೆಯೂ ಕಷ್ಟ.

ಶೇ 9ರಷ್ಟು ಪರಿಣಾಮಕಾರಿ: ಹಾಗಾಗಿ, ಆಮ್ಲಜನಕ ಹಾಗೂ ಜನಜನಕವನ್ನು ನೀರಿನಿಂದ ಹೊರತೆಗೆಯಬೇಕಾದರೆ, ‘ಎಲೆಕ್ಟ್ರೋಲಿಸಿಸ್’ ಎಂಬ ವಿಧಾನವನ್ನು ಬಳಸಲಾಗುತ್ತದೆ. ಆನೋಡ್ ಹಾಗೂ ಕ್ಯಾಥೋಡ್‌ಗಳ ಸಹಾಯದಿಂದ ವಿದ್ಯುತ್ ಹರಿಸಲಾಗುತ್ತದೆ. ಆಗ ಆನೋಡ್ ಬಳಿಗೆ ಆಮ್ಲಜನಕವೂ ಕ್ಯಾಥೋಡ್ ಬಳಿಗೆ ಜಲಜನಕದ ಅಣುಗಳು ಶೇಖರಗೊಳ್ಳುತ್ತವೆ. ಇದು ಈಗ ಬಳಕೆಯಲ್ಲಿರುವ ವೈಜ್ಞಾನಿಕ ಪದ್ಧತಿ. ಈ ಮಾದರಿಗೆ ಮಾರ್ಪಾಟುಗಳನ್ನು ಮಾಡಿರುವ ಮಿಶಿಗನ್ ವಿಶ್ವವಿದ್ಯಾನಿಲಯದ ವಿಜ್ಞಾನಿಗಳು ಎಲೆಕ್ಟ್ರೋಲಿಸಿಸ್ ವಿಧಾನಕ್ಕೆ ಸೌರ ವಿದ್ಯುತ್ ಬಳಸಿದ್ದಾರೆ. ಈ ಪ್ರಯೋಗದಲ್ಲಿ ಈ ಹೊಸ ವಿಧಾನವು ಹಳೆಯ ವಿಧಾನಕ್ಕಿಂತ ಶೇ 9ರಷ್ಟು ಹೆಚ್ಚು ಪರಿಣಾಮಕಾರಿ ಎಂದು ಸಾಬೀತಾಗಿರುವುದು ವಿಶೇಷ.

ಈ ಸಂಶೋಧನೆಯ ಮಹತ್ವವೇನೆಂದರೆ, ದ್ಯುತಿಸಂಶ್ಲೇಷಣ ಕ್ರಿಯೆಯನ್ನು ಬಳಸುತ್ತಿರುವ ಕಾರಣ ಶೂನ್ಯ ಪರಿಸರ ಮಾಲಿನ್ಯವಾಗುತ್ತದೆ. ಜೊತೆಗೆ, ಸೂರ್ಯನ ಶಕ್ತಿ ಅನಿಯಮಿತ. ಹಾಗಾಗಿ, ಇದು ಬಹುತೇಕ ಉಚಿತ ತಂತ್ರಜ್ಞಾನ. ‘ಇದಕ್ಕೂ ಮಿಗಿಲಾಗಿ, ಅನಿಲವನ್ನು ಬೇರ್ಪಡಿಸಲು ಬಳಸುವ ಸೆಮಿಕಂಡಕ್ಟರ್ ಹಾಗೂ ಎಲೆಕ್ಟ್ರೋಲೈಟ್ ಮೆಂಬ್ರೇನ್‌ಗಳನ್ನು ಗಾತ್ರದಲ್ಲಿ ನೂರುಪಟ್ಟು ಕುಗ್ಗಿಸಲಾಗಿದೆ. ಹಾಗಾಗಿ, ಸ್ಥಳವನ್ನು ಉಳಿಸುವ ಅವಕಾಶ ಹೆಚ್ಚು. ಇದರಿಂದಾಗಿ ಸಣ್ಣ ಸ್ಥಳಾವಕಾಶದಲ್ಲೇ ಅನಿಲ ಸ್ಥಾವರನ್ನು ಸ್ಥಾಪಿಸಬಹುದು. ಈಗಿನಂತೆ ಒಂದು ದೊಡ್ಡ ಕಾರ್ಖಾನೆಯೇ ಬೇಕು ಎಂದೇನಿಲ್ಲ’ ಎಂದು ವಿಶ್ವವಿದ್ಯಾನಿಲಯದ ಎಲೆಕ್ಟ್ರಿಕಲ್ ಮತ್ತು ಕಂಪ್ಯೂಟರ್ ಎಂಜಿನಿಯರಿಂಗ್ ಪ್ರಾಧ್ಯಾಪಕ ಹಾಗೂ ವಿಜ್ಞಾನಿ ಜೆಟಿಯನ್ ಮಿ ಹೇಳಿದ್ದಾರೆ. ಉತ್ಪಾದನೆಯಾದ ಆಮ್ಲಜನಕ ಹಾಗೂ ಜಲಜನಕವನ್ನು ಎಂದಿನಂತೆ ಅಗತ್ಯ ಕೆಲಸಗಳಿಗೆ ಬಳಸಿಕೊಳ್ಳಬಹುದು. ಕೋವಿಡ್–19 ಬಳಿಕ ವೈದ್ಯಕೀಯ ಬಳಕೆಗೆ ಈಗ ಆಮ್ಲಜನಕದ ಬಳಕೆ ಹೆಚ್ಚಾಗಿದೆ; ಅಲ್ಲದೇ, ಆಮ್ಲಜನಕವನ್ನು ಹೆಚ್ಚುವರಿಯಾಗಿ ಸಂಗ್ರಹಿಸಿಟ್ಟುಕೊಳ್ಳುವ ಪದ್ಧತಿಯೂ ಸೃಷ್ಟಿಯಾಗಿದೆ. ಜೊತೆಗೆ, ಕೈಗಾರಿಕಾ ಬಳಕೆಗೂ ಆಮ್ಲಜನಕ ಬೇಕಿದೆ. ಜಲಜನಕ ವಾಹನ ಕ್ಷೇತ್ರ ಹಾಗೂ ಕೈಗಾರಿಕಾ ಕ್ಷೇತ್ರದಲ್ಲಿ ಬಳಕೆಯಾಗುತ್ತಿದೆ. ಬಾಹ್ಯಾಕಾಶ ಉಡಾವಣಾ ರಾಕೆಟ್‌ಗಳಿಗೆ ಬೇಕಾಗುವ ಅಗಾಧ ಪ್ರಮಾಣದ ಜಲಜನಕವನ್ನು ಪರಿಸರದಿಂದ ಸಂಗ್ರಹಿಸುವ ವಿಧಾನ ಇದರಿಂದ ಸರಳವಾಗಲಿದೆ. ಇಸ್ರೋ, ನಾಸಾ ಮಾದರಿಯ ವಿಜ್ಞಾನ ಸಂಸ್ಥೆಗಳಿಗೆ ಈ ಸಂಶೋಧನೆ ವರದಾನವಾಗಲಿದೆ ಎಂದು ವಿಜ್ಞಾನಿಗಳು ಅಭಿಪ್ರಾಯಪಟ್ಟಿದ್ದಾರೆ. ಅಲ್ಲದೇ, ಫ್ಯೂಯೆಲ್ ಸೆಲ್ ತಂತ್ರಜ್ಞಾನ ಬಳಸಿ ಜಲಜನಕದಿಂದ ವಿದ್ಯುತ್ತನ್ನು ಸಹ ಉತ್ಪಾದಿಸಬಹುದು. ಈ ವಿದ್ಯುತ್ ವಾಹನಗಳಿಗೂ ಬಳಕೆಯಾಗಬಹುದು.

ಸ್ಥಳೀಯ ಉದ್ಯಮಿಗಳಿಗೆ ಸ್ವಾವಲಂಬನೆ: ಜೊತೆಗೆ ಸ್ಥಳೀಯ ಉದ್ಯಮಿಗಳಿಗೆ, ಸಣ್ಣ ಕೈಗಾರಿಕೋದ್ಯಮಿಗಳಿಗೆ ಈ ಸಂಶೋಧನೆ ಸಹಾಯ ಮಾಡಲಿದೆ. ಈ ತಂತ್ರಜ್ಞಾನದ ಮೂಲಕ ಅನಿಲ ಘಟಕಗಳನ್ನು ಸ್ಥಾಪಿಸಲು ಹೆಚ್ಚು ಹಣ ಮತ್ತು ಜಾಗ ಬೇಕಾಗಿಲ್ಲ. ಸೌರಫಲಕಗಳನ್ನು ಅಳವಡಿಸುವ ಜಾಗ ಬೇಕಷ್ಟೇ. ಕೃಷಿಯೇತರ ಭೂಮಿ, ಬರಡು ಭೂಮಿಗಳನ್ನು ಈ ರೀತಿಯ ಘಟಕಗಳನ್ನಾಗಿ ಪರಿವರ್ತಿಸಬಹುದು. ಒಂದು ಸಣ್ಣ ಕೈಗಾರಿಕಾ ಶೆಡ್ ಇದ್ದಲ್ಲಿ ಅನಿಲ ಉತ್ಪಾದನೆ ಮಾಡಿಕೊಳ್ಳಬಹುದು ಎನ್ನುತ್ತಾರೆ, ಹೊಸ ತಂತ್ರಜ್ಞಾನದಿಂದ ಅಗ್ಗದ ಜಲಜನಕ ಉತ್ಪಾದನೆ ಕೃತಿಯ ಕರ್ತೃ ಹಾಗೂ ವಿಜ್ಞಾನಿ ಪೆಂಗ್ ಝೌ. ❖

ಮಿಂಚಿಗೆ ಬೆಳಕೇ ತಿರುಮಂತ್ರ!



ಕೊಳ್ಳೇಗಾಲ ಶರ್ಮ

ಮಿಂಚು, ಸಿಡಿಲು ಅಪರಿಚಿತವೇನಲ್ಲ. ಹಾಗೆಯೇ ಸಿಡಿಲು ಬಡಿದು ಜನರು ಮರಣಿಸುವುದು, ಎಲೆಕ್ಟ್ರಾನಿಕ್ ಸಾಮಗ್ರಿಗಳು ಹಾಳಾಗುವುದು ಕೂಡ ಹೊಸತೇನಲ್ಲ. ಸಿಡಿಲು ಬಡಿಯದಂತೆ ಕಾಪಾಡುವಂತಹ ಸಾಧನವಿದ್ದರೆ ಎಷ್ಟು ಚೆನ್ನ ಅಲ್ಲವೇ? ಕೃತಕವಾಗಿ ಮಿಂಚೊಂದನ್ನು ಸೃಷ್ಟಿಸಿ, ಸಿಡಿಲು ಬಡಿಯದಂತೆ ತಡೆಯುವ ವಿಶಿಷ್ಟ ಪ್ರಯೋಗವೊಂದನ್ನು ಫ್ರೆಂಚ್ ವಿಜ್ಞಾನಿಗಳು ಮಾಡಿದ್ದಾರೆಂದು ‘ನೇಚರ್ ಫೋಟೋನಿಕ್ಸ್’ ವರದಿ ಮಾಡಿದೆ.



ಸಿಡಿಲು ಎಂದರೆ ಇನ್ನೇನಲ್ಲ. ಮೋಡಗಳಲ್ಲಿ ಕೂಡಿಕೊಂಡಿರುವ ಅಗಾಧವಾದ ವಿದ್ಯುತ್ತು ಭೂಮಿಗೆ ಇಳಿಯುವುದನ್ನೇ ಸಿಡಿಲು ಎನ್ನುತ್ತೇವೆ. ಮಿಂಚು ಈ ಸಿಡಿಲಿನ ಬಿಂಗ. ಅರ್ಥಾತ್, ವಿದ್ಯುತ್ತು ಹೀಗೆ ಗಾಳಿಯಲ್ಲಿ ಹರಿದುಕೊಂಡು ಬರುವಾಗ ಉಂಟಾಗುವ ಬೆಳಕು. ಬ್ಯಾಟರಿಯ ಎರಡು ತುದಿಗಳನ್ನು ಒಂದು ತಂತಿಯಿಂದ ಮುಟ್ಟಿದಾಗ ಸಿಡಿಯುವ ಕಿಡಿಯಂತೆಯೇ ಇದು ಕೂಡ. ಆದರೆ ಮಹಾ ಪ್ರಬಲ ಕಿಡಿ ಎಂದು ಹೇಳಬಹುದಷ್ಟೆ.

ಬ್ಯಾಟರಿಯ ಎರಡು ಧ್ರುವಗಳನ್ನು ಸೇರಿಸಿದಾಗ ಕಿಡಿ ಹಾರುವುದಕ್ಕೆ ಕಾರಣ, ಎರಡೂ ಧ್ರುವಗಳಲ್ಲಿ ವಿರುದ್ಧ ಬಗೆಯ ವಿದ್ಯುತ್ ಆವೇಶ ಅಥವಾ ಛಾರ್ಜು ಇರುತ್ತವೆ. ಇವು ಒಂದಿನ್ನೊಂದನ್ನು ಕೂಡಿದಾಗ ವಿದ್ಯುತ್ತು ಹರಿಯುತ್ತದೆ. ಅತಿ ಸಮೀಪ ಬಂದಾಗ ಕೆಲವೊಮ್ಮೆ ಗಾಳಿಯಲ್ಲಿ ಕಿಡಿ ಸಿಡಿದಂತೆ ಸಿಡಿದು ಮತ್ತೊಂದು ಧ್ರುವವನ್ನು ಸೇರುತ್ತವೆ.

ಮಿಂಚಿನಲ್ಲಿ ಆಗುವುದೂ ಹೀಗೆಯೇ. ಹಲವು ಕಾರಣಗಳಿಂದಾಗಿ ಮೋಡಗಳಲ್ಲಿ ಕೆಲವದರ ಮೇಲೆ ವಿದ್ಯುದಾವೇಶ ಆಗಿರುತ್ತದೆ. ಅದು ತನ್ನ ಬಳಿಯಲ್ಲಿರುವ ಇನ್ನೊಂದು ಮೋಡದಲ್ಲಿ ವಿರುದ್ಧ ಬಗೆಯ ಛಾರ್ಜು ಬಂದು ಒಟ್ಟಾಗುವಂತೆ ಆಕರ್ಷಿಸುತ್ತದೆ. ಒಂದು ವೇಳೆ ಈ ಮೋಡಗಳ ನಡುವೆ ಒಂದು ತಂತಿಯೋ ಅಥವಾ ವಿದ್ಯುತ್ ಹರಿಯಬಲ್ಲಂತ ಹಾದಿ ಏನಾದರೂ ಸೃಷ್ಟಿಯಾದರೆ ಆಗ ಮೋಡದಿಂದ ಮೋಡಕ್ಕೆ ಕಿಡಿ ಹಾರುತ್ತದೆ. ಅದನ್ನೇ ‘ಮಿಂಚು’ ಎನ್ನುತ್ತೇವೆ. ಒಂದು ವೇಳೆ ಇದೇ ವಿದ್ಯುತ್ತು ನೇರವಾಗಿ ಭೂಮಿಯನ್ನೋ, ಭೂಮಿಯಲ್ಲಿರುವ ಮರ, ಗೋಪುರ ಮೊದಲಾದ ವಸ್ತುಗಳನ್ನು ತಾಕಿ, ನೆಲದೊಳಗೆ ಹರಿದು ಹೋದಾಗ ‘ಸಿಡಿಲು ಬಡಿಯಿತು’ ಎನ್ನುತ್ತೇವೆ.

ಸಿಡಿಲು ಬಡಿಯುವ ಮುನ್ನ ಮೋಡಗಳು ದಟ್ಟವಾಗುವುದು ಗೊತ್ತಾಗಬಹುದು. ಆದರೆ ಆ ಮೋಡದಿಂದ ಎಲ್ಲಿ, ಯಾವ ಜಾಗಕ್ಕೆ ವಿದ್ಯುತ್ತು ಹರಿಯುತ್ತದೆ ಎನ್ನುವುದನ್ನು ಊಹಿಸಲಾಗದು. ಇದು ಗೊತ್ತಾಗುವಂತಿದ್ದರೆ ಸಿಡಿಲು ಬಡಿಯದಂತೆ ರಕ್ಷಿಸಿಕೊಳ್ಳುವುದು ಸುಲಭವಾಗುತ್ತಿತ್ತು. ಸಿಡಿಲಿನಿಂದ ರಕ್ಷಣೆ ಕೊಡಬಲ್ಲ ಸಾಧನಗಳು ಇಲ್ಲವೆಂತಲ್ಲ. ಇವೆ. ‘ಫ್ರಾಂಕ್ಲಿನ್ ಅರೆಸ್ಟರ್’ ಎನ್ನುವ ಸುಮಾರು ಮುನ್ನೂರು ವರ್ಷಗಳ ಹಿಂದೆ ಅಮೆರಿಕನ್ ವಿಜ್ಞಾನಿ ಬೆಂಜಮಿನ್ ಫ್ರಾಂಕ್ಲಿನ್ ರೂಪಿಸಿದ ಸಾಧನವಿದೆ. ಎತ್ತರದ ಗೋಪುರಗಳು, ಕಟ್ಟಡಗಳ ತುದಿಯಲ್ಲಿ ಒಂದು ಚೂಪಾದ ಸರಳಿನ ರೂಪದಲ್ಲಿ ಇದನ್ನು ನೆಟ್ಟಿರುತ್ತಾರೆ. ಇದರಿಂದ ನೇರವಾಗಿ ನೆಲಕ್ಕೆ ಭಾರೀ ಕೇಬಲ್ಲೊಂದನ್ನು ಹರಿಸಿರುತ್ತಾರೆ. ಮೋಡದಿಂದ ಹರಿಯುವ ವಿದ್ಯುತ್ತೇನಾದರೂ ಕಟ್ಟಡದ ಬಳಿ ಸುಳಿದಲ್ಲಿ, ಅದು ನೆಲಕ್ಕೇ ನೇರವಾಗಿ ಹೋಗುವಂತೆ ಈ ಸಾಧನ ಹಾದಿ ಮಾಡಿಕೊಡುತ್ತದೆ. ಹಾದಿ ಸರಾಗವಾಗಿದ್ದಾಗ ವಿದ್ಯುತ್ತು ತೊಂದರೆ ಕೊಡುವುದಿಲ್ಲ; ನಷ್ಟವಾಗುವುದು ಉಳಿಯುತ್ತದೆ.

ಹಾಗಿದ್ದರೆ ಮೋಡದಿಂದ ವಿದ್ಯುತ್ತು ನೇರವಾಗಿ ಈ ಅರೆಸ್ಟರಿಗೇ ಹರಿಯುವಂತೆ ಮಾಡಿದರೆ, ಅರೆಸ್ಟರ್ ಇಲ್ಲದ ಕಟ್ಟಡಗಳನ್ನೂ ಕಾಪಾಡಬಹುದಲ್ಲ? ಇದು ಫ್ರೆಂಚ್ ಇಂಜಿನಿಯರ್ ಆರಿಲಿಯ ಹೋವರ್ಡರ ತಂಡದ ಯೋಚನೆ. ಇದಕ್ಕಾಗಿ ಇವರು ಲೇಸರನ್ನು ಬಳಸಿದ್ದಾರೆ. ಲೇಸರು ಪ್ರಬಲವಾದ ಬೆಳಕಷ್ಟೆ. ಇದು ಹಾಯುವಾಗ ಗಾಳಿಯಲ್ಲಿ ಸ್ವಲ್ಪ ಮಟ್ಟಿಗೆ ವಿದ್ಯುದಾವೇಶವನ್ನು ಉಂಟುಮಾಡುತ್ತದೆ ಎಂದು ತಿಳಿದಿತ್ತು. ಸ್ವಲ್ಪ ವಿದ್ಯುದಾವೇಶ ಇದ್ದರೆ, ಮಿಂಚು ಅಂತಹ ಗಾಳಿಯಲ್ಲಿ ಹಾಯುತ್ತದೆ. ಮುಂದಿನ ಹಾದಿಯಲ್ಲಿ ಆವೇಶವನ್ನುಂಟುಮಾಡುತ್ತದೆ. ಹೀಗೆ ಹಾದಿ ಮಾಡಿಕೊಂಡು ಮಿಂಚು ಮುಂದೆ ಸಾಗುತ್ತದೆ. ಮಿಂಚಿನ ಹಾದಿಯನ್ನು ನಾವು ಊಹಿಸಲು ಆಗದೇ ಇರುವುದಕ್ಕೆ ಇದೇ ಕಾರಣ. ನಿರ್ದಿಷ್ಟ ದಿಕ್ಕಿನಲ್ಲಿ ವಿದ್ಯುದಾವೇಶ ಉಂಟಾಗುವುದಿಲ್ಲ. ಹೀಗಾಗಿ ಮಿಂಚು ಹೇಗೆಂದರೆ ಹಾಗೆ ಚಲಿಸುತ್ತದೆ. ಕೆಲವೊಮ್ಮೆ ಮೋಡಗಳಲ್ಲಿಯೇ ಕೊನೆಯಾಗುತ್ತದೆ. ಕೆಲವೊಮ್ಮೆ ಮರಗಿಡಗಳನ್ನು ತಾಕುತ್ತದೆ. ಕೆಲವೊಮ್ಮೆ ಮನುಷ್ಯರನ್ನೂ ಮುರುಟಿಸುತ್ತದೆ.

ಲೇಸರನ್ನೇ ಕ್ಷಿಪ್ರವಾಗಿ ಮಿನುಗಿಸಿ, ಒಂದರ ಹಿಂದೊಂದರಂತೆ ಹೀಗೆ ವಿದ್ಯುದಾವೇಶ ಇರುವ ಗಾಳಿಯ ಹಾದಿಯನ್ನು ರೂಪಿಸಬಹುದೆ? ಹಾಗೆ ರೂಪಿಸಿದ ಗಾಳಿಯಲ್ಲಿ ಮೋಡಗಳಿಂದ ವಿದ್ಯುತ್ತು ಹರಿಯಬಲ್ಲುದೇ ಎಂದು ಹೋವರ್ಡ್ ತಂಡ ಪರೀಕ್ಷಿಸಿದೆ. ಸ್ವಿಟ್ಜರ್ಲೆಂಡಿನ ಬೆಟ್ಟದ ಮೇಲಿದ್ದ ಅತಿ ಎತ್ತರದ ಟೆಲಿಫೋನು ಗೋಪುರದ ಪಕ್ಕದಲ್ಲಿಯೇ ಹಲವು ಟೆರಾವಾಟ್ ಶಕ್ತಿಯ ಲೇಸರು ಬೆಳಕನ್ನು ಮಿಣುಕಿಸಿದ್ದಾರೆ. ಈ ಗೋಪುರಕ್ಕೆ ಪ್ರತಿವರ್ಷವೂ ಏನಿಲ್ಲವೆಂದರೂ ನೂರು ಬಾರಿ ಸಿಡಿಲು ಬಡಿಯುವುದು ದಾಖಲಾಗಿದೆ. ಮಿಣುಕಿಸಿದ್ದು ನಮಗೆ, ನಿಮಗೆ ಕಾಣುವುದಿಲ್ಲ ಬಿಡಿ. ಸೆಕೆಂಡಿಗೆ ಲಕ್ಷ ಎನ್ನುವಷ್ಟು ಬಾರಿ ಈ ದೀಪ ಮಿಣುಕುತ್ತದೆ. ಈ ಲೇಸರನ್ನು ಬಳಸಿ ಮಿಂಚನ್ನು ಧರೆಗಿಳಿಸಬಹುದೇ ಎಂದು ಪರೀಕ್ಷಿಸಿದ್ದಾರೆ.

ಈ ಬೆಳಕನ್ನು 124 ಮೀಟರು ಎತ್ತರದ ಆ ಗೋಪುರದ ಮೇಲಿದ್ದ ಕನ್ನಡಿಯ ಮೂಲಕ ಮೋಡಗಳ ಕಡೆಗೆ ಪ್ರತಿಫಲಿಸಿದ್ದಾರೆ. ಕ್ಯಾಮೆರಾಗಳನ್ನು ಬಳಸಿ ಲೇಸರಿನ ಪರಿಣಾಮಗಳನ್ನು ಚಿತ್ರಿಸಿದ್ದಾರೆ. ಮಳೆ ಮೋಡಗಳು ದಟ್ಟವಾಗಿದ್ದಾಗ ಈ ಲೇಸರು ಕಟ್ಟಡದ ತುದಿಯಿಂದ ಮೇಲಕ್ಕೆ ಮಿಂಚನ್ನು ಚಿಮ್ಮಿದ್ದು ಛಾಯಾಚಿತ್ರಗಳಲ್ಲಿ ಮೂಡಿದೆ. ಅಷ್ಟೇ ಅಲ್ಲ, ಲೇಸರು ಬೆಳಗಿದಾಗ ಈ ಪ್ರದೇಶದಲ್ಲಿ ಮೋಡಗಳಿಂದ ಹರಿದ ಸಿಡಿಲಿನ ಪ್ರಮಾಣವೂ ಕಡಿಮೆ ಆಗಿದ್ದನ್ನೂ, ಇಪ್ಪತ್ತು ಕಿಲೋಮೀಟರು ದೂರದ ಮೋಡಗಳಲ್ಲಿಯೂ ಮಿಂಚು ಹರಿದದ್ದನ್ನೂ ಗಮನಿಸಿದ್ದಾರೆ. ಅಂದರೆ ಲೇಸರು ಬಳಸಿ, ಕೃತಕವಾಗಿ ಮಿಂಚನ್ನು ಸೃಷ್ಟಿಸಿ, ಮೋಡಗಳಲ್ಲಿರುವ ವಿದ್ಯುತ್ತು ಇದರ ಮೂಲಕ ನಿರ್ದಿಷ್ಟ ಜಾಗೆಗೆ ಹರಿಯುವಂತೆ ಮಾಡಬಹುದು. ಎಲ್ಲೆಲ್ಲೋ ಇರುವ ಮಿಂಚನ್ನು ನೇರವಾಗಿ ಅರೆಸ್ಟರುಗಳ ಕಡೆಗೆ ಬರುವಂತೆ ನಿರ್ದೇಶಿಸಬಹುದು. ಈ ಮೂಲಕ ವಿಮಾನ ನಿಲ್ದಾಣ, ರಾಕೆಟ್ ಉಡಾವಣಾ ಸ್ಥಾನಗಳೇ ಮೊದಲಾದ ದೊಡ್ಡ ದೊಡ್ಡ ಕಟ್ಟಡಗಳಿಗೆ ರಕ್ಷಣೆ ನೀಡಬಹುದು ಎನ್ನುವ ಆಶಯವನ್ನು ಹೋವರ್ಡ್ ತಂಡ ವ್ಯಕ್ತಪಡಿಸಿದೆ. ❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಸಮಾಜವಿಜ್ಞಾನ

ಎಸ್ಸೆಸ್ಸೆಲ್ಸಿ

2) ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ

12) ಪೂರ್ವ ಘಟ್ಟಗಳು ಮತ್ತು ಪಶ್ಚಿಮ ಘಟ್ಟಗಳು ಎಲ್ಲಿ ಸಂಧಿಸುತ್ತವೆ?
ಉತ್ತರ:- ನೀಲಗಿರಿ ಬೆಟ್ಟ

13) ಕಿತ್ತೂರು ರಾಣಿ ಚೆನ್ನಮ್ಮ ಯಾವುದರ ವಿರುದ್ಧ ಹೋರಾಡಿದರು?
ಉತ್ತರ:- ದತ್ತು ಮಕ್ಕಳಿಗೆ ಹಕ್ಕಿಲ್ಲವೆಂಬ ಪದ್ಧತಿಯ ವಿರುದ್ಧ ರಾಣಿ ಚೆನ್ನಮ್ಮ ಹೋರಾಡಿದರು

14) ದಿವಾನ್ ರಂಗಾಚಾರ್ಲು ಕಾಲದಲ್ಲಿ ಮೈಸೂರಿನಲ್ಲಿ ಆದ ಒಂದೆರಡು ಅಭಿವೃದ್ಧಿ ಕಾರ್ಯಗಳನ್ನು ತಿಳಿಸಿ
ಉತ್ತರ:- ಮೈಸೂರು ಪ್ರಜಾಪ್ರತಿನಿಧಿ ಸಭೆ ಪ್ರಾರಂಭಿಸಿದರು. 1881ರಲ್ಲಿ ಕೋಲಾರದ ಚಿನ್ನದಗಣಿ ಪ್ರಾರಂಭಿಸಿದರು, 1882ರಲ್ಲಿ ಬೆಂಗಳೂರು - ಮೈಸೂರು ರೈಲು ಮಾರ್ಗವನ್ನು ಆರಂಭಿಸಿದರು

15) ಕರಿಮೆಣಸಿನ ಆಸೆಯಿಂದ ವಿದೇಶಿಯರು ನಡೆಸಿದ್ದ ನಿರಂತರ ಆಕ್ರಮಣವನ್ನು ಮತ್ತು ಸಾಮ್ರಾಜ್ಯದಾಹವನ್ನು ಮೆಟ್ಟಿನಿಂತ ವೈನಾಡ್ ಅರಸ ಯಾರು?
ಉತ್ತರ:- ಮಾರ್ತಾಂಡ ವರ್ಮ

16) ಭಾರತದಲ್ಲಿ ಮಹಲ್ವಾರಿ ಪದ್ಧತಿ ಪ್ರಯೋಗಿಸಿದವರು ಯಾರು?
ಉತ್ತರ:- ಆರ್.ಎಂ. ಬರ್ಡ್ ಮತ್ತು ಜೇಮ್ಸ್ ಥಾಮ್ಸನ್

17) ‘ಸೂಪರಿಟೆಂಡೆಂಟ್ ಆಫ್ ಪೊಲೀಸ್’ (SP) ಎನ್ನುವ ಹೊಸ ಹುದ್ದೆಯನ್ನು ಸೃಷ್ಟಿಸಿದನು. ಯಾರು?
ಉತ್ತರ:- ಲಾರ್ಡ್ ಕಾರ್ನ್ ವಾಲೀಸ್

18) ‘ಅಮರ ಸುಳ್ಯ’ ಬಂಡಾಯದ ಕೇಂದ್ರಗಳು ಯಾವುವು?
ಉತ್ತರ:- ಕೆನರಾ ಪ್ರಾಂತ್ಯದ ಸುಳ್ಯ, ಬೆಳ್ಳಾರೆ ಮತ್ತು ಪುತ್ತೂರು ಮೊದಲಾದ ಸ್ಥಳಗಳು ‘ಅಮರ ಸುಳ್ಯ’ ಬಂಡಾಯದ ಕೇಂದ್ರ ಸ್ಥಾನಗಳಾಗಿದ್ದವು.

19) ಸ್ವಾತಂತ್ರ್ಯ ನಂತರ ಭಾರತದ ಸರಕಾರವು ರಚಿಸಿದ ಯೋಜನಾ ಆಯೋಗದ ಅಧ್ಯಕ್ಷರು ಯಾರಾಗಿರುತ್ತಿದ್ದರು?
ಉತ್ತರ:- ಪ್ರಧಾನ ಮಂತ್ರಿ

21) ಉಷ್ಣವಲಯದ ನಿತ್ಯ ಹರಿದ್ವರ್ಣದ ಅರಣ್ಯಗಳು ಎಲ್ಲಿ ಕಂಡುಬರುತ್ತವೆ?
ಉತ್ತರ : ಈ ವಿಧದ ಅರಣ್ಯಗಳು 250 ಸೆಂ.ಮೀ.ಗಳಿಗಿಂತ ಹೆಚ್ಚು ವಾರ್ಷಿಕ ಮಳೆಯಾಗುವ ಭಾಗಗಳಲ್ಲಿ ಕಂಡುಬರುತ್ತವೆ


22) ನೀರಾವರಿಯ ಅವಶ್ಯಕತೆ ಏನು?
ಉತ್ತರ: ಭಾರತವು ಕೃಷಿ ಪ್ರಧಾನ ದೇಶ ಆದ್ದರಿಂದ ಕೃಷಿಗೆ ಅವಶ್ಯಕವಾದಷ್ಟು ಹಾಗೂ ನಿರಂತರವಾದ ನೀರಿನ ಸರಬರಾಜು ಅತ್ಯಗತ್ಯ. ಭಾರತದ ಕೃಷಿಯು ಬಹುವಾಗಿ ಮಾನ್ಸೂನ್ ಮಳೆಯನ್ನಾಧರಿಸಿದೆ. ಆದರೆ ಮಳೆಯ ಹಂಚಿಕೆಯು ಋತುಕಾಲಿಕ, ಅಕಾಲಿಕ ಮತ್ತು ಅಸಮಾನತೆಯಿಂದ ಕೂಡಿದೆ. ಕೆಲವು ಬೆಳೆಗಳಿಗೆ ಹೆಚ್ಚಿನ ಪ್ರಮಾಣದ ಹಾಗೂ ನಿರಂತರವಾದ ನೀರಿನ ಪೂರೈಕೆ ಅಗತ್ಯ. ಉದಾ: ಭತ್ತ. ಕಬ್ಬು, ಇತ್ಯಾದಿ. ಇವುಗಳಲ್ಲದೇ ಬೆಳೆಗಳ ಅಧಿಕ ಇಳುವರಿ ಮತ್ತು ಉತ್ಪಾದನೆಗಾಗಿಯೂ ನಿರಂತರ ನೀರಿನ ಪೂರೈಕೆ ಅಗತ್ಯ. ಇದು ನೀರಾವರಿಯಿಂದ ಮಾತ್ರ ಸಾಧ್ಯ. ಹೀಗಾಗಿ ಭಾರತಕ್ಕೆ ನೀರಾವರಿ ಸೌಲಭ್ಯ ಅತ್ಯಗತ್ಯ.

23) ಥಿಯೋಸಾಫಿಕಲ್ ಸೊಸೈಟಿ ಉದ್ದೇಶವೇನು?
ಉತ್ತರ:- ಥಿಯೋಸಾಫಿಕಲ್ ಸೊಸೈಟಿಯ ಪ್ರಮುಖ ಉದ್ದೇಶವೆಂದರೆ ವಿವಿಧ ಧರ್ಮಗಳು, ದರ್ಶನಗಳ ಮತ್ತು ವಿಜ್ಞಾನಗಳ ತುಲನಾತ್ಮಕ ಅಧ್ಯಯನ ಮಾಡುವುದು. ಮನುಷ್ಯನ ಆಂತರ್ಯದಲ್ಲಿರುವ ಅದಮ್ಯ ಚೇತನ ಶಕ್ತಿಯನ್ನು ಕಂಡುಕೊಳ್ಳಲು ಪ್ರಯತ್ನಿಸುವುದು. ಯಾವುದೇ ಬೇಧ-ಭಾವ ಇಲ್ಲದ ವಿಶ್ವಭ್ರಾತೃತ್ವದ ನಿರ್ಮಾಣ, ವೈಚಾರಿಕತೆಯ ತುಲನಾತ್ಮಕ ಅಧ್ಯಯನ ನಡೆಸುವುದು ಮತ್ತು ಪ್ರಕೃತಿ ನಿಯಮ ಹಾಗೂ ಮಾನವನ ಸುಪ್ತಶಕ್ತಿಗಳನ್ನು ಪತ್ತೆ ಹಚ್ಚುವುದು ಇದರ ಮುಖ್ಯ ಉದ್ದೇಶವಾಗಿತ್ತು.

24) ಭಾರತದ ಸ್ಥಾನದ ಕುರಿತು ಬರೆಯಿರಿ
ಉತ್ತರ:- ಭಾರತವು ಭೌಗೋಳಿಕವಾಗಿ ಉತ್ತರ ಗೋಳಾರ್ಧ ಹಾಗೂ ಪೂರ್ವ ಗೋಳಾರ್ಧದ ಮಧ್ಯದಲ್ಲಿ ನೆಲೆಸಿದೆ. ಇದು ಆಗ್ನೇಯ ಏಷ್ಯಾದ ಒಂದು ಪ್ರಮುಖ ಪರ್ಯಾಯ ದ್ವೀಪ. ಭಾರತದ ಪ್ರಧಾನ ಭೂಭಾಗವು 8^0 4’ರಿಂದ 37^0. 6’ ಉತ್ತರ ಅಕ್ಷಾಂಶ ಹಾಗೂ 68^0 7’ ರಿಂದ 97 ^{0} 25’ ಪೂರ್ವ ರೇಖಾಂಶಗಳ ನಡುವೆ ವಿಸ್ತರಿಸಿದೆ.ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು ಇನ್ನೂ ದಕ್ಷಿಣಕ್ಕೆ ವಿಸ್ತರಿಸಿವೆ. ನಿಕೋಬಾರ್ ದ್ವೀಪದ $6^0$45’ ದಕ್ಷಿಣ ಅಕ್ಷಾಂಶದಲ್ಲಿರುವ ‘ಇಂದಿರಾ ಪಾಯಿಂಟ್’ ಭಾರತದ ಅತ್ಯಂತ ದಕ್ಷಿಣ ತುದಿಯಾಗಿದೆ. ಇದಕ್ಕೆ ಪ್ರತಿಯಾಗಿ ಜಮ್ಮು ಮತ್ತುಕಾಶ್ಮೀರದ ‘ಇಂದಿರಾ ಕೋಲ್’ ಭಾರತದ ಅತ್ಯಂತ ಉತ್ತರ ತುದಿಯಾಗಿದೆ. ಭಾರತದ ಮಧ್ಯಭಾಗದಲ್ಲಿ ಕರ್ಕಾಟಕ ಸಂಕ್ರಾಂತಿ ವೃತ್ತ (23.5 ^{0} ಉ)ವು ಹಾಯ್ದು ಹೋಗಿದೆ. ಮತ್ತು 82.5 ^{0} ಪೂರ್ವ ರೇಖಾಂಶ (ಪ್ರಯಾಗ/ಅಲಹಾಬಾದ್)ವು ದೇಶದ ಮಧ್ಯದಲ್ಲಿ ಹಾಯ್ದು ಹೋಗಿದೆ. ಇದು ಭಾರತದ ಮಧ್ಯ ರೇಖಾಂಶವಾಗಿದ್ದು, ಭಾರತೀಯ ಆದರ್ಶಕಾಲಮಾನವು (IST) ಈ ರೇಖಾಂಶವನ್ನಾಧರಿಸಿದೆ.

25) ಭಾರತದ ನಕ್ಷೆ ಬರೆದು ಇವುಗಳನ್ನು ಗುರುತಿಸಿ.
1. ಭಾರತದ ಪೂರ್ವ ಜಲಮೇರೆ 2.ದಾವಣಗೆರೆ
3. ಕಲ್ಪಾಕಂ

ಉತ್ತರ:-



ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ಕೇಂದ್ರ, ಬೆಂಗಳೂರು

ಗಣಿತ

ಮಾದರಿ ಪ್ರಶ್ನೆಗಳು

ಪಿಯುಸಿ

33) $\int_0^1 \frac{\tan^{-1} x}{1+x^2}dx$ ಕಂಡುಹಿಡಿಯಿರಿ.

ಉತ್ತರ:– $t = \tan^{-1} x$ ಎಂದು ಆದೇಶಿಸಿದರೆ

$$dt = \frac{1}{1+x^2}dx$$

ಆಗುವುದು ಮತ್ತು $x = 0$ ಆದಾಗ $t = 0$ ಮತ್ತು $x = 1$ ಆದಾಗ $t=\pi/4$ ಆಗುವುದು. ಹಾಗಾಗಿ x, 0 ದಿಂದ 1 ಕ್ಕೆ ಬದಲಾವಣೆಯಾದಂತೆ ‘t’ 0 ದಿಂದ $\pi/4$ ಗೆ ಬದಲಾವಣೆಯಾಗುತ್ತದೆ.

$$\int_0^1 \frac{\tan^{-1} x}{1+x^2}dx = \int_0^{\frac{\pi}{4}} t\,dt = \left[\frac{t^2}{2}\right]_0^{\pi/4} = \frac{1}{2}\left[\frac{\pi^2}{16}-0\right] = \frac{\pi^2}{32}.$$

34) $\int\left[\sqrt{\cot x}+\sqrt{\tan x}\right]dx$ ನ್ನು ಕಂಡುಹಿಡಿಯಿರಿ.

ಉತ್ತರ:–

$$I = \int\left[\sqrt{\cot x}+\sqrt{\tan x}\right]dx = \int\sqrt{\tan x}(1+\cot x)dx$$

$\tan x = t^2$ ಆದಾಗ $\sec^2 x\, dx = 2t\, dt$

ಅಥವಾ

$$dx = \frac{2t\ dt}{1+t^4}$$

ಆಗ $I = \int t\left(1+\frac{1}{t^2}\right)\frac{2t}{(1+t^4)}dt$


$$= 2\int\frac{(t^2+1)}{t^4+1}dt = 2\int\frac{\left(1+\frac{1}{t^2}\right)dt}{\left(t^2+\frac{1}{t^2}\right)} = 2\int\frac{\left(1+\frac{1}{t^2}\right)dt}{\left(t-\frac{1}{t}\right)^2+2}$$

$t-\frac{1}{t} = y$ ಹಾಕಿ, ಆಗ $\left(1+\frac{1}{t^2}\right)dt = dy$ ಆಗ

$$I = 2\int\frac{dy}{y^2+\left(\sqrt{2}\right)^2} = \sqrt{2}\tan^{-1}\frac{y}{\sqrt{2}}+C = \sqrt{2}\tan^{-1}\frac{\left(t-\frac{1}{t}\right)}{\sqrt{2}}+C$$

$$= \sqrt{2}\tan^{-1}\left(\frac{t^2-1}{\sqrt{2}t}\right)+C = \sqrt{2}\tan^{-1}\left(\frac{\tan x-1}{\sqrt{2\tan x}}\right)+C$$

35) X–ಅಕ್ಷ, $y = x$ ಸರಳರೇಖೆ ಮತ್ತು $x^2+y^2 = 32$ ವೃತ್ತಗಳಿಂದ ಆವೃತವಾದ ಮೊದಲ ಚತರ್ಥಾಂಕದಲ್ಲಿನ ಪ್ರದೇಶದ ಕ್ಷೇತ್ರಫಲವನ್ನು ಕಂಡುಹಿಡಿಯಿರಿ.



ಉತ್ತರ:–

$y = x$...... (1) ಮತ್ತು

$x^2 + y^2 = 32$ .... (2) ಗಳು ದತ್ತ ಸಮೀಕರಣಗಳು

ಇವೆರಡೂ ಸಮೀಕರಣಗಳನ್ನು ಏಕಕಾಲಿಕವಾಗಿ ಬಿಡಿಸಿದಾಗ ಅವು ಪ್ರಥಮ ಚತುರ್ಥಾಂಕದಲ್ಲಿ B(4, 4) ರಲ್ಲಿ ಸಂಧಿಸುತ್ತದೆ ಎಂದು ತಿಳಿಯುತ್ತದೆ.

ಅನ್ನು X–ಅಕ್ಷಕ್ಕೆ ಲಂಬವಾಗಿ ಎಳೆಯಿರಿ.

∴ ಬೇಕಾದ ಕ್ಷೇತ್ರಫಲ =

OBMO ಪ್ರದೇಶ ಕ್ಷೇತ್ರಫಲ + BMAB ಪ್ರದೇಶದ ಕ್ಷೇತ್ರಫಲ

OBMO ಪ್ರದೇಶದ ಕ್ಷೇತ್ರಫಲ $= \int_0^4 y\,dx = \int_0^4 x\,dx$

$$= \left(\frac{x^2}{2}\right)_0^4 = 8$$

BMAB ಪ್ರದೇಶದ ಕ್ಷೇತ್ರಫಲ $= \int_4^{4\sqrt{2}} y\,dx = \int_4^{4\sqrt{2}} \sqrt{32-x^2}\,dx$

$$= \left[\frac{1}{2}\cdot x\sqrt{32-x^2}+\frac{1}{2}\times 32\times\sin^{-1}\frac{x}{4\sqrt{2}}\right]_4^{4\sqrt{2}}$$

$$= \left(\frac{1}{2}\times 4\sqrt{2}\times 0+\frac{1}{2}\times 32\times\sin^{-1}1\right)-\left(\frac{4}{2}\sqrt{32-16}+\frac{1}{2}\times 32\times\sin^{-1}\frac{4}{4\sqrt{2}}\right)$$


$$= 16\times\frac{\pi}{2}-8-16\times\frac{\pi}{4} = (4\pi-8) \quad \text{... (4)}$$

(3) ಮತ್ತು (4) ನ್ನು ಕೂಡಿದಾಗ

ಬೇಕಾದ ಕ್ಷೇತ್ರಫಲ = 4π ಎಂದಾಗುತ್ತದೆ

36) $y = x^2$ ವಕ್ರರೇಖೆ ಮತ್ತು $y = 4$ ಸರಳರೇಖೆಗಳ ಪ್ರದೇಶದ ಕ್ಷೇತ್ರಫಲವನ್ನು ಕಂಡುಹಿಡಿಯಿರಿ.

ಉತ್ತರ: $y = x^2$ **ವಕ್ರ ರೇಖೆಯು** y **– ಅಕ್ಷದಲ್ಲಿ, ಮಾತ್ರ ಸಮ್ಮೀತಿಯವಾಗಿರುವುದರಿಂದ, ಚಿತ್ರದಲ್ಲಿ ತೋರಿಸಿರುವಂತೆ,**



ಬೇಕಾದ ಕ್ಷೇತ್ರಫಲ = AOBA ಪ್ರದೇಶದ ಕ್ಷೇತ್ರಫಲ

$$2.\int_0^4 x\,dy$$

= 2[ವಕ್ರರೇಖೆ $x^2 = y$, y–ಅಕ್ಷ $y = 0$ ಮತ್ತು $y = 4$ರೇಖೆಗಳ ನಡುವಣ BONB ಪ್ರದೇಶದ ಕ್ಷೇತ್ರಫಲ]

$$2\int_0^4 \sqrt{y}\ dy = 2x\frac{2}{3}\left[y^{3/2}\right]_0^4$$

$$= \frac{4}{3}x8$$

$$= \frac{32}{3}$$

ಎಪಿಎಲ್ ಪಡಿತರ ಅಕ್ಕಿ ಅಸಮರ್ಪಕ ಪೂರೈಕೆ

ಅಕ್ಕಿ ಖರೀದಿಸಲು ಆದ್ಯತೆಯೇತರ ವಲಯದ ಕುಟುಂಬಗಳ ನಿರಾಸಕ್ತಿ • ಬಿಪಿಎಲ್‌ಗೆ ಬದಲಾದ 3.5 ಲಕ್ಷ ಕಾರ್ಡ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರ್ವಜನಿಕ ಪಡಿತರ ವ್ಯವಸ್ಥೆ ಅಡಿಯಲ್ಲಿ ಆದ್ಯತೆಯೇತರ ವಲಯದ ಕುಟುಂಬಗಳಿಗೆ (ಎಪಿಎಲ್) ನೀಡುವ ರಿಯಾಯಿತಿ ದರದ ಅಕ್ಕಿ ಮೂರು ತಿಂಗಳಿನಿಂದ ಸಮರ್ಪಕವಾಗಿ ಪೂರೈಕೆಯಾಗುತ್ತಿಲ್ಲ.

ಒಬ್ಬರಿರುವ ಕುಟುಂಬಕ್ಕೆ ಒಂದು ಕೆ.ಜಿ.ಗೆ ₹15ರಂತೆ ಐದು ಕೆ.ಜಿ, ಇಬ್ಬರು ಅಥವಾ ಅದಕ್ಕಿಂತ ಹೆಚ್ಚು ಸದಸ್ಯರಿರುವ ಕುಟುಂಬಗಳಿಗೆ ಗರಿಷ್ಠ 10 ಕೆ.ಜಿ. ಅಕ್ಕಿ ನೀಡಲಾಗುತ್ತಿದೆ. ಅಕ್ಕಿ ಅಗತ್ಯ ಇರುವ ಕುಟುಂಬಗಳು ಪ್ರತಿ ತಿಂಗಳು ಬೇಡಿಕೆಯ ಪಟ್ಟಿ ಸಲ್ಲಿಸಬೇಕು. ಬೇಡಿಕೆ ಸಲ್ಲಿಸಿದವರಿಗೆ ಮಾತ್ರ ಅಕ್ಕಿ ನೀಡಲಾಗುತ್ತದೆ. ರಾಜ್ಯದಲ್ಲಿ ಅಕ್ಕಿಗಾಗಿ ಬೇಡಿಕೆ ಸಲ್ಲಿಸುವ ಎಪಿಎಲ್ ಕುಟುಂಬಗಳ ಸಂಖ್ಯೆ ಕಳೆದ ಆರು ತಿಂಗಳಿನಿಂದ ಶೇ 20 ದಾಟಿಲ್ಲ.

'ಕೆಲವು ಜಿಲ್ಲೆಗಳಲ್ಲಿ ಎಪಿಎಲ್ ಕುಟುಂಬಗಳಿಂದ ಪಡಿತರ ಅಕ್ಕಿ ಪಡೆಯಲು ಬೇಡಿಕೆ ಬರುತ್ತಿಲ್ಲ. 3.5 ಲಕ್ಷ ಎಪಿಎಲ್ ಕಾರ್ಡ್‌ಗಳು ಬಿಪಿಎಲ್‌ಗೆ ಬದಲಾಗಿವೆ. ಹಿಂದೆ ಪೂರೈಸಿದ ಅಕ್ಕಿ ಬಳಕೆಯಾಗದೆ ಉಳಿದಿದ್ದು, ಸರ್ಕಾರ ಹೊಸದಾಗಿ ಅಕ್ಕಿ ವಿತರಣೆ ಮಾಡಿಲ್ಲ. ಬಹುತೇಕ ಜಿಲ್ಲೆಗಳಲ್ಲಿ ಎಪಿಎಲ್ ಕುಟುಂಬಗಳಿಗೆ ಮೀಸಲಾದ ಅಕ್ಕಿಯನ್ನು ಸರ್ಕಾರದ ಇತರೆ ಯೋಜನೆಗಳಿಗೆ ಬಳಕೆ ಮಾಡಿಕೊಳ್ಳಲಾಗಿದೆ. ಇದರಿಂದ ಬೇಡಿಕೆ ಇರುವ ಕೆಲವು ಜಿಲ್ಲೆಗಳಲ್ಲೂ ವ್ಯತ್ಯಯವಾಗಿದೆ' ಎನ್ನುತ್ತಾರೆ ಆಹಾರ ಇಲಾಖೆಯ ಅಧಿಕಾರಿಗಳು.

ನ್ಯಾಯಬೆಲೆ ಅಂಗಡಿಗಳಿಂದಲೂ ನಿರಾಸಕ್ತಿ: 'ಎಪಿಎಲ್ ಕುಟುಂಬಗಳಿಗೆ ಪಡಿತರ ವಿತರಿಸಲು ನ್ಯಾಯಬೆಲೆ ಅಂಗಡಿಗಳೂ ಉತ್ಸಾಹ ತೋರುತ್ತಿಲ್ಲ. ಖರೀದಿಸಿದ ಅಕ್ಕಿ ಎಷ್ಟೋ ಬಾರಿ ಖರ್ಚಾಗದೆ ಉಳಿಯುತ್ತದೆ. ಅತ್ಯಂತ ಕಡಿಮೆ ಬೇಡಿಕೆ, ಪ್ರತಿ ತಿಂಗಳು 10 ಸಾವಿರ ಟನ್ ಸಹ ಖರ್ಚಾಗುವುದಿಲ್ಲ. ಮುಂಗಡವಾಗಿ ಅಧಿಕ ಹಣ ನೀಡಿ ಅಕ್ಕಿ ಖರೀದಿಸಬೇಕಿರುವ ಕಾರಣದಿಂದಲೂ ಹಿಂದೇಟು ಹಾಕುತ್ತಾರೆ' ಎನ್ನುತ್ತಾರೆ ರಾಜ್ಯ ಸರ್ಕಾರಿ ನ್ಯಾಯಬೆಲೆ ಅಂಗಡಿಗಳ ಮಾಲೀಕರ ಸಂಘದ ಅಧ್ಯಕ್ಷ ಟಿ. ಕೃಷ್ಣಪ್ಪ.

'ಆದ್ಯತಾ ವಲಯದ ಕುಟುಂಬಗಳಿಗೆ (ಬಿಪಿಎಲ್) ಕೋವಿಡ್ ನಂತರ ತಲಾ 5 ಕೆ.ಜಿ. ಹೆಚ್ಚುವರಿ ಅಕ್ಕಿ ವಿತರಿಸಲಾಗುತ್ತಿತ್ತು. ಹೆಚ್ಚುವರಿ ಅಕ್ಕಿಯನ್ನು ಬಹುತೇಕ ಕುಟುಂಬಗಳು ₹10ರ ದರಕ್ಕೆ ಮಾರಾಟ ಮಾಡಿಕೊಳ್ಳುತ್ತಿದ್ದರು. ಹೀಗಾಗಿ, ಎಪಿಎಲ್ ಕಾರ್ಡುದಾರರು ₹ 15 ಕೊಟ್ಟು ಖರೀದಿಸಲು ಮುಂದೆ ಬಂದಿರಲಿಲ್ಲ. ಈಗ ಕೋವಿಡ್ ಸಮಯದ ಹೆಚ್ಚುವರಿ ಅಕ್ಕಿ ಸ್ಥಗಿತವಾಗಿದ್ದು, ಮುಂದೆ ಬೇಡಿಕೆ ಬರಬಹುದು' ಎನ್ನುತ್ತಾರೆ ನ್ಯಾಯಬೆಲೆ ಅಂಗಡಿ ಮಾಲೀಕ ರವಿಕುಮಾರ್.

ಅಂಕಿ-ಅಂಶಗಳು

1.51 ಕೋಟಿ
ರಾಜ್ಯದಲ್ಲಿನ ಪಡಿತರ ಕಾರ್ಡುಗಳು

24 ಲಕ್ಷ
ಎಪಿಎಲ್ ಕಾರ್ಡುಗಳು

ಯುವಕನಲ್ಲಿ ಮಂಗನಕಾಯಿಲೆ ಪತ್ತೆ

ಚಿಕ್ಕಮಗಳೂರು: ಜಿಲ್ಲೆಯ ಬಾಳೆಹೊನ್ನೂರು ಸಮೀಪದ ಹಲಸೂರು ರಸ್ತೆ ಭಾಗದ ತೋಟದ ಕಾರ್ಮಿಕರೊಬ್ಬರಿಗೆ (27 ವರ್ಷ ವಯಸ್ಸು) ಮಂಗನಕಾಯಿಲೆ (ಕೆಎಫ್‌ಡಿ) ದೃಢಪಟ್ಟಿದ್ದು, ಚಿಕಿತ್ಸೆ ಪಡೆದಿದ್ದಾರೆ.

ಕೊಪ್ಪ ತಾಲ್ಲೂಕಿನ ಜೋಗಿಮಕ್ಕಿ ಪ್ಲಾಂಟೇಷನ್ ಭಾಗದಲ್ಲಿ ಕೆಲಸಕ್ಕೆ ಹೋಗಿದ್ದಾಗ ಯುವಕನಿಗೆ ಜ್ವರ, ಸುಸ್ತು ಬಾಧಿಸಿತ್ತು. ಪಕ್ಕದ ತೀರ್ಥಹಳ್ಳಿಯ ಸರ್ಕಾರಿ ಆಸ್ಪತ್ರೆಯಲ್ಲಿ ತಪಾಸಣೆ ಮಾಡಿಸಿ ಚಿಕಿತ್ಸೆ ಪಡೆದಿದ್ದಾರೆ.

'ಯುವಕನ ರಕ್ತ ಪರೀಕ್ಷೆ ವರದಿ ಇದೇ 21ರಂದು ಕೈಸೇರಿದ್ದು, ಕೆಎಫ್‌ಡಿ ದೃಢಪಟ್ಟಿದೆ. ಯುವಕ ತೀರ್ಥಹಳ್ಳಿಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಗುಣಮುಖರಾಗಿ ಮನೆಗೆ ತೆರಳಿದ್ದಾರೆ. ಪ್ಲಾಂಟೇಷನ್ ಭಾಗದಲ್ಲಿ ಇಬ್ಬರಿಗೆ ಜ್ವರ ಕಂಡುಬಂದಿದೆ. ರಕ್ತ ಮಾದರಿ ಸಂಗ್ರಹಿಸಿ ಪರೀಕ್ಷೆಗೆ ಕಳಿಸಲಾಗಿದೆ' ಎಂದು ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಎಚ್.ಕೆ. ಮಂಜುನಾಥ್ 'ಪ್ರಜಾವಾಣಿ'ಗೆ ತಿಳಿಸಿದರು.

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಭದ್ರಾ ಮೇಲ್ದಂಡೆ ಯೋಜನಾ ವಿಭಾಗ ನಂ. 4, ಹೊಸದುರ್ಗ–577527. ಚಿತ್ರದುರ್ಗಜಿಲ್ಲೆ.
Phone/Fax No: 08199 - 230018, e-Mail ID: eeubpdvn4@gmail.com
ಸಂಖ್ಯೆ: ಕಾಇಂ/ವಿಜನಿನಿ/ಭಮೇಯೋ/ವಿ–4/ಹೊ/ಟೆಂಡರ್25/2022–23/
ದಿನಾಂಕ: 20.01.2023

ಟೆಂಡರ್ ತಿದ್ದುಪಡಿ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಉಲ್ಲೇಖ: 1) ಟೆಂಡರ್ ತಿದ್ದುಪಡಿ ಅಧಿಸೂಚನೆ ಸಂಖ್ಯೆ: No: EE/VJNL/UBP-Dv-4/HSD/TND-25/TBC Drip/P- III/2022-23/Date:16/11/2022. 2) ಟೆಂಡರ್ ತಿದ್ದುಪಡಿ ಅಧಿಸೂಚನೆ ಸಂಖ್ಯೆ: No:EE/VJNL/UBP-Dv-4/HSD/TND-25/TBC Drip/P-III/2022-23/1276 Date:06.12.2022. 3) ಟೆಂಡರ್ ತಿದ್ದುಪಡಿ ಅಧಿಸೂಚನೆ ಸಂಖ್ಯೆ: No:EE/VJNL/UBP-Dv-4/HSD/TND-25/TBC Drip/P-III/2022-23/1375 Date:21.12.2022. 4) ಟೆಂಡರ್ ತಿದ್ದುಪಡಿ ಅಧಿಸೂಚನೆ ಸಂಖ್ಯೆ: No:EE/VJNL/UBP-Dv-4/HSD/TND-25/TBC Drip/P-III/2022-23/1498 Date:03.01.2023. 5) ಟೆಂಡರ್ ತಿದ್ದುಪಡಿ ಅಧಿಸೂಚನೆ ಸಂಖ್ಯೆ: No:EE/VJNL/UBP-Dv-4/HSD/TND-25/TBC Drip/P-III/2022-23/1572 Date:20.01.2023.

ಈ ಮೇಲಿನ ಉಲ್ಲೇಖಿತ ಪತ್ರ (1) ರಲ್ಲಿ ಟೆಂಡರ್ ಅಧಿಸೂಚನೆಯಲ್ಲಿ ಪ್ರಕಟಣೆಗೊಳಿಸಿದ "Survey, Design, Supply, Installation, Testing & commissioning of Micro Irrigation Syste under TBC comprising Gravity Bulk Feeders, Construction of SCPH, Supplying & installation of Pumping machineries, Electrical substation, Electrical power line& other appurtenant works including construction of PDN & Drip irrigation system including SCADA and Automation for providing irrigation facility to 8150.44 Ha under Block- 4 & filling up of 25 Nos. tanks coming under TBC of UBP with all accessories O&M for 5 years after the date of completion and transfer (BOMT) on Turnkey basis Excluding Drip laterals and including sub-main and Drip Raisers"-TBC-Drip-Package-III." (Indent No.2380) ಕಾಮಗಾರಿಗೆ ಸಂಬಂಧಿಸಿದಂತೆ ತಾಂತ್ರಿಕ ಕಾರಣಗಳಿಂದ ಉಲ್ಲೇಖಿತ ಪತ್ರ (2), (3) ಹಾಗೂ (4) ರಲ್ಲಿ ಮುಂದೂಡಲಾಗಿತ್ತು. ತಾಂತ್ರಿಕ ಕಾರಣಗಳಿಂದ ಈ ಕೆಳಕಂಡ ದಿನಾಂಕಗಳನ್ನು ಮರು ನಿಗಧಿಪಡಿಸಲಾಗಿದೆ.

1) ಟೆಂಡರ್‌ನ್ನು ಸಲ್ಲಿಸಲು ಕೊನೆಯ ದಿನಾಂಕ: 06.02.2023ರಂದು ಅಪರಾಹ್ನ 16:30 ಗಂಟೆಯವರೆಗೆ. 2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 07–02–2023 ರಂದು ಅಪರಾಹ್ನ 16:35 ಘಂಟೆಗೆ ಕಾರ್ಯಪಾಲಕ ಅಭಿಯಂತರರು, ವಿಜನಿನಿ, ಭದ್ರಾ ಮೇಲ್ದಂಡೆ ಯೋಜನಾ ವಿಭಾಗ ನಂ.04, ಹೊಸದುರ್ಗ ಇವರ ಕಛೇರಿಯಲ್ಲಿ. ಆರ್ಥಿಕ ಬಿಡ್ ತೆರೆಯುವ ದಿನಾಂಕ: ತಾಂತ್ರಿಕ ಬಿಡ್‌ನಲ್ಲಿ ಅನುಮೋದನೆಯಾದ ಗುತ್ತಿಗೆದಾರರಿಗೆ ಪ್ರತ್ಯೇಕವಾಗಿ ತಿಳಿಸಲಾಗುವುದು.

RO No. 906: DIPR/CTA/KSMCA/2022-23 ಸಹಿ/– ಕಾರ್ಯಪಾಲಕ ಇಂಜಿನಿಯರ್

ಕರ್ನಾಟಕ ಸರ್ಕಾರ
ರಾಷ್ಟ್ರೀಯ ಆರೋಗ್ಯ ಅಭಿಯಾನ
ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ನಿರ್ದೇಶನಾಲಯ
ಆರೋಗ್ಯ ಸೌಧ, 1ನೇ ಮಹಡಿ, ಮಾಗಡಿ ರಸ್ತೆ, ಬೆಂಗಳೂರು–560023.
ದೂರವಾಣಿ ಸಂಖ್ಯೆ: 080–23113584, ಇ ಮೇಲ್ ಐಡಿ: pdrch-hfws@karnataka.gov.in

Notification No: JDM/Dialysis/03/2021-22 Date: 24/01/2023

ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಅಧಿಸೂಚನೆ

"For Installation, Operations and Management of Haemodialysis Units in District and Taluk level Hospitals Under Public Private Partnership (PPP) Framework under PMNDP program- Bengaluru Division, Mysuru Division, Belgaum Division & Kalaburagi Division"

Ref: **(1)** JDM/Dialysis/03/2021-22 Bengaluru Div, **(2)** JDM/ Dialysis /03/2021-22 Mysuru Div, **(3)** JDM/Dialysis/03/2021-22 Belagavi Div **(4)** JDM/Dialysis/03/2021-22 Kalaburgi Div

ರಾಷ್ಟ್ರೀಯ ಆರೋಗ್ಯ ಅಭಿಯಾನವು ಪ್ರಧಾನ ಮಂತ್ರಿ ರಾಷ್ಟ್ರೀಯ ಡಯಾಲಿಸಿಸ್ ಕಾರ್ಯಕ್ರಮಕ್ಕೆ ಅವಶ್ಯವಿರುವ **Installation, Operations and Management of Haemodialysis Units in District and Taluk level Hospitals Under Public Private Partnership (PPP) Framework under PMNDP program- Bengaluru Division, Mysuru Division, Belgaum Division & Kalaburagi Division** ಗಳನ್ನು ಸರಬರಾಜು ಮಾಡಲು ತಯಾರಕರು/ಅಧಿಕೃತ ವಿತರಕರುಗಳಿಗೆ ಅಗತ್ಯ ದಾಖಲೆಯೊಂದಿಗೆ ಭಾಗವಹಿಸಲು ಟೆಂಡರ್ ಅನ್ನು ಆಹ್ವಾನಿಸಲಾಗಿದೆ.

ಅರ್ಹತೆಯುಳ್ಳ ಟೆಂಡರ್ ದಾರರು ಮೇಲ್ಕಂಡ ವಿಷಯದ ಬಗ್ಗೆ ವಿವರವಾದ ಮಾಹಿತಿಯನ್ನು ವೆಬ್‌ಸೈಟ್ www.eproc.karnataka.gov.in ನಲ್ಲಿ ಪಡೆಯಬಹುದಾಗಿದೆ. ಟೆಂಡರ್ ಡಾಕ್ಯುಮೆಂಟ್‌ಗಳನ್ನು ದಿನಾಂಕ : 23/01/2023 ರಿಂದ ಡೌನ್ ಲೋಡ್ ಮಾಡಿಕೊಳ್ಳಬಹುದು ಮತ್ತು ಟೆಂಡರ್ ಡಾಕ್ಯುಮೆಂಟ್ ಗಳನ್ನು ದಿನಾಂಕ: 20/02/2023 ಅಪರಾಹ್ನ 5.30 ರ ಒಳಗಾಗಿ ಸಲ್ಲಿಸತಕ್ಕದ್ದು.

ಹೆಚ್ಚಿನ ಮಾಹಿತಿಗಾಗಿ ಈ ಕೆಳಗೆ ಸಹಿ ಮಾಡಿರುವ ಯೋಜನಾ ನಿರ್ದೇಶಕರು (ಆರ್.ಸಿ.ಹೆಚ್) ರವರ ಕಛೇರಿ ಸಮಯ ಪೂರ್ವಾಹ್ನ 11.00 ರಿಂದ ಅಪರಾಹ್ನ 5.30 ರ ಒಳಗಾಗಿ ಪಡೆದುಕೊಳ್ಳಬಹುದಾಗಿದೆ.

ಸಹಿ/–
ಯೋಜನಾ ನಿರ್ದೇಶಕರು (ಆರ್.ಸಿ.ಹೆಚ್)
DIPR/CP/4279/Zen/2022-23

ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ (ಕೆಎಸ್‌ಐಐಡಿಸಿ)
KSIIDC
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
ಖನಿಜ ಭವನ, 4ನೇ ಮಹಡಿ, ಪೂರ್ವ ಭಾಗ, ನಂ.49, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು–01.

ಟೆಂಡರ್ ಆಹ್ವಾನ ಪ್ರಕಟಣೆ

(ಜಿಒಕೆ ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ https://eproc.karnataka.gov.in ಮೂಲಕ)

ಕರ್ನಾಟಕ ಸರ್ಕಾರವು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ, ದೇವನಹಳ್ಳಿ, ಬೆಂಗಳೂರು ಇದರ ಪಕ್ಕದಲ್ಲಿ **'ಬೆಂಗಳೂರು ಸಿಗ್ನೇಚರ್ ಬ್ಯುಸಿನೆಸ್ ಪಾರ್ಕ್ (ಬಿಎಸ್‌ಬಿಪಿ)'ಗೆ** ಪ್ರಮುಖ ಮೂಲಸೌಲಭ್ಯ ನಿರ್ಮಾಣ ಕಾರ್ಯವನ್ನು ಕೈಗೊಂಡಿದೆ. ಕೆಎಸ್‌ಐಐಡಿಸಿಯು **ಉದ್ದೇಶಿತ 66/11ಕೆವಿ ಬಿಎಸ್‌ಬಿಪಿ ಉಪಕೇಂದ್ರ–1 ರಿಂದ ಉದ್ದೇಶಿತ 66/11ಕೆವಿ ಬಿಎಸ್‌ಬಿಪಿ ಉಪಕೇಂದ್ರ–2 ರವರೆಗೆ 3.14 ಕಿ.ಮೀ ಉದ್ದದ ಮಾರ್ಗಕ್ಕೆ 66ಕೆ.ವಿ. ಎಸ್‌ಸಿ 1000 ಚ.ಮಿ.ಮೀ ಭೂಗತ ಕೇಬಲ್ ಅಳವಡಿಸುವುದು ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿನ ಬಿಎಸ್‌ಬಿಪಿಯಲ್ಲಿ 66/11 ಕೆವಿ ಉಪಕೇಂದ್ರ–1ಕ್ಕೆ ಉದ್ದೇಶಿತ ಭೂಗತ ಕೇಬಲ್‌ನ ಕೊನೆಗೊಳಿಸುವುದಕ್ಕಾಗಿ ಹಾಲಿ ಇರುವ 220/66/11 ಕೆವಿ ಬಿಐಎಎಲ್ ಉಪಕೇಂದ್ರದಲ್ಲಿ 1 ಸಂಖ್ಯೆ 66ಕೆವಿ ಟರ್ಮಿನಲ್ ಬೇ ನಿರ್ಮಾಣಕ್ಕೆ (ಪ್ಯಾಕೇಜ್–3)** ಕೆಪಿಟಿಸಿಎಲ್/ಕೆಪಿಡಬ್ಲ್ಯೂಡಿ/ಎನ್‌ಹೆಚ್/ಎನ್‌ಹೆಚ್‌ಎಐ/ಸಿಪಿಡಬ್ಲ್ಯೂಡಿ/ ಅಥವಾ ಇತರೆ ಕೇಂದ್ರ/ ರಾಜ್ಯ ಸರ್ಕಾರದ ಉದ್ದಿಮೆ, ಸಂಸ್ಥೆಗಳಲ್ಲಿ ನೋಂದಣಿಯಾಗಿರುವ ಅರ್ಹ ಗುತ್ತಿಗೆದಾರರುಗಳಿಂದ ಐಟಂ ದರದ ಆಧಾರದ ಮೇಲೆ ಟೆಂಡರುಗಳನ್ನು (ದ್ವಿ ಲಕೋಟೆ ಪದ್ಧತಿಯಲ್ಲಿ) ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ ಮೂಲಕ ಆಹ್ವಾನಿಸಿದೆ. ಟೆಂಡರ್ ದಸ್ತಾವೇಜನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://eproc. karnataka.gov.in** ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರ್‌ನ ಅಂದಾಜು ಮೊತ್ತ: **ರೂ.27.10 ಕೋಟಿ.** ಇಎಂಡಿ ಮೊತ್ತ: **ರೂ.27.10 ಲಕ್ಷ. ಪ್ರಮುಖ ದಿನಾಂಕಗಳು:** ಟೆಂಡರ್ ದಸ್ತಾವೇಜುಗಳನ್ನು ದಿನಾಂಕ **25.01.2023ರ ನಂತರದಿಂದ** ಡೌನ್‌ಲೋಡ್ ಮಾಡಿಕೊಳ್ಳಬಹುದು. ಬಿಡ್ ಪೂರ್ವ ಸಭೆ ದಿನಾಂಕ: **02.2.2023 ರಂದು ಬೆಳಿಗ್ಗೆ 11.00 ಗಂಟೆಗೆ.** ಟೆಂಡರ್ ದಸ್ತಾವೇಜನ್ನು ಸಲ್ಲಿಸಲು ಕಡೆಯ ದಿನಾಂಕ: **24.02.2023 ರಂದು ಸಂಜೆ 5.30 ಗಂಟೆವರೆಗೆ.** ಹೆಚ್ಚಿನ ವಿವರಗಳನ್ನು ಮೇಲಿನ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಪಡೆದುಕೊಳ್ಳಬಹುದು ಅಥವಾ ವೆಬ್‌ಸೈಟ್ **https://eproc.karnataka.gov.in** ಇಲ್ಲಿಂದ ಪಡೆದುಕೊಳ್ಳಬಹುದು. ಸದರಿ ಟೆಂಡರ್‌ಗೆ ಸಂಬಂಧಿಸಿದಂತೆ ಮುಂದಿನ ಯಾವುದೇ ಬದಲಾವಣೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂನಲ್ಲಿ ಮಾತ್ರ ಅಪ್‌ಲೋಡ್ ಮಾಡಲಾಗುವುದು. ಸಂಪರ್ಕ ಸಂ.ಎಜಿಎಂ (ಐಪಿಡಿ–II), 080–22258131/132 ಇ–ಮೇಲ್: **bic3@ksiidc.com,ipd-2@ksiidc.com** ಮತ್ತು **info@ksiidc.com**

ಸಹಿ/– ಸಹಾಯಕ ಪ್ರಧಾನ ವ್ಯವಸ್ಥಾಪಕರು (ಐಪಿಡಿ–II),
ಕೆಎಸ್‌ಐಐಡಿಸಿ ಮತ್ತು ಟೆಂಡರ್ ಆಹ್ವಾನಿಸುವ ಪ್ರಾಧಿಕಾರಿ

ನೋಂದಣಿ ಮತ್ತು ಮುದ್ರಾಂಕ ಇಲಾಖೆ
ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರವರ ಕಚೇರಿ,
ಕಂದಾಯ ಭವನ, 8ನೇ ಮಹಡಿ, ಕೆ.ಜಿ. ರಸ್ತೆ, ಬೆಂಗಳೂರು–560009
ದೂ: 080–22220436, ಇ–ಮೇಲ್: aigrcomp@karnataka.gov.in
ಸಂಖ್ಯೆ: ಕಂಪ್ಯೂಟರ್/16/2022–23 ದಿನಾಂಕ: 24.01.2023

ಟೆಂಡರ್ ಪ್ರಕಟಣೆ

ನೋಂದಣಿ ಮತ್ತು ಮುದ್ರಾಂಕ ಇಲಾಖೆಯ **ಕಛೇರಿಗಳಲ್ಲಿ ಹೊಸದಾಗಿ ಅಳವಡಿಸಲಾಗಿರುವ ಐಟಿ ಹಾರ್ಡ್‌ವೇರ್‌ಗಳ ಜೊತೆಗೆ ಸಂಬಂಧಿಸಿದ ಭಾಗಗಳನ್ನು ಮೂರನೇ ಪಕ್ಷಕಾರರಿಂದ ತಪಾಸಣೆ ನಡೆಸಲು ಸಂಸ್ಥೆಯನ್ನು ಆಯ್ಕೆ ಮಾಡಲು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.** ಆಸಕ್ತಿ ಹೊಂದಿರುವ ಏಜೆನ್ಸಿಗಳು ಟೆಂಡರ್ ಫಾರಂಗಳು ಮತ್ತು ಷರತ್ತುಗಳನ್ನು ಇ–ಟೆಂಡರ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://eproc.karnataka.gov.in.** ಮೂಲಕ ಪಡೆಯಬಹುದು. ಪೂರ್ಣಗೊಳಿಸಿದ ಟೆಂಡರ್ ಫಾರಂಗಳನ್ನು **ದಿನಾಂಕ: 24–02–2023ರ ಸಂಜೆ 5.00 ಗಂಟೆಯವರೆವಿಗೂ** ಸಲ್ಲಿಸಬಹುದು. ಹೆಚ್ಚಿನ ವಿವರಗಳಿಗೆ **ಸಹಾಯಕ ನೋಂದಣಿ ಮಹಾಪರಿವೀಕ್ಷಕರು (ಗಣಕೀಕರಣ)** ಇವರನ್ನು ಸಂಪರ್ಕಿಸಿ.

ಸಹಿ/– ಸಹಾಯಕ ನೋಂದಣಿ ಮಹಾಪರಿವೀಕ್ಷಕರು
(ಗಣಕೀಕರಣ)
DIPR/CP/YC/4305/2022-23

ಆಯುಕ್ತಾಲಯ
ಆಹಾರ ಸುರಕ್ಷತೆ ಹಾಗೂ ಗುಣಮಟ್ಟ ಪ್ರಾಧಿಕಾರ
ಶೇಷಾದ್ರಿ ರಸ್ತೆ, ಬೆಂಗಳೂರು – 560 001.
ಇ–ಮೇಲ್: cfskarnataka@gmail.com
ಸಂಖ್ಯೆ: FSSA/E-Tender/EOI/02/2022-23 ದಿನಾಂಕ: 21.01.2023

ಟೆಂಡರ್ ಪ್ರಕಟಣೆ

ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ, ಕರ್ನಾಟಕ, ಇವರು ಕೇಂದ್ರ ಎಫ್‌ಎಸ್‌ಎಸ್‌ಎಐನಿಂದ ಮಾನ್ಯತೆ ಪಡೆದ / ಎಂಪ್ಯಾನೈಲ್ಡ್ ಆಗಿರುವ ಆಡಿಟಿಂಗ್ ಏಜೆನ್ಸಿಗಳಿಂದ ಕರ್ನಾಟಕ ರಾಜ್ಯದಲ್ಲಿ ಆಹಾರ ಉದ್ದಿಮೆಗಳ ಹೈಜಿನ್ ರೇಟಿಂಗ್ ಆಡಿಟ್‌ಗಳನ್ನು ಕೇಂದ್ರ ಎಫ್‌ಎಸ್‌ಎಸ್‌ಎಐ ನಿಗದಿಪಡಿಸಿದ ದರ ಶ್ರೇಣಿಗಳಲ್ಲಿ ಕೈಗೊಳ್ಳಲು ಇಒಐ ಆಹ್ವಾನಿಸಿದೆ. **ಇಒಐ ಸಲ್ಲಿಸಲು ಕೊನೆಯ ದಿನಾಂಕ: 01.02.2023 ಸಂಜೆ 5:30 ಗಂಟೆವರೆಗೆ.** ಆಸಕ್ತ ಆಡಿಟಿಂಗ್ ಏಜೆನ್ಸಿಗಳು ತಮ್ಮ ಬಿಡ್‌ಗಳನ್ನು ಸಲ್ಲಿಸುವ ಮೂಲಕ ಭಾಗವಹಿಸಬಹುದು. ಹೆಚ್ಚಿನ ವಿವರಗಳಿಗೆ https://eproc.karnataka.gov.in ಸಂಪರ್ಕಿಸಿ.

ಸಹಿ/–
ಉಪ ಆಯುಕ್ತರು,
ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ,
ಬೆಂಗಳೂರು
ವಾಸಾಸಂಇ/ವಾಪ್ರ/4259/MAA/2022–23

ಕೆ–ರೈಡ್
K RIDE
ರೈಲು ಮೂಲಸೌಲಭ್ಯ ಅಭಿವೃದ್ಧಿ ಕಂಪನಿ (ಕರ್ನಾಟಕ) ನಿಯಮಿತ
(ಕರ್ನಾಟಕ ಸರ್ಕಾರ ಮತ್ತು ರೈಲ್ವೆ ಸಚಿವಾಲಯದ ಜಂಟಿ ಉದ್ಯಮ)
ನೋಂದಾಯಿತ ಕಚೇರಿ: ಕೆ–ರೈಡ್, ಸಂಪರ್ಕ ಸೌಧ, 1ನೇ ಮಹಡಿ, ಓರಿಯನ್ ಮಾಲ್ ಎದುರು,
ಡಾ. ರಾಜ್‌ಕುಮಾರ್ ರಸ್ತೆ, ರಾಜಾಜಿನಗರ 1ನೇ ಬ್ಲಾಕ್, ಬೆಂಗಳೂರು–560010
ದೂರವಾಣಿ: +91 6364890811, +91 6364874850 ಇ–ಮೇಲ್: praveen.kumar.kride@ka.gov.in
CIN: U60100KA2000PLC028171
ಸಂ: ಕೆ–ರೈಡ್/ಡಿಎಲ್/01/2023 ದಿ: 25.01.2023

ಇ–ಟೆಂಡರ್ ಪ್ರಕಟಣೆ

ಕೆ–ರೈಡ್, ಬೆಂಗಳೂರು ಇವರು ಈ ಕೆಳಗೆ ವಿವರಿಸಿರುವ ಕಾಮಗಾರಿಗಾಗಿ ಅರ್ಹ ಟೆಂಡರುದಾರರುಗಳಿಂದ ಏಕ ಹಂತದ ದ್ವಿಲಕೋಟೆ ಪದ್ಧತಿಯಲ್ಲಿ (ತಾಂತ್ರಿಕ ಬಿಡ್ ಮತ್ತು ಆರ್ಥಿಕ ಬಿಡ್) ಆನ್‌ಲೈನ್ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕೆಲಸದ ಹೆಸರು	ಅಂದಾಜು ಮೌಲ್ಯ ರೂ. ಕೋಟಿಗಳಲ್ಲಿ)
"ಯಶವಂತಪುರ–ಚನ್ನಸಂದ್ರ ಡಬ್ಲಿಂಗ್ ಯೋಜನೆ–ನೈರುತ್ಯ ರೈಲ್ವೆಯ ಬೆಂಗಳೂರು ವಿಭಾಗದಲ್ಲಿ ಯಶವಂತಪುರದಿಂದ ಬೈಯಪ್ಪನಹಳ್ಳಿ 'ಎ' ಪ್ಯಾನೆಲ್ ಸೆಕ್ಷನ್ ನಡುವೆ ಸೆಸ್ ಹಾಗೂ ಪೆರಿಯನಾಗ ತುನೈ(ಪಿಆರ್‌ಎನ್‌ಟಿ) ಯಾರ್ಡ್ ಡಿಪೋದಲ್ಲಿ ಮೆಷಿನ್ ಕ್ರಷ್ಡ್ ಜಲ್ಲಿಕಲ್ಲಿನ ಸಂಗ್ರಹಣೆ ಮತ್ತು ಸರಬರಾಜು".	8.99

ಆನ್‌ಲೈನ್ ಟೆಂಡರ್ ಸಲ್ಲಿಸುವ ಕಡೆಯ ದಿನಾಂಕ: **27.02.2023.** ಹೆಚ್ಚಿನ ವಿವರಗಳಿಗಾಗಿ **https://eproc.karnataka.gov.in** ಮತ್ತು **www.kride.in** ಗೆ ಭೇಟಿನೀಡಿ:

ಸಹಿ/– ಪ್ರಧಾನ ವ್ಯವಸ್ಥಾಪಕರು/ಸಿವಿಲ್/ಯೋಜನೆಗಳು,
ಕೆ–ರೈಡ್, ಬೆಂಗಳೂರು.
ವಾಸಾಸಂಇ/ಉನಿ-ಸಿಪಿ/4302/ಎಂಸಿಎ/2022–23

Kempegowda INTERNATIONAL AIRPORT BENGALURU

ಪ್ರಸ್ತಾವನೆ ಕೋರಿದ ಸಂಸ್ಥೆಯ ಹೆಸರು ಮತ್ತು ವಿಳಾಸ:
ಬೆಂಗಳೂರು ಇಂಟರ್‌ನ್ಯಾಷನಲ್ ಏರ್‌ಪೋರ್ಟ್ ಲಿಮಿಟೆಡ್
ಅಲ್ಫಾ 3ಎ, ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ,
ಬೆಂಗಳೂರು 560 300
ವೆಬ್‌ಸೈಟ್: www.bengaluruairport.com

ಹಿತಾಸಕ್ತಿ ವ್ಯಕ್ತಪಡಿಸುವಿಕೆ (ಇಒಐ) ಸೂಚನೆ

ಕ್ರ.ಸಂ.	ಟೆಂಡರ್ ಶೀರ್ಷಿಕೆ	ಕಾಮಗಾರಿ ಸ್ವರೂಪದ ಸಂಕ್ಷಿಪ್ತ ವಿವರ
1	ಲಾಜಿಸ್ಟಿಕ್ ಪಾರ್ಕ್‌ಗೆ ಮೂಲಸೌಕರ್ಯ ಅಭಿವೃದ್ಧಿ ಕಾಮಗಾರಿಗಳು	ವಾಯುವ್ಯ ರಸ್ತೆಗಾಗಿ ದ್ವಿಪಥ ರಸ್ತೆ ಮತ್ತು ಆಂತರಿಕ ರಸ್ತೆ ನಿರ್ಮಾಣ ಸೇರಿದಂತೆ ಇನ್ನಿತರ ಸಂಬಂಧಿತ ಕಾಮಗಾರಿಗಳು.

ಪೂರ್ವಾರ್ಹತೆಯ ಮಾನದಂಡ ಮತ್ತು ಇನ್ನಿತರ ಮಾಹಿತಿ: ಬಿಐಎಎಲ್ ವೆಬ್‌ಸೈಟ್‌ನಲ್ಲಿ ಲಭ್ಯವಿದೆ (Tenders (bengaluruairport.com)

ಮೇಲ್ಕಂಡ ಎಲ್ಲದಕ್ಕೂ ಸಲ್ಲಿಕೆಯ ಕೊನೆಯ ದಿನಾಂಕ ಮತ್ತು ಸಮಯ: 6 ಫೆಬ್ರವರಿ, 2023 –20.00 ಗಂಟೆ

ಸೂಚನೆ: ಸದರಿ ಇಒಐ ಪ್ರಕಟಣೆಗೆ ಯಾವುದೇ ತಿದ್ದುಪಡಿ/ಮಾರ್ಪಾಡು ಉಂಟಾದಲ್ಲಿ ಅಂತಹವುಗಳನ್ನು ಬಿಐಎಎಲ್ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುತ್ತದೆ.

ಆಸಕ್ತಿಯುಳ್ಳ ಅರ್ಜಿದಾರರು ತಮ್ಮ ಆಸಕ್ತಿಯನ್ನು ramesh.hegde@bialairport.com ವಿಳಾಸಕ್ಕೆ ಇ–ಮೇಲ್ ಮುಖಾಂತರ ವ್ಯಕ್ತಪಡಿಸಬಹುದು ಅಥವಾ ಬಿಐಎಎಲ್ ಇ–ಟೆಂಡರಿಂಗ್‌ಗೆ ಲಾಗಿನ್ ಮಾಡಿ ನೋಂದಣಿ ಮಾಡಬಹುದು. (https://www.bialtenders.com) event ID: 2245.

ಮುಖ್ಯಸ್ಥರು, ಖರೀದಿ ಮತ್ತು ಗುತ್ತಿಗೆಗಳು
ಆರ್‌ಎಫ್‌ಕ್ಯೂ ಕೋರಿದ ಸಂಸ್ಥೆಯ ಹೆಸರು ಮತ್ತು ವಿಳಾಸ:
ಬೆಂಗಳೂರು ಇಂಟರ್‌ನ್ಯಾಷನಲ್ ಏರ್‌ಪೋರ್ಟ್ ಲಿಮಿಟೆಡ್
ಅಲ್ಫಾ 3ಎ, ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ,
ದೇವನಹಳ್ಳಿ, ಬೆಂಗಳೂರು – 560 300
ಇಮೇಲ್: **ramesh.hegde@bialairport.com;**
ದೂರವಾಣಿ ಸಂ. 080–6678 2203
www.bengaluruairport.com

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ವಿಭಾಗ ವಿಜಯಪುರ
No:EE/MID/VJP/AE-3/4702/TND/2022-23/3811 Date: 21.01.2023

ಅಲ್ಪಾವಧಿ ಟೆಂಡರ್ ಪ್ರಕಟಣೆ

ಅರ್ಹ ಗುತ್ತಿಗೆದಾರರಿಂದ ಐಟಂ ದರದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ–2000 ಮತ್ತು ಇತ್ತೀಚಿನ ತಿದ್ದುಪಡಿಗಳಂತೆ ಈ ಕೆಳಗಿನ ಕಾಮಗಾರಿಗಳಿಗಾಗಿ "ಇ–ಪ್ರೋಕ್ಯುರಮೆಂಟ್" ಮುಖಾಂತರ ಟೆಂಡರ ಕರೆಯಲಾಗಿದೆ.

ಪ್ರಧಾನ ಕಾಮಗಾರಿಗಳು :– ಒಟ್ಟು 4 ಕಾಮಗಾರಿಗಳು, ಅಂದಾಜು ಮೊತ್ತ **ರೂ.521.06 ಲಕ್ಷಗಳು, ಕಾಮಗಾರಿಗಳನ್ನು ಪೂರ್ಣಗೊಳಿಸುವ ಕಾಲಾವಧಿ ಮಳೆಗಾಲ ಸಹಿತ ಆರು(6) ತಿಂಗಳುಗಳಿಂದ ಒಂಭತ್ತು (9)ತಿಂಗಳುಗಳು.**

ಎಸ್.ಸಿ.ಪಿ. ಕಾಮಗಾರಿಗಳು :– ಒಟ್ಟು 1 ಕಾಮಗಾರಿ, ಅಂದಾಜು ಮೊತ್ತ **ರೂ.98.50 ಲಕ್ಷಗಳು, ಕಾಮಗಾರಿಗಳನ್ನು ಪೂರ್ಣಗೊಳಿಸುವ ಕಾಲಾವಧಿ ಮಳೆಗಾಲ ಸಹಿತ ಆರು(6) ತಿಂಗಳುಗಳು.**

ಟಿ.ಎಸ್.ಪಿ. ಕಾಮಗಾರಿ :– ಒಟ್ಟು 3 ಕಾಮಗಾರಿ, ಅಂದಾಜು ಮೊತ್ತ **ರೂ.21.54 ಲಕ್ಷಗಳು, ಕಾಮಗಾರಿಗಳನ್ನು ಪೂರ್ಣಗೊಳಿಸುವ ಕಾಲಾವಧಿ ಮಳೆಗಾಲ ಸಹಿತ ಮೂರು(3) ತಿಂಗಳುಗಳು.**

ಗುತ್ತಿಗೆದಾರರು ಕರ್ನಾಟಕ ಸರಕಾರದ "ಇ–ಪ್ರೋಕ್ಯುರಮೆಂಟ್" ವೆಬ್ಸೈಟ https://eproc.karnataka.gov.in/eportal/index.seam ನಲ್ಲಿ ಲಾಗಿನ್ ಆಗಿ **ದಿನಾಂಕ:01.02.2023** ರಿಂದ Download ಮಾಡಿಕೊಳ್ಳಬಹುದು. ಟೆಂಡರಗಳನ್ನು ಇ.ಎಂ.ಡಿ ಹಾಗೂ ಟೆಂಡರ ಶುಲ್ಕದೊಂದಿಗೆ (ವೆಬ್ ಸೈಟನಲ್ಲಿ ನಿಗದಿತ ಮಾಡಿರುವ ಯಾವುದಾದರೂ ಒಂದು ಮಾದರಿಯಲ್ಲಿ ಆನ್‌ಲೈನ್ ಪೇಮೆಂಟ ಮಾತ್ರ) "ಇ–ಪ್ರೋಕ್ಯುರಮೆಂಟ್" ವೆಬ್ಸೈಟ https://eproc.karnataka.gov.in/eportal/index.seam ನಲ್ಲಿ ಲಾಗಿನ್ ಆಗಿ **ದಿನಾಂಕ:15.02.2023** ರ 16–00 ಘಂಟೆವರೆಗೆ ಸ್ವೀಕರಿಸಲಾಗುವದು. **ದಿನಾಂಕ: 06.02.2023** ರಂದು ಕಾರ್ಯನಿರ್ವಾಹಕ ಇಂಜಿನೀಯರರು ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ವಿಭಾಗ ವಿಜಯಪುರ ಇವರ ಕಛೇರಿಯಲ್ಲಿ ರೂ. 1.00 ಕೋಟಿ ಮೀರಿದ ಕಾಮಗಾರಿಗಳಿಗೆ ಪ್ರಿ–ಬಿಡ್ ಸಭೆಯನ್ನು ಆಯೋಜಿಸಲಾಗಿದ್ದು ಕಾಮಗಾರಿಗಳ ಬಗ್ಗೆ ಮಾಹಿತಿ ಪಡೆಯಲು ಆಸಕ್ತಿಯುಳ್ಳ ಗುತ್ತಿಗೆದಾರರು ಹಾಜರಾಗಿ ಪಡೆಯಬಹುದು. ಕಾಮಗಾರಿ ಪಡೆಯಲು ಅರ್ಹತೆ, ಶರತ್ತುಗಳು, ಕಾಮಗಾರಿಗಳ ವಿವರ ಇತ್ಯಾದಿಗಳನ್ನು **ದಿನಾಂಕ:14.02.2023** ರ 16–00 ಘಂಟೆವರೆಗೆ ವಿಭಾಗ ಕಛೇರಿಯಲ್ಲಿ (ಫೋನಃ–08352–277188) ಅಥವಾ "ಇ–ಪ್ರೋಕ್ಯುರಮೆಂಟ್" ಹೆಲ್ಪ ಡೆಸ್ಕನಿಂದ (ಫೋನಃ–080–25501216 ಮತ್ತು 080–25501227) ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ವಿಭಾಗ ವಿಜಯಪುರ
ವಾಸಾಸಂಇ/ವಿಜಯಪುರ/791/ಎಂಸಿಎ/2022–23

ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ
ಸರ್ ಸಿದ್ದಪ್ಪ ಕಂಬಳಿ ರಸ್ತೆ ದೂರವಾಣಿ : 2213898, 2213888 website : www.hdmc.gov.in
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ(ವಿ) ಹುಬ್ಬಳ್ಳಿ

ಇ–ಟೆಂಡರ ಅಧಿಸೂಚನೆ

ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಿಕ ಆದೇಶ 1999–2000 ರ ಪ್ರಕಾರ ಆ್ಯಕ್ಟ 2000 ರ ನಿಯಮದಂತೆ ಕರ್ನಾಟಕ ವಿದ್ಯುತ್ ಪರೀವೀಕ್ಷಕರಿಂದ ಗುತ್ತಿಗೆದಾರಿಕೆ ಪರವಾನಿಗೆ ಹೊಂದಿರುವ / ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯಲ್ಲಿ /ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ವಿದ್ಯುತ್ ಗುತ್ತಿಗೆದಾರರು ಮಹಾನಗರ ಪಾಲಿಕೆಯಲ್ಲಿ ಸಹ ನೋಂದಣಿಯಾಗಿರುವ ಇ–ಪ್ರೊಕ್ಯೂರಮೆಂಟ ಪೋರ್ಟಲ್ ಮುಖಾಂತರ ಈ ಕೆಳಕಂಡ ಕಾಮಗಾರಿಗಳ ಟೆಂಡರಗಳಲ್ಲಿ ಭಾಗವಹಿಸಬಹುದು.

ಸಾಮಾನ್ಯ ಸೂಚನೆಗಳು : ಗುತ್ತಿಗೆದಾರರು ಗುತ್ತಿಗೆಗಳನ್ನು ಆನ್‌ಲೈನ್ ಮೂಲಕ ಸಲ್ಲಿಸುವುದು.

ಹೆಚ್ಚಿನ ಮಾಹಿತಿಯನ್ನು ಕಾರ್ಯನಿರ್ವಾಹಕ ಇಂಜಿನೀಯರ (ವಿದ್ಯುತ್) ಇವರ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿದೆ. ದೂರವಾಣಿ ಸಂಖ್ಯೆ: ಹುಬ್ಬಳ್ಳಿ ಕಚೇರಿ **0836–2351024** ಮತ್ತು ಅಂತರ್‌ಜಾಲದ ಮೂಲಕ ವೆಬ್‌ಸೈಟ್ ವಿಳಾಸ : **http://www.eproc.karnataka.gov.in** ರಲ್ಲಿ ಪಡೆಯಬಹುದು. ಟೆಂಡರ ದಾಖಲೆಗಳನ್ನು ಕರ್ನಾಟಕ ಸರ್ಕಾರ ಇ–ಪ್ರೊಕ್ಯೂರಮೆಂಟನಲ್ಲಿ ದಿನಾಂಕ : **27– 01–2023** ರಿಂದ ಪಡೆಯಬಹುದು. **ಒಂದು ವೇಳೆ ಸದರಿ ಟೆಂಡರಗಳಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಸದರಿ ಬದಲಾವಣೆಯ ವಿವರಗಳನ್ನು ಇ–ಪೋರ್ಟಲ್ ನಲ್ಲಿ ಮಾತ್ರ ಪ್ರಕಟಿಸಲಾಗುವುದು.**

ಪೂರ್ಣಾವಧಿ ಕಾಮಗಾರಿಗಳು

1. ಸಾಮಾನ್ಯ ವರ್ಗದ ಗುತ್ತಿಗೆದಾರಿಗೆ ಮೀಸಲಾದ ಕಾಮಗಾರಿಗಳು

Indent No (1) 145756, ಅಂದಾಜು ಮೊತ್ತ ರೂ. **1,50,000.00,** ಕಾಮಗಾರಿ ನಿರ್ವಹಣೆ : 03 ತಿಂಗಳು. (2) 145755, ಅಂದಾಜು ಮೊತ್ತ ರೂ. **4,59,000.00,** ಕಾಮಗಾರಿ ನಿರ್ವಹಣೆ : 03 ತಿಂಗಳು. (3) 145754, ಅಂದಾಜು ಮೊತ್ತ ರೂ. **143500.00,** ಕಾಮಗಾರಿ ನಿರ್ವಹಣೆ : 03 ತಿಂಗಳು. (4) 145753, ಅಂದಾಜು ಮೊತ್ತ ರೂ. **3,03,000.00,** ಕಾಮಗಾರಿ ನಿರ್ವಹಣೆ : 03 ತಿಂಗಳು. (5) 145736, ಅಂದಾಜು ಮೊತ್ತ : ರೂ. **948000.00,** ಕಾಮಗಾರಿ ನಿರ್ವಹಣೆ : 03 ತಿಂಗಳು. (6) 145734, ಅಂದಾಜು ಮೊತ್ತ : ರೂ. **484000,** ಕಾಮಗಾರಿ ನಿರ್ವಹಣೆ : 03 ತಿಂಗಳು. (7) 145730, ಅಂದಾಜು ಮೊತ್ತ : ರೂ. **511000.000,** ಕಾಮಗಾರಿ ನಿರ್ವಹಣೆ : 03 ತಿಂಗಳು. (8) 145760, ಅಂದಾಜು ಮೊತ್ತ : ರೂ. **921400.00,** ಕಾಮಗಾರಿ ನಿರ್ವಹಣೆ : 03 ತಿಂಗಳು. (9) 133536(ಕರೆ–6), ಅಂದಾಜು ಮೊತ್ತ : ರೂ. **11,50,000.00,** ಕಾಮಗಾರಿ ನಿರ್ವಹಣೆ : 03 ತಿಂಗಳು. (10) DMC/HDMC/O/SG/wetwell/2023-24, ಅಂದಾಜು ಮೊತ್ತ : ರೂ. **820000.00** (ಸೇವೆ)

2. ಪರಿಶಿಷ್ಟ ಜಾತಿ ಗುತ್ತಿಗೆದಾರಿಗೆ ಮೀಸಲಾದ ಕಾಮಗಾರಿಗಳು

Indent No (1) 145757, ಅಂದಾಜು ಮೊತ್ತ : ರೂ. **234000.00,** ಕಾಮಗಾರಿ ನಿರ್ವಹಣೆ : 03 ತಿಂಗಳು (2) 145735,ಅಂದಾಜು ಮೊತ್ತ : ರೂ. **306000,** ಕಾಮಗಾರಿ ನಿರ್ವಹಣೆ : 03 ತಿಂಗಳು. (3) 144476, ಅಂದಾಜು ಮೊತ್ತ : ರೂ. **4000000,** ಕಾಮಗಾರಿ ನಿರ್ವಹಣೆ : 03 ತಿಂಗಳು.

3. ಪರಿಶಿಷ್ಟ ಪಂಗಡ ಗುತ್ತಿಗೆದಾರಿಗೆ ಮೀಸಲಾದ ಕಾಮಗಾರಿಗಳು

Indent No (1) 145759, ಅಂದಾಜು ಮೊತ್ತ : ರೂ. **4955000.00,** ಕಾಮಗಾರಿ ನಿರ್ವಹಣೆ : 03 ತಿಂಗಳು.

- ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ : **13–02–2023** ಸಂಜೆ 4.00 ಗಂಟೆಯವರೆಗೆ
- ಟೆಂಡರ ತೆರೆಯುವ ದಿನಾಂಕ : **14–02–2023** ಸಂಜೆ 4.30 ಗಂಟೆ.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು(ವಿ)
ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ,
ಹುಬ್ಬಳ್ಳಿ.
ವಾಸಾಸಂಇ/ಧಾ/ಕೆಎಸ್‌ಎಂಸಿಎ/1002/2022–23

ಪ್ರಾದೇಶಿಕ ಆಯುಕ್ತರ ಕಾರ್ಯಾಲಯ, ಬೆಂಗಳೂರು ವಿಭಾಗ, ಬೆಂಗಳೂರು
2ನೇ ಮಹಡಿ, ಬಿ.ಎಂ.ಟಿ.ಸಿ. ಕಟ್ಟಡ, ಶಾಂತಿನಗರ, ಕೆ.ಹೆಚ್.ರಸ್ತೆ, ಬೆಂಗಳೂರು
ಸಂಖ್ಯೆ: ಕೆಪಿಐಡಿಎಫ್‌ಇ/ಸಿ.ಎ/ಎ.ಸಿ.ಟಿ/ಸಿ.ಆರ್/15&16/2022–23 ದಿನಾಂಕ:24.01.2023

ಪ್ರಕಟಣೆ

ವಿಷಯ: ಸಕ್ಷಮ ಪ್ರಾಧಿಕಾರಿ, ಕೆಪಿಐಡಿಎಫ್‌ಇ ಕಾಯ್ದೆ ಹಾಗೂ ಅಪರ ಪ್ರಾದೇಶಿಕ ಆಯುಕ್ತರು, ಪ್ರಾದೇಶಿಕ ಆಯುಕ್ತರ ಕಛೇರಿ, ಬೆಂಗಳೂರು ವಿಭಾಗ, ಬೆಂಗಳೂರು ರವರ ಕಛೇರಿಗೆ ಮಾನವ ಸಂಪನ್ಮೂಲ ಸೇವೆ ಪಡೆಯಲು ದರಪಟ್ಟಿಯನ್ನು (Inviting Quotation) ಆಹ್ವಾನಿಸುತ್ತಿರುವ ಬಗ್ಗೆ

ಉಲ್ಲೇಖ: ಸರ್ಕಾರದ ಅಧಿಸೂಚನೆ ಸಂಖ್ಯೆ ಇ–ಕಂಇ 06 ಜಿಆರ್‌ಡಿ 2020, ದಿನಾಂಕ:28.11.2022.

ಸಕ್ಷಮ ಪ್ರಾಧಿಕಾರಿ, ಕೆಪಿಐಡಿಎಫ್‌ಇ ಕಾಯ್ದೆ ಹಾಗೂ ಅಪರ ಪ್ರಾದೇಶಿಕ ಆಯುಕ್ತರು ರವರ ಕಛೇರಿಗೆ ಉಲ್ಲೇಖಿತ ಸರ್ಕಾರದ ಆದೇಶದಂತೆ ಮಂಜೂರಿಯಾಗಿ ನೇಮಕಾತಿ ಆಗದೇ ಬಾಕಿ ಇರುವ ಈ ಕೆಳಕಂಡ ಹುದ್ದೆಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಕಾತಿಗಾಗಿ ಆಸಕ್ತ ಏಜೆನ್ಸಿಗಳಿಂದ/ಆಸಕ್ತ ವೈಯಕ್ತಿಕ ವ್ಯಕ್ತಿಗಳಿಂದ ದರಪಟ್ಟಿಯನ್ನು ಮತ್ತು ಸ್ವ–ವಿವರ(Resume) ಆಹ್ವಾನಿಸಲಾಗಿದ್ದು, **ದಿನಾಂಕ: 04.02.2023 ರೊಳಗಾಗಿ** ಈ ಕಛೇರಿಗೆ ಸಲ್ಲಿಸುವುದು.

Sl No.	Post/ Designation	Qualification		Relevant Experience		No of Posts	Contract/outsource wage per Month	Age
		Basic	Preference	Basic	Preference		Based on Qualification & Experience	
1	Legal Adviser and Counsel	LLB, Registered at Bar Council of Karnataka	LLM, Registered at Bar Council of Karnataka	Advocate with 15 years Experience at Bar Council of High Court Karnataka	Retd Dist. Judge/Legal Advisor to RBI/CBI/ED	1	Rs. 1,00,000	Not Exceeding 65 years
2	Banking Expert	M.Com	CA/LLB	15 years in Bank, Retired as AGM	20 years in Bank, Retired as DGM	1	Rs. 1,00,000	Not Exceeding 63 years

ಸಹಿ/– ಪ್ರಾದೇಶಿಕ ಆಯುಕ್ತರು,
ಬೆಂಗಳೂರು ವಿಭಾಗ, ಕಂದಾಯ ಇಲಾಖೆ ಹಾಗೂ ನೋಡಲ್ ಅಧಿಕಾರಿ,
ಪದ ನಿಮಿತ್ತ ಕಾರ್ಯದರ್ಶಿಗಳು (ಆರ್ಥಿಕ ಅಪರಾಧಗಳು) ಬೆಂಗಳೂರು
ವಾಸಾಸಂಇ/ವಾಪ್ರ/ಜಿಎ/4304/2022–23

ಕರ್ನಾಟಕ ಸರಕಾರ
(ಜಲ ಸಂಪನ್ಮೂಲ ಇಲಾಖೆ)
ಕಾರ್ಯನಿರ್ವಾಹಕ ಅಭಿಯಂತರರು, ಕೃಮೇಯೋ,ಪುನರವಸತಿ ವಿಭಾಗ ನಂ.4, ಬೀಳಗಿ,ಕ್ಯಾಂಪ:ನವನಗರ–ಬಾಗಲಕೋಟೆ ಇವರ ಕಾರ್ಯಾಲಯ.
ಸಂ:ಕೃಮೇಯೋ/ಕಾನಿಅ/ಪುವಿ–4/ಯೋವಿ–2/ಟೆಂಡರ್–18/2022–23/1620 ದಿನಾಂಕ:24–01–2023.

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರಮೆಂಟ್ ಮುಖಾಂತರ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿಸೂಚನೆಯಂತೆ ಅರ್ಹ ಗುತ್ತಿಗೆದಾರರಿಂದ ಇಂಡೆಂಟ್ ಸಂ: 1015, 1011, 1010, 1030, 1032, 990, 1023, 1009 & 1027 (ಒಟ್ಟು 09 ಕಾಮಗಾರಿಗಳ ಮೊತ್ತ ರೂ: 56.48 ಲಕ್ಷಗಳಿಂದ 114.40 ಲಕ್ಷಗಳವರೆಗೆ) ದ್ವಿಲಕೋಟೆ ಪದ್ಧತಿಯಲ್ಲಿ ಟೆಂಡರನ್ನು ಆಹ್ವಾನಿಸಲಾಗಿದೆ. ಇ–ಪ್ರೊಕ್ಯೂರಮೆಂಟ್‌ದಲ್ಲಿ ಬಿಡ್ ಸಲ್ಲಿಸುವ ಕೊನೆಯ ದಿನಾಂಕ: 10–02–2023 ಸಂಜೆ 17.30 ಗಂಟೆವರೆಗೆ. ಟೆಂಡರ್ ಮಾಹಿತಿ, ನಿಬಂಧನೆ ಹಾಗೂ ವಿವರಗಳನ್ನು ಇ–ಪ್ರೊಕ್ಯೂರಮೆಂಟ್ ಪೋರ್ಟಲ್ www.eproc.karnataka govt.in ನಲ್ಲಿ ಈ ಕಚೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ.

ಸಹಿ/–ಕಾರ್ಯನಿರ್ವಾಹಕ ಅಭಿಯಂತರರು,
ಕೃಮೇಯೋ, ಪುನರವಸತಿ ವಿಭಾಗ ನಂ.4 ಬೀಳಗಿ,ಕ್ಯಾಂಪ:ನವನಗರ–ಬಾಗಲಕೋಟೆ.
DIPR/BGK/RO-NO-815/KSMCA/2022-23

ಕರ್ನಾಟಕ ಸರ್ಕಾರ
(ಮಕ್ಕಳ ರಕ್ಷಣಾ ನಿರ್ದೇಶನಾಲಯ, ಬೆಂಗಳೂರು)
ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ನೆಲಮಹಡಿ, ವಾರ್ತಾ ಇಲಾಖೆ ಎದುರುಗಡೆ, ಜಿಲ್ಲಾಡಳಿತ ಭವನ ಕೊಪ್ಪಳ.
E-Mail :dcpukoppal@gmail.com Ph. No: 08539-225030
ಸಂ: ಜಿಮರಘಕೊ/ಬಾ.ಸಂ/ಟೆಂಡರ್/23–24/2022–23 ದಿನಾಂಕ : 24.01.2023

ಇ–ಪ್ರೊಕ್ಯೂರ್‌ಮೆಂಟ್ ಧೀರ್ಘಾವಧಿ ಟೆಂಡರ್ ಪ್ರಕಟಣೆ

ಜಿಲ್ಲೆಯಲ್ಲಿ ಮಕ್ಕಳ ರಕ್ಷಣಾ ನಿರ್ದೇಶನಾಲಯದಡಿ, ಮಿಷನ್ ವಾತ್ಸಲ್ಯ ಮಾರ್ಗಸೂಚಿಯನ್ವಯ ಕಾರ್ಯನಿರ್ವಹಿಸುತ್ತಿರುವ ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಮಕ್ಕಳ ಪಾಲನಾ ಸಂಸ್ಥೆಗಳು (ಸರ್ಕಾರಿ ಬಾಲಕರ/ಬಾಲಕಿಯರ), ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ, ಜಿಲ್ಲಾ ಬಾಲನ್ಯಾಯ ಮಂಡಳಿ, ಕೊಪ್ಪಳ ಕಛೇರಿಗಳಿಗೆ ಅವಶ್ಯವಿರುವ ವಿವಿಧ 36 ಸಿಬ್ಬಂದಿಗಳನ್ನು ಹೊರಗುತ್ತಿಗೆ ಆಧಾರದಲ್ಲಿ ಪೂರೈಸಲು ಅರ್ಹ ಏಜೆನ್ಸಿ/ಸಂಸ್ಥೆಯನ್ನು ಗುರುತಿಸಲು **ದ್ವಿ ಲಕೋಟೆ** ಪದ್ಧತಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್‌ನ ಅಂದಾಜು ಮೊತ್ತ **ರೂ. 80,00,000/–** ಆಗಿರುತ್ತದೆ.

ಇ–ಪೋರ್ಟಲ್‌ನಲ್ಲಿ ಟೆಂಡರ್ ಅರ್ಜಿಗಳನ್ನು ಸಲ್ಲಿಸಲು ಪ್ರಾರಂಭದ ದಿನಾಂಕ: **25.01.2023,** ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ **24.02.2023 ಸಂಜೆ 5.30 ಗಂಟೆಯವರೆಗೆ.** ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **27.02.2023, 12:00 ಗಂಟೆಗೆ,** ಆರ್ಥಿಕ ಬಿಡ್ ತೆರೆಯುವ ದಿನಾಂಕ: **01.03.2023, 12 :00 ಗಂಟೆಗೆ.** ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ ಕಛೇರಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಕೊಪ್ಪಳ ಇವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು. ಕಛೇರಿ ದೂರವಾಣಿ ಸಂಖ್ಯೆ: **08539–225030.** ಟೆಂಡರ್ ಅರ್ಜಿಯನ್ನು ಇ–ಪೋರ್ಟಲ್ http://eproc.karnataka.gov.in (Indent: DCPU/CCI/KPL/MPAS/2023-24) ಮುಖಾಂತರ ಸಲ್ಲಿಸತಕ್ಕದ್ದು.

ಸಹಿ/– ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು
ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಕೊಪ್ಪಳ.
ವಾ.ಸಾ.ಇ./ಕೊಪ್ಪಳ/592/2022–23/ದೇಶಪಾಂಡೆ ಪಬ್ಲಿಸಿಟಿ

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಬಳ್ಳಾರಿ.
ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬಳ್ಳಾರಿ.
ಸಂ: ಕಾನಿಇಂ/ಪಂ.ರಾ.ಇಂ.ವಿ/ಬ/ಎಇ–1/ವಿ.ವಿ.ಲೆ.ಶಿ/ಟೆಂಡರು/2022–23/1614
ದಿನಾಂಕ 23.01.2023

ಟೆಂಡರು ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಕರ್ನಾಟಕ ರಾಜ್ಯಪಾಲರ ಪರವಾಗಿ ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಪಂ.ರಾ.ಇಂ. ವಿಭಾಗ, ಬಳ್ಳಾರಿ ವ್ಯಾಪ್ತಿಯ **ಶಾಸಕರ ಸ್ಥಳಿಯ ಪ್ರದೇಶಾಭಿವೃದ್ಧಿ, ಡಿ.ಎಂ.ಎಫ್, ಎನ್.ಎಂ.ಡಿ.ಸಿ (ಸಿ.ಎಸ್.ಆರ್),5054 ರಸ್ತೆ ಯೋಜನೆ** ಅಡಿಯಲ್ಲಿ ಅನುಮೋದನೆಗೊಂಡ ರಸ್ತೆ ಮತ್ತು ಕಟ್ಟಡ ನಿರ್ಮಾಣದ ಒಟ್ಟು 07 ಕಾಮಗಾರಿಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಐಟಂವಾರು ದರಗಳಲ್ಲಿ ಟೆಂಡರು ಅಹ್ವಾನಿಸಿದೆ. ಸದರಿ ಕಾಮಗಾರಿಗಳಲ್ಲಿ **ಪರಿಶಿಷ್ಟ ಜಾತಿ ಗುತ್ತಿಗೆದಾರರಿಗೆ 01** ಕಾಮಗಾರಿಯನ್ನು ಕಾಯ್ದಿರಿಸಲಾಗಿದೆ.

ಟೆಂಡರ್ ನಮೂನೆಗಳನ್ನು www.eproc.karnataka.gov.in/e-portal/index.seam ಅಂತರ್ಜಾಲದಲ್ಲಿ ದಿನಾಂಕ 23–01–2023 ರಿಂದ ದಿನಾಂಕ 07–02–2023 ರಂದು ಸಂಜೆ 4.00 ಗಂಟೆವರೆಗೆ ಡೌನ್ ಲೋಡ್ ಮಾಡಿಕೊಂಡು ಅವಶ್ಯ ಮಾಹಿತಿ ಹಾಗೂ ನಿಗಧಿತ ಇ.ಎಂ.ಡಿ. ಯೊಂದಿಗೆ **ದಿನಾಂಕ: 07–02–2023** ರ 16.00 ಗಂಟೆಯವರಗೆ ಸ್ವೀಕರಿಸಲಾಗುವುದು. ಕಾಮಗಾರಿಯ ತಾಂತ್ರಿಕ ಬಿಡ್‌ನ್ನು ಆನ್ ಲೈನ್‌ನಲ್ಲಿ **ದಿನಾಂಕ: 08–02–2023** ರಂದು 17.00 ಗಂಟೆಗೆ ತೆರೆಯಲಾಗುವುದು. ಈ ಕುರಿತು ತಿದ್ದುಪಡಿಗಳೇನಾದರೂ ಇದ್ದಲ್ಲಿ ತಿದ್ದುಪಡಿಯನ್ನು (www.eproc.karnataka.gov.in/e-portal/index.seam) ವೆಬ್ ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಟೆಂಡರನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ. ಹೆಚ್ಚಿನ ವಿವರಗಳನ್ನು ಈ ಕಛೇರಿ ವೇಳೆಯಲ್ಲಿ ಖುದ್ದಾಗಿ ಪಡೆಯಬಹುದಾಗಿರುತ್ತದೆ. ಕಛೇರಿ ದೂರವಾಣಿ ಸಂಖ್ಯೆ 08392–266173.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಪಂ.ರಾ.ಇಂ. ವಿಭಾಗ, ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/847/ಎಂಸಿಎ/2022–23

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ, ಚಿಕ್ಕೋಡಿ.
ನಂ.ಲೋ.ಇ./ಚಿ.ವಿ./ಸ.ಇಂ.–3/ಟೆಂಡರ/2022–23/6774 ದಿನಾಂಕ:23/01/2023

ಅಲ್ಪಾವಧಿ ಇ–ಟೆಂಡರ ಪ್ರಕಟಣೆ

ಲೋಕೋಪಯೋಗಿ ಇಲಾಖೆ ಚಿಕ್ಕೋಡಿ ವಿಭಾಗದಡಿ ಲೆಕ್ಕ ಶೀರ್ಷಿಕೆ 4216–ನ್ಯಾಯಾಲಯ ಕಟ್ಟಡಗಳು ಅಡಿ 1 ಕಾಮಗಾರಿ, 2059–ವಿವಿಧ ಇಲಾಖಾ ಕಟ್ಟಡಗಳ ನಿರ್ವಹಣೆ ಅಡಿ 1 ಕಾಮಗಾರಿ, 5054–ರಾಹೆ ಸುಧಾರಣೆ ಅಡಿ 3 ಕಾಮಗಾರಿ ಹಾಗೂ 3054–ರಾಹೆ ನಿರ್ವಹಣೆ ಅಡಿ 1 ಕಾಮಗಾರಿ, ಹೀಗೆ ಒಟ್ಟು 6 ಕಾಮಗಾರಿಗಳು ಇದ್ದು, ಗುತ್ತಿಗೆ ಇಟ್ಟ ಕನಿಷ್ಠ ಮೊತ್ತ ರೂ. 21.14 ಲಕ್ಷ ಹಾಗೂ ರೂ. 239.95 ಲಕ್ಷ ಇರುವ ಕಾಮಗಾರಿಗಳಿಗೆ ಗುತ್ತಿಗೆ ಆಹ್ವಾನಿಸಲಾಗಿದೆ.

ಕ್ರ.ಸಂ. 1 ರಿಂದ 4 ರಲ್ಲಿನ ಕಾಮಗಾರಿಗಳಿಗೆ ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು.

1)ಗುತ್ತಿಗೆ ಪೂರ್ವಭಾವಿ ಸಭೆ ವಿಭಾಗ ಕಚೇರಿಯಲ್ಲಿ:27–01–2023 ರಂದು (11.00 ಗಂಟೆಗೆ), 2)ಆಕ್ಷೇಪಣೆ –ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ:30–01–2023(ಸಾಯಂಕಾಲ 5.30 ಗಂಟೆಯ ವರೆಗೆ), 3)ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ:01–02–2023 (ಸಾಯಂಕಾಲ 5.00 ಗಂಟೆಯವರೆಗೆ), 4)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Single Cover System): 03–02–2023 (ಸಾಯಂಕಾಲ 4.30 ಗಂಟೆಗೆ), 5)ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System):03–02–2023 (ಸಾಯಂಕಾಲ 4.30 ಗಂಟೆಗೆ), 6)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System):"ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ"

ಕ್ರ.ಸಂ. 5 & 6 ರಲ್ಲಿನ ಕಾಮಗಾರಿಗಳಿಗೆ ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು.

1)ಗುತ್ತಿಗೆ ಪೂರ್ವಭಾವಿ ಸಭೆ ವಿಭಾಗ ಕಚೇರಿಯಲ್ಲಿ:04–02–2023 ರಂದು (11.00 ಗಂಟೆಗೆ), 2)ಆಕ್ಷೇಪಣೆ – ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ:06–02–2023 (ಸಾಯಂಕಾಲ 5.30 ಗಂಟೆಯ ವರೆಗೆ), 3)ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ:08–02–2023 (ಸಾಯಂಕಾಲ 5.00 ಗಂಟೆಯವರೆಗೆ), 4)ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System):10–02–2023 (ಸಾಯಂಕಾಲ 4.30 ಗಂಟೆಗೆ), 5)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System):"ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ"

ಕಾಮಗಾರಿಯ ಎಲ್ಲ ವಿವರಗಳಿಗಾಗಿ ಇಲಾಖೆಯ ವೆಬ್‌ಸೈಟ್ www.eproc.karnataka.gov.in ನ್ನು ಮತ್ತು ಟೆಂಡರ ಪ್ರಕಟಣೆಗಾಗಿ www.kpwd.gov.in ನ್ನು ಗಮನಿಸಲು ಅಥವಾ ಲೋಕೋಪಯೋಗಿ ಇಲಾಖೆ ವಿಭಾಗ ಚಿಕ್ಕೋಡಿ ಕಾರ್ಯಾಲಯವನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ.

ಸಹಿ/–ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ.
DIPR/BGM/RO-NO-1607/KSMCA/2022-23

ಜನವರಿ 26ರಂದು ಫೀಲ್ಡ್ ಮಾರ್ಷಲ್ ಮಾಣೆಕ್‌ಷಾ ಮೈದಾನದಲ್ಲಿ ನಡೆಯಲಿರುವ ಪರೇಡ್

ಕವಾಯತಿನಲ್ಲಿ ಕೇರಳ ಪೊಲೀಸ್ ಮಹಿಳಾ ತಂಡ

ಪ್ರಜಾವಾಣಿ ವಾರ್ತೆ



ನಗರದ ಫೀಲ್ಡ್ ಮಾರ್ಷಲ್ ಮಾಣೆಕ್‌ಷಾ ಪರೇಡ್ ಮೈದಾನದಲ್ಲಿ ನಡೆಯುವ 74ನೇ ಗಣರಾಜ್ಯೋತ್ಸವದ ಕವಾಯತಿಗಾಗಿ ಶ್ವಾನದಳದೊಂದಿಗೆ ಸಿಬ್ಬಂದಿ ಮಂಗಳವಾರ ಅಭ್ಯಾಸ ನಡೆಸಿದರು —ಪ್ರಜಾವಾಣಿ ಚಿತ್ರ

ಬೆಂಗಳೂರು: ನಗರದ ಫೀಲ್ಡ್ ಮಾರ್ಷಲ್ ಮಾಣೆಕ್‌ಷಾ ಪರೇಡ್ ಮೈದಾನದಲ್ಲಿ ಜ.26ರಂದು ನಡೆಯುವ 74ನೇ ಗಣರಾಜ್ಯೋತ್ಸವದ ಕವಾಯತಿನಲ್ಲಿ ಕೇರಳದ ಪೊಲೀಸ್ ಮಹಿಳಾ ತಂಡ ಭಾಗವಹಿಸಲಿದೆ ಎಂದು ನಗರ ಪೊಲೀಸ್ ಕಮಿಷನರ್ ಪ್ರತಾಪ್ ರೆಡ್ಡಿ ತಿಳಿಸಿದರು.

ಪಥಸಂಚಲನದಲ್ಲಿ ಸೇನೆ, ವಾಯುಸೇನೆ, ಬಿಎಸ್‌ಎಫ್, ಸಿಆರ್‌ಪಿಎಫ್, ಪೊಲೀಸ್, ಸ್ಕೌಟ್ಸ್, ಎನ್‌ಸಿಸಿ, ಸೇವಾದಳ ಸೇರಿದಂತೆ ಕವಾಯತು ಮತ್ತು ಬ್ಯಾಂಡ್‌ಗಳ 38 ತುಕಡಿಗಳಲ್ಲಿ 1520 ಮಂದಿ ಭಾಗವಹಿಸಲಿದ್ದಾರೆ. ಮೂರು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಎರಡು ಸಾವಿರ ಮಕ್ಕಳು ಪಾಲ್ಗೊಳ್ಳಲಿದ್ದಾರೆ ಎಂದು ಪತ್ರಿಕಾಗೋಷ್ಠಿಯಲ್ಲಿ ಮಂಗಳವಾರ ವಿವರ ನೀಡಿದರು.

‘ರಾಜ್ಯಪಾಲರು ಬೆಳಿಗ್ಗೆ 9ಕ್ಕೆ ಧ್ವಜಾರೋಹಣ ಮಾಡಿ, ಗೌರವರಕ್ಷೆ ಸ್ವೀಕರಿಸುತ್ತಾರೆ. ಸಾಂಸ್ಕೃತಿಕ ಕಾರ್ಯಕ್ರಮಗಳ ನಂತರ ವಿಜೇತರಿಗೆ ಬಹುಮಾನ ವಿತರಿಸುತ್ತಾರೆ’ ಎಂದರು.

‘ಮೈದಾನದಲ್ಲಿ 100 ಸಿಸಿಟಿವಿ ಕ್ಯಾಮೆರಾ ಅಳವಡಿಸಲಾಗಿದೆ. ಬ್ಯಾಗೇಜ್ ಸ್ಕ್ಯಾನರ್, ಸಂಚಾರ ನಿಯಂತ್ರಣ ವ್ಯವಸ್ಥೆ ಮಾಡಲಾಗಿದೆ. ಅತಿಗಣ್ಯ ವ್ಯಕ್ತಿಗಳು ಹಾಗೂ ಎಲ್ಲ ಇಲಾಖೆ ಅಧಿಕಾರಿಗಳು, ನಿವೃತ್ತ ಸೇನಾಧಿಕಾರಿಗಳು, ಬಿಎಸ್‌ಎಫ್ ಅಧಿಕಾರಿಗಳಿಗೆ ತಲಾ ಎರಡು ಸಾವಿರ ಆಸನದ ವ್ಯವಸ್ಥೆ ಇದೆ. ಸಾರ್ವಜನಿಕರಿಗೆ ಮೂರು ಸಾವಿರ ಆಸನದ ವ್ಯವಸ್ಥೆ ಮಾಡಲಾಗಿದೆ. ಆಹ್ವಾನ ಪತ್ರಿಕೆ ಇದ್ದರೆ ಮಾತ್ರ ಗುರುತಿನ ಚೀಟಿಯೊಂದಿಗೆ ಪ್ರವೇಶವಿರುತ್ತದೆ. ಯಾವುದೇ ಲಗೇಜ್, ತಿಂಡಿ–ತಿನಿಸು ತರುವಂತಿಲ್ಲ. ದೂರದರ್ಶನ ಹಾಗೂ ವೆಬ್‌ಕಾಸ್ಟ್‌ನಲ್ಲಿ ಕಾರ್ಯಕ್ರಮ ನೇರ ಪ್ರಸಾರವಾಗಲಿದೆ’ ಎಂದು ಮಾಹಿತಿ ನೀಡಿದರು.

12 ಡಿಸಿಪಿ, 22 ಎಸಿಪಿ, 65 ಇನ್‌ಸ್ಪೆಕ್ಟರ್, 101 ಪಿಎಸ್‌ಐ, 46 ಮಹಿಳಾ ಪಿಎಸ್‌ಐ, 194 ಎಎಸ್‌ಐ, 1005 ಪಿಸಿ, 77 ಮಹಿಳಾ ಸಿಬ್ಬಂದಿ, 172 ಮಫ್ತಿ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಇದಲ್ಲದೆ, 10 ಕೆಎಸ್‌ಆರ್‌ಪಿ ಮತ್ತು ಸಿಎಆರ್ ತುಕಡಿ, ಮೂರು ಅಗ್ನಿಶಾಮಕ ವಾಹನ, ಎರಡು ಅಂಬುಲೆನ್ಸ್, ಒಂದು ಕ್ಷಿಪ್ರ ಕಾರ್ಯಾಚರಣೆ ಪಡೆ ಕಾರ್ಯನಿರ್ವಹಿಸಲಿದೆ ಎಂದರು.

ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಸುನೀತಾ ಮತ್ತು ತಂಡದವರಿಂದ ನಾಡಗೀತೆ, ರೈತಗೀತೆ, ಉತ್ತರಹಳ್ಳಿ ಕರ್ನಾಟಕ ಪಬ್ಲಿಕ್ ಶಾಲೆಯ 750 ಮಕ್ಕಳಿಂದ ‘ಮಹಾನಾಯಕ ಡಾ. ಬಿ.ಆರ್. ಅಂಬೇಡ್ಕರ್’ ಪ್ರದರ್ಶನ, ವಿಜಯನಗರ, ಮಾಗಡಿ ರಸ್ತೆಯ ಬಿಬಿಎಂಪಿ ಪ್ರೌಢಶಾಲೆಯ 650 ಮಕ್ಕಳಿಂದ ‘ನಮ್ಮ ಭಾರತ ಭಾಗ್ಯವಿಧಾತ ರೈತ’, ಲಗ್ಗೆರೆಯ ಸಿರಿ ಶಾಲೆ, ವಿಷ್ಣು ಇಂಟರ್‌ನ್ಯಾಷನ್ ಶಾಲೆ, ವಿಷ್ಣು ಶಾಲೆಯ 600 ಮಕ್ಕಳಿಂದ ‘ಭಾರತಾಂಬೆ ನಿನ್ನ ಜನ್ಮ ದಿನ’, ಎಂಇಜಿ ಸೆಂಟರ್‌ನಿಂದ ಕಲರಿ ಪೈಟು, ದಿ ಆರ್ಮಿ ಸರ್ವೀಸ್ ಕಾರ್ಪ್ಸ್‌ನಿಂದ ‘ಮೋಟರ್ ಸೈಕಲ್ ಡಿಸ್‌ಪ್ಲೇ’ ಇದರಲಿದೆ. ಕಾರ್ಯಕ್ರಮದಲ್ಲಿ ಭಾಗವಹಿಸುವವರು ಕಡ್ಡಾಯವಾಗಿ ಮುಖಗವಸು ಧರಿಸಬೇಕು ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು. ನಗರ ಜಿಲ್ಲಾಧಿಕಾರಿ ಕೆ.ಎ. ದಯಾನಂದ ಇದ್ದರು.

ಸಂಚಾರ ಮಾರ್ಗ ಬದಲು: ಕಬ್ಬನ್ ರಸ್ತೆಯ ಬಿಆರ್‌ವಿ ಜಂಕ್ಷನ್‌ನಿಂದ ಕಾಮರಾಜ ರಸ್ತೆ ಜಂಕ್ಷನ್‌ವರೆಗಿನ ಎರಡೂ ಮಾರ್ಗದಲ್ಲಿ ಜ.26ರ ಬೆಳಿಗ್ಗೆ 8.30ರಿಂದ 10.30ರವರೆಗೆ ವಾಹನ ಸಂಚಾರ ನಿರ್ಬಂಧಿಸಲಾಗಿದೆ.

ಚಾಮರಾಜಪೇಟೆಯಲ್ಲಿ ಗಣರಾಜ್ಯೋತ್ಸವ: ಇಂದು ಪರಿಶೀಲನೆ

ಬೆಂಗಳೂರು: ಚಾಮರಾಜಪೇಟೆ ಆಟದ ಮೈದಾನದಲ್ಲಿ (ಈದ್ಗಾ) ಗುರುವಾರ ಗಣರಾಜ್ಯೋತ್ಸವ ಆಚರಣೆ ಕಂದಾಯ ಇಲಾಖೆ ವತಿಯಿಂದ ನಡೆಯಲಿದ್ದು, ಬುಧವಾರ ಬೆಳಿಗ್ಗೆ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಲಿದ್ದಾರೆ.

ಕಂದಾಯ ಇಲಾಖೆ ಸಚಿವ ಆರ್. ಅಶೋಕ ಹಾಗೂ ಪ್ರಧಾನ ಕಾರ್ಯದರ್ಶಿ ಅವರ ಸೂಚನೆ ಮೇರೆಗೆ ಧ್ವಜಾರೋಹಣ ಕಾರ್ಯವನ್ನು ಉಪ ವಿಭಾಗಾಧಿಕಾರಿ ನಡೆಸಲಿದ್ದಾರೆ ಎಂದು ನಗರ ಜಿಲ್ಲಾಧಿಕಾರಿ ದಯನಂದ ತಿಳಿಸಿದರು.

ಸುದ್ದಿ 2 ನಿಮಿಷ

ಜಾಗತಿಕ ಜಲ ಪ್ರಶಸ್ತಿಗೆ ಭಾಜನ



ಬೆಂಗಳೂರು: ನವೀಕರಿಸಬಹುದಾದ ಶಕ್ತಿಯ ಸಂಪನ್ಮೂಲಗಳನ್ನು ಬಳಸಿಕೊಂಡು ಶುದ್ಧ ಕುಡಿಯುವ ನೀರಿನ ಉತ್ಪಾದನೆ ಮಾಡುವ ಸಂಶೋಧನೆಗಳಿಗೆ ಮೀಸಲಾದ, ‘ಮೊಹಮದ್ ಬಿನ್ ರಷೀದ್ ಅಲ್ ಮುಖ್ತುಮ್ ಜಾಗತಿಕ ಜಲ ಪ್ರಶಸ್ತಿ’ಯು ನಗರದ ಜೈನ್ ವಿಶ್ವವಿದ್ಯಾಲಯದ ಪ್ರೊ. ಆರ್. ಗೀತಾ ಬಾಲಕೃಷ್ಣ ಅವರಿಗೆ ಲಭಿಸಿದೆ.

ಅಂತರರಾಷ್ಟ್ರೀಯ ಮಟ್ಟದಲ್ಲಿ ನವೀನ ಮಾದರಿಯ ತಂತ್ರಜ್ಞಾನ ಹಾಗೂ ಯೋಜನೆಗಳನ್ನು ರೂಪಿಸುವ ಕಂಪನಿಗಳು, ವಿಶ್ವವಿದ್ಯಾಲಯಗಳು ಹಾಗೂ ವೈಯಕ್ತಿಕವಾಗಿ ಕೈಗೊಳ್ಳಲಾಗುವ ಸಂಶೋಧನೆಗಳ ಪ್ರೋತ್ಸಾಹಕ್ಕಾಗಿ ಈ ಪ್ರಶಸ್ತಿ ನೀಡಲಾಗುತ್ತದೆ.

‘ಹೈದರಾಬಾದ್‌ನ ಮೈತ್ರಿ ಅಕ್ವಾಟೆಕ್ ಕಂಪನಿಯ ಸಹಭಾಗಿತ್ವದಲ್ಲಿ ಗೀತಾ ಬಾಲಕೃಷ್ಣ ಈ ಸಂಶೋಧನೆ ಕೈಗೊಂಡಿದ್ದು, ₹ 40 ಲಕ್ಷ ಮೊತ್ತದ ಈ ಪ್ರಶಸ್ತಿಗೆ ಕಂಪನಿ ಮತ್ತು ಗೀತಾ ಬಾಲಕೃಷ್ಣ ಭಾಜನರಾಗಿದ್ದಾರೆ’ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಇತ್ತೀಚೆಗೆ ದುಬೈನಲ್ಲಿ ನಡೆದ ಸಮಾರಂಭದಲ್ಲಿ ಯುಎಇ ಪ್ರಧಾನಿ ಶೇಕ್ ಮೊಹಮದ್ ಬಿನ್ ರಷೀದ್ ಅಲ್ ಮುಖ್ತುಮ್ ಅವರು ಪ್ರಶಸ್ತಿ ಪ್ರದಾನ ಮಾಡಿದರು.

ಅಕ್ರಮ ಗೋವು ಸಾಗಣೆ: ಮೂವರಿಗೆ ಜೈಲು ಶಿಕ್ಷೆ

ತೀರ್ಥಹಳ್ಳಿ: ವಧೆಯ ಉದ್ದೇಶಕ್ಕಾಗಿ ಅಕ್ರಮವಾಗಿ ಗೋವು ಕಳ್ಳ ಸಾಗಣೆ ಮಾಡಿದ್ದ ಮೂವರಿಗೆ ತೀರ್ಥಹಳ್ಳಿಯ ಸಿ.ಜೆ. ಮತ್ತು ಜೆಎಂಎಫ್‌ಸಿ ನ್ಯಾಯಾಲಯದ ನ್ಯಾಯಾಧೀಶರು ಮೂರೂವರೆ ವರ್ಷ ಜೈಲು ಶಿಕ್ಷೆ ವಿಧಿಸಿದ್ದಾರೆ.

2019ರ ಅ. 19ರಂದು ಆಗುಂಬೆ ಪಿಎಸ್‌ಐ ದೇವರಾಯ ಠಾಣಾ ವ್ಯಾಪ್ತಿಯ ಕರಿಗದ್ದೆ ಸಮೀಪ ಗೋವು ಸಾಗಿಸುತ್ತಿದ್ದ ವಾಹನವನ್ನು ವಶಪಡಿಸಿಕೊಂಡು ಆರೋಪಿಗಳನ್ನು ದಸ್ತಗಿರಿ ಮಾಡಿದ್ದರು. ಆರೋಪಿಗಳ ವಿರುದ್ಧ ಐಪಿಸಿ ಕಲಂ 379, ಕರ್ನಾಟಕ ಗೋವು ಸಂರಕ್ಷಣೆ ಮತ್ತು ಗೋ ಹತ್ಯಾ ನಿಷೇಧ ಕಾಯ್ದೆ 1964ರ ಕಲಂ 4, 5, 11 ಹಾಗೂ ಪ್ರಾಣಿಗಳ ವಿರುದ್ಧ ಕ್ರೌರ್ಯ ನಿಷೇಧ ಮತ್ತು ತಡೆಗಟ್ಟುವಿಕೆ ಕಾಯ್ದೆ 1960ರ ಕಲಂ 11ರ ಅಡಿ ಪ್ರಕರಣ ದಾಖಲಿಸಿ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ದೋಷಾರೋಪ ಸಾಬೀತಾಗಿದ್ದರಿಂದ ಅಪರಾಧಿಗಳಾದ ಶಿವಮೊಗ್ಗದ ಮಹಮ್ಮದ್ ನೂರುಲ್ಲಾ, ಸೈಯ್ಯದ್ ರಿಯಾಜ್, ಮುಕ್ರಮ್‌ಗೆ ಶಿಕ್ಷೆ ವಿಧಿಸಲಾಗಿದೆ. ಪ್ರಕರಣ ವಿಚಾರಣೆ ಹಂತದಲ್ಲಿ 4ನೇ ಆರೋಪಿ ಕೊಪ್ಪ ತಾಲ್ಲೂಕಿನ ದತ್ತ ಮೃತಪಟ್ಟಿದ್ದರು.

ಐಪಿಸಿ ಕಲಂ 379ರಡಿ 3 ವರ್ಷ ಕಠಿಣ ಕಾರಾಗೃಹ ವಾಸ ಹಾಗೂ ತಲಾ ₹ 10,000 ದಂಡ ತಪ್ಪಿದರೆ 6 ತಿಂಗಳ ಕಠಿಣ ಕಾರಾಗೃಹ ವಾಸ; ಪ್ರಾಣಿಗಳ ವಿರುದ್ಧ ಕ್ರೌರ್ಯ ನಿಷೇಧ ಮತ್ತು ತಡೆಗಟ್ಟುವಿಕೆ ಕಾಯ್ದೆ 1960ರಡಿ ₹ 50 ದಂಡ ತಪ್ಪಿದರೆ 3 ದಿನ ಸದಾ ಕಾರಾಗೃಹ ವಾಸ; ಕರ್ನಾಟಕ ಗೋವು ಸಂರಕ್ಷಣೆ ಮತ್ತು ಗೋ ಹತ್ಯಾ ನಿಷೇಧ ಕಾಯ್ದೆ 1964ರಡಿ 6 ತಿಂಗಳ ಕಠಿಣ ಕಾರಾಗೃಹ ವಾಸ ತಲಾ ₹ 1,000 ದಂಡ ತಪ್ಪಿದರೆ 15 ದಿನಗಳ ಸಾದಾ ಕಾರಾಗೃಹ ವಾಸ ಶಿಕ್ಷೆಯನ್ನು ವಿಧಿಸಿ ಆದೇಶಿಸಿದ್ದಾರೆ. ಸರ್ಕಾರಿ ಅಭಿಯೋಜಕ ಡಿ. ಬಿನು ಪ್ರಕರಣದ ವಾದ ಮಂಡಿಸಿದ್ದರು.

ಕೊಡಗಿನಲ್ಲಿ ಹುಲಿ ದಾಳಿ: ನಾಲ್ಕು ಜಾನುವಾರು ಸಾವು

ಪ್ರಜಾವಾಣಿ ವಾರ್ತೆ

ಮಡಿಕೇರಿ: ದಕ್ಷಿಣ ಕೊಡಗಿನಲ್ಲಿ ಹುಲಿ ದಾಳಿ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ವಿರಾಜಪೇಟೆ ತಾಲ್ಲೂಕಿನ ಆರ್ಜಿ ಗ್ರಾಮದಲ್ಲಿ ಮಂಗಳವಾರ ಹಸುವೊಂದನ್ನು ಹುಲಿ ಕೊಂದು ಹಾಕಿದೆ. 2 ದಿನಗಳಲ್ಲಿ ಒಟ್ಟು ನಾಲ್ಕು ಜಾನುವಾರುಗಳನ್ನು ಹುಲಿ ಕೊಂದಿದ್ದು, ಸ್ಥಳೀಯರಲ್ಲಿ ಆತಂಕ ಹೆಚ್ಚಿಸಿದೆ.

ಸ್ಥಳಕ್ಕೆ ಎಸಿಎಫ್ ನೆಹರೂ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಈ ಕುರಿತು ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದ ವಲಯ ಅರಣ್ಯಾಧಿಕಾರಿ ದೇವಯ್ಯ, ‘ಈ ಭಾಗದಲ್ಲಿ ಎರಡು ಹುಲಿಗಳು ಸಂಚರಿಸುತ್ತಿದ್ದು, ಪ್ರತ್ಯೇಕವಾಗಿ ದಾಳಿ ನಡೆಸುತ್ತಿವೆ. ಸ್ಥಳದಲ್ಲಿ ಸಿ.ಸಿ ಟಿ.ವಿ ಕ್ಯಾಮೆರಾ ಅಳವಡಿಸಿ ಹುಲಿಯ ಚಲನವಲನ ಪತ್ತೆ ಹಚ್ಚಲಾಗುವುದು’ಎಂದು ಅವರು ತಿಳಿಸಿದರು.

‘ಪೊಲೀಸ್–ನ್ಯಾಯಾಂಗಕ್ಕೆ ಜಾಗೃತಿ ಮೂಡಿಸಬೇಕಿದೆ’

ಲೈಂಗಿಕ ಅಲ್ಪಸಂಖ್ಯಾತರು ಮತ್ತು ಕೌಟುಂಬಿಕ ದೌರ್ಜನ್ಯ ಕಾಯ್ದೆ ಕುರಿತ ವಿಚಾರ ಸಂಕಿರಣ

ಪ್ರಜಾವಾಣಿ ವಾರ್ತೆ



ವಿಚಾರ ಸಂಕಿರಣದಲ್ಲಿ ಪ್ರೊ. ಎಲಿಜಬೆತ್ (ಎಡದಿಂದ ನಾಲ್ಕನೇಯವರು) ಅವರಿಗೆ ನೆನಪಿನ ಕಾಣಿಕೆ ನೀಡಲಾಯಿತು. ಸಾಮಾಜಿಕ ಹೋರಾಟಗಾರ್ತಿ ಪಂಚಮಿ, ಪ್ರೊ. ರಿತಿಕ ಸಿನಾ, ಅಕ್ಕೈ ಪದ್ಮಶಾಲಿ, ಬೆಂಗಳೂರು ನಗರ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಲಿಂಗರಾಜು ಗಾಂಧಿ ಮತ್ತು ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಕುಲಸಚಿವ(ಮೌಲ್ಯಮಾಪನ) ಪ್ರೊ. ಡೊಮಿನಿಕ್ ಡಿ. ಇದ್ದರು —ಪ್ರಜಾವಾಣಿ ಚಿತ್ರ

ಬೆಂಗಳೂರು: ‘ಲೈಂಗಿಕ ಅಲ್ಪಸಂಖ್ಯಾತರ ತಲ್ಲಣಗಳ ಬಗ್ಗೆ ಪೊಲೀಸ್ ಮತ್ತು ನ್ಯಾಯಾಂಗಕ್ಕೆ ಜಾಗೃತಿ ಮೂಡಿಸುವ ತನಕ ಎಷ್ಟೇ ಕಾನೂನು ತಂದರೂ ಅವು ನಿಷ್ಕ್ರಿಯವಾಗುತ್ತವೆ’ ಎಂದು ತಮಿಳುನಾಡಿನ ಕಾನೂನು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಎಲಿಜಬೆತ್ ಪ್ರತಿಪಾದಿಸಿದರು.

ಬೆಂಗಳೂರು ನಗರ ವಿಶ್ವವಿದ್ಯಾಲಯ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ಉತ್ತರ ವಿಶ್ವವಿದ್ಯಾಲಯ ಮತ್ತು ‘ಒಂದೆಡೆ’ ಸಂಸ್ಥೆ ಸಹಯೋಗದಲ್ಲಿ ಆಯೋಜಿಸಿದ್ದ ‘ಲೈಂಗಿಕ ಅಲ್ಪಸಂಖ್ಯಾತರು ಮತ್ತು ಕೌಟುಂಬಿಕ ದೌರ್ಜನ್ಯ ಕಾಯ್ದೆ–2005’ ಕುರಿತ ದಕ್ಷಿಣ ಭಾರತ ಮಟ್ಟದ ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

‘ಕಾನೂನು ಮತ್ತು ಸಮುದಾಯ ಎರಡೂ ದೊಡ್ಡ ವಿಷಯಗಳು. ಈ ಸಮುದಾಯವನ್ನು ಅರ್ಥ ಮಾಡಿಕೊಳ್ಳುವ ಅಧ್ಯಯನ ನಡೆಯಬೇಕಿದೆ. ಆ ಅಧ್ಯಯನದಲ್ಲಿ ಬರುವ ಅಂಶಗಳನ್ನು ಶಿಕ್ಷಣದೊಳಗೆ ಸೇರಿಸಬೇಕಾಗುತ್ತದೆ. ಆ ಮೂಲಕ ಲೈಂಗಿಕ ಅಲ್ಪಸಂಖ್ಯಾತ ಸಮುದಾಯದ ಬದುಕಿನ ಬಗ್ಗೆ ಸಮಾಜಕ್ಕೆ ತಿಳುವಳಿಕೆ ಮೂಡಿಸುವ ಅಗತ್ಯವಿದೆ’ ಎಂದರು.

‘ಈಗಾಗಲೇ ಹಲವಾರು ಕಾನೂನುಗಳನ್ನು ರೂಪಿಸಲಾಗಿದೆ. ಆದರೆ, ಕಾನೂನುಗಳಿಂದ ಈ ಸಮುದಾಯಕ್ಕೆ ನ್ಯಾಯ ದೊರೆಯುತ್ತಿಲ್ಲ. ಆದ್ದರಿಂದ, ಪೊಲೀಸ್ ಸಿಬ್ಬಂದಿಗೆ ಮತ್ತು ನ್ಯಾಯಾಂಗ ವಲಯದಲ್ಲಿ ಜಾಗೃತಿ ಮೂಡಿಸಬೇಕು’ ಎಂದರು.

‘ಪುರುಷ ಪ್ರಧಾನ ಮನಸ್ಥಿತಿ ಮೊಟ್ಟ ಮೊದಲನೆಯದಾಗಿ ಕುಟುಂಬದಿಂದ ಹೋಗಬೇಕಿದೆ. ಬಟ್ಟೆ ಹಾಕುವುದರಿಂದ ಆದಿಯಾಗಿ ಎಲ್ಲ ವಿಷಯದಲ್ಲೂ ಮಹಿಳೆ ಹೀಗೇ ಇರಬೇಕು ಎಂಬುದನ್ನು ಪುರುಷರು ನಿರ್ಧರಿಸುತ್ತಾರೆ. ಈ ಮನಸ್ಥಿತಿ ಬದಲಾಗಬೇಕಿದೆ’ ಎಂದು ಹೇಳಿದರು.

'ಒಂದೆಡೆ' ಸಂಸ್ಥೆ ಸಂಸ್ಥಾಪಕಿ ಅಕ್ಕೈ ಪದ್ಮಶಾಲಿ ಮಾತನಾಡಿ, ‘ವಿಚಾರ ಸಂಕಿರಣದಲ್ಲಿ ಕೈಗೊಂಡಿರುವ ನಿರ್ಣಯಗಳನ್ನು ರಾಜ್ಯ ಮತ್ತು ಕೇಂದ್ರ ಸರ್ಕಾರ, ರಾಜ್ಯಪಾಲರು ಮತ್ತು ರಾಷ್ಟ್ರಪತಿಗಳ ಕಚೇರಿಗಳಿಗೆ ಕಳುಹಿಸಲಾಗುವುದು’ ಎಂದು ಹೇಳಿದರು.

ಬೆಂಗಳೂರು ನಗರ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಲಿಂಗರಾಜು ಗಾಂಧಿ, ವಿಶ್ವವಿದ್ಯಾಲಯದ ಸಮಾಜಕಾರ್ಯ ವಿಭಾಗದ ಅಧ್ಯಕ್ಷೆ ಪ್ರೊ. ರಿತಿಕ ಸಿನಾ ಮಾತನಾಡಿದರು. ಅಕ್ಕೈ ಪದ್ಮಶಾಲಿ ಅವರ ಜೀವನಾಧಾರಿತ ನಾಟಕವನ್ನು ಕಾಜಾಣ ರಂಗಪಯಣ ತಂಡ ಪ್ರಸ್ತುಪಡಿಸಿತು.

ವಿಚಾರ ಸಂಕಿರಣದ ನಿರ್ಣಯಗಳು

- 2005ರ ಕೌಟುಂಬಿಕ ದೌರ್ಜನ್ಯ ಕಾಯ್ದೆಯನ್ನು ಮರು ವ್ಯಾಖ್ಯಾನಕ್ಕೆ ಒಳಪಡಿಸಿ ಇನ್ನಷ್ಟು ವಿಸ್ತರಿಸಬೇಕು.
- ಲೈಂಗಿಕ ಅಲ್ಪಸಂಖ್ಯಾತರ ಮೇಲಿನ ದೌರ್ಜನ್ಯವನ್ನೂ ಕೌಟುಂಬಿಕ ದೌರ್ಜನ್ಯ ಕಾಯ್ದೆಯಡಿಗೆ ಸೇರಿಸಬೇಕು. ಶಾಸನ ಸಭೆಗಳ ಮೂಲಕ ರಾಜ್ಯ ಸರ್ಕಾರ ಈ ಕಾಯ್ದೆಗೆ ತಿದ್ದುಪಡಿ ತರಬೇಕು.
- ಕುಟುಂಬ ಎಂದರೆ ಗಂಡಸು–ಹೆಂಗಸು ಇರುವುದು ಮಾತ್ರವಲ್ಲ. ಲೈಂಗಿಕ ಅಲ್ಪಸಂಖ್ಯಾತರ ಕುಟುಂಬಕ್ಕೂ ಮನ್ನಣೆ ಸಿಗಬೇಕು.
- ಲೈಂಗಿಕ ಅಲ್ಪಸಂಖ್ಯಾತರ ಮೇಲೆ ಎಷ್ಟು ದೌರ್ಜನ್ಯಗಳು ನಡೆದಿವೆ ಎಂಬುದರ ಕುರಿತು ದಕ್ಷಿಣ ಭಾರತದಾದ್ಯಂತ ಅಧ್ಯಯನ ನಡೆಯಬೇಕು.

‘ಹತ್ಯೆ ದಿನ ಸ್ನೇಹಿತರೊಬ್ಬರ ಭೇಟಿಗೆ ತೆರಳಿದ್ದ ಶ್ರದ್ಧಾ ವಾಲಕರ್’

ನವದೆಹಲಿ (ಪಿಟಿಐ): ‘ಹತ್ಯೆಯ ದಿನ ಶ್ರದ್ಧಾ ವಾಲಕರ್ ಸ್ನೇಹಿತರೊಬ್ಬರ ಭೇಟಿಗಾಗಿ ತೆರಳಿದ್ದರು. ಇದು ಆಕೆಯ ಸಹಜೀವನದ ಸಂಗಾತಿ ಹಾಗೂ ಆರೋಪಿ ಅಫ್ತಾಬ್ ಅಮೀನ್ ಪೂನಾವಾಲಾಗೆ ಇಷ್ಟವಿರಲಿಲ್ಲ. ಇದರಿಂದ ಆತ ಕೆರಳಿದ್ದ’ ಎಂದು ದೆಹಲಿ ಪೊಲೀಸರು ಮಂಗಳವಾರ ತಿಳಿಸಿದ್ದಾರೆ.

ಶ್ರದ್ಧಾ ಹತ್ಯೆ ಪ್ರಕರಣದ ಸಂಬಂಧ ಸಾಕೇತ್ ನ್ಯಾಯಾಲಯಕ್ಕೆ ಸಲ್ಲಿಸಿರುವ ಒಟ್ಟು 6,629 ಪುಟಗಳ ದೋಷಾರೋಪ ಪಟ್ಟಿಯಲ್ಲಿ ಅವರು ಈ ಅಂಶವನ್ನು ಉಲ್ಲೇಖಿಸಿದ್ದಾರೆ.

‘ಸಂಗಾತಿ ಹೊರ ಹೋಗಿದ್ದರಿಂದ ಕೆರಳಿದ್ದ ಆರೋಪಿ ಆಕೆಯನ್ನು ಬರ್ಬರವಾಗಿ ಹತ್ಯೆ ಮಾಡಿದ್ದ. ಆಕೆಯ ದೇಹ ತುಂಡರಿಸಲು ವಿವಿಧ ಬಗೆಯ ಆಯುಧಗಳನ್ನು ಬಳಸಿದ್ದ. ಇದನ್ನು ದೋಷಾರೋಪ ಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ. 150ಕ್ಕೂ ಅಧಿಕ ಸಾಕ್ಷ್ಯಗಳನ್ನೂ ದಾಖಲಿಸಲಾಗಿದೆ’ ಎಂದು ದಕ್ಷಿಣ ವಿಭಾಗದ ಜಂಟಿ ಪೊಲೀಸ್ ಕಮಿಷನರ್ ಮೀನು ಚೌಧರಿ ಹೇಳಿದ್ದಾರೆ.

ಕೆರೆಮನೆ ಶಂಭು ಹೆಗಡೆ ನಾಟ್ಯೋತ್ಸವ ಫೆ.3ರಿಂದ

ಹೊನ್ನಾವರ (ಉತ್ತರ ಕನ್ನಡ):‘ಇಡಗುಂಜಿ ಮಹಾಗಣಪತಿ ಯಕ್ಷಗಾನ ಮಂಡಳಿ, ಕೆರೆಮನೆ ವತಿಯಿಂದ ಕೆರೆಮನೆ ಶಂಭು ಹೆಗಡೆ ರಾಷ್ಟ್ರೀಯ ನಾಟ್ಯೋತ್ಸವವನ್ನು ಗುಣವಂತೆಯ ಯಕ್ಷಾಂಗಣದಲ್ಲಿ ಫೆ.3ರಿಂದ 7ರವರೆಗೆ ಆಯೋಜಿಸಲಾಗಿದೆ’ ಎಂದು ಮಂಡಳಿಯ ನಿರ್ದೇಶಕ ಕೆರೆಮನೆ ಶಿವಾನಂದ ಹೆಗಡೆ ತಿಳಿಸಿದರು.

ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘3ರಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ವಿ.ಸುನಿಲ್ ಕುಮಾರ್ ಕಾರ್ಯಕ್ರಮ ಉದ್ಘಾಟಿಸುವರು. ನಟ ಅನಂತ ನಾಗ್ ಅವರಿಗೆ ‘ಕೆರೆಮನೆ ಶಿವರಾಮ ಹೆಗಡೆ’ ಪ್ರಶಸ್ತಿ ಪ್ರದಾನ ಮಾಡಲಾಗುವುದು. ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರಿಗೆ ಸನ್ಮಾನವೂ ನಡೆಯಲಿದೆ’ ಎಂದರು.

ನಾಟ್ಯೋತ್ಸವ ಸನ್ಮಾನ: ನಾಟ್ಯೋತ್ಸವದಲ್ಲಿ ಯಕ್ಷರಂಗ ಮಾಸಪತ್ರಿಕೆಯ ಕಡತೋಕ, ರಂಗಭೂಮಿ ತಜ್ಞ ಜೆ.ಶ್ರೀನಿವಾಸಮೂರ್ತಿ, ಯಕ್ಷಗಾನ ಕಲಾವಿದರಾದ ಉಜಿರೆ ಅಶೋಕ ಭಟ್, ಕೃಷ್ಣ ನಾಯ್ಕ ಹಳ್ಳಾಡಿ, ಕೊಗ್ಗ ಆಚಾರಿ, ಚಪ್ಪರಮನೆ ಶ್ರೀಧರ ಹೆಗಡೆ, ಯಕ್ಷಗಾನ ಸಂಶೋಧಕ ಡಾ.ಜಿ.ಎಲ್.ಹೆಗಡೆ, ಚಲನಚಿತ್ರ ಕಲಾವಿದ ನೀರ್ನಳ್ಳಿ ಗಣಪತಿ, ಚಿಂತಕ ಮಹಾಬಲಮೂರ್ತಿ ಕೊಡ್ಲಕೆರೆ, ವಿದ್ವಾಂಸ ಉಮಾಕಾಂತ ಭಟ್ಟ ಕೆರೆಕೈ, ಪತ್ರಕರ್ತ ಮೋಹನ ಹೆಗಡೆ, ಚಿಂತಕ ಗುರುರಾಜ ಮಾರ್ಪಳ್ಳಿ ಅವರಿಗೆ ‘ಕೆರೆಮನೆ ಶಂಭು ಹೆಗಡೆ ರಾಷ್ಟ್ರೀಯ ನಾಟ್ಯೋತ್ಸವ ಸಮ್ಮಾನ’ ಪ್ರದಾನ ಮಾಡಲಾಗುವುದು’ ಎಂದರು.

10 ದಿನಗಳಲ್ಲಿ ಸಿದ್ಧಗೊಂಡ ‘ನಾರಿ ಶಕ್ತಿ’

ನವದೆಹಲಿ: ಗಣರಾಜ್ಯೋತ್ಸವ ಪಥ ಸಂಚಲನದಲ್ಲಿ ಕರ್ನಾಟಕದ ಪರವಾಗಿ ಪಾಲ್ಗೊಳ್ಳಲಿರುವ ‘ನಾರಿ ಶಕ್ತಿ ಸ್ತಬ್ಧಚಿತ್ರವು 10 ದಿನಗಳಲ್ಲಿ ಸಂಪೂರ್ಣವಾಗಿ ಸಿದ್ಧಗೊಂಡಿದೆ ಎಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಯುಕ್ತ ಪಿ.ಎಸ್. ಹರ್ಷ ತಿಳಿಸಿದರು.

ಮಂಗಳವಾರ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ‘ಸ್ತ್ರೀ ಸಬಲೀಕರಣವನ್ನು ಪ್ರತಿಬಿಂಬಿಸುವ ಸ್ತಬ್ಧಚಿತ್ರವು ಜನವರಿ 26ರಂದು ರಾಜಧಾನಿಯ ಕರ್ತವ್ಯ ಪಥದಲ್ಲಿ ಸಾಗುವುದರೊಂದಿಗೆ ಕರ್ನಾಟಕದ ಹಿರಿಮೆಯ ಕೀರ್ತಿ ಪತಾಕೆಯನ್ನು ಹಾರಿಸಲಿದೆ. ಇದರೊಂದಿಗೆ ಸತತವಾಗಿ 14 ವರ್ಷಗಳಿಂದ ಸ್ತಬ್ಧಚಿತ್ರದೊಂದಿಗೆ ಪಾಲ್ಗೊಂಡ ದೇಶದ ಏಕೈಕ ರಾಜ್ಯವೆಂಬ ಶ್ರೇಯವನ್ನು ಕರ್ನಾಟಕ ತನ್ನದಾಗಿಸಿಕೊಳ್ಳಲಿದೆ’ ಎಂದರು.

'ಆಜಾದಿ ಕ ಅಮೃತ ಮಹೋತ್ಸವದ ಅಂಗವಾಗಿ ಸೂಲಗಿತ್ತಿ ನರಸಮ್ಮ, ವೃಕ್ಷ ಮಾತೆ ತುಳಸಿ ಗೌಡ ಹಾಲಕ್ಕಿ ಮತ್ತು ಸಾಲುಮರದ ತಿಮ್ಮಕ್ಕ ಅವರ ಸಾಧನೆಗಳನ್ನು ‘ನಾರಿ ಶಕ್ತಿ’ ಹೆಸರಿನಲ್ಲಿ ಬಿಂಬಿಸಲಾಗುತ್ತದೆ ಎಂದರು.

ಸ್ತಬ್ಧಚಿತ್ರದಲ್ಲಿ ಏನಿರಲಿದೆ: ಗಿಡ-ಮರ, ಬೆಟ್ಟ-ಗುಡ್ಡ, ಪಕ್ಷಿಗಳಿಂದ ಕಂಗೊಳಿಸುತ್ತಿರುವ ಸ್ತಬ್ಧಚಿತ್ರದ ಮುಂಭಾಗದಲ್ಲಿ ತೊಟ್ಟಿಲು ತೂಗುತ್ತಾ, ಕೈನಲ್ಲಿ ಮಗು ಆಡಿಸುತ್ತಿರುವ ಸೂಲಗಿತ್ತಿ ನರಸಮ್ಮ ಅವರನ್ನು ತೋರಿಸಲಾಗಿದೆ. ಹಚ್ಚ ಹಸುರಿನಿಂದ ಕೂಡಿರುವ ಸ್ತಬ್ಧಚಿತ್ರದ ಮಧ್ಯಭಾಗದಲ್ಲಿ ಗಿಡ ಮರಗಳನ್ನು ಪೋಷಿಸುತ್ತಿರುವ ತುಳಸಿ ಗೌಡ ಹಾಲಕ್ಕಿ ಅವರನ್ನು ತೋರಿಸಲಾಗಿದೆ. ಕಣ್ಣಿಗೆ ಮುದ ನೀಡುವ ಕಾಡಿನ ನಿಜಸ್ವರೂಪದಂತಿರುವ ಸ್ತಬ್ಧಚಿತ್ರದ ಕೊನೆಯ ಭಾಗದಲ್ಲಿ ರಾಜ್ಯ ಹೆದ್ದಾರಿಯ ಆಜುಬಾಜಿನಲ್ಲಿ 8000 ಮರಗಳನ್ನು ನೆಟ್ಟು ನೀರೆರೆದು ಬೆಳೆಸಿದ ಸಾಲುಮರದ ತಿಮ್ಮಕ್ಕ ಪ್ರತಿಕೃತಿ ಇದೆ ಎಂದರು.

ಸಂಕ್ಷಿಪ್ತ ಸುದ್ದಿ

ಅಮೆರಿಕದ 2 ಕಡೆ ಗುಂಡಿನ ದಾಳಿ: ಆರೋಪಿ ವಶಕ್ಕೆ

ಹಾಲ್ಫ್ ಮೂನ್ ಬೇ (ಅಮೆರಿಕ) (ಎಪಿ): ‘ಎರಡು ಸ್ಥಳಗಳಲ್ಲಿ ಸೋಮವಾರ ನಡೆದ ಗುಂಡಿನ ದಾಳಿಯಲ್ಲಿ ಏಳು ಮಂದಿ ಮೃತಪಟ್ಟಿದ್ದಾರೆ. ಸ್ಯಾನ್ ಫ್ರಾನ್ಸಿಸ್ಕೊದ ದಕ್ಷಿಣ ಕರಾವಳಿ ಭಾಗದಲ್ಲಿರುವ ಅಣಬೆ ಬೆಳೆಯುವ ಕೇಂದ್ರ ಹಾಗೂ ಟ್ರಕ್ ಕಂಪನಿವೊಂದರಲ್ಲಿ ದಾಳಿ ನಡೆದಿದೆ. ದಾಳಿ ನಡೆಸಿದ ಶಂಕಿತ ವ್ಯಕ್ತಿಯನ್ನು ಬಂಧಿಸಲಾಗಿದೆ’ ಎಂದು ಅಧಿಕಾರಿಗಳು ತಿಳಿಸಿದರು.

‘ಅಣಬೆ ಬೆಳೆಯುವ ಕೇಂದ್ರದಲ್ಲಿ ನಡೆದ ದಾಳಿಯಲ್ಲಿ ನಾಲ್ವರು ಹಾಗೂ ಟ್ರಕ್ ಕಂಪನಿ ಬಳಿ ನಡೆದ ದಾಳಿಯಲ್ಲಿ ಮೂವರು ಮೃತಪಟ್ಟಿದ್ದಾರೆ’ ಎಂದು ಸ್ಯಾನ್ ಮ್ಯಾಟೊ ಕೌಂಟಿ ಬೋರ್ಡ್ ಆಫ್ ಸುಪರ್‌ವೈಜರ್ಸ್ ಮುಖ್ಯಸ್ಥ ದಾವೆ ಪೈನ್ ಐಮಾಹಿತಿ ನೀಡಿದರು.

‘ದಾಳಿ ಸಂಬಂಧ 67 ವರ್ಷದ ಚೌನ್ಲಿ ಝಾವೊ ಅವರನ್ನು ಬಂಧಿಸಲಾಗಿದೆ. ಅಣಬೆ ಬೆಳೆಯುವ ಕೇಂದ್ರ ಅಥವಾ ಟ್ರಕ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಎಂದು ಅಂದಾಜಿಸಲಾಗಿದೆ’ ಎಂದರು.

ಭಾರತ–ಪಾಕಿಸ್ತಾನವೇ ಮಾತುಕತೆ ಸ್ವರೂಪ ನಿರ್ಧರಿಸಬೇಕು: ಅಮೆರಿಕ

ವಾಷಿಂಗ್ಟನ್ (ಪಿಟಿಐ): ಭಾರತ ಮತ್ತು ಪಾಕಿಸ್ತಾನ ನಡುವಣ ಮಾತುಕತೆಯ ವೇಗ, ವ್ಯಾಪ್ತಿ ಮತ್ತು ಸ್ವರೂಪವನ್ನು ಆ ಎರಡೂ ದೇಶಗಳೇ ತೀರ್ಮಾನಿಸಬೇಕು ಎಂದು ಅಮೆರಿಕ ತನ್ನ ನಿಲುವನ್ನು ಪುನರುಚ್ಚರಿಸಿದೆ.

ದಕ್ಷಿಣ ಏಷ್ಯಾದ ಈ ಎರಡೂ ನೆರೆಯ ದೇಶಗಳ ನಡುವಿನ ಮಾತುಕತೆಗೆ ಅಮೆರಿಕ ಸದಾ ಉತ್ತೇಜನವನ್ನು ನೀಡುತ್ತಲೇ ಬಂದಿದೆ ಎಂದು ಅಮೆರಿಕದ ವಿದೇಶಾಂಗ ಇಲಾಖೆಯ ವಕ್ತಾರ ನೆಡ್ ಪ್ರೈಸ್ ಹೇಳಿದರು.

ಪಾಕ್: 2ನೇ ದಿನವೂ ವಿದ್ಯುತ್ ವ್ಯತ್ಯಯ

ಇಸ್ಲಾಮಾಬಾದ್ (ಎಎಫ್‌ಪಿ): ಪಾಕಿಸ್ತಾನದಲ್ಲಿ ವಿದ್ಯುತ್ ವಿತರಣಾ ವ್ಯವಸ್ಥೆ ಸಹಜಸ್ಥಿತಿಗೆ ಮರಳಿದೆ ಎಂದು ಸರ್ಕಾರ ಹೇಳಿಕೊಂಡಿದ್ದರೂ, ಸತತ ಎರಡನೇ ದಿನವಾದ ಮಂಗಳವಾರವೂ ಬಹುತೇಕ ಕಡೆ ವಿದ್ಯುತ್ ವ್ಯತ್ಯಯ ಸಮಸ್ಯೆ ಕಾಡಿತು.

ಸೋಮವಾರ ರಾಷ್ಟ್ರೀಯ ವಿದ್ಯುತ್ ವಿತರಣಾ ಜಾಲದಲ್ಲಿ ದೋಷ ಕಂಡುಬಂದಿದ್ದು, ರಾತ್ರಿ ದೇಶದಾದ್ಯಂತ ವಿದ್ಯುತ್ ಕಡಿತ ಸಮಸ್ಯೆ ಕಾಡಿತ್ತು. ಎರಡನೇ ದಿನವೂ ಪರಿಸ್ಥಿತಿ ಹೀಗೇ ಮುಂದುವರಿಯಿತು. ಬೆಳಿಗ್ಗೆಯಷ್ಟೇ ಪರಿಸ್ಥಿತಿ ಸಹಜ ಸ್ಥಿತಿಗೆ ಮರಳಿದೆ ಎಂದು ಇಂಧನ ಸಚಿವ ಖುರ್ರಂ ದಸ್ತಗೀರ್ ತಿಳಿಸಿದ್ದರು.

‘ಇನ್ನೊಂದೆಡೆ, ದೇಶದ ಜನರಿಗೆ ಆದ ಅನನುಕೂಲಕ್ಕಾಗಿ ಕ್ಷಮೆ ಕೋರುತ್ತೇನೆ’ ಎಂದು ಪ್ರಧಾನಿ ಶಹಬಾಜ್ ಷರೀಫ್ ತಿಳಿಸಿದ್ದರು.

ಬಡ್ತಿಯಲ್ಲಿ ಮೀಸಲು: ಮಾರ್ಗದರ್ಶಿ ಸೂತ್ರಕ್ಕೆ ಹೈಕೋರ್ಟ್ ನಿರ್ದೇಶನ

ಪ್ರಜಾವಾಣಿ ವಾರ್ತೆ



ಬೆಂಗಳೂರು: ‘ವಿವಿಧ ಇಲಾಖೆಗಳಲ್ಲಿನ ನಾಗರಿಕ ಸೇವಾ ಅಧಿಕಾರಿಗಳಿಗೆ ಬಡ್ತಿಯಲ್ಲಿ ಮೀಸಲು ಜಾರಿಗೊಳಿಸಲು ಉಂಟಾಗುತ್ತಿರುವ ಗೊಂದಲ ನಿವಾರಣೆಯ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಕರ್ನಾಟಕ ನಾಗರಿಕ ಸೇವಾ ಕಾಯ್ದೆ–2017 ರ ಅಡಿ ಹೊಸ ಮತ್ತು ಸಮಗ್ರ ಮಾರ್ಗಸೂಚಿಗಳನ್ನು ಹೊರಡಿಸುವುದು ಸೂಕ್ತ’ ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

‘ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಕೆಲ ಅಧಿಕಾರಿಗಳಿಗೆ ಕೆಪಿಟಿಸಿಎಲ್ ನೀಡಿರುವ ಬಡ್ತಿಯು ಕಾನೂನಿಗೆ ವಿರುದ್ಧವಾಗಿದೆ’ ಎಂದು ಆಕ್ಷೇಪಿಸಿ ರಾಜ್ಯ ಸರ್ಕಾರದ ವಿದ್ಯುತ್ ಕಂಪನಿಗಳ ಮುಖ್ಯ ಎಂಜಿನಿಯರ್‌ಗಳು, ನಿರ್ದೇಶಕರು, ವ್ಯವಸ್ಥಾಪಕ ನಿರ್ದೇಶಕರ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಾಮಾನ್ಯ ವರ್ಗಕ್ಕೆ ಸೇರಿದ ಬಿ.ಗುರುಮೂರ್ತಿ ಮತ್ತಿತರ ಹಿರಿಯ ಅಧಿಕಾರಿಗಳು ಸಲ್ಲಿಸಿದ್ದ ಅರ್ಜಿಗಳನ್ನು ವಜಾಗೊಳಿಸಿರುವ ನ್ಯಾಯಮೂರ್ತಿ ಎಸ್.ಸುನೀಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

‘2017ರ ಕಾಯ್ದೆಯನ್ನು ಜಾರಿಗೆ ತರಲು 2019 ರ ಜೂನ್ 24 ರಂದು ಹೊರಡಿಸಲಾದ ಸರ್ಕಾರಿ ಆದೇಶದಲ್ಲಿ ಕೆಲವು ಅಸ್ಪಷ್ಟತೆಗಳಿವೆ. ಹೆಚ್ಚಿನ ಗೊಂದಲಗಳನ್ನು ತಪ್ಪಿಸಲು ಈ ಆದೇಶವನ್ನು ಹಿಂಪಡೆಯುವುದು ಸೂಕ್ತ ಮತ್ತು ಹೊಸ ಮಾರ್ಗಸೂಚಿ ಜಾರಿಗೊಳಿಸಿರುವುದೇ ಸರಿಯಾದ ದಾರಿ. ಇದರಿಂದಾಗಿ ಕಾಯ್ದೆ ಅನುಷ್ಠಾನದಲ್ಲಿ ಆಗಬಹುದಾದ ಗೊಂದಲಗಳು ನಿವಾರಣೆಯಾಗುತ್ತದೆ. ಸರ್ಕಾರಿ ಅಧಿಕಾರಿಗಳ ಕಾರ್ಯನಿರ್ವಹಣೆಯ ಮೇಲೂ ಪರಿಣಾಮ ಬೀರುತ್ತದೆ. ಅನಗತ್ಯ ವಾಜ್ಯಗಳಿಗೆ ಆಸ್ಪದ ನೀಡುವುದೂ ತಪ್ಪುತ್ತದೆ’ ಎಂದು ತಿಳಿಸಿದೆ.

‘ಹೊಸ ಮಾರ್ಗಸೂಚಿಗಳನ್ನು ರೂಪಿಸುವಾಗ ಸುಪ್ರೀಂ ಕೋರ್ಟ್‌ನ ಎಲ್ಲಾ ತೀರ್ಪುಗಳನ್ನು ಗಮನದಲ್ಲಿ ಇರಿಸಿಕೊಂಡಿರಬೇಕು. ಬಡ್ತಿಯಲ್ಲಿನ ಬ್ಯಾಕ್ ಲಾಗ್ ಖಾಲಿ ಹುದ್ದೆಗಳ ಭರ್ತಿ, ನಂತರದ ಮೀಸಲು, ಮೀಸಲಾತಿ ವರ್ಗದವರು ಸಾಮಾನ್ಯವಾಗಿ ಅರ್ಹರಾಗಿರುತ್ತಾರೆಂಬ ಸಮಸ್ಯೆ ನಿವಾರಣೆ, ಅರ್ಹತೆ ಮತ್ತು ಇತರ ಸಂಬಂಧಿತ ಅಂಶಗಳನ್ನು ಗಮನದಲ್ಲಿ ಇಟ್ಟುಕೊಳ್ಳಬೇಕಾಗಿದೆ’ ಎಂದು ಆದೇಶದಲ್ಲಿ ವಿವರಿಸಿದೆ.



ನ್ಯೂಜಿಲೆಂಡ್‌ನ ನೂತನ ಪ್ರಧಾನಿ ಕ್ರಿಸ್ ಹಿಪ್ಕಿನ್ಸ್ ಅವರನ್ನು ಸ್ವಾಗತಿಸಿದ ನಿರ್ಗಮಿತ ಪ್ರಧಾನಿ ಜಸಿಂಡ ಆರ್ಡರ್ನ್ — ಎಪಿ/ಪಿಟಿಐ ಚಿತ್ರ

ಕೊನೆಯ ಸಾರ್ವಜನಿಕ ಸಮಾರಂಭದಲ್ಲಿ ಜಸಿಂಡ ಭಾವನಾತ್ಮಕ ಮಾತು

ವೆಲ್ಲಿಂಗ್ಟನ್ (ಎಪಿ): ತಮ್ಮ ಅಧಿಕಾರ ಅವಧಿಯ ಕೊನೆಯ ದಿನವಾದ ಮಂಗಳವಾರ ಸಾರ್ವಜನಿಕ ಸಮಾ ರಂಭದಲ್ಲಿ ಕಾಣಿಸಿಕೊಂಡ ನ್ಯೂಜಿಲೆಂಡ್ ಪ್ರಧಾನಿ ಜಸಿಂಡ ಆರ್ಡರ್ನ್ ಅವರು ದೇಶದ ಜನತೆಯನ್ನು ಉದ್ದೇಶಿಸಿ ಭಾವನಾತ್ಮಕ ಮಾತುಗಳನ್ನಾಡಿದರು.

‘ತನ್ನ ಕೆಲಸವನ್ನು ತುಂಬಾ ಸಂತೋಷವಾಗಿ ನಿರ್ವಹಿಸಿದ್ದೇನೆ. ನಾನು ಬ್ಯಾಕ್ ಬೆಂಚ್ ಸಂಸದೆಯಾಗಲು ಸಿದ್ಧಳಿದ್ದೇನೆ. ನಾನು ಹೆಚ್ಚು ಕಳೆದುಕೊಳ್ಳುವ ವಿಷಯವೆಂದರೆ ಜನರ ಒಡನಾಟ. ನೀವು ಉತ್ತಮರ ಕೈಯಲ್ಲಿದ್ದೀರಿ’ ಎಂದು ಮನಬಿಚ್ಚಿ ಮಾತನಾಡಿದ್ದಾರೆ.

ನೂತನ ಪ್ರಧಾನಿಯಾಗಿ ಕ್ರಿಸ್ ಹಿಪ್ಕಿನ್ಸ್ ಅವರನ್ನು ಲೇಬರ್ ಪಕ್ಷದ ಸಂಸದರು ಭಾನುವಾರ ಸರ್ವಾನುಮತದಿಂದ ಆಯ್ಕೆ ಮಾಡಿದರು. ಹಿಪ್ಕಿನ್ಸ್ ಅವರು ಬುಧವಾರ ಪ್ರಮಾಣವಚನ ಸ್ವೀಕರಿಸಲಿದ್ದಾರೆ.

ಸ್ಥಳೀಯ ಮಾವೋರಿ ಧಾರ್ಮಿಕ ಚಳವಳಿಯ ನೆಲೆಯಾದ ರತಾನಾ ಸಭೆಯ ಮೈದಾನದಲ್ಲಿ ನಡೆದ ಆರ್ಡರ್ನ್ ಅವರ ಅಧಿಕಾರದ ಕೊನೆಯ ದಿನದ ಕಾರ್ಯಕ್ರಮದಲ್ಲಿ ಹಿಪ್ಕಿನ್ಸ್ ಮತ್ತು ಇತರ ಸಂಸದರು ಸೇರಿದ್ದರು.

ನಗರದಲ್ಲಿ ಇಂದು

ರಂಗಮಂದಿರ ಲೋಕಾರ್ಪಣೆ: ಎಂ. ಕೃಷ್ಣಪ್ಪ, ಮುಖ್ಯ ಅತಿಥಿಗಳು: ಪ್ರದೀಪ್ ಪಿ., ಸಿ. ಬಸವಲಿಂಗಯ್ಯ, ರವೀಂದ್ರ ಭಟ್ಟ, ಅಧ್ಯಕ್ಷತೆ: ವೈ. ವೆಂಕಟೇಶಪ್ಪ, ಉಪಸ್ಥಿತಿ: ರಘುನಂದನ್ ಬಿ.ಆರ್., ಆಯೋಜನೆ ಹಾಗೂ ಸ್ಥಳ: ಸರ್ಕಾರಿ ಪ್ರಥಮದರ್ಜೆ ಕಾಲೇಜು, ವಿಜಯನಗರ, ಬೆಳಿಗ್ಗೆ 10.30

36 ಶಕ್ತಿಮಾತೆಯರ ಅಪೂರ್ವ ದರ್ಶನ: ಆಯೋಜನೆ ಹಾಗೂ ಸ್ಥಳ: ಓಂ ಶ್ರೀ ಆದರ್ಶ ಯುವಕರ ಸಂಘ, ಗಾಯತ್ರಿನಗರ, ಬೆಳಿಗ್ಗೆ 5.30ರಿಂದ

ಹರ್ಷಕಲಾ ರಾಷ್ಟ್ರೀಯ ಕೈಮಗ್ಗ ಮೇಳ-2023: ಕೈಮಗ್ಗ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟದ ಉದ್ಘಾಟನೆ: ಬಸವರಾಜ ಬೊಮ್ಮಾಯಿ, ಥೀಮ್ ಪೆವಿಲಿಯನ್ ಉದ್ಘಾಟನೆ: ಶಂಕರ ಪಾಟೀಲ ಮುನೇನಕೊಪ್ಪ, ಅಧ್ಯಕ್ಷತೆ: ಮುನಿರತ್ನ, ಆಯೋಜನೆ: ಜವಳಿ ಮಂತ್ರಾಲಯ, ಕರ್ನಾಟಕ ರಾಜ್ಯ ಸಹಕಾರಿ ಕೈಮಗ್ಗ ನೇಕಾರರ ಮಹಾ ಮಂಡಳಿ, ಸ್ಥಳ: ಎಚ್.ಎಂ.ಟಿ ಮೈದಾನ, ಜಾಲಹಳ್ಳಿ 2ನೇ ಹಂತ, ಬೆಳಿಗ್ಗೆ 10

27ನೇ ವಾರ್ಷಿಕೋತ್ಸವ: ಡಾ. ಶಾಂತಾ ರಾಧಾಕೃಷ್ಣ ದತ್ತಿ ಪ್ರಶಸ್ತಿ ಪ್ರದಾನ, ಪ್ರಶಸ್ತಿ ಪುರಸ್ಕೃತರು: ರತ್ನಾ ಬಿ. ಶೆಟ್ಟಿ, ಮುಖ್ಯ ಅತಿಥಿಗಳು: ಶಾಲಿನಿ ಸಿ. ನೂಯಿ, ಚಂದ್ರಿಕಾ ಬಿ.ಆರ್., ಆಯೋಜನೆ ಹಾಗೂ ಸ್ಥಳ: ಎಸ್.ಜಿ.ಎಸ್. ವಾಗ್ದೇವಿ ಸಂಪರ್ಕ ನ್ಯೂನ್ಯತೆಯುಳ್ಳವರ ಪುನಃಶ್ಚೇತನ ಕೇಂದ್ರ, ಗಿರಿನಗರ 2ನೇ ಹಂತ, ಬೆಳಿಗ್ಗೆ 10

ರಾಷ್ಟ್ರೀಯ ಮತದಾರರ ದಿನ: ಮುಖ್ಯ ಅತಿಥಿ: ಕೆ.ಎ. ದಯಾನಂದ್, ಅಧ್ಯಕ್ಷತೆ: ಶ್ರೀನಿವಾಸ ನಾಯಿಕಾ, ಆಯೋಜನೆ: ಚುನಾವಣಾ ಆಯೋಗ, ಸ್ಥಳ: ಸರ್ಕಾರಿ ಕಲಾ ಕಾಲೇಜು, ಬೆಳಿಗ್ಗೆ 10.30

ದಿ.ಬಿ.ಎಸ್. ಗೋಪಾಲರಾವ್ ಮತ್ತು ಶ್ರೀಮತಿ ವೇದಾವತಿ ಬಾಯಿ ದತ್ತಿ ಗಮಕ ಕಾರ್ಯಕ್ರಮ: ವಿಷಯ: ‘ಕುಮಾರವ್ಯಾಸ ಭಾರತದಲ್ಲಿ ಸೌಗಂಧಿಕಾ ಪುಷ್ಪ’, ವಾಚನ: ರಾಜಶ್ರೀ ರಂಗನಾಥ್, ವ್ಯಾಖ್ಯಾನ: ಶಾಂತಾ ನಾಗಮಂಗಲ, ಉಪಸ್ಥಿತಿ: ಬೈರಮಂಗಲ ರಾಮೇಗೌಡ, ಯೋಜನೆ ಹಾಗೂ ಸ್ಥಳ: ಬಿ.ಎಂ.ಶ್ರೀ. ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಬೆಳಿಗ್ಗೆ 11

ಡಾ. ಬಾಬು ಜಗಜೀವನರಾಮ್ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ ಉದ್ಘಾಟನೆ: ಪ್ರೊ. ಜಯಕಲ್ ಎಸ್.ಎಂ., ಮುಖ್ಯ ಅತಿಥಿಗಳು: ಪ್ರೊ.ಕೆ.ಆರ್. ವೇಣುಗೋಪಾಲ್, ಎನ್. ಮಹೇಶ್ ಬಾಬು, ಎಸ್. ಅಜಿತ್‌ಕುಮಾರ್ ಹೆಗಡೆ, ಪ್ರೊ.ಜೆ.ಟಿ. ದೇವರಾಜು, ಎಂ. ಉದಯ ಕುಮಾರ್, ಚಂದ್ರಶೇಖರ್, ಎಚ್. ಸುಧಾಕರ್, ಎನ್. ವಿಜಯಕುಮಾರ್ ಸಿಂಹ, ಆಯೋಜನೆ ಹಾಗೂ ಸ್ಥಳ: ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ, ಬೆಳಿಗ್ಗೆ 11

‘ರಾಷ್ಟ್ರೀಯ ಮತದಾರರ ದಿನ-2023’ರ ಕಾರ್ಯಕ್ರಮ: ಮುಖ್ಯ ಅತಿಥಿ: ರಾಜ್ಯಪಾಲ ಥಾವರಚಂದ್ ಗೆಹಲೋತ್, ಉಪಸ್ಥಿತಿ: ಮನೋಜ್‌ಕುಮಾರ್ ಮೀನಾ, ತುಷಾರ್ ಗಿರಿನಾಥ್, ಆಯೋಜನೆ: ಭಾರತ ಚುನಾವಣಾ ಆಯೋಗ, ಸ್ಥಳ: ಸರ್ ಪುಟ್ಟಣ್ಣಚೆಟ್ಟಿ ಪುರಭವನ, ಮಧ್ಯಾಹ್ನ 1

6ನೇ ಘಟಿಕೋತ್ಸವ: ಮುಖ್ಯ ಅತಿಥಿ: ಪ್ರೊ.ರಿಷಿಕೇಶ ಟಿ. ಕೃಷ್ಣನ್, ಗೌರವ ಅತಿಥಿ: ಡಿ. ಪ್ರೇಮಚಂದ್ರ ಸಾಗರ್, ಅಧ್ಯಕ್ಷತೆ: ಡಿ. ಹೇಮಚಂದ್ರ ಸಾಗರ್, ಆಯೋಜನೆ ಹಾಗೂ ಸ್ಥಳ: ದಯಾನಂದ ಸಾಗರ್ ವಿಶ್ವವಿದ್ಯಾಲಯ, ಹಾರೋಹಳ್ಳಿ, ಮಧ್ಯಾಹ್ನ 2

ಧಾರ್ಮಿಕ ಪ್ರವಚನ: ವಿಷಯ: ‘ಮಧ್ವಾಚಾರ್ಯರ ದೃಷ್ಟಿಯಲ್ಲಿ ಭೀಷ್ಮ’, ಪ್ರವಚನ: ಅಂಬರೀಶ್ ಆಚಾರ್, ಆಯೋಜನೆ: ರಾಘವೇಂದ್ರ ಸೇವಾ ಸಮಿತಿ, ಸ್ಥಳ: ರಾಘವೇಂದ್ರ ಸ್ವಾಮಿಗಳ ಮಠ, ಈಜುಕೊಳದ ಬಡಾವಣೆ, ಸುಧೀಂದ್ರನಗರ, ಸಂಜೆ 6.30

ಯಾಮಿನಿ ಸಂಗೀತ ನೃತ್ಯೋತ್ಸವ: ಕಥಕ್ ನೃತ್ಯ: ರಾಜೇಂದ್ರ ಗಂಗಾನಿ, ಕರ್ನಾಟಕ ಶಾಸ್ತ್ರೀಯ ಸಂಗೀತ: ನೈವೇಲಿ ಸಂತನಾಗೋಪಾಲ, ಘಟ ವಾದನ: ವಿಕ್ಕು ವಿನಾಯಕರಾಮ, ಕೊಳಲು: ಮೈಸೂರು ಚಂದನ್, ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ: ಸಂಜೀವ್ ಅಭ್ಯಂಕರ್, ಆಯೋಜನೆ: ಸ್ಪಿಕ್ ಮೆಕೆ, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್, ಬನ್ನೇರುಘಟ್ಟ ರಸ್ತೆ, ಸಂಜೆ 7

ತಹಶೀಲ್ದಾರ್ ಕಚೇರಿ ಮುಂದೆ ಮಚ್ಚಿನಿಂದ ಹಲ್ಲೆ

ಪ್ರಜಾವಾಣಿ ವಾರ್ತೆ

ಮದ್ದೂರು: ಜಮೀನು ವಿವಾದ ಸಂಬಂಧ ಇಲ್ಲಿನ ತಹಶೀಲ್ದಾರ್ ಕೋರ್ಟ್‌ಗೆ ಮಂಗಳವಾರ ಬಂದಿದ್ದ ತಾಲ್ಲೂಕಿನ ಕೊಪ್ಪ ಹೋಬಳಿಯ ಮರಳಿಗ ಗ್ರಾಮದ ಚನ್ನರಾಜು ಅವರ ಮೇಲೆ ಅದೇ ಗ್ರಾಮದ ನಂದನ್ ಮಚ್ಚಿನಿಂದ ಹಲ್ಲೆ ಮಾಡಿ ತೀವ್ರವಾಗಿ ಗಾಯಗೊಳಿಸಿದ್ದಾನೆ. ಗಾಯಾಳು ಸ್ಥಿತಿ ಗಂಭೀರವಾಗಿದ್ದು, ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ನೀಡಿ, ರಾತ್ರಿ ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಗೆ ಸ್ಥಳಾಂತರಿಸಲಾಯಿತು.

ಗ್ರಾಮದ ಜಮೀನೊಂದಕ್ಕೆ ಸಂಬಂಧಿಸಿ ಹಲವು ವರ್ಷಗಳಿಂದ ವಿಚಾರಣೆನಡೆದಿದ್ದು, ಮಂಗಳವಾರವೂ ಕಕ್ಷಿದಾರರಾದ ಗಾಯಾಳು ಮತ್ತು ಆರೋಪಿ ಹಾಜರಾಗಿದ್ದರು. ಮಧ್ಯಾಹ್ನದ ವೇಳೆ ಆರೋಪಿ ಏಕಾಏಕಿ ಚನ್ನರಾಜು ಅವರ ಕಣ್ಣಿಗೆ ಖಾರದ ಪುಡಿ ಎರಚಿ, ಮಚ್ಚಿನಿಂದ 20ಕ್ಕೂ ಹೆಚ್ಚು ಬಾರಿ ಹಲ್ಲೆ ಮಾಡಿದ. ಅವರು ಕುಸಿದು ಬೀಳುತ್ತಿದ್ದಂತೆ ಸ್ಥಳದಲ್ಲಿದ್ದವರು ಎಚ್ಚೆತ್ತು ಆರೋಪಿಯನ್ನು ಹಿಡಿದು ಪೊಲೀಸರಿಗೆ ಒಪ್ಪಿಸಿದರು. ರಕ್ತದ ಮಡುವಿನಲ್ಲಿ ಒದ್ದಾಡುತ್ತಿದ್ದ ಚನ್ನರಾಜು ಅವರನ್ನು ಪಟ್ಟಣದ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿ, ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿತ್ತು.

ಖಾಸಗಿ ಬಸ್ ಡಿಕ್ಕಿ: ಮಹಿಳಾ ಲೆಕ್ಕಾಧಿಕಾರಿ ಸಾವು

ಬೆಂಗಳೂರು: ಯಶವಂತಪುರದ ಆರ್‌ಎಂಸಿ ಯಾರ್ಡ್ ಬಳಿ ದ್ವಿಚಕ್ರ ವಾಹನಕ್ಕೆ ಖಾಸಗಿ ಬಸ್ಸೊಂದು ಡಿಕ್ಕಿ ಹೊಡೆದಿದ್ದು, ಮಹಿಳಾ ಲೆಕ್ಕಾಧಿಕಾರಿ ವಿನುತಾ (32) ಎಂಬುವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

'ಕಾಮಾಕ್ಷಿಪಾಳ್ಯದ ಕಚೇರಿಯೊಂದರಲ್ಲಿ ವಿನುತಾ ಕೆಲಸ ಮಾಡುತ್ತಿದ್ದರು. ಮಂಗಳವಾರ ಬೆಳಿಗ್ಗೆ ದ್ವಿಚಕ್ರ ವಾಹನದಲ್ಲಿ ಕಚೇರಿಗೆ ಹೊರಟಿದ್ದಾಗ ಈ ಅವಘಡ ಸಂಭವಿಸಿದೆ. ಅಪಘಾತದ ನಂತರ ಬಸ್ ಸ್ಥಳದಲ್ಲೇ ಬಿಟ್ಟು ಚಾಲಕ ಪರಾರಿಯಾಗಿದ್ದು, ಆತನ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಯಶವಂತಪುರ ಸಂಚಾರ ಪೊಲೀಸರು ಹೇಳಿದರು.

'ವಿನುತಾ ಪತಿ ಖಾಸಗಿ ಕಂಪನಿ ಉದ್ಯೋಗಿ. ದಂಪತಿಗೆ 11 ವರ್ಷದ ಮಗನಿದ್ದಾನೆ. ವಿನುತಾ ಕಚೇರಿಗೆ ನಿತ್ಯವೂ ದ್ವಿಚಕ್ರ ವಾಹನದಲ್ಲಿ ಹೋಗಿ ಬರುತ್ತಿದ್ದರು' ಎಂದು ತಿಳಿಸಿದರು.

ಚಾಲಕನ ಮೊಬೈಲ್ ಸ್ವಿಚ್ ಆಫ್: 'ರಾಷ್ಟ್ರೀಯ ಹೆದ್ದಾರಿಯ ಆರ್.ಎಂ.ಸಿ ಯಾರ್ಡ್ ಬಳಿ ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದಿದ್ದ ಬಸ್, ಉಜ್ಜಿಕೊಂಡು ಹೋಗಿತ್ತು. ವಿನುತಾ ಸ್ಥಳದಲ್ಲೇ ಮೃತಪಟ್ಟಿದ್ದಾರೆ' ಎಂದರು.

'ಲಕ್ಷ್ಮಿ ಹನುಮಾನ್ ಕಂಪನಿಗೆ ಸೇರಿದ್ದ ಬಸ್, ಮೆಜೆಸ್ಟಿಕ್‌ನಿಂದ ಪಾವಗಡಕ್ಕೆ ಹೊರಟಿತ್ತು. ಬಸ್ಸಿನಲ್ಲಿ ಪ್ರಯಾಣಿಕರೂ ಇದ್ದರು. ತಲೆಮರೆಸಿಕೊಂಡಿರುವ ಚಾಲಕ, ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡಿದ್ದಾನೆ. ಸದ್ಯ ಬಸ್ ಜಪ್ತಿ ಮಾಡಲಾಗಿದೆ' ಎಂದರು.

ಬಿಬಿಸಿ ಸಾಕ್ಷ್ಯಚಿತ್ರ ಪ್ರದರ್ಶನಕ್ಕೆ ತಡೆ

ಒಂದನೇ ಪುಟದಿಂದ...

ಗುಜರಾತಿನಲ್ಲಿ 2002ರಲ್ಲಿ ನಡೆದಿದ್ದ ಗೋಧ್ರಾ ಮತ್ತು ಗೋಧ್ರೋತ್ತರ ಹತ್ಯಾಕಾಂಡಗಳು ಹಾಗೂ ಆಗ ರಾಜ್ಯದ ಮುಖ್ಯಮಂತ್ರಿಯಾಗಿದ್ದ ನರೇಂದ್ರ ಮೋದಿ ಅವರ ಕ್ರಮಗಳ ಕುರಿತು ಬಿಬಿಸಿಯು 'ಇಂಡಿಯಾ: ದಿ ಮೋದಿ ಕ್ವೆಶ್ಚನ್' ಎಂಬ ಸಾಕ್ಷ್ಯಚಿತ್ರವನ್ನು ನಿರ್ಮಿಸಿ, ಪ್ರಸಾರ ಮಾಡಿದೆ. ಈ ಸಾಕ್ಷ್ಯಚಿತ್ರಕ್ಕೆ ಭಾರತದ ವಿದೇಶಾಂಗ ಸಚಿವಾಲಯವು ತೀವ್ರ ಆಕ್ಷೇಪ ವ್ಯಕ್ತಪಡಿಸಿತ್ತು. ಜತೆಗೆ ಈ ಸಾಕ್ಷ್ಯಚಿತ್ರದ ಲಿಂಕ್‌ಗಳು ಇರುವ ಟ್ವೀಟ್ ಮತ್ತು ವಿಡಿಯೊಗಳನ್ನು ತೆಗೆದುಹಾಕುವಂತೆ ಕೇಂದ್ರ ಸರ್ಕಾರವು ಟ್ವಿಟರ್ ಮತ್ತು ಯೂಟ್ಯೂಬ್‌ಗೆ ಸೂಚಿಸಿತ್ತು. ಇದರ ಬೆನ್ನಲ್ಲೇ ಸಾಕ್ಷ್ಯಚಿತ್ರದ ಪ್ರದರ್ಶನಕ್ಕೆ ಹಲವು ಸಂಘಟನೆಗಳು ಸಿದ್ಧತೆ ನಡೆಸಿದ್ದವು. ಜೆಎನ್‌ಯು ವಿದ್ಯಾರ್ಥಿ ಸಂಘಟನೆಯು ಮಂಗಳವಾರ ರಾತ್ರಿ 9ಕ್ಕೆ ಸಾಕ್ಷ್ಯಚಿತ್ರದ ಪ್ರದರ್ಶನಕ್ಕೆ ಸಿದ್ಧತೆ ಮಾಡಿಕೊಂಡಿತ್ತು. ಆದರೆ, ಸಾಕ್ಷ್ಯಚಿತ್ರವನ್ನು ಪ್ರದರ್ಶಿಸಬೇಡಿ. ಪ್ರದರ್ಶಿಸಿದರೆ ಶಿಸ್ತುಕ್ರಮ ತೆಗೆದುಕೊಳ್ಳಲಾಗುತ್ತದೆ ಎಂದು ವಿದ್ಯಾರ್ಥಿ ಸಂಘಟನೆಗೆ ಜೆಎನ್‌ಯು ಆಡಳಿತವು ಎಚ್ಚರಿಕೆ ನೀಡಿತ್ತು.

'ಸಾಕ್ಷ್ಯಚಿತ್ರದ ಪ್ರದರ್ಶನಕ್ಕೆ ವಿದ್ಯಾರ್ಥಿ ಒಕ್ಕೂಟವು ವಿಶ್ವವಿದ್ಯಾಲಯದಿಂದ ಯಾವುದೇ ಪೂರ್ವಾನುಮತಿ ಪಡೆದಿರಲಿಲ್ಲ' ಎಂದೂ ಜೆಎನ್‌ಯು ಆಡಳಿತ ಹೇಳಿದೆ.

ಕಲ್ಲುತೂರಾಟದಂಥ ಘಟನೆ ನಡೆದಿಲ್ಲ ಎಂದು ಪೊಲೀಸ್ ಅಧಿಕಾರಿ ಹೇಳಿದ್ದಾರೆ. ವಿದ್ಯಾರ್ಥಿಗಳ ಆರೋಪಗಳಿಗೆ ಜೆಎನ್‌ಯು ಆಡಳಿತ ತಕ್ಷಣಕ್ಕೆ ಪ್ರತಿಕ್ರಿಯೆ ನೀಡಿಲ್ಲ.

ವಾಚ್ ಬಾಕ್ಸ್ ಸಾಗಿಸುತ್ತಿದ್ದ ಟೆಂಪೊ ಅಡ್ಡಗಟ್ಟಿ ಸುಲಿಗೆ

1,282 ಸ್ಮಾರ್ಟ್ ವಾಚ್ ಜಪ್ತಿ

ಪ್ರಜಾವಾಣಿ ವಾರ್ತೆ



ರಾಜರಾಜೇಶ್ವರಿನಗರ ಠಾಣೆ ಪೊಲೀಸರು ಆರೋಪಿಗಳಿಂದ ಜಪ್ತಿ ಮಾಡಿರುವ ಸ್ಮಾರ್ಟ್ ವಾಚ್‌ಗಳು

ಬೆಂಗಳೂರು: ಸ್ಮಾರ್ಟ್ ವಾಚ್ ಬಾಕ್ಸ್ ಸಾಗಿಸುತ್ತಿದ್ದ ಟೆಂಪೊ ಅಡ್ಡಗಟ್ಟಿ ಚಾಲಕನನ್ನು ಥಳಿಸಿ ಸುಲಿಗೆ ಮಾಡಿದ್ದ ಇಬ್ಬರು ಆರೋಪಿಗಳನ್ನು ರಾಜರಾಜೇಶ್ವರಿನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಜಮೀರ್ ಅಹಮ್ಮದ್ (28) ಹಾಗೂ ಸೈಯದ್ ಶಾಹಿದ್ (26) ಬಂಧಿತರು. ಇವರಿಂದ ₹ 57 ಲಕ್ಷ ಮೌಲ್ಯದ 1,282 ಸ್ಮಾರ್ಟ್ ವಾಚ್‌ಗಳನ್ನು ಜಪ್ತಿ ಮಾಡಲಾಗಿದೆ. ಕೃತ್ಯದಲ್ಲಿ ಭಾಗಿಯಾಗಿದ್ದ ಕೆಲ ಆರೋಪಿಗಳು ತಲೆಮರೆಸಿಕೊಂಡಿದ್ದಾರೆ' ಎಂದು ಪೊಲೀಸರು ಹೇಳಿದರು.

'ಟೈಟಾನ್ ಕಂಪನಿಯ 1,282 ಸ್ಮಾರ್ಟ್ ವಾಚ್‌ಗಳನ್ನು 23 ಬಾಕ್ಸ್‌ಗಳಲ್ಲಿ ತುಂಬಿ ಟೆಂಪೊದಲ್ಲಿ ರಾಜರಾಜೇಶ್ವರಿನಗರದ ಜೈದೀಪ್ ಎಂಟರ್‌ಪ್ರೈಸಸ್ ಗೋದಾಮಿಗೆ ತರಲಾಗಿತ್ತು. ಗೋದಾಮಿನಲ್ಲಿ ಕೆಲಸ ಮಾಡುತ್ತಿದ್ದ ಜಾನ್ ಹಾಗೂ ಬಿಸಾಲ್‌ಕಿಸಾನ್, ರಾತ್ರಿ 10 ಗಂಟೆ ಸುಮಾರಿಗೆ ಸಿಗರೇಟ್ ಸೇದಬೇಕೆಂದು ಮಾತನಾಡಿಕೊಂಡಿದ್ದರು'.

'ಕೆಲಸಗಾರರ ಬಳಿ ಸಿಗರೇಟ್ ಇರಲಿಲ್ಲ. ಅಂಗಡಿಗೆ ಹೋಗಿ ತರಲು ಯೊಚಿಸಿದ್ದರು. ಆಗ, ಇಬ್ಬರೂ ಬಾಕ್ಸ್‌ಗಳಿದ್ದ ಟೆಂಪೊದಲ್ಲೇ ನಾಯಂಡನಹಳ್ಳಿ ಕಡೆಗೆ ಹೋಗಿದ್ದರು. ಸಿಗರೇಟ್ ತೆಗೆದುಕೊಂಡು ವಾಪಸ್ ಗೋದಾಮಿನತ್ತ ಬರುತ್ತಿದ್ದರು. ಇದೇ ವೇಳೆಯೇ ಆರೋಪಿಗಳ ದ್ವಿಚಕ್ರ ವಾಹನಕ್ಕೆ ಟೆಂಪೊ ತಾಗಿತ್ತು. ಅದನ್ನು ಪ್ರಶ್ನಿಸಲೆಂದು ಆರೋಪಿಗಳು, ಟೆಂಪೊ ಹಿಂಬಾಲಿಸಿ ಮಾರ್ಗಮಧ್ಯೆ ಅಡ್ಡಗಟ್ಟಿದ್ದರು' ಎಂದು ಪೊಲೀಸರು ತಿಳಿಸಿದರು.

'ಜಾನ್ ಹಾಗೂ ಬಿಸಾಲ್ ಕಿಸಾನ್ ಅವರನ್ನು ಟೆಂಪೊದಿಂದ ಕೆಳಗೆ ಇಳಿಸಿ ಹಲ್ಲೆ ಮಾಡಿದ್ದರು. ಪ್ರಾಣ ಭಯದಲ್ಲಿ ಅವರಿಬ್ಬರು ಸ್ಥಳದಿಂದ ಹೊರಟು ಹೋಗಿದ್ದರು. ನಂತರ, ಆರೋಪಿಗಳು ಟೆಂಪೊ ಸಮೇತ ಸ್ಥಳದಿಂದ ಪರಾರಿಯಾಗಿದ್ದರು' ಎಂದು ಪೊಲೀಸರು ಹೇಳಿದರು.

ಖಾಲಿ ಟೆಂಪೊ ನಿಲ್ಲಿಸಿ ಪರಾರಿ: 'ಟೆಂಪೊದಲ್ಲಿದ್ದ ಬಾಕ್ಸ್ ನೋಡಿದ್ದ ಆರೋಪಿಗಳು, ಅವುಗಳನ್ನು ಇಳಿಸಿಕೊಂಡಿದ್ದರು. ನಂತರ, ಖಾಲಿ ಟೆಂಪೊವನ್ನು ಘಟನಾ ಸ್ಥಳದಲ್ಲಿ ಬಿಟ್ಟು ಪರಾರಿಯಾಗಿದ್ದರು. ಕೃತ್ಯದ ಬಗ್ಗೆ ಜೈದೀಪ್ ಎಂಟರ್‌ಪ್ರೈಸಸ್ ವ್ಯವಸ್ಥಾಪಕ ದೂರು ನೀಡಿದ್ದರು' ಎಂದು ಪೊಲೀಸರು ತಿಳಿಸಿದರು.

ಮುಖ್ಯಾಂಶಗಳು

- ಟೈಟಾನ್ ಕಂಪನಿಯ ₹ 57 ಲಕ್ಷ ಮೌಲ್ಯದ ಸ್ಮಾರ್ಟ್ ವಾಚ್‌ಗಳ ಜಪ್ತಿ
- ತಲೆಮರೆಸಿಕೊಂಡಿರುವ ಮತ್ತಷ್ಟು ಆರೋಪಿಗಳಿಗಾಗಿ ಶೋಧ

ಅಪರಾಧ ಸುದ್ದಿ

ವಂಚನೆ: ಆರೋಪಿ ಸೆರೆ

ಬೆಂಗಳೂರು: 'ತಂದೆ ಎಸ್. ಶ್ರೀಧರ್ ಅವರನ್ನು ಪೊಲೀಸರು ಅಕ್ರಮವಾಗಿ ಬಂಧಿಸಿದ್ದಾರೆ' ಎಂದು ರಾಜ್ಯ ಮಾನವ ಹಕ್ಕುಗಳ ಆಯೋಗಕ್ಕೆ ನೀಡಿದ ದೂರು ಹಿಂಪಡೆಯಲು ಮಗ ಚಂದರೇಶ್ ಅರ್ಜಿ ಸಲ್ಲಿಸಿದ್ದು, ಇದರ ಬೆನ್ನಲ್ಲೇ ವಂಚನೆ ಪ್ರಕರಣದಲ್ಲಿ ಶ್ರೀಧರ್ ಅವರನ್ನು ಪೊಲೀಸರು ಬಂಧಿಸಿದ್ದಾರೆ.

'ಚೀಟಿ ಹೆಸರಿನಲ್ಲಿ ಜನರಿಂದ ₹ 2.91 ಕೋಟಿ ಸಂಗ್ರಹಿಸಿದ್ದ ಆರ್. ಶ್ರೀಧರ್, ಹಣ ವಾಪಸು ನೀಡದೇ ವಂಚಿಸಿದ್ದರು. ಈ ಸಂಬಂಧ ದಾಖಲಾದ ಪ್ರಕರಣದ ವಿಚಾರಣೆಗಾಗಿ ಶ್ರೀಧರ್ ಅವರನ್ನು ವಶಕ್ಕೆ ಪಡೆಯಲಾಗಿತ್ತು. ಇದನ್ನೇ ಅಕ್ರಮ ಬಂಧನವೆಂದು ಆಯೋಗಕ್ಕೆ ಮಗ ಸುಳ್ಳು ದೂರು ನೀಡಿದ್ದರು. ಪೊಲೀಸರು ಹಣ ಕೇಳಿದ್ದಾರೆಂದು ಸುಖಾಸುಮ್ಮನೇ ಆರೋಪಿಸಿದ್ದರು. ಬಂಧನ ತಪ್ಪಿಸುವ ಉದ್ದೇಶ ಇದರ ಹಿಂದಿತ್ತು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ದೂರು ನಿಜವೆಂದು ತಿಳಿದು ಆಯೋಗದ ಡಿವೈಎಸ್ಪಿ ನೇತೃತ್ವದ ತಂಡವೂ ಠಾಣೆ ಮೇಲೆ ಜ. 20ರಂದು ದಾಳಿ ಮಾಡಿತ್ತು'

'ಪ್ರಕರಣದ ಬಗ್ಗೆ ಆಯೋಗವು ಸೋಮವಾರ ವಿಚಾರಣೆ ನಡೆಸಿತು. ಇನ್‌ಸ್ಪೆಕ್ಟರ್ ಹಾಗೂ ಸಿಬ್ಬಂದಿ ತಮ್ಮ ಹೇಳಿಕೆ ದಾಖಲಿಸಿದ್ದಾರೆ. ಮಗ ಚಂದರೇಶ್, ದೂರು ಹಿಂಪಡೆಯಲು ಸಲ್ಲಿಸಿದ್ದ ಅರ್ಜಿಯೂ ಪ್ರಸ್ತಾಪವಾಯಿತು. 'ವಂಚನೆ ಪ್ರಕರಣವೇ ನನಗೆ ಗೊತ್ತಿರಲಿಲ್ಲ. ವಕೀಲರು ದಿಕ್ಕು ತಪ್ಪಿಸಿದರು. ನನ್ನ ದೂರು ಹಿಂಪಡೆಯುತ್ತೇನೆ' ಎಂಬುದಾಗಿ ಚಂದರೇಶ್ ಅರ್ಜಿಯಲ್ಲಿ ಉಲ್ಲೇಖಿಸಿದ್ದರು' ಎಂದು ಮೂಲಗಳು ತಿಳಿಸಿವೆ.

ಕಂದಾಯ ಇಲಾಖೆ ಮಾಹಿತಿ ಪಡೆದ ಆಂಧ್ರ ಸಚಿವರು

ಬೆಂಗಳೂರು: ಆಂಧ್ರಪ್ರದೇಶ ಕಂದಾಯ ಸಚಿವ ಧರ್ಮನಾ ಪ್ರಸಾದ್ ರಾವ್ ನೇತೃತ್ವದ ನಿಯೋಗವು ವಿಧಾನಸೌಧಕ್ಕೆ ಮಂಗಳವಾರ ಭೇಟಿ ನೀಡಿ, ರಾಜ್ಯದಲ್ಲಿ ಕಂದಾಯ ಇಲಾಖೆಯು ಜಾರಿಗೊಳಿಸಿರುವ ಸುಧಾರಣಾ ಕ್ರಮಗಳ ಕುರಿತು ಚರ್ಚೆ ನಡೆಸಿತು.

ಕಂದಾಯ ಸಚಿವ ಆರ್. ಅಶೋಕ, ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ ಎನ್. ಮಂಜುನಾಥ್ ಪ್ರಸಾದ್, ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ಜಯರಾಂ ಮತ್ತು ಇಲಾಖೆಯ ಹಿರಿಯ ಅಧಿಕಾರಿಗಳು, ಸಾಮಾಜಿಕ ಪಿಂಚಣಿ ವಿತರಣೆಯಲ್ಲಿ ಸುಧಾರಣೆ, ಭೂ ಪರಿವರ್ತನೆ ಪ್ರಕ್ರಿಯೆಯ ಅವಧಿ ಇಳಿಕೆ, ಪ್ಲಾಂಟೇಷನ್ ಬೆಳೆಗಾರರಿಗೆ ಸರ್ಕಾರಿ ಜಮೀನುಗಳನ್ನು 30 ವರ್ಷಗಳ ಅವಧಿಗೆ ಗುತ್ತಿಗೆ ನೀಡಲು ಕಾಯ್ದೆ ಜಾರಿ ಮಾಡಿರುವುದು, ಕಂದಾಯ ದಾಖಲೆಗಳನ್ನು ರೈತರ ಮನೆ ಬಾಗಿಲಿಗೆ ಉಚಿತವಾಗಿ ತಲುಪಿಸುತ್ತಿರುವುದರ ಕುರಿತು ಮಾಹಿತಿ ನೀಡಿದರು.

ಆಂಧ್ರಪ್ರದೇಶ ನಗರಾಭಿವೃದ್ಧಿ ಮತ್ತು ಪೌರಾಡಳಿತ ಸಚಿವ ಆದಿಮುಲುಪು ಸುರೇಶ್, ಸಮಾಜ ಕಲ್ಯಾಣ ಸಚಿವ ಮುರುಗ ನಾಗಾರ್ಜುನ, ಶಾಸಕಿ ಎಲ್. ಪದ್ಮಾವತಿ ಹಾಗೂ ಅಲ್ಲಿನ ವಿವಿಧ ಇಲಾಖೆಗಳ ಹಿರಿಯ ಅಧಿಕಾರಿಗಳು ನಿಯೋಗದಲ್ಲಿದ್ದರು.

ಯುವಕನಿಗೆ ಮರುಜೀವ ನೀಡಿದ ವೈದ್ಯರು!

ಬೆಂಗಳೂರು: ಅಮೆರಿಕದಲ್ಲಿ ಸಂಭವಿಸಿದ ಬೈಕ್ ಅಪಘಾತದಲ್ಲಿ ತೀವ್ರ ಗಾಯಗೊಂಡು ಜೀವನ್ಮರಣದ ನಡುವೆ ಹೋರಾಟ ನಡೆಸುತ್ತಿದ್ದ ಯುವಕನೊಬ್ಬನಿಗೆ ಸಕ್ರಾವರ್ಲ್ಡ್ ಆಸ್ಪತ್ರೆ ವೈದ್ಯರು ಮರುಜೀವ ನೀಡಿದೆ



ಡಾ. ಬಿ.ಎಂ. ಮಹೇಶ್ವರಪ್ಪ

ಪ್ರವೀಣ್ ರಾಜ್ ರಾ ಧಾ (3 6) ಎಂಬುವವರಿಗೆ ಕಳೆದ ವರ್ಷ ಮೇನಲ್ಲಿ ಅಪಘಾತ ಸಂಭವಿಸಿತ್ತು. ಮಿದುಳು ಇತರ ಭಾಗಗಳಿಗೆ ತೀವ್ರ ಪೆಟ್ಟಾಗಿದ್ದು, ಕೋಮಾ ಸ್ಥಿತಿಗೆ ತಲುಪಿದ್ದರು. ಅಮೆರಿಕದ ಆಸ್ಪತ್ರೆಯಲ್ಲಿ ಅವರಿಗೆ ಚಿಕಿತ್ಸೆ ನೀಡಲಾಗಿತ್ತು. ಅಲ್ಲಿನ ವೈದ್ಯರು ಬದುಕುಳಿಯುವ ಸಾಧ್ಯತೆ ಶೇ 1ಕ್ಕಿಂತ ಕಡಿಮೆ ಎಂದು ಅಂದಾಜಿಸಿದ್ದರು. ವಿಶೇಷ ವಿಮಾನದ ಮೂಲಕ ಅವರನ್ನು ಭಾರತಕ್ಕೆ ಕರೆತಂದು ಸಕ್ರಾವರ್ಲ್ಡ್ ಆಸ್ಪತ್ರೆಗೆ ದಾಖಲಿಸಲಾಯಿತು.

'ನಾವು ಅವರನ್ನು ಉಳಿಸಿಕೊಂಡಿದ್ದೇವೆ' ಎಂದು ಆಸ್ಪತ್ರೆಯ ನರ ಪುನಶ್ಚೇತನ ವಿಭಾಗದ ಮುಖ್ಯಸ್ಥ ಡಾ. ಮಹೇಶ್ವರಪ್ಪ ತಿಳಿಸಿದ್ದಾರೆ.

'ಮಿದುಳಿನ ಆಘಾತದಿಂದ ಬಳಲುತ್ತಿರುವವರ ಗುಣಪಡಿಸುವ ಪ್ರಕ್ರಿಯೆಯಲ್ಲಿ ನರಪುನಶ್ಚೇತನ ಮಹತ್ವದ ಪಾತ್ರ ವಹಿಸುತ್ತದೆ' ಎಂದು ತಿಳಿಸಿದ್ದಾರೆ.

'3-4 ತಿಂಗಳ ನಿರಂತರ ಚಿಕಿತ್ಸೆ ನಂತರ ಪ್ರವೀಣ್ ಅವರ ಆರೋಗ್ಯದಲ್ಲಿ ಗಮನಾರ್ಹ ಸುಧಾರಣೆಯಾಗಿದ್ದು, ದೈನಂದಿನ ಬಹುತೇಕ ಚಟುವಟಿಕೆಗಳನ್ನು ತಾವೇ ಕೈಗೊಳ್ಳುತ್ತಿದ್ದಾರೆ ಎಂದು ಡಾ. ಮಹೇಶ್ವರಪ್ಪ ತಿಳಿಸಿದ್ದಾರೆ.

ಕಂಪ್ಯೂಟರ್ ಸಾಕ್ಷರತೆ: ಸರ್ಕಾರಿ ನೌಕರರಿಗೆ ಪ್ರೋತ್ಸಾಹಧನ

ಬೆಂಗಳೂರು: 2012ರ ಮಾರ್ಚ್ 22ರಲ್ಲಿ ಸೇವೆಯಲ್ಲಿದ್ದು, 2021ರ ಏಪ್ರಿಲ್ 17ರೊಳಗೆ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವ ರಾಜ್ಯ ಸರ್ಕಾರಿ ನೌಕರರಿಗೆ ತಲಾ ₹ 5,000 ಪ್ರೋತ್ಸಾಹಧನ ಪಾವತಿಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಡಿಪಿಎಆರ್) ಮಂಗಳವಾರ ಆದೇಶ ಹೊರಡಿಸಿದೆ.

ಕರ್ನಾಟಕ ಸಿವಿಲ್ ಸೇವೆ (ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆ) ನಿಯಮಗಳು– 2012 ಅನ್ನು 2012ರ ಮಾರ್ಚ್ 22ರಂದು ಜಾರಿಗೊಳಿಸಲಾಗಿತ್ತು. ಆ ದಿನಾಂಕದ ವೇಳೆಗೆ ಸೇವೆಯಲ್ಲಿದ್ದವರು 2021ರ ಏ. 17 ರೊಳಗೆ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಬೇಕು ಎಂದು ಗಡುವು ನೀಡಲಾಗಿತ್ತು. ಆ ಅವಧಿಯೊಳಗೆ ಉತ್ತೀರ್ಣರಾದವರಿಗೆ ಪ್ರೋತ್ಸಾಹಧನ ನೀಡಲು ನಿಯಮಗಳಲ್ಲಿ ಅವಕಾಶ ಕಲ್ಪಿಸಲಾಗಿತ್ತು. ಕಂಪ್ಯೂಟರ್ ಸಾಕ್ಷರತಾ ನಿಯಮಗಳಿಗೆ ಸಂಬಂಧಿಸಿದಂತೆ 2021ರ ಏ. 17ರಂದು ಹೊರಡಿಸಿದ್ದ ಅಧಿಸೂಚನೆಯಲ್ಲಿ ಪ್ರೋತ್ಸಾಹಧನ ಪಾವತಿಗೆ ಸಂಬಂಧಿಸಿದ ವಿಷಯವನ್ನು ಕೈಬಿಡಲಾಗಿತ್ತು. ಅಧಿಸೂಚನೆ ಪ್ರಕಟವಾದ ದಿನದವರೆಗೂ ಪ್ರೋತ್ಸಾಹಧನ ಪಾವತಿಗೆ ಅವಕಾಶ ಕಲ್ಪಿಸಿ ಮಂಗಳವಾರ ಆದೇಶ ಹೊರಡಿಸಲಾಗಿದೆ.

ಬಜೆಟ್: ಇನ್ನೂ ಅನುಷ್ಠಾನಗೊಳ್ಳದ 'ರೈತ ಶಕ್ತಿ', 'ಅಸ್ಮಿತೆ' ಯೋಜನೆ

132 ಘೋಷಣೆ ಜಾರಿಗೆ ಬಾಕಿ

• ರಾಜೇಶ್ ರೈ ಚಟ್ಲ

ಪ್ರಜಾವಾಣಿ ವಿಶೇಷ


ಬೆಂಗಳೂರು: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಫೆಬ್ರುವರಿ 17ರಂದು ತಮ್ಮ ಎರಡನೇ ಬಜೆಟ್ ಮಂಡಿಸುವ ಸಿದ್ಧತೆಯಲ್ಲಿದ್ದಾರೆ. ಆದರೆ, 2022–23ರಲ್ಲಿ ಅವರು ಮಂಡಿಸಿದ ಚೊಚ್ಚಲ ಆಯವ್ಯಯದಲ್ಲಿರುವ 132 ಘೋಷಣೆಗಳು ಇನ್ನೂ ಅನುಷ್ಠಾನಗೊಂಡಿಲ್ಲ.

ಆರೋಗ್ಯ ಇಲಾಖೆಗೆ ಸಂಬಂಧಿಸಿದಂತೆ ಅತೀ ಹೆಚ್ಚು 23 ಸೇರಿದಂತೆ, 34 ಇಲಾಖೆಗಳಲ್ಲಿ ಒಟ್ಟು 391 ಘೋಷಣೆಗಳನ್ನು ನೀಡಿದ್ದರು. ಆ ಪೈಕಿ, 52 ನೀತಿಗೆ ಸಂಬಂಧಿಸಿದ ಹೇಳಿಕೆಗಳು. ಉಳಿದಂತೆ, 330 ಘೋಷಣೆಗಳಿಗೆ ಸರ್ಕಾರಿ ಆದೇಶ ಹೊರಡಿಸಲಾಗಿದೆ. ಆ ಪೈಕಿ, 207 ಅನುಷ್ಠಾನಗೊಂಡಿವೆ ಎಂದು ಸರ್ಕಾರದ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

ಅನುಷ್ಠಾನವಾಗದ ಘೋಷಣೆಗಳ ಕುರಿತು ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ ಸೇರಿದಂತೆ ಹಿರಿಯ ಅಧಿಕಾರಿಗಳ ಜೊತೆ ಜ. 10ರಂದು ಮುಖ್ಯಮಂತ್ರಿ ಚರ್ಚೆ ನಡೆಸಿದ್ದಾರೆ. ಸರ್ಕಾರಿ ಆದೇಶ ಹೊರಡಿಸಿರುವ ಘೋಷಣೆಗಳ ತ್ವರಿತ ಅನುಷ್ಠಾನಕ್ಕೆ ಅವರು ಸಲಹೆ ನೀಡಿದ್ದಾರೆ.

ಅನುಷ್ಠಾನಕ್ಕೆ ಬಾಕಿ ಇರುವ ಘೋಷಣೆಗಳು: ರೈತರಿಗೆ ಕೃಷಿ ಯಂತ್ರೋಪಕರಣ ಬಳಕೆಯನ್ನು ಪ್ರೋತ್ಸಾಹಿಸಲು ಮತ್ತು ಇಂಧನ ವೆಚ್ಚದ ಭಾರ ಕಡಿಮೆ ಮಾಡಲು ಪ್ರತಿ ಎಕರೆಗೆ ₹ 250ರಂತೆ ಗರಿಷ್ಠ 5 ಎಕರೆಗೆ ಡಿಬಿಟಿ ಮೂಲಕ ಡೀಸೆಲ್ ಸಹಾಯಧನ ನೀಡಲು 'ರೈತ ಶಕ್ತಿ' ಯೋಜನೆಯನ್ನು ₹ 500 ಕೋಟಿಯಲ್ಲಿ ಒದಗಿಸುವುದಾಗಿ ಘೋಷಿಸಲಾಗಿದೆ. ಈ ಬಗ್ಗೆ 2022ರ ಮೇ 17ರಂದೇ ಆದೇಶ ಹೊರಡಿಸಿದ್ದರೂ ಇನ್ನೂ ಚಾಲನೆ ಸಿಕ್ಕಿಲ್ಲ. ರಾಜ್ಯದ ಎಲ್ಲ ಹೋಬಳಿಗೆ ಕೃಷಿ ಯಂತ್ರಧಾರೆ ಕೇಂದ್ರಗಳನ್ನು ವಿಸ್ತರಿಸುವ ಯೋಜನೆಯೂ ಆದೇಶದಲ್ಲಿಯೇ ಉಳಿದಿದೆ.

ಎಲ್ಲ ಜಿಲ್ಲೆಗಳಲ್ಲಿ ಮಿನಿ ಆಹಾರ ಪಾರ್ಕ್, ಹೀರೇಕೆರೂರಿನಲ್ಲಿ ಗೋವಿನ ಜೋಳ ಸಂಶೋಧನಾ ಕೇಂದ್ರ, ಮೆಣಸು ಮತ್ತು ಇತರ ಸಾಂಬಾರ್ ಪದಾರ್ಥಗಳ ಗುಣಮಟ್ಟ ಹೆಚ್ಚಿಸಲು ಬ್ಯಾಡಗಿಯಲ್ಲಿ ಸಂಶೋಧನಾ ಕೇಂದ್ರ, ಹಾನಗಲ್‌ನಲ್ಲಿ ಮಾವು ಸಂಸ್ಕರಣಾ ಘಟಕ, ಮಂಡ್ಯ ಜಿಲ್ಲೆಯ ಕೆ.ಆರ್. ಪೇಟೆಯಲ್ಲಿ ರೇಷ್ಮೆ ಉತ್ಪಾದನಾ ಚಟುವಟಿಕೆಗೆ ತರಬೇತಿ ಕೇಂದ್ರ ಇನ್ನೂ ಆರಂಭ ಆಗಿಲ್ಲ.



ಪ್ರಜಾವಾಣಿ ಪ್ರಜಾಧ್ವನಿ ಜನರ ಮನದಾಳದ ಮಾತು

ರಾಜ್ಯದಲ್ಲಿ ಚುನಾವಣೆ ಸಮೀಪಿಸುತ್ತಿರುವಂತೆಯೇ ಆಡಳಿತಾರೂಢ ಬಿಜೆಪಿ, ವಿರೋಧ ಪಕ್ಷ ಕಾಂಗ್ರೆಸ್ ಭ್ರಷ್ಟಾಚಾರ ವಿಷಯವಾಗಿ ಪರಸ್ಪರ ದೂರುತ್ತಿರುವುದು ಸರಿಯೇ?

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ: ಹೌದು 79% ಇಲ್ಲ 21%

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ಯುವಿಸಿಇ ವಿದ್ಯಾರ್ಥಿನಿಗೆ ವಾರ್ಷಿಕ ₹ 58.3 ಲಕ್ಷ ವೇತನ

ಪ್ರಜಾವಾಣಿ ವಾರ್ತೆ



ಕೀರ್ತಿ

ಬೆಂಗಳೂರು: ವಿಶ್ವವಿದ್ಯಾಲಯ ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜು (ಯುವಿಸಿಇ) ವಿದ್ಯಾರ್ಥಿನಿ ಎನ್.ಸಿ.ಕೀರ್ತಿ ಅವರಿಗೆ ವಾರ್ಷಿಕ ₹ 58.3 ಲಕ್ಷ ಪ್ಯಾಕೇಜ್‌ನ ಉದ್ಯೋಗ ದೊರೆತಿದೆ.

ಅಮೆರಿಕದ 'ಸೈಬರ್ ಸೆಕ್ಯೂರಿಟಿ ಸಿಸ್ಕೊ ಕಂಪನಿ'ಯಲ್ಲಿ ಉದ್ಯೋಗ ಪಡೆದಿರುವ ತುಮಕೂರು ಜಿಲ್ಲೆ ಮಧುಗಿರಿಯ ಕೀರ್ತಿ, ಕಂಪ್ಯೂಟರ್ ಸೈನ್ಸ್ ವಿಭಾಗದಲ್ಲಿ ಅಂತಿಮ ಸೆಮಿಸ್ಟರ್ ಓದುತ್ತಿದ್ದಾರೆ. ಇದೇ ವರ್ಷದ ಆಗಸ್ಟ್‌ನಲ್ಲಿ ಅಂತಿಮ ಪರೀಕ್ಷೆಗಳನ್ನು ಬರೆಯಲಿದ್ದಾರೆ.

'ಇಂಟರ್ನ್‌ಶಿಪ್ ಅವಧಿಯಲ್ಲೂ ₹1ಲಕ್ಷ ಅನ್ನು ಕಂಪನಿ ನೀಡಲಿದೆ.

'ಸಿಇಟಿಯಲ್ಲಿ 4 ಸಾವಿರ ರ‍್ಯಾಂಕಿಂಗ್ ದೊರೆತಿತ್ತು. ಪ್ರತಿಷ್ಠಿತ ಖಾಸಗಿ ಕಾಲೇಜುಗಳಲ್ಲಿ ಸೀಟು ಸಿಗುತ್ತಿತ್ತು, ಕಡಿಮೆ ಶುಲ್ಕ ಹಾಗೂ ಕಾಲೇಜಿನಲ್ಲಿ ಹೆಚ್ಚಿನ ಕಲಿಕಾ ಸ್ವಾತಂತ್ರ್ಯ ಸಿಗಲಿದೆ ಎನ್ನುವುದಕ್ಕಾಗಿ ಕೊನೆಯ ಸುತ್ತಿನವರೆಗೂ ಕಾದು ಯುವಿಸಿಇ ಆಯ್ಕೆ ಮಾಡಿಕೊಂಡೆ. ಈಗ ಒಳ್ಳೆಯ ಆಫರ್ ಬಂದಿದೆ. ಆದರೆ, ಇಷ್ಟೊಂದು ದೊಡ್ಡ ಪ್ಯಾಕೇಜ್ ನಿರೀಕ್ಷಿಸಿರಲಿಲ್ಲ. ಬರವಣಿಗೆ, ಕೋಡಿಂಗ್, ತಾಂತ್ರಿಕ ಮತ್ತು ಇತರ ಸುತ್ತುಗಳನ್ನು ಆತ್ಮವಿಶ್ವಾಸದಿಂದ ಎದುರಿಸಿದ ಫಲವಾಗಿ ದೇಟಾ ವಿಭಾಗದ ಲೈಸೆನ್ಸ್ ವಿಭಾಗದಲ್ಲಿ ಕೆಲಸ ಮಾಡುವ ಅವಕಾಶ ಸಿಕ್ಕಿದೆ' ಎಂದು ಕೀರ್ತಿ ವಿವರ ನೀಡಿದರು.

ಅವರ ತಂದೆ ನಾಗರಾಜ್ ಅವರು ಸರ್ಕಾರಿ ಪ್ರಾಥಮಿಕ ಶಾಲೆಯ ಶಿಕ್ಷಕ, ತಾಯಿ ಚಂದ್ರಕಲಾ ಅವರು ಗೃಹಿಣಿ. ಅವರಿಗೆ ಇಬ್ಬರು ಕಿರಿಯ ಸಹೋದರಿ ಯರಿದ್ದಾರೆ.

2019-20 ರಲ್ಲಿ ಆಸ್ಟ್ರೇಲಿಯಾ ಮೂಲದ ಕಂಪನಿ ಯುವಿಸಿಇ ವಿದ್ಯಾರ್ಥಿಯೊಬ್ಬರಿಗೆ ವಾರ್ಷಿಕ ₹ 49 ಲಕ್ಷ ಪ್ಯಾಕೇಜ್ ನೀಡಿತ್ತು. 2022-23ರಲ್ಲಿ ಒಟ್ಟು 502 ವಿದ್ಯಾರ್ಥಿಗಳು ನಿಯೋಜನೆಗಾಗಿ ನೋಂದಾಯಿಸಿಕೊಂಡಿದ್ದರು. 337 ವಿದ್ಯಾರ್ಥಿಗಳು ಆಫರ್‌ಗಳನ್ನು ಪಡೆದಿದ್ದಾರೆ. 71 ಕಂಪನಿಗಳು ಕ್ಯಾಂಪಸ್‌ಗೆ ಭೇಟಿ ನೀಡಿವೆ. ಅಮೆರಿಕ ಮೂಲದ ಫೈವ್‌ಟ್ರಾನ್‌ನಿಂದ ಮೂರು ವಿದ್ಯಾರ್ಥಿಗಳು ₹ 48.3 ಲಕ್ಷ, ಎಂಟು ವಿದ್ಯಾರ್ಥಿಗಳಿಗೆ ಎಸ್‌ಎಪಿ ಲ್ಯಾಬ್‌ಗಳಿಂದ ₹ 24 ಲಕ್ಷದ ಪ್ಯಾಕೇಜ್ ದೊರೆತಿವೆ.

ಕಪ್ಪುಪಟ್ಟಿಯಲ್ಲಿದ್ದರೂ ಗುತ್ತಿಗೆ

ಒಂದನೇ ಪುಟದಿಂದ

ಇದೇ ಕಂಪನಿಯನ್ನು ಕಾರ್ಮಿಕರ ರಾಜ್ಯ ವಿಮಾ ನಿಗಮ (ಇಎಸ್‌ಐಸಿ) ಕೂಡ ಅಕ್ಟೋಬರ್ 25ರಂದು ಎರಡು ವರ್ಷಗಳ ಅವಧಿಗೆ ಕಪ್ಪುಪಟ್ಟಿಗೆ ಸೇರಿಸಿತ್ತು. ದೆಹಲಿ ಹೈಕೋರ್ಟ್ ಈ ವರ್ಷದ ಮಧ್ಯಂತರ ಆದೇಶದ ಆಧಾರದಲ್ಲಿ ತಾತ್ಕಾಲಿಕವಾಗಿ ತಡೆಹಿಡಿದಿದೆ. ರಾಜಸ್ಥಾನದಲ್ಲಿ ಈ ವರ್ಷದ ಸೆಪ್ಟೆಂಬರ್‌ವರೆಗೆ ಮತ್ತು ಕೇರಳದಲ್ಲಿ ಈ ವರ್ಷದ ಏಪ್ರಿಲ್‌ವರೆಗೂ ಇದೇ ಕಂಪನಿಯನ್ನು ಕಪ್ಪುಪಟ್ಟಿಯಲ್ಲಿರಿಸಲಾಗಿದೆ.

'ಯಾವುದೇ ಕಂಪನಿ ಕಪ್ಪುಪಟ್ಟಿಗೆ ಸೇರಿಸಿರುವುದನ್ನು ಪ್ರಶ್ನಿಸಿರುವ ಅರ್ಜಿಗಳು ನ್ಯಾಯಾಲಯಗಳಲ್ಲಿ ಬಾಕಿ ಇದ್ದರೂ ಅಂತಹ ಸಂಸ್ಥೆಯನ್ನು ಟೆಂಡರ್ ಪ್ರಕ್ರಿಯೆಯಲ್ಲಿ ಪರಿಗಣಿಸುವಂತಿಲ್ಲ' ಎಂದು ಕೆಎಸ್‌ಎಂಎಸ್‌ಸಿಎಲ್ ಟೆಂಡರ್ ಷರತ್ತಿನಲ್ಲಿ ಪ್ರಕಟಿಸಿತ್ತು. ಛತ್ತೀಸಗಢ ರಾಜ್ಯ ಸರ್ಕಾರ, ಇಎಸ್‌ಐಸಿ ಸೇರಿದಂತೆ ಕೆಲವು ಪ್ರಕರಣಗಳಲ್ಲಿ ಕಪ್ಪುಪಟ್ಟಿಗೆ ಸೇರಿಸಿರುವುದನ್ನು ಪ್ರಶ್ನಿಸಿ ಯುನಿಕ್ಯೂರ್ ಸಲ್ಲಿಸಿರುವ ಅರ್ಜಿಗಳು ಹೈಕೋರ್ಟ್‌ಗಳಲ್ಲಿ ಇತ್ಯರ್ಥವಾಗದೆ ಬಾಕಿ ಇವೆ. ಕೆಲವೆಡೆ ಮಧ್ಯಂತರ ತಡೆಯಾಜ್ಞೆ ಮಾತ್ರ ದೊರೆತಿದೆ.

ಕಪ್ಪುಪಟ್ಟಿ ಸೇರಿಸುವ ಆದೇಶಗಳಿಗೆ ಕೆಲವೆಡೆ ನ್ಯಾಯಾಲಯಗಳಿಂದ ತಡೆಯಾಜ್ಞೆ ದೊರಕಿದ್ದರೂ, ಅದನ್ನು ಆಧರಿಸಿ ಔಷಧಿ ಖರೀದಿಗೆ ಕಾರ್ಯಾದೇಶ ನೀಡುವಂತಿಲ್ಲ. ಈ ಕಂಪನಿ ನ.25ರಂದು ನಿಗಮಕ್ಕೆ ಮನವಿ ಸಲ್ಲಿಸಿತ್ತು. ಅದನ್ನು ಆಧರಿಸಿ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಿ, ಕಾರ್ಯಾದೇಶ ನೀಡಲಾಗಿದೆ ಎಂದು ಮೂಲಗಳು ತಿಳಿಸಿವೆ.

'ತಡೆಯಾಜ್ಞೆ ಆಧಾರದಲ್ಲಿ ತೀರ್ಮಾನ'

'ಯುನಿಕ್ಯೂರ್ ಇಂಡಿಯಾ ಲಿಮಿಟೆಡ್ ಕಂಪನಿಯನ್ನು ಹಲವು ರಾಜ್ಯಗಳಲ್ಲಿ ಕಪ್ಪುಪಟ್ಟಿಗೆ ಸೇರಿಸಿರುವುದು ನಿಜ. ಆದರೆ, ಕೆಲವು ರಾಜ್ಯಗಳ ತೀರ್ಮಾನಕ್ಕೆ ಹೈಕೋರ್ಟ್‌ಗಳಿಂದ ತಡೆಯಾಜ್ಞೆ ದೊರಕಿದೆ. ಬಳಿಕ ಅದೇ ರಾಜ್ಯ ಸರ್ಕಾರಗಳು ಈ ಕಂಪನಿಯಿಂದ ಔಷಧಿ ಖರೀದಿಸುತ್ತಿವೆ. ಈ ಎಲ್ಲ ಅಂಶಗಳನ್ನೂ ಪರಿಶೀಲಿಸಿ ಔಷಧಿ ಖರೀದಿಗೆ ಕಾರ್ಯಾದೇಶ ನೀಡಲಾಗಿದೆ' ಎಂದು ಕರ್ನಾಟಕ ವೈದ್ಯಕೀಯ ಸರಬರಾಜು ನಿಗಮದ ಔಷಧಿ ಖರೀದಿ ವಿಭಾಗದ ನಿರ್ದೇಶಕ ಡಾ. ರಘುನಂದನ್ ತಿಳಿಸಿದರು.

ಬೆಂಗಳೂರಿನ ಕೆ. ಆರ್. ಮಾರುಕಟ್ಟೆ ಮೇಲ್ಸೇತುವೆಯಲ್ಲಿ ಪ್ರಕರಣ

₹10 ನೋಟುಗಳನ್ನು ಎಸೆದ ಸಿಇಒ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆ.ಆರ್. ಮಾರುಕಟ್ಟೆ ಮೇಲ್ಸೇತುವೆಯಲ್ಲಿ ನಿಂತು ₹ 10 ಮುಖಬೆಲೆಯ ನೋಟುಗಳನ್ನು ಎಸೆದಿದ್ದ ಆರೋಪಿ ಅರುಣ್ ಅವರನ್ನು ಸಿಟಿ ಮಾರ್ಕೆಟ್ ಠಾಣೆ ಪೊಲೀಸರು ವಶಕ್ಕೆ ಪಡೆದಿದ್ದಾರೆ.

'ಆರೋಪಿ ಅರುಣ್, ನಿರೂಪಕ ಹಾಗೂ ಕಾರ್ಯಕ್ರಮ ಸಂಘಟಕ. ವಿ ಡಾಟ್ 9 ಇವೆಂಟ್ ಇಂಡಿಯಾ ಕಂಪನಿ ಸ್ಥಾಪಿಸಿ, ಅದರ ಕಾರ್ಯನಿರ್ವಾಹಕ ಅಧಿಕಾರಿ (ಸಿಇಒ) ಸಹ ಆಗಿದ್ದಾನೆ. ಯುಟ್ಯೂಬ್ ಚಾನೆಲ್ ಸಹ ನಡೆಸುತ್ತಿದ್ದ. ಹಣಕಾಸು ವಿಚಾರಕ್ಕೆ ಸಂಬಂಧಪಟ್ಟಂತೆ ಭಾಷಣ ಮಾಡಿ, ಅದರ ವಿಡಿಯೊಗಳನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಅಪ್‌ಲೋಡ್ ಮಾಡುತ್ತಿದ್ದ' ಎಂದು ಪೊಲೀಸರು ಹೇಳಿದರು.

'ಕೋಟು ಧರಿಸಿ ಕೊರಳಲ್ಲಿ ಗಡಿಯಾರ ನೇತಾಕಿಕೊಂಡಿದ್ದ ಅರುಣ್, ದ್ವಿಚಕ್ರ ವಾಹನದಲ್ಲಿ ಕೆ. ಆರ್. ಮಾರುಕಟ್ಟೆ ಮೇಲ್ಸೇತುವೆಗೆ ಮಂಗಳವಾರ ಬಂದಿದ್ದ. ಬ್ಯಾಗ್‌ನಿಂದ ನೋಟುಗಳನ್ನು ತೆಗೆದು ಕೆಳರಸ್ತೆಗೆ ಎಸೆದಿದ್ದ. ಜನರೆಲ್ಲರೂ ನೋಟುಗಳನ್ನು ಆರಿಸಿಕೊಳ್ಳುತ್ತಿದ್ದರು. ಈ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿತ್ತು' ಎಂದು ತಿಳಿಸಿದರು.



ಬೆಂಗಳೂರು ಕೆ.ಆರ್ ಮಾರುಕಟ್ಟೆ ಮೇಲ್ಸೇತುವೆಯಲ್ಲಿ ನಿಂತು ₹ 10 ನೋಟು ಎಸೆದಿದ್ದ ಅರುಣ್

'ಪ್ರಚಾರಕ್ಕಾಗಿ ನೋಟು ಎಸೆದೆ'

'ಹಣದ ನಿರ್ವಹಣೆ ಹಾಗೂ ಉದ್ಯಮದ ಬಗ್ಗೆ ಕಾರ್ಯಕ್ರಮ ಮಾಡುತ್ತೇನೆ. ಫೇಸ್‌ಬುಕ್, ಇನ್‌ಸ್ಟಾಗ್ರಾಂ ಹಾಗೂ ಯುಟ್ಯೂಬ್‌ನಲ್ಲಿ ವಿಡಿಯೊ ಹಾಕುತ್ತೇನೆ. ಆದರೆ, ನನಗೆ ಹೆಚ್ಚು ಪ್ರಚಾರ ಸಿಗುತ್ತಿರಲಿಲ್ಲ. ಜನರೂ ನನಗಾಗಿ ಸಮಯ ನೀಡುತ್ತಿರಲಿಲ್ಲ. ಕೆ.ಆರ್.ಮಾರುಕಟ್ಟೆ ಬಳಿ ಹೋಗಿ ಹಣ ಎಸೆದರೆ, ಹೆಚ್ಚು ಪ್ರಚಾರ ಸಿಗಬಹುದೆಂದು ಸ್ನೇಹಿತನ ಜೊತೆ ಸೇರಿ ಈ ರೀತಿ ಮಾಡಿದೆ' ಎಂದು ಆರೋಪಿ ಅರುಣ್ ಹೇಳಿಕೆ ನೀಡಿರುವುದಾಗಿ ಮೂಲಗಳು ತಿಳಿಸಿವೆ.

'ಕಡಿಮೆ ಹಣದಲ್ಲಿ ಹೆಚ್ಚು ಪ್ರಚಾರ ಪಡೆಯುವುದು ಹೇಗೆ? ಎಂಬುದನ್ನು ತೋರಿಸುವುದಷ್ಟೇ ನನ್ನ ಉದ್ದೇಶವಾಗಿತ್ತು. ಹೀಗಾಗಿ, ₹4,500 ಮೊತ್ತದ ₹ 10 ಮುಖಬೆಲೆಯ ನೋಟುಗಳನ್ನು ಎಸೆದಿದ್ದೆ. ಇದೀಗ ಎಲ್ಲೆಡೆಯೂ ನನ್ನದೇ ಸುದ್ದಿ' ಎಂದು ಆರೋಪಿ ತಿಳಿಸಿರುವುದಾಗಿ ಮೂಲಗಳು ಹೇಳಿವೆ.

'ವಿಷಯ ಗೊತ್ತಾಗುತ್ತಿದ್ದಂತೆ ಹೊಯ್ಸಳ ಗಸ್ತು ವಾಹನ ಸ್ಥಳಕ್ಕೆ ಹೋಗಿತ್ತು. ಅಷ್ಟರಲ್ಲೇ ಆರೋಪಿ ಪರಾರಿಯಾಗಿದ್ದ. ಸಾರ್ವಜನಿಕರಿಗೆ ಕಿರಿಕಿರಿಯನ್ನುಂಟು ಮಾಡಿದ ಹಾಗೂ ವಾಹನಗಳ ಸಂಚಾರಕ್ಕೆ ಅಡ್ಡಿಪಡಿಸಿದ ಆರೋಪದಡಿ ಅರುಣ್ ವಿರುದ್ಧ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು.'

'ತನಿಖೆ ಕೈಗೊಂಡಾಗ, ಹಣ ಎರಚಿದ್ದು ಅರುಣ್ ಎಂಬುದು ಗೊತ್ತಾಯಿತು. ಮನೆಗೆ ಹೋಗಿ ವಿಚಾರಿಸಿದಾಗ, ಕಚೇರಿಯೊಂದರಲ್ಲಿ ಇರುವ ಮಾಹಿತಿ ಲಭ್ಯವಾಯಿತು. ಅದೇ ಕಚೇರಿಯಲ್ಲೇ ಅರುಣ್‌ನನ್ನು ವಶಕ್ಕೆ ಪಡೆದು, ಠಾಣೆಗೆ ಕರೆತರಲಾಗಿದೆ. ವಿಚಾರಣೆ ಮುಂದುವರಿಸಲಾಗಿದೆ' ಎಂದು ಪೊಲೀಸರು ಹೇಳಿದರು.

ಉಸಿರುಗಟ್ಟಿ ಇಬ್ಬರು ಕಾರ್ಮಿಕರು ಸಾವು

ತಿಪಟೂರು (ತುಮಕೂರು): ನಗರದ ಹೊರವಲಯದ ಕೈಗಾರಿಕಾ ಪ್ರದೇಶದಲ್ಲಿರುವ ಪೆಟ್ರೋಲ್ ಬಂಕ್‌ವೊಂದರಲ್ಲಿ ಮಂಗಳವಾರ ಸಂಜೆ ನೆಲದಡಿಯ ಇಂಧನ ಟ್ಯಾಂಕ್ ಸ್ವಚ್ಛಗೊಳಿಸುತ್ತಿದ್ದ ಇಬ್ಬರು ಕಾರ್ಮಿಕರು ಉಸಿರುಗಟ್ಟಿ ಮೃತಪಟ್ಟಿದ್ದಾರೆ. ತಮಿಳುನಾಡಿನ ವೇಲೂರಿನ ರವಿ (38) ಮತ್ತು ಅರಸೀಕೆರೆ ತಾಲ್ಲೂಕಿನ ಹಾರನಹಳ್ಳಿ ನಾಗರಾಜು (45) ಮೃತ ಕಾರ್ಮಿಕರು.

ರಾಜ್ಯದ ಕೆಲವೆಡೆ ಬಿರುಸಿನ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊಡಗು, ಚಿಕ್ಕಮಗಳೂರು, ಚಾಮರಾಜನಗರ, ಮೈಸೂರು ಮತ್ತು ಮಂಡ್ಯ ಜಿಲ್ಲೆಯ ವಿವಿಧೆಡೆ ಮಂಗಳವಾರ ಬಿರುಸಿನ ಮಳೆಯಾಗಿದೆ.

ಮಡಿಕೇರಿ ನಗರವೂ ಸೇರಿದಂತೆ ಕೊಡಗು ಜಿಲ್ಲೆಯ ಭಾಗಮಂಡಲ, ಸಂಪಾಜೆ ಸಮೀಪದ ಚೆಂಬು, ವಿರಾಜಪೇಟೆ ತಾಲ್ಲೂಕಿನ ಸಿದ್ದಾಪುರ, ಅಮ್ಮತ್ತಿ, ಸೋಮವಾರಪೇಟೆ ಭಾಗದಲ್ಲಿ ಮಳೆ ಸುರಿದಿದೆ. ಒಣಗಿಸಲು ಕಣದಲ್ಲಿ ಹಾಕಿದ್ದ ಕಾಫಿ ಹಾಗೂ ಕೊಯ್ಲು ಮಾಡಿದ್ದ ಕಾಫಿ ಮಳೆಯಿಂದ ಹಾಳಾಗಿದೆ. ಭಾಗಮಂಡಲದ ಕೆಲವೆಡೆ ಇನ್ನೂ ಭತ್ತದ ಕೊಯ್ಲು ಆಗಿಲ್ಲ. ಮಳೆಯಿಂದ ಬೆಳೆಗಾರರು ಕಂಗಾಲಾಗಿದ್ದಾರೆ.

ಜ.27ರಿಂದ ಫೆ.2ರವರೆಗೆ ಸರಾಸರಿಗಿಂತ ಹೆಚ್ಚು ಮಳೆಯಾಗುವ ಸಂಭವ ಇದೆ ಎಂದು ಭಾರತೀಯ ಹವಾಮಾನ ಇಲಾಖೆಯ ನಾಗನಹಳ್ಳಿಯ ಕೃಷಿ ಹವಾಮಾನ ಕ್ಷೇತ್ರ ವಿಭಾಗದ ಪ್ರಕಟಣೆ ತಿಳಿಸಿದೆ. ಚಾಮರಾಜನಗರ ಮತ್ತು ಯಳಂದೂರು ತಾಲ್ಲೂಕಿನ ಕೆಲವೆಡೆ, ಮೈಸೂರು ನಗರದಲ್ಲಿ ಹಾಗೂ ಮಂಡ್ಯದ ಶ್ರೀರಂಗಪಟ್ಟಣದಲ್ಲಿ ಸಾಧಾರಣ ಮಳೆಯಾಗಿದೆ.

ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ, ಕೊಪ್ಪ, ಎನ್.ಆರ್. ಪುರ, ಶೃಂಗೇರಿ ತಾಲ್ಲೂಕಿನಲ್ಲೂ ಮಳೆಯಾಗಿದೆ. ಮೂಡಿಗೆರೆ ತಾಲ್ಲೂಕಿನ ಬೆಟ್ಟಗೆರೆ, ಫಲ್ಗುಣಿ, ಭಾರತೀಬೈಲ್, ಹುಲ್ಲೇಮನೆ ಸುತ್ತಲಿನ ಪ್ರದೇಶದಲ್ಲಿ ಬಿರುಸಾಗಿ ಸುರಿದಿದೆ. ಇಲ್ಲೂ ಕೂಡ ಕಾಫಿ ಮತ್ತು ಭತ್ತಕ್ಕೆ ಹಾನಿಯಾಗಿದೆ. ಕೊಪ್ಪ ತಾಲ್ಲೂಕಿನಲ್ಲೂ ರಭಸವಾಗಿ ಸುರಿದಿದೆ. ಎನ್.ಆರ್.ಪುರ, ಶೃಂಗೇರಿ ಭಾಗದಲ್ಲಿ ತುಂತುರು ಮಳೆಯಾಗಿದೆ.



ಸೋಮವಾರಪೇಟೆ ಸಮೀಪದ ಕಿರಗಂದೂರು ಗ್ರಾಮದಲ್ಲಿ ಮಂಗಳವಾರ ಒಣಗಲು ಹಾಕಿದ್ದ ಕಾಫಿ ಬೀಜ ಮಳೆ ನೀರಿನಲ್ಲಿ ಕೊಚ್ಚಿಹೋಯಿತು.

ನದಿ ನೀರು ನೇರ ಸೇವನೆಗೆ ಯೋಗ್ಯವಲ್ಲ

ಒಂದನೇ ಪುಟದಿಂದ

ರಾಜ್ಯದ 17 ನದಿಗಳ ನೀರು ನೇರವಾಗಿ ಕುಡಿಯಲು ಯೋಗ್ಯವಲ್ಲ. ಅಷ್ಟೇ ಅಲ್ಲ, ಸಾಮಾನ್ಯ ಸಂಸ್ಕರಣೆ ಮಾಡಿಯೂ ಕುಡಿಯಬಹುದಾದ ಜಲಮೂಲ ಈಗ ಇಲ್ಲವಾಗಿದೆ ಎಂಬುದು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ವರದಿಯಲ್ಲಿ ಉಲ್ಲೇಖಿಸಿದೆ.

ಕೆರೆ ಕಲ್ಮಶ: ಬೆಂಗಳೂರು ಹೊರತುಪಡಿಸಿ ಇತರೆ ಜಿಲ್ಲೆಗಳ 69 ಕೆರೆಗಳ ನೀರಿನ ಗುಣಮಟ್ಟ ಪರೀಕ್ಷಿಸಿದ್ದು, ಇದರಲ್ಲೂ 'ಎ' ವರ್ಗ ಕೆರೆಗಳು ಯಾವುದೂ ಇಲ್ಲ. ರಾಮನಗರದ ಬೈರಮಂಗಲ ಹಾಗೂ ರಾಮಮ್ಮನ ಕೆರೆ, ತುಮಕೂರಿನ ಮೇಳೆಕೋಟೆ, ಭೀಮಸಂದ್ರ ಕೆರೆ, ಮೈಸೂರಿನ ದಳವಾಯಿ, ಎಣ್ಣೆಹೊಳೆ ಕೆರೆ, ಹಾಸನ ಮಾಕನ, ಹಾವಲಿ ಕೆರೆಗಳು 'ಇ' ವರ್ಗದಲ್ಲಿವೆ. 'ಬಿ' ವರ್ಗದಲ್ಲಿ 5, 'ಸಿ' ವರ್ಗದಲ್ಲಿ 18 ಮತ್ತು 'ಡಿ' ವರ್ಗದಲ್ಲಿ 32 ಕೆರೆಗಳಿವೆ.

ರಾಜೇಂದ್ರ ಚೆನ್ನಿ, ಜಿನದತ್ತ ದೇಸಾಯಿಗೆ 'ಅಂಬಿಕಾತನಯದತ್ತ' ಪ್ರಶಸ್ತಿ


ಧಾರವಾಡ: ಇಲ್ಲಿನ ಡಾ. ದ.ರಾ.ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್ ವತಿಯಿಂದ ನೀಡಲಾಗುತ್ತಿರುವ 2023ನೇ ಸಾಲಿನ 'ಅಂಬಿಕಾತನಯದತ್ತ' ರಾಷ್ಟ್ರೀಯ ಪ್ರಶಸ್ತಿಗೆ ಕವಿ ಡಾ.ಜಿನದತ್ತ ದೇಸಾಯಿ ಹಾಗೂ ವಿಮರ್ಶಕ ಡಾ.ರಾಜೇಂದ್ರ ಚೆನ್ನಿ ಆಯ್ಕೆಯಾಗಿದ್ದಾರೆ.

'₹1 ಲಕ್ಷ ಮೌಲ್ಯದ ಈ ಪ್ರಶಸ್ತಿಯನ್ನು ಈ ಬಾರಿ ಇಬ್ಬರಿಗೆ ಹಂಚಲಾಗಿದೆ. ಬೇಂದ್ರೆ ಅವರ 127ನೇ ಜನ್ಮದಿನದ ಸಂದರ್ಭದಲ್ಲಿ ಜ. 31ರಂದು ಬೇಂದ್ರೆ ಭವನದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ನಡೆಯಲಿದೆ. ವಿಧಾನ ಪರಿಷತ್ ಸದಸ್ಯ ಎ.ಎಚ್.ವಿಶ್ವನಾಥ್ ಪ್ರಶಸ್ತಿ ಪ್ರದಾನ ಮಾಡುವರು' ಎಂದು ಟ್ರಸ್ಟ್‌ನ ಅಧ್ಯಕ್ಷ ಡಾ.ಡಿ.ಎಂ.ಹಿರೇಮಠ ತಿಳಿಸಿದರು.

'ಕುವೆಂಪು ಹಾಗೂ ಬೇಂದ್ರೆ ಅವರನ್ನು ಕನ್ನಡಾಂಬೆಯ ಎರಡು ಕಣ್ಣುಗಳಿದ್ದಂತೆ ಎಂದು ಬಣ್ಣಿಸಲಾಗಿದೆ. ಆದರೆ ಅನುದಾನ ಹಂಚಿಕೆಯಲ್ಲಿ ಒಂದು ಕಣ್ಣಿಗೆ ಬೆಣ್ಣೆ ಹಾಗೂ ಮತ್ತೊಂದು ಕಣ್ಣಿಗೆ ಸುಣ್ಣ ಎಂಬಂತಾಗಿದೆ. ವರಕವಿ ಅವರ ಜನ್ಮದಿನವನ್ನು 'ವಿಶ್ವ ಕವಿ ದಿನ' ಎಂದು ಘೋಷಿಸುವಂತೆ ಕಳೆದ ಮೂರು ವರ್ಷಗಳಿಂದ ಸರ್ಕಾರಕ್ಕೆ ಮನವಿ ಸಲ್ಲಿಸುತ್ತಲೇ ಬರಲಾಗಿದೆ. ಹೀಗಿದ್ದರೂ ಅದನ್ನು ಸರ್ಕಾರ ಪರಿಗಣಿಸದಿರುವುದು ಬೇಸರದ ಸಂಗತಿ' ಎಂದು ಡಾ. ಹಿರೇಮಠ ಹೇಳಿದರು.



ಡಾ. ರಾಜೇಂದ್ರ ಚೆನ್ನಿ



ಡಾ. ಜಿನದತ್ತ ಹಡಗಲಿ

ಹೆಚ್ಚುವರಿ ಶಿಕ್ಷಕರ ಕೌನ್ಸೆಲಿಂಗ್ ಪ್ರಕ್ರಿಯೆ ರದ್ದು

ಒಂದನೇ ಪುಟದಿಂದ...

ಪ್ರತಿ ವರ್ಷ ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಗಣನೀಯವಾಗಿ ಕುಸಿಯುತ್ತಿದ್ದು, ಎರಡು ವರ್ಷಗಳಿಗೊಮ್ಮೆ ಹೆಚ್ಚುವರಿ ಶಿಕ್ಷಕರ ಪಟ್ಟಿ ಸಿದ್ಧಪಡಿಸಿ, ಅವರನ್ನು ಅಗತ್ಯವಿರುವ ಇತರೆ ಶಾಲೆಗಳಿಗೆ ವರ್ಗಾವಣೆ ಮಾಡಲಾಗುತ್ತಿದೆ. ಈ ಬಾರಿ ಪ್ರಾಥಮಿಕ ಶಾಲೆಗಳಲ್ಲಿ 8,500 ಹಾಗೂ ಪ್ರೌಢ ಶಾಲೆಗಳಲ್ಲಿ ಎರಡು ಸಾವಿರ ಶಿಕ್ಷಕರನ್ನು ಹೆಚ್ಚುವರಿ ಎಂದು ಗುರುತಿಸಿ, ಜನವರಿ 24 ರಿಂದ ಸ್ಥಳ ಮರು ನಿಯುಕ್ತಿಗಾಗಿ ಕೌನ್ಸೆಲಿಂಗ್ ಆರಂಭಿಸಲಾಗಿತ್ತು.

'ಹೆಚ್ಚುವರಿ ಶಿಕ್ಷಕರ ಪ್ರಕ್ರಿಯೆಯಲ್ಲಿ ತಾಂತ್ರಿಕ ದೋಷಗಳಿವೆ. ನ್ಯೂನತೆಗಳಿದ್ದರೂ ಕೌನ್ಸೆಲಿಂಗ್ ನಡೆಸುತ್ತಿರುವುದು ಸರಿಯಲ್ಲ. ತಕ್ಷಣ ಪ್ರಕ್ರಿಯೆ ಸ್ಥಗಿತಗೊಳಿಸಬೇಕು. ಮುಂದಿನ ಕೌನ್ಸೆಲಿಂಗ್ ಕುರಿತು ಪ್ರಸ್ತಾವನೆಯನ್ನು ಸಲ್ಲಿಸಬೇಕು' ಎಂದು ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಮಂಗಳವಾರ ಇಲಾಖೆಯ ಆಯುಕ್ತರಿಗೆ ಲಿಖಿತ ಸೂಚನೆ ನೀಡಿದ್ದರು.

ಶೃಂಗೇರಿ ಶಾಸಕ ರಾಜೇಗೌಡ ಆಕ್ಷೇಪ

ಶೃಂಗೇರಿ ತಾಲ್ಲೂಕು ಮೆಣಸಿಯ ಶಾಸಕರ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯ ಪದವಿಧರ ಮುಖ್ಯ ಶಿಕ್ಷಕ ಬಿ.ಆರ್.ಗಂಗಾಧರಪ್ಪ ಅವರನ್ನು ಹೆಚ್ಚುವರಿ ಎಂದು ಗುರುತಿಸಿದ್ದು, ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿ ಶಾಸಕ ಟಿ.ಡಿ.ರಾಜೇಗೌಡ ಸರ್ಕಾರಕ್ಕೆ ಪತ್ರ ಬರೆದಿದ್ದರು. ಮಲೆನಾಡಿನಲ್ಲೇ ಪ್ರತಿಷ್ಠಿತವಾದ ಈ ಸರ್ಕಾರಿ ಶಾಲೆ ಪ್ರಸಕ್ತ ವರ್ಷ ₹ 5 ಲಕ್ಷ ನಗದು ಪುರಸ್ಕಾರ ಸ್ವಾಭಿಮಾನಿ ಸಾರ್ವಜನಿಕ ಶಾಲಾ ಪ್ರಶಸ್ತಿ ಪಡೆದಿದೆ. 1ರಿಂದ 7ನೇ ತರಗತಿಯವರೆಗೆ 260 ಮಕ್ಕಳು, ಪೂರ್ವ ಪ್ರಾಥಮಿಕ ಸೇರಿ 329 ಮಕ್ಕಳು ಕಲಿಯುತ್ತಿದ್ದಾರೆ. ಮುಂದಿನ ಶಿಕ್ಷಣಿಕ ವರ್ಷದಿಂದ 8ನೇ ತರಗತಿ ಆರಂಭವಾಗುತ್ತಿದ್ದು, ಮಕ್ಕಳ ಸಂಖ್ಯೆ 400 ದಾಟಲಿದೆ. ಹಾಗಾಗಿ, ಹೆಚ್ಚುವರಿ ಶಿಕ್ಷಕರ ಬಗ್ಗೆ ಪುನರ್‌ಪರಿಶೀಲಿಸಬೇಕು ಎಂದು ಕೋರಿದ್ದರು.

ಭಾರತ್ ಜೋಡೊ ಸಮಾರೋಪಕ್ಕೆ ಗೈರು: ದೇವೇಗೌಡ ಪತ್ರ

ಬೆಂಗಳೂರು: ಶ್ರೀನಗರದಲ್ಲಿ ನಡೆಯುವ ಭಾರತ್ ಜೋಡೊ ಯಾತ್ರೆಯ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಲು ಸಾಧ್ಯವಾಗುತ್ತಿಲ್ಲ ಎಂದು ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಅವರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಪತ್ರ ಬರೆದಿದ್ದಾರೆ.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನೇತೃತ್ವದಲ್ಲಿ ನಡೆಯುತ್ತಿರುವ ಯಾತ್ರೆಯ ಸಮಾರೋಪದಲ್ಲಿ ಭಾಗವಹಿಸುವಂತೆ ಆಹ್ವಾನಿಸಿ ಖರ್ಗೆ ಅವರು ದೇವೇಗೌಡರಿಗೆ ಜನವರಿ 10ರಂದು ಪತ್ರ ಬರೆದಿದ್ದರು. ಮಂಗಳವಾರ ಪತ್ರದ ಮೂಲಕ ಉತ್ತರಿಸಿರುವ ಅವರು, ತಾವು ಪಾಲ್ಗೊಳ್ಳುವುದು ಸಾಧ್ಯವಾಗುತ್ತಿಲ್ಲ ಎಂದಿದ್ದಾರೆ. 'ದ್ವೇಷ, ಹಿಂಸೆಯ ವಿರುದ್ಧ ರಾಹುಲ್ ಗಾಂಧಿ ಅವರು ಕನ್ಯಾಕುಮಾರಿಯಿಂದ ಶ್ರೀನಗರದವರೆಗೆ ಯಾತ್ರೆ ನಡೆಸುತ್ತಿದ್ದಾರೆ. ಸಮಾರೋಪದಲ್ಲಿ ನಾನು ಭಾಗವಹಿಸದೇ ಇದ್ದರೂ, ಅವರ ಯಾತ್ರೆಗೆ ನನ್ನ ಶುಭ ಹಾರೈಕೆ ಇದೆ' ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

'ಮರಣ ಇಚ್ಛೆಯ ಉಯಿಲು' ಮಾರ್ಗಸೂಚಿ ಪರಿಷ್ಕರಿಸಿದ ಸುಪ್ರೀಂ ಕೋರ್ಟ್‌ನ ಸಾಂವಿಧಾನಿಕ ಪೀಠ

ದಯಾಮರಣ: ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್ ಅನುಮತಿ ಬೇಕಿಲ್ಲ

ನವದೆಹಲಿ (ಪಿಟಿಐ): ದಯಾಮರಣಕ್ಕೆ ಸಂಬಂಧಿಸಿದಂತೆ 2018ರಲ್ಲಿ ಐತಿಹಾಸಿಕ ತೀರ್ಪು ನೀಡಿದ್ದ ಸುಪ್ರೀಂ ಕೋರ್ಟ್, 'ಮರಣ ಇಚ್ಛೆಯ ಉಯಿಲು' (ಲಿವಿಂಗ್ ವಿಲ್) ಕುರಿತ ಮಾರ್ಗಸೂಚಿಯನ್ನು ಇನ್ನಷ್ಟು ಸರಳೀಕರಿಸಿದೆ.



ಮಾರಣಾಂತಿಕ ರೋಗದಿಂದ ಬಳಲುತ್ತಿರುವ ವ್ಯಕ್ತಿಗೆ ಅಳವಡಿಸಿರುವ ಜೀವ ರಕ್ಷಕ ಸಾಧನ ತೆಗೆಯುವುದಕ್ಕೆ ಪ್ರಥಮ ದರ್ಜೆಯ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್ (ಜೆಎಂಎಫ್‌ಸಿ) ಅನುಮತಿಯನ್ನು ಈ ಮೊದಲು ಕಡ್ಡಾಯಗೊಳಿಸಲಾಗಿತ್ತು.

ಈ ಷರತ್ತನ್ನು ನ್ಯಾಯಮೂರ್ತಿ ಕೆ.ಎಂ.ಜೋಸೆಫ್ ನೇತೃತ್ವದ ಐವರು ಸದಸ್ಯರನ್ನೊಳಗೊಂಡ ಸಾಂವಿಧಾನಿಕ ಪೀಠವು ಮಂಗಳವಾರ ಮಾರ್ಗಸೂಚಿಯಿಂದ ತೆಗೆದುಹಾಕಿದೆ.

'ಇನ್ನು ಮುಂದೆ ಮರಣ ಇಚ್ಛೆಯ ಉಯಿಲು ಬರೆಯುವ ವ್ಯಕ್ತಿಯು ಇಬ್ಬರು ಸಾಕ್ಷಿಗಳ ಸಮ್ಮುಖದಲ್ಲಿ ದಾಖಲೆಗಳಿಗೆ ಸಹಿ ಹಾಕಬೇಕು. ಅದನ್ನು ನೋಟರಿ ಅಥವಾ ಗೆಜೆಟೆಡ್ ಅಧಿಕಾರಿ ದೃಢೀಕರಿಸಬೇಕು' ಎಂದು ನ್ಯಾಯಮೂರ್ತಿಗಳಾದ ಅಜಯ್ ರಸ್ತೋಗಿ, ಅನಿರುದ್ಧ್ ಬೋಸ್, ಹೃಷಿಕೇಶ್ ರಾಯ್ ಮತ್ತು ಸಿ.ಟಿ.ರವಿಕುಮಾರ್ ಅವರನ್ನೊಳಗೊಂಡ ನ್ಯಾಯಪೀಠ ಹೇಳಿದೆ.

'ವ್ಯಕ್ತಿಯು ಬಲವಂತಕ್ಕೆ ಒಳಗಾಗದೆ, ಸಂಬಂಧಿತ ಎಲ್ಲಾ ಮಾಹಿತಿಗಳನ್ನು ಪರಿಪೂರ್ಣವಾಗಿ ಅರ್ಥಮಾಡಿಕೊಂಡ ನಂತರ ಸ್ವಯಂ ಪ್ರೇರಣೆಯಿಂದ ದಾಖಲೆಗಳಿಗೆ ಸಹಿ ಮಾಡಿದ್ದಾರೆ ಎಂಬುದನ್ನು ಸಾಕ್ಷಿಗಳು ಮತ್ತು ನೋಟರಿ ದೃಢೀಕರಿಸಬೇಕು. ಈ ಬಗ್ಗೆ ಅವರಿಗೆ ಸಂಪೂರ್ಣ ತೃಪ್ತಿ ಇರಬೇಕು' ಎಂದು ಸಾಂವಿಧಾನಿಕ ಪೀಠವು ತಿಳಿಸಿದೆ.

ಉಯಿಲು ಬರೆಯುವ ವ್ಯಕ್ತಿಯು ತಮ್ಮ ಕುಟುಂಬದ ವೈದ್ಯರಿಗೆ ಈ ಕುರಿತ ಮಾಹಿತಿ ಒದಗಿಸುವ ಮತ್ತು ಮುಂಚಿತವಾಗಿ ನೀಡಲಾಗುವ ನಿರ್ದೇಶನಗಳ ಪ್ರತಿಯನ್ನು ಅವರಿಗೆ ಒಪ್ಪಿಸುವ ಕುರಿತು ನೀಡಲಾದ ಸಲಹೆಯನ್ನು ನ್ಯಾಯಪೀಠ ಮಾನ್ಯ ಮಾಡಿತು.

2018ರಲ್ಲಿ ಹೊರಡಿಸಲಾಗಿದ್ದ ಮಾರ್ಗಸೂಚಿ ಪ್ರಕಾರ ಮಾರಣಾಂತಿಕ ರೋಗದಿಂದ ಬಳಲುತ್ತಿರುವ ವ್ಯಕ್ತಿಯು ಇಬ್ಬರು ಸಾಕ್ಷಿಗಳು ಹಾಗೂ ಜೆಎಂಎಫ್‌ಸಿ ಅವರ ಸಮಕ್ಷಮದಲ್ಲಿ ಉಯಿಲು ಪತ್ರಕ್ಕೆ ಸಹಿ ಹಾಕಬೇಕಿತ್ತು.

ದೆಹಲಿ: ನಡೆಯದ ಮೇಯರ್ ಆಯ್ಕೆ

ನವದೆಹಲಿ (ಪಿಟಿಐ): ದೆಹಲಿ ಮಹಾನಗರ ಪಾಲಿಕೆಯಲ್ಲಿ (ಎಂಸಿಡಿ) ಮಂಗಳವಾರ ನಡೆದ ಸಭೆಯಲ್ಲಿ ಎಎಪಿ ಹಾಗೂ ಬಿಜೆಪಿ ಸದಸ್ಯರ ನಡುವೆ ಗದ್ದಲ ಉಂಟಾದ ಕಾರಣ ಮೇಯರ್ ಮತ್ತು ಉಪಮೇಯರ್ ಆಯ್ಕೆ ನಡೆಯದೇ ಸಭೆಯನ್ನು ಮುಂದೂಡಲಾಯಿತು.

ಸಭೆಯಲ್ಲಿ ಬಿಜೆಪಿ ಮತ್ತು ಎಎಪಿ ಸದಸ್ಯರ ನಡುವಿನ ವಾಗ್ವಾದ ತೀವ್ರಗೊಂಡಾಗ ಬಿಜೆಪಿ ಸದಸ್ಯೆ ಹಾಗೂ ಚುನಾವಣಾಧಿಕಾರಿ ಸತ್ಯಾ ಶರ್ಮಾ ಅವರು ಮೇಯರ್ ಆಯ್ಕೆ ಸಭೆಯನ್ನು ಮುಂದೂಡಿದರು.

ಮೇಯರ್ ಆಯ್ಕೆ ನಡೆಸದೇ ಸಭೆ ಮುಂದೂಡಿರುವುದು 15 ದಿನಗಳಲ್ಲಿ ಇದು ಎರಡನೇ ಬಾರಿಯಾಗಿದೆ.

ಮೇಯರ್ ಆಯ್ಕೆಗಾಗಿ ಮತದಾನ ನಡೆಸಲು ಬಿಜೆಪಿ ಸದಸ್ಯರು ಸಭೆಗೆ ಮರಳಿ ಬರಬೇಕೆಂದು ಎಎಪಿಯ ಎಲ್ಲಾ ಸದಸ್ಯರು, 13 ಶಾಸಕರು ಮತ್ತು ಮೂವರು ಸಂಸದರು ಆಗ್ರಹಿಸಿದರು.

'ಬಿಜೆಪಿಯ ಸದಸ್ಯರು ಮರಳಿ ಬಂದು ಮತದಾನ ನಡೆಯುವವರೆಗೆ ನಾವು ಸಭಾಂಗಣ ತೊರೆಯುವುದಿಲ್ಲ' ಎಂದು ಎಎಪಿ ಮುಖಂಡ ದುರ್ಗೇಶ್ ಪಾಠಕ್ ಪಟ್ಟುಹಿಡಿದರು.


'ಎಎಪಿ ಸದಸ್ಯರು ಗದ್ದಲ ಉಂಟುಮಾಡಿದ ಕಾರಣ ಸಭೆಯನ್ನು ಮುಂದೂಡಲಾಗಿದೆ' ಎಂದು ಆರೋಪಿಸಿ ಬಿಜೆಪಿ ಮೇಯರ್ ಅಭ್ಯರ್ಥಿ ರೇಖಾ ಗುಪ್ತಾ ಅವರು ಧರಣಿ ನಡೆಸಿದರು.

'ಎಎಪಿ ಸದಸ್ಯ ಪ್ರವೀಣ್ ಅವರು ಬಿಜೆಪಿ ಸದಸ್ಯರೊಬ್ಬರನ್ನು ತಳ್ಳಿದ್ದಾರೆ. ಈ ಕುರಿತು ಎಎಪಿ ಶಾಸಕಿ ಆತಿಶಿ ಅವರಲ್ಲಿ ದೂರಿದ್ದೇನೆ. ಅವರು ಪ್ರವೀಣ್ ಪರವಾಗಿ ನಿಂತಿದ್ದಾರೆ. ಇದು ನಾಚಿಕೆಗೇಡಿನ ಸಂಗತಿ' ಎಂದು ರೇಖಾ ಅವರು ಆರೋಪಿಸಿದ್ದಾರೆ.

ಬಳಿಕ ಅವರು ಎಎಪಿ ಸದಸ್ಯರು ಕುಳಿತಿರುವಲ್ಲಿಗೆ ತೆರಳಿ ಘೋಷಣೆ ಕೂಗಿದರು. ಎಎಪಿ ಸದಸ್ಯರು ಪ್ರತಿಯಾಗಿ ಘೋಷಣೆ ಕೂಗಿದ್ದಾರೆ. ಈ ವೇಳೆ ವಾಗ್ವಾದ ನಡೆದಿದೆ. ಬಳಿಕ ಸಭೆಯನ್ನು ಮುಂದೂಡಲಾಯಿತು.

'ಸೋಲನ್ನು ಸ್ವೀಕರಿಸಿ': 'ಬಿಜೆಪಿಯು ಎಂಸಿಡಿ ಚುನಾವಣೆಯ ಸೋಲನ್ನು ಸ್ವೀಕರಿಸಬೇಕು ಮತ್ತು ಮೇಯರ್ ಆಯ್ಕೆಯು ಸುಸೂತ್ರವಾಗಿ ನಡೆಯುವಂತೆ ಅನುವು ಮಾಡಿಕೊಡಬೇಕು' ಎಂದು ದೆಹಲಿ ಉಪಮುಖ್ಯಮಂತ್ರಿ ಮನೀಷ್ ಸಿಸೋಡಿಯಾ ಹೇಳಿದ್ದಾರೆ.

ವಾಸ್ತುಶಿಲ್ಪಿ ಬಿ.ವಿ. ದೋಶಿ ನಿಧನ



ಬಾಲಕೃಷ್ಣ ದೋಶಿ (ಟ್ವಿಟರ್ ಚಿತ್ರ)

ಅಹಮದಾಬಾದ್: ವಾಸ್ತುಶಿಲ್ಪಿಗಳಿಗೆ ನೀಡಲಾಗುವ ಜಗತ್ತಿನ ಅತ್ಯುನ್ನತ 'ಪ್ರಿಟ್ಸ್‌ಗರ್ ಆರ್ಕಿಟೆಕ್ಚರ್ ಪ್ರಶಸ್ತಿ'ಯನ್ನು ಪಡೆದ ಭಾರತದ ಮೊದಲಿಗ, ಪದ್ಮಭೂಷಣ ಪ್ರಶಸ್ತಿ ಪುರಸ್ಕೃತ ಡಾ.ಬಾಲಕೃಷ್ಣ ದೋಶಿ (95) ಅವರು ಮಂಗಳವಾರ ಇಲ್ಲಿನ ತಮ್ಮ ನಿವಾಸದಲ್ಲಿ ನಿಧನರಾದರು.

ಬೆಂಗಳೂರಿನ ಐಐಎಂ ಕಟ್ಟಡ, ಅಹಮದಾಬಾದ್‌ನಲ್ಲಿರುವ ಅಮ್ದಾವಾದ್ ನಿ ಗುಫಾ, ಇಂದೋರ್‌ನ ಕಡಿಮೆ ವೆಚ್ಚದ ಅರಣ್ಯ ಸಿಬ್ಬಂದಿ ಮನೆ ಯೋಜನೆ ಸಹಿತ ಹಲವಾರು ವಿಶೇಷ ವಿನ್ಯಾಸದ ಕಟ್ಟಡಗಳನ್ನು ಅವರು ರೂಪಿಸಿದ್ದರು.

ಜಗತ್ತಿನ ಆಧುನಿಕ ವಾಸ್ತುಶಿಲ್ಪದ ಪ್ರಮುಖರಾದ ಪ್ಯಾರಿಸ್‌ನ ಲು ಕೊರ್ಬ್ರಿಜಿಯರ್ ಅವರೊಂದಿಗೂ ದೋಶಿ ಅವರು ಕೆಲಸ ಮಾಡಿದ್ದಾರೆ.

'ಅವರಷ್ಟು ಚೆನ್ನಾಗಿ ಬದುಕಿದವರು ಯಾರೂ ಇರಲಿಕ್ಕಿಲ್ಲ. ಸದಾ ಆನಂದವಾಗಿರಿ ಎನ್ನುತ್ತಿದ್ದರು. ಬಾಲಕೃಷ್ಣ ದೋಶಿ ಅವರು ನಿಧನರಾದರು ಎಂದು ತಿಳಿಸಲು ದುಃಖಿತರಾಗಿದ್ದೇವೆ' ಎಂದು ದೋಶಿ ಅವರ ಕುಟುಂಬ ಹೇಳಿಕೆ ನೀಡಿದೆ. ಪ್ರಧಾನಿ ನರೇಂದ್ರ ಮೋದಿ ಸಹಿತ ಹಲವು ಗಣ್ಯರು ದೋಶಿ ನಿಧನಕ್ಕೆ ಕಂಬನಿ ಮಿಡಿದಿದ್ದಾರೆ.

ದಿಗ್ವಿಜಯ ಸಿಂಗ್ ಹೇಳಿಕೆಗೆ ಆಕ್ಷೇಪ • ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸ್ಪಷ್ಟನೆ

'ಸಶಸ್ತ್ರ ಪಡೆ ಪುರಾವೆ ನೀಡುವ ಅಗತ್ಯವಿಲ್ಲ'

ಜಮ್ಮು: 'ನಿರ್ದಿಷ್ಟ ದಾಳಿ (ಸರ್ಜಿಕಲ್ ಸ್ಟ್ರೈಕ್) ಬಗ್ಗೆ ಸಶಸ್ತ್ರ ಪಡೆಗಳು ಯಾವುದೇ ಪುರಾವೆ ನೀಡುವ ಅಗತ್ಯ ಇಲ್ಲ' ಎಂದು ಹೇಳಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, 'ಈ ಕುರಿತು ದಿಗ್ವಿಜಯ ಸಿಂಗ್ ನೀಡಿರುವ ಹೇಳಿಕೆಯನ್ನು ನಾನಾಗಲಿ, ಪಕ್ಷವಾಗಲಿ ಒಪ್ಪಿಕೊಳ್ಳುವುದಿಲ್ಲ' ಎಂದು ಸ್ಪಷ್ಟಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಂಗಳವಾರ ಇಲ್ಲಿ ಮಾತನಾಡಿದ ಅವರು, 'ದಿಗ್ವಿಜಯ ಸಿಂಗ್ ಹೇಳಿಕೆಯನ್ನು ನಾವು ಒಪ್ಪಿಕೊಳ್ಳುವುದಿಲ್ಲ ಎನ್ನುವುದು ಸ್ಪಟಿಕದಷ್ಟು ಸ್ಪಷ್ಟ. ಇದು ಕಾಂಗ್ರೆಸ್ ಪಕ್ಷದ ಅಧಿಕೃತ ನಿಲುವು ಕೂಡಾ ಹೌದು' ಎಂದು ಹೇಳಿದ್ದಾರೆ.

ಭಾರತ್ ಜೋಡೊ ಯಾತ್ರೆಯ ಅಂಗವಾಗಿ ಜಮ್ಮುವಿನಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಸಾರ್ವಜನಿಕ ಸಭೆಯಲ್ಲಿ ಮಾತನಾಡಿದ್ದ ದಿಗ್ವಿಜಯ ಸಿಂಗ್ ಅವರು ನಿರ್ದಿಷ್ಟ ದಾಳಿಯನ್ನು ಪ್ರಶ್ನಿಸಿದ್ದರು. ಅಲ್ಲದೆ ಸರ್ಕಾರವು ಈ ಕುರಿತು ಸುಳ್ಳಿನ ಕಂತೆ ಕಟ್ಟುತ್ತಿದೆ ಎಂದೂ ಆರೋಪಿಸಿದ್ದರು.

'ವರ್ಚಸ್ಸು ಕೆಡಿಸಲು ಸಾವಿರಾರು ಕೋಟಿ ಹಣ ಖರ್ಚು': 'ವ್ಯವಸ್ಥಿತವಾಗಿ ನನ್ನ ವರ್ಚಸ್ಸನ್ನು ಕೆಡಿಸಲು ಬಿಜೆಪಿ ಮತ್ತು ಆರ್‌ಎಸ್‌ಎಸ್ ಸಾವಿರಾರು ಕೋಟಿ ಹಣ ಖರ್ಚು ಮಾಡಿದೆ. ಆದರೆ ಸತ್ಯ ಯಾವತ್ತಿದ್ದರೂ ಹೊರಗೆ ಬಂದೇ ಬರುತ್ತದೆ' ಎಂದು ಹೇಳಿದರು.



ಜಮ್ಮುವಿನಲ್ಲಿ ಮಂಗಳವಾರ ನಡೆದ ಭಾರತ್ ಜೋಡೊ ಯಾತ್ರೆಯಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರೊಂದಿಗೆ ಹೆಜ್ಜೆ ಹಾಕಿದ ಬಾಲಿವುಡ್ ನಟಿ ಊರ್ಮಿಳಾ ಮಾತೋಂಡ್ಕರ್ – ಪಿಟಿಐ ಚಿತ್ರ

ಸಾಮಾಜಿಕ ಮಾಧ್ಯಮಗಳಲ್ಲಿ ತಮ್ಮನ್ನು 'ಪಪ್ಪು' ಎಂದು ಅಣಕಿಸುವುದರ ಕುರಿತು ಪ್ರತಿಕ್ರಿಯಿಸಿದ ಅವರು, 'ಈ ದೇಶದಲ್ಲಿ ಸತ್ಯ ನೆಲೆ ನಿಲ್ಲುತ್ತದೆ ಹೊರತು ಹಣ, ಅಧಿಕಾರ ಮತ್ತು ದುರಹಂಕಾರವಲ್ಲ ಎಂಬುದನ್ನು ಕಾಂಗ್ರೆಸ್ ಪಕ್ಷವು ಬಿಜೆಪಿಗೆ ಕಲಿಸಲಿದೆ' ಎಂದರು. 'ಹಣ ಮತ್ತು ಅಧಿಕಾರದಿಂದ ಏನನ್ನು ಬೇಕಿದ್ದರೂ ಸಾಧಿಸಬಹುದು ಎಂದು ಆರ್‌ಎಸ್‌ಎಸ್ ಮತ್ತು ಬಿಜೆಪಿ ನಾಯಕರು ತಿಳಿದುಕೊಂಡಿದ್ದಾರೆ' ಎಂದೂ ಕುಟುಕಿದರು.

ಯಾತ್ರೆಯಲ್ಲಿ ಪಾಲ್ಗೊಂಡ ಊರ್ಮಿಳಾ: ಇಲ್ಲಿನ ನಗ್ರೋಟದ ಗ್ಯಾರಿಸನ್ ನಗರದಿಂದ ಮಂಗಳವಾರ ಆರಂಭಗೊಂಡ ಭಾರತ್ ಜೋಡೊ ಯಾತ್ರೆಯಲ್ಲಿ ಬಾಲಿವುಡ್ ನಟಿ ಊರ್ಮಿಳಾ ಮಾತೋಂಡ್ಕರ್ ಪಾಲ್ಗೊಂಡರು.

ಊರ್ಮಿಳಾ ಅವರು 2019 ಸೆಪ್ಟೆಂಬರ್‌ನಲ್ಲಿ ಕಾಂಗ್ರೆಸ್ ತೊರೆದಿದ್ದರು. 2020ರಲ್ಲಿ ಶಿವಸೇನಾಗೆ ಸೇರ್ಪಡೆಗೊಂಡಿದ್ದರು.

ದಿಗ್ವಿಜಯ ಸಿಂಗ್ ಹೇಳಿಕೆಗೆ ನಿವೃತ್ತ ಏರ್ ಮಾರ್ಷಲ್ ತಿರುಗೇಟು

ನವದೆಹಲಿ (ಪಿಟಿಐ): ಭಾರತೀಯ ಸೇನೆ ನಡೆಸಿದ್ದ ನಿರ್ದಿಷ್ಟ ದಾಳಿಗಳ ಕುರಿತು ಕಾಂಗ್ರೆಸ್ ಹಿರಿಯ ನಾಯಕ ದಿಗ್ವಿಜಯ ಸಿಂಗ್ ಅವರು ಹೇಳಿಕೆ ನೀಡಿರುವುದು ವಿವಾದಕ್ಕೆ ಗ್ರಾಸವಾಗಿರುವ ಬೆನ್ನಲ್ಲೇ, ಕೇಂದ್ರ ಕಾನೂನು ಸಚಿವ ಕಿರಣ್ ರಿಜಿಜು ಅವರು ನಿವೃತ್ತ ಏರ್ ಮಾರ್ಷಲ್ ರಘುನಾಥ್ ನಂಬಿಯಾರ್ ಅವರು 'ಬಾಲಾಕೋಟ್ ವಾಯುದಾಳಿಯು ದೊಡ್ಡಮಟ್ಟದ ಗೆಲುವು' ಎಂದಿರುವ ವಿಡಿಯೊ ತುಣುಕನ್ನು ಟ್ವಿಟರ್‌ನಲ್ಲಿ ಹರಿಬಿಟ್ಟಿದ್ದಾರೆ.

ಈ ವಿಡಿಯೊ ಜೊತೆ 'ಕಾಂಗ್ರೆಸ್ ಪಕ್ಷ ಮತ್ತು ಭಾರತೀಯ ಸೇನೆಯನ್ನು ಪ್ರಶ್ನಿಸುವವರಿಗೆ ಇದೇ ಉತ್ತರ' ಎಂದು ಅವರು ಅಡಿಬರಹ ಬರೆದಿದ್ದಾರೆ.

ದಿಗ್ವಿಜಯ ಸಿಂಗ್ ಅವರನ್ನು ಉಲ್ಲೇಖಿಸಿ ಮಾತನಾಡಿರುವ ರಘುನಾಥ್ ಅವರು, 'ಅವರು ಏನು ಮಾತನಾಡುತ್ತಿದ್ದಾರೆ ಎಂಬುದು ಅವರಿಗೆ ತಿಳಿದಿಲ್ಲ. ಬಾಲಕೋಟ್ ವಾಯುದಾಳಿ ನಡೆದ ಎರಡು ದಿನಗಳ ಬಳಿಕ ನಾನು ಪಶ್ಚಿಮ ಸೈನ್ಯ ವಿಭಾಗದ ಕಮಾಂಡರ್–ಇನ್–ಚೀಫ್ ಆಗಿ ಅಧಿಕಾರ ವಹಿಸಿಕೊಂಡೆ. ಅಲ್ಲಿ ಏನು ನಡೆದಿತ್ತು ಎಂಬುದು ನನಗೆ ತಿಳಿದಿದೆ' ಎಂದು ಹೇಳಿದ್ದಾರೆ.

'ಯುದ್ಧವಿಮಾನಗಳ ಪೈಲೆಟ್‌ಗಳಿಗೆ ನಾವು ನಿಗದಿಪಡಿಸಿದ್ದ ಗುರಿಯನ್ನು ಅವರು ಸಾಧಿಸಿದ್ದಾರೆ. ಸುಳ್ಳುಗಳಿಗೆ ಕಿವಿಗೊಡಬೇಡಿ. ಬಾಲಾಕೋಟ್ ವಾಯುದಾಳಿ ದೊಡ್ಡ ಮಟ್ಟದ ಯಶಸ್ಸು' ಎಂದು ಅವರು ಹೇಳಿದ್ದಾರೆ.

2019ರ ಫೆಬ್ರುವರಿ 14ರಂದು ನಡೆದಿದ್ದ ಪುಲ್ವಾಮಾ ದಾಳಿಗೆ ಪ್ರತಿಯಾಗಿ ಭಾರತೀಯ ಸೇನೆಯು, ಪಾಕಿಸ್ತಾನದ ಉಗ್ರರ ಅಡಗುತಾಣವಾದ ಬಾಲಾಕೋಟ್ ಮೇಲೆ ಫೆಬ್ರುವರಿ 26ರಂದು ವಾಯುದಾಳಿ ನಡೆಸಿತ್ತು.

ಪ್ರಯಾಣಿಕರಿಂದ ಅಶಿಸ್ತು ವರ್ತನೆ ಪ್ರಕರಣ

ನ್ಯೂಯಾರ್ಕ್–ನವದೆಹಲಿಯ ವಿಮಾನದಲ್ಲಿ ಮುಂಬೈನ ವ್ಯಕ್ತಿಯೊಬ್ಬರು ವೃದ್ಧೆಯ ಮೇಲೆ ಮೂತ್ರ ವಿಸರ್ಜನೆ ಮಾಡಿದ ಪ್ರಕರಣದಲ್ಲಿ ಡಿಜಿಸಿಎಯು ಏರ್ ಇಂಡಿಯಾಕ್ಕೆ ಜ. 20ರಂದು ₹ 30 ಲಕ್ಷ ದಂಡ ವಿಧಿಸಿತ್ತು

ಏರ್ ಇಂಡಿಯಾಕ್ಕೆ ಮತ್ತೆ ₹10 ಲಕ್ಷ ದಂಡ

ನವದೆಹಲಿ: ಕಳೆದ ಡಿಸೆಂಬರ್‌ನಲ್ಲಿ ಪ್ಯಾರಿಸ್‌ನಿಂದ ನವದೆಹಲಿಗೆ ಪ್ರಯಾಣಿಸುತ್ತಿದ್ದ ವಿಮಾನದಲ್ಲಿ ಪ್ರಯಾಣಿಕರಿಂದ ನಡೆದ ಎರಡು ಅಶಿಸ್ತು ವರ್ತನೆಯ ಘಟನೆಗಳಿಗೆ ಸಂಬಂಧಿಸಿದಂತೆ ವರದಿ ಮಾಡದ ಕಾರಣಕ್ಕಾಗಿ ನಾಗರಿಕ ವಿಮಾನಯಾನ ನಿರ್ದೇಶನಾಲಯವು (ಡಿಜಿಸಿಎ) ಏರ್ ಇಂಡಿಯಾ ವಿಮಾನಯಾನ ಸಂಸ್ಥೆಗೆ ₹ 10 ಲಕ್ಷ ದಂಡ ವಿಧಿಸಿದೆ.

ಪ್ಯಾರಿಸ್‌ನಿಂದ ನವದೆಹಲಿಗೆ ಬರುತ್ತಿದ್ದ ವಿಮಾನದಲ್ಲಿ ಪಾನಮತ್ತ ಪ್ರಯಾಣಿಕರೊಬ್ಬರು ಶೌಚಾಲಯದಲ್ಲಿ ಧೂಮಪಾನ ಮಾಡುತ್ತಿದ್ದರು. ಈ ಬಗ್ಗೆ ವಿಮಾನದ ಸಿಬ್ಬಂದಿ ಎಚ್ಚರಿಕೆ ನೀಡಿದ್ದರೂ ಪ್ರಯಾಣಿಕ ನಿಯಮಗಳನ್ನು ಪಾಲಿಸಿರಲಿಲ್ಲ. ಅಂತೆಯೇ ಮತ್ತೊಂದು ಪ್ರಕರಣದಲ್ಲಿ ಪ್ರಯಾಣಿಕರೊಬ್ಬರು ತಮ್ಮ ಪಕ್ಕದ ಆಸನದಲ್ಲಿ ಕುಳಿತಿದ್ದ ಮಹಿಳೆಯೊಬ್ಬರು ಶೌಚಾಲಯಕ್ಕೆ ತೆರಳಿದ್ದಾಗ ಅವರ ಆಸನವನ್ನು ಆತಿಕ್ರಮಿಸಿಕೊಂಡಿದ್ದರು. ಪ್ರಯಾಣಿಕರಿಂದಾದ ಈ ಅಶಿಸ್ತು ವರ್ತನೆಯ ಘಟನೆಗಳ ಬಗ್ಗೆ ಏರ್ ಇಂಡಿಯಾಕ್ಕೆ ತಿಳಿದಿದ್ದರೂ ಅದು, ಡಿಜಿಸಿಎಗೆ ಈ ಬಗ್ಗೆ ಯಾವುದೇ ವರದಿ ಮಾಡಿರಲಿಲ್ಲ ಎಂದು ಡಿಜಿಸಿಎ ತನ್ನ ಹೇಳಿಕೆಯಲ್ಲಿ ಆರೋಪಿಸಿದೆ.

ಇದು ವಿಮಾನಯಾನ ನಿಯಮಾವಳಿಗಳ ಉಲ್ಲಂಘನೆಯಾಗಿದ್ದು, ಈ ಸಂಬಂಧ ಏರ್ ಇಂಡಿಯಾಕ್ಕೆ ಈ ಹಿಂದೆ ಷೋಕಾಸ್ ನೋಟಿಸ್ ನೀಡಲಾಗಿತ್ತು. ಅದರಿಂದ ಬಂದ ಪ್ರತಿಕ್ರಿಯೆಯನ್ನು ಪರಿಶೀಲಿಸಿದ ಬಳಿಕವೇ ಏರ್ ಇಂಡಿಯಾಕ್ಕೆ ₹ 10 ಲಕ್ಷ ದಂಡವನ್ನು ವಿಧಿಸಲಾಗಿದೆ ಎಂದು ಡಿಜಿಸಿಎ ಹೇಳಿದೆ.

ಕೇರಳದಲ್ಲಿ ಬಿಬಿಸಿ ಸಾಕ್ಷ್ಯಚಿತ್ರ ಪ್ರದರ್ಶನ

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಬಿಬಿಸಿ ನಿರ್ಮಿಸಿರುವ 'ಇಂಡಿಯಾ: ದಿ ಮೋದಿ ಕ್ವೆಶ್ಚನ್' ಸಾಕ್ಷ್ಯಚಿತ್ರವನ್ನು ಸಿಪಿಎಂನ ಯುವ, ವಿದ್ಯಾರ್ಥಿ ಸಂಘಟನೆಗಳು ಹಾಗೂ ಕಾಂಗ್ರೆಸ್‌ನ ಯುವ, ಅಲ್ಪಸಂಖ್ಯಾತ ವಿಭಾಗಗಳ ವತಿಯಿಂದ ಕೇರಳದ ಹಲವು ಭಾಗಗಳಲ್ಲಿ ಮಂಗಳವಾರ ಪ್ರದರ್ಶಿಸಲಾಯಿತು. ಬಿಜೆಪಿಯ ವಿರೋಧದ ನಡುವೆಯೇ ಪ್ರದರ್ಶನ ನಡೆಯಿತು.

ಸಾರ್ವಜನಿಕ ಸ್ಥಳಗಳು ಹಾಗೂ ಕಾಲೇಜುಗಳಲ್ಲಿ ನಡೆದ ಸಾಕ್ಷ್ಯಚಿತ್ರ ಪ್ರದರ್ಶನಕ್ಕೆ ಬಿಜೆಪಿಯ ಯುವ ಮೋರ್ಚಾ ಕಾರ್ಯಕರ್ತರು ಅಡ್ಡಿಪಡಿಸಲು ಯತ್ನಿಸಿದರು. ಪ್ರದರ್ಶನಕ್ಕೆ ತಡೆ ನೀಡಬೇಕು ಎಂದು ಬಿಜೆಪಿ ಒತ್ತಾಯಿಸಿತು. ಆದರೆ ರಾಜ್ಯ ಸರ್ಕಾರ ತಡೆ ನೀಡಲಿಲ್ಲ. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಕೆ.ಸುರೇಂದ್ರನ್ ಅವರ ಮನವಿಗೆ ಸರ್ಕಾರ ಗಮನ ನೀಡಲಿಲ್ಲ.

ದೇಶದಲ್ಲಿ ಸಾಕ್ಷ್ಯಚಿತ್ರ ನಿರ್ಬಂಧಿಸುವ ಕೇಂದ್ರ ಸರ್ಕಾರದ ನಡೆಯನ್ನು ವಿರೋಧಿಸುವ ಭಾಗವಾಗಿ, ರಾಜ್ಯದಲ್ಲಿ ಅದನ್ನು ಪ್ರದರ್ಶಿಸಲು ಸಿಪಿಎಂನ ಯುವಘಟಕವಾದ ಡೆಮಾಕ್ರಟಿಕ್ ಯೂತ್ ಫೆಡರೇಷನ್ ಆಫ್ ಇಂಡಿಯಾ (ಡಿವೈಎಫ್‌ಐ) ಮತ್ತು ವಿದ್ಯಾರ್ಥಿ ಘಟಕವಾದ ಸ್ಟೂಡೆಂಟ್ ಫೆಡರೇಷನ್ ಆಫ್ ಇಂಡಿಯಾ (ಎಸ್‌ಎಫ್‌ಐ) ಸಂಘಟನೆಗಳು ನಿರ್ಧರಿಸಿದ್ದವು. ಹಾಗೆಯೇ ಕೇರಳ ಪ್ರದೇಶ ಕಾಂಗ್ರೆಸ್ ಸಮಿತಿಯ ಯುವ ಹಾಗೂ ಅಲ್ಪಸಂಖ್ಯಾತ ವಿಭಾಗಗಳೂ ಸಾಕ್ಷ್ಯಚಿತ್ರ ಪ್ರದರ್ಶಿಸುವುದಾಗಿ ಘೋಷಿಸಿದವು.



ತಿರುವನಂತಪುರದಲ್ಲಿ ಸಾಕ್ಷ್ಯಚಿತ್ರ ಪ್ರದರ್ಶಿಸಲಾಯಿತು–ಪಿಟಿಐ ಚಿತ್ರ

ಎರ್ನಾಕುಲಂನ ಸರ್ಕಾರಿ ಕಾನೂನು ಕಾಲೇಜು, ತಿರುವನಂತಪುರದ ಕೆಲವು ಸಾರ್ವಜನಿಕ ಸ್ಥಳಗಳಲ್ಲಿ ಸಾಕ್ಷ್ಯಚಿತ್ರವನ್ನು ಪ್ರದರ್ಶಿಸಲಾಯಿತು. ಪ್ರತಿಭಟನೆ ನಡೆಸಿದ ಬಿಜೆಪಿ ಯುವ ಮೋರ್ಚಾ ಕಾರ್ಯಕರ್ತರನ್ನು ಚದುರಿಸಲು ಪೊಲೀಸರು ಜಲಫಿರಂಗಿ ಪ್ರಯೋಗಿಸಿದರು. ಕೆಲವು ಕಾಲೇಜುಗಳಲ್ಲಿ ಪ್ರದರ್ಶನಕ್ಕೆ ಅನುಮತಿ ದೊರೆಯದ್ದರಿಂದ ಸಾರ್ವಜನಿಕ ಸ್ಥಳಗಳಲ್ಲಿ ಪ್ರದರ್ಶನ ಆಯೋಜಿಸಲಾಗಿತ್ತು.

> **ದೇಶದ ಸೌಹಾರ್ದತೆಗೆ ಧಕ್ಕೆ ತರುವ ಬಾಹ್ಯ ಶಕ್ತಿಗಳ ಯತ್ನಗಳಿಗೆ ರಾಜ್ಯ ಸರ್ಕಾರ ಬೆಂಬಲ ನೀಡಬಾರದು. ಸಾಕ್ಷ್ಯಚಿತ್ರವು ಕೋಮು ಸೌಹಾರ್ದ ಕೆಡಿಸುವ ಉದ್ದೇಶ ಹೊಂದಿದೆ**
> **ಕೆ.ಸುರೇಂದ್ರನ್**, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

> **ಬಿಜೆಪಿ ಜೊತೆ ತಮಗೆ ಭಿನ್ನಾಭಿಪ್ರಾಯವಿದ್ದರೂ ಪೂರ್ವಗ್ರಹಗಳನ್ನು ಹೊಂದಿರುವ ಬಿಬಿಸಿ ಸಂಸ್ಥೆಯು ಭಾರತದ ಸಾರ್ವಭೌಮತೆಗೆ ಧಕ್ಕೆ ತರುವ ರೀತಿಯಲ್ಲಿ ಸಾಕ್ಷ್ಯಚಿತ್ರ ನಿರ್ಮಿಸಿದೆ**
> **ಅನಿಲ್ ಆ್ಯಂಟನಿ,** ಕಾಂಗ್ರೆಸ್ ಮುಖಂಡ

'ಕೊಲಿಜಿಯಂನಿಂದ ಐಬಿ ವರದಿ ಬಹಿರಂಗ ಕಳವಳಕಾರಿ'



ಕಿರಣ್ ರಿಜಿಜು

ನವದೆಹಲಿ (ಪಿಟಿಐ): ಗುಪ್ತಚರ ಬ್ಯೂರೊ (ಐಬಿ) ಮತ್ತು ರಿಸರ್ಚ್ ಆ್ಯಂಡ್ ಅನಾಲಿಸಿಸ್ ವಿಂಗ್ (ರಾ) ನೀಡಿದ್ದ ಸೂಕ್ಷ್ಮ ವರದಿಗಳ ಭಾಗಗಳನ್ನು ಸುಪ್ರೀಂ ಕೋರ್ಟ್‌ನ ಕೊಲಿಜಿಯಂ ಬಹಿರಂಗಪಡಿಸಿರುವುದು ಗಂಭೀರ ಕಳವಳದ ವಿಚಾರ ಎಂದು ಕೇಂದ್ರ ಕಾನೂನು ಸಚಿವ ಕಿರಣ್ ರಿಜಿಜು ಅವರು ಮಂಗಳವಾರ ಹೇಳಿದ್ದಾರೆ.

ಗುಪ್ತಚರ ಸಂಸ್ಥೆಗಳು ದೇಶಕ್ಕಾಗಿ ರಹಸ್ಯ ಸ್ವರೂಪದಲ್ಲಿ ಕೆಲಸ ಮಾಡುತ್ತವೆ. ಅಂತಹ ಸಂಸ್ಥೆಗಳು ಕೊಟ್ಟ ವರದಿಗಳನ್ನು ಬಹಿರಂಗಪಡಿಸುವಾಗ ಎರಡೆರಡು ಬಾರಿ ಯೋಚಿಸಬೇಕು ಎಂದು ಅವರು ಹೇಳಿದ್ದಾರೆ.

'ಇದು ಪರಿಣಾಮವನ್ನೂ ಉಂಟು ಮಾಡಲಿದೆ' ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಹೈಕೋರ್ಟ್ ನ್ಯಾಯಮೂರ್ತಿಗಳ ನೇಮಕಕ್ಕಾಗಿ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಿದ್ದ ಕೆಲವು ಹೆಸರುಗಳನ್ನು ಕೇಂದ್ರ ತಿರಸ್ಕರಿಸಿತ್ತು. ಅವೇ ಹೆಸರುಗಳನ್ನು ಸರ್ಕಾರಕ್ಕೆ ಕೊಲಿಜಿಯಂ ಮರಳಿ ಕಳುಹಿಸಿತ್ತು. ಈ ಸಂದರ್ಭದಲ್ಲಿ ಐಬಿ ಮತ್ತು ರಾ ಕೊಟ್ಟ ವರದಿಗಳ ಭಾಗಗಳನ್ನು ಬಹಿರಂಗಪಡಿಸಿತ್ತು. ಇದಕ್ಕೆ ಸಂಬಂಧಿಸಿ ಮಾಧ್ಯಮ ಪ್ರತಿನಿಧಿಗಳು ಕೇಳಿದ ಪ್ರಶ್ನೆಗೆ ರಿಜಿಜು ಅವರು ಹೀಗೆ ಉತ್ತರಿಸಿದ್ದಾರೆ.

ವರದಿಗಳನ್ನು ಕೊಲಿಜಿಯಂ ಬಹಿರಂಗಪಡಿಸಿದ ವಿಚಾರದಲ್ಲಿ ಸರ್ಕಾರ ಇದೇ ಮೊದಲ ಬಾರಿಗೆ ಪ್ರತಿಕ್ರಿಯೆ ನೀಡಿದೆ. ವರದಿಗಳನ್ನು ಬಹಿರಂಗಪಡಿಸಿದ್ದಕ್ಕೆ ಸಂಬಂಧಿಸಿ ಸೂಕ್ತ ಸಮಯದಲ್ಲಿ ಪ್ರತಿಕ್ರಿಯೆ ನೀಡುತ್ತೇನೆ, ಈಗ ಅದಕ್ಕೆ ಸರಿಯಾದ ಸಮಯ ಅಲ್ಲ ಎಂದೂ ರಿಜಿಜು ಹೇಳಿದ್ದಾರೆ. ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಅವರ ಜೊತೆಗೆ ಈ ಕುರಿತು ಮಾತನಾಡಲಾಗುವುದೇ ಎಂಬ ಪ್ರಶ್ನೆಗೆ ಅವರು ನೇರವಾಗಿ ಉತ್ತರಿಸಲಿಲ್ಲ.

'ನಾವು ಸಂಪರ್ಕದಲ್ಲಿದ್ದೇವೆ. ಅವರು ನ್ಯಾಯಾಂಗದ ಮುಖ್ಯಸ್ಥ. ಸರ್ಕಾರ ಮತ್ತು ನ್ಯಾಯಾಂಗದ ನಡುವಣ ಕೊಂಡಿಯಾಗಿ ನಾನು ಕೆಲಸ ಮಾಡಬೇಕಾಗುತ್ತದೆ. ಹಾಗಾಗಿ, ನಾವು ಜೊತೆಯಾಗಿ ಕೆಲಸ ಮಾಡಲೇಬೇಕಾಗುತ್ತದೆ. ಪ್ರತ್ಯೇಕವಾಗಿ ಕೆಲಸ ಮಾಡುವುದು ಸಾಧ್ಯವಿಲ್ಲ' ಎಂದು ಅವರು ಹೇಳಿದ್ದಾರೆ.

ದೆಹಲಿ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಆರ್.ಎಸ್. ಸೋಧಿ ಅವರು ನೀಡಿದ್ದ ಸಂದರ್ಶನವೊಂದನ್ನು ರಿಜಿಜು ಅವರು ಇತ್ತೀಚೆಗೆ ಹಂಚಿಕೊಂಡಿದ್ದರು. ನ್ಯಾಯಮೂರ್ತಿಗಳನ್ನು ತಾವೇ ನೇಮಿಸುವ ಮೂಲಕ ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಗಳು ಸಂವಿಧಾನವನ್ನು ಅಪಹರಿಸಿದ್ದಾರೆ ಎಂದು ಸೋಧಿ ಅವರು ಸಂದರ್ಶನದಲ್ಲಿ ಹೇಳಿದ್ದರು. ಆದರೆ, ಸರ್ಕಾರದ ಅನುಕೂಲಕ್ಕೆ ತಕ್ಕಂತೆ ತಮ್ಮ ಹೇಳಿಕೆಗಳನ್ನು ಬಳಸಿಕೊಳ್ಳಬಾರದು ಎಂದು ಸೋಧಿ ಅವರು ಬಳಿಕ ಹೇಳಿದ್ದರು.

ಐ.ಟಿ ನಿಯಮ ತಿದ್ದುಪಡಿ ಕರಡು ಕೈಬಿಡಿ: ಐಎನ್‌ಎಸ್

ನವದೆಹಲಿ (ಪಿಟಿಐ): ಪತ್ರಿಕಾ ಸಮಾಚಾರ ಕೇಂದ್ರವು (ಪ್ರೆಸ್ ಇನ್ ಫಾರ್ಮೇಷನ್ ಬ್ಯೂರೊ–ಪಿಐಬಿ) ಸುಳ್ಳು ಸುದ್ದಿ ಎಂದು ಗುರುತಿಸಿದ ಎಲ್ಲ ಸುದ್ದಿಗಳನ್ನು ಸಾಮಾಜಿಕ ಜಾಲತಾಣಗಳಿಂದ ಅಳಿಸಿ ಹಾಕಬೇಕು ಎಂದು ರೂಪಿಸಲಾದ ಮಾಹಿತಿ ತಂತ್ರಜ್ಞಾನ ಕರಡು ನಿಯಮಗಳನ್ನು ಕೈಬಿಡುವಂತೆ ಇಂಡಿಯನ್ ನ್ಯೂಸ್ ಪೇಪರ್ ಸೊಸೈಟಿ (ಐಎನ್‌ಎಸ್) ಕೇಂದ್ರ ಸರ್ಕಾರವನ್ನು ಆಗ್ರಹಿಸಿದೆ.

ಮಾಧ್ಯಮಗಳ ವೆಬ್‌ಸೈಟ್‌ಗಳಲ್ಲಿ ಸರ್ಕಾರಿ ವ್ಯವಹಾರಕ್ಕೆ ಸಂಬಂಧಿಸಿದ ವರದಿಗಳ ವಾಸ್ತವಿಕತೆಯ ನಿಖರತೆ ಖಚಿತಪಡಿಸಿಕೊಳ್ಳಲು ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯವು ಕ್ಷೇತ್ರಕ್ಕೆ ಸಂಬಂಧಿಸಿದವರ ಜತೆ ಸಮಾಲೋಚಿಸುವಂತೆ ಐಎನ್‌ಎಸ್ ಕೋರಿದೆ.

ಸರ್ಕಾರದ ನೋಡಲ್ ಏಜೆನ್ಸಿಯಾಗಿರುವ ಪಿಐಬಿಯ ಕಾರ್ಯವು, ಸರ್ಕಾರದ ಕಾರ್ಯಕ್ರಮಗಳು ಮತ್ತು ಸಾಧನೆಗಳ ಬಗ್ಗೆ ಮಾಹಿತಿ ಪ್ರಸಾರ ಮಾಡುವುದಾಗಿದೆ ಎಂದು ತಿಳಿಸಿದೆ.

ಕೇಂದ್ರ ಸರ್ಕಾರಕ್ಕೆ ಸಂಬಂಧಿಸಿದಂತೆ ಹೇಳಿಕೆಗಳನ್ನು ಪರಿಶೀಲಿಸುವ ಜವಾಬ್ದಾರಿಯನ್ನು ಈ ತಿದ್ದುಪಡಿಗಳ ಮೂಲಕ ಸರ್ಕಾರ ತನ್ನದೇ ಏಜೆನ್ಸಿಗೆ ನೀಡುತ್ತಿದೆ. ಆ ಮೂಲಕ ಅದಕ್ಕೆ ಕಾನೂನಿನ ಶಕ್ತಿ ತುಂಬುತ್ತಿದೆ ಎಂದು ದೂರಿದೆ.

ಈ ತಿದ್ದುಪಡಿಯ ಕರಡನ್ನು ಕೈಬಿಡುವಂತೆ ಈಗಾಗಲೇ 'ಎಡಿಟರ್ಸ್ ಗಿಲ್ಡ್ ಆಫ್ ಇಂಡಿಯಾ', 'ಪ್ರೆಸ್ ಅಸೋಸಿಯೇಷನ್', 'ಡಿಜಿಪಬ್ ಫೌಂಡೇಷನ್ ಆಫ್ ಇಂಡಿಯಾ', 'ನ್ಯೂಸ್ ಬ್ರಾಡ್‌ಕಾಸ್ಟರ್ಸ್ ಅಂಡ್ ಡಿಜಿಟಲ್ ಅಸೋಸಿಯೇಷನ್' ಆಗ್ರಹಿಸಿವೆ.

ಮಣಿಪುರ: ಬಿಜೆಪಿ ಮುಖಂಡನ ಹತ್ಯೆ

ಇಂಫಾಲ (ಪಿಟಿಐ): 'ಮಣಿಪುರ ಬಿಜೆಪಿ ಘಟಕದ ಮಾಜಿ ಸೈನಿಕರ ವಿಭಾಗದ ಸಂಚಾಲಕ ಲೈಶರ್ಮಾ ರಾಮೇಶ್ವರ್ ಸಿಂಗ್ ಅವರನ್ನು ತೌಂಬಾಲ್ ಜಿಲ್ಲೆಯಲ್ಲಿ ಮಂಗಳವಾರ ಹತ್ಯೆ ಮಾಡಲಾಗಿದೆ. ಈ ಸಂಬಂಧ ವ್ಯಕ್ತಿ ಯೊಬ್ಬನನ್ನು ಬಂಧಿಸಲಾಗಿದೆ. ಪ್ರಮುಖ ಆರೋಪಿ ಅಯೆಕ್‌ಪಾಮ್ ಕೇಶೊರ್‌ಜಿತ್ ಶರಣಾಗಿದ್ದಾನೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಆಲ್ ದಟ್ ಬ್ರೀತ್', 'ಎಲಿಫೆಂಟ್ ವಿಸ್ಪರ್ಸ್' ಸಾಕ್ಷ್ಯಚಿತ್ರಗಳ ಸ್ಪರ್ಧೆ

ಆಸ್ಕರ್ ಪ್ರಶಸ್ತಿ ಸ್ಪರ್ಧೆಗೆ 'ನಾಟು..ನಾಟು..'

ಲಾಸ್ ಏಂಜಲೀಸ್ (ಪಿಟಿಐ): ರಾಜಮೌಳಿ ನಿರ್ದೇಶನದ ತೆಲುಗಿನ 'ಆರ್‌ಆರ್‌ಆರ್' ಚಿತ್ರ ಆಸ್ಕರ್ ಪ್ರಶಸ್ತಿಗೆ ನಾಮಕರಣಗೊಂಡಿದೆ. ಅತ್ಯುತ್ತಮ ಮೂಲ ಗೀತೆ (ಒರಿಜಿನಲ್) ವರ್ಗದಲ್ಲಿ ಈ ಚಿತ್ರದ 'ನಾಟು.. ನಾಟು...' ಗೀತೆಯು ಸ್ಪರ್ಧೆಯಲ್ಲಿದೆ.

'ಆಸ್ಕರ್' ಹೆಸರಲ್ಲಿ ನೀಡುವ 95ನೇ ಅಕಾಡೆಮಿ ಅವಾರ್ಡ್ಸ್‌ಗೆ ಸ್ಪರ್ಧೆಯಲ್ಲಿರುವ ಚಿತ್ರಗಳ ವಿವರಗಳನ್ನು ಮಂಗಳವಾರ ಪ್ರಕಟಿಸಲಾಗಿದೆ. 'ನಾವು ಇತಿಹಾಸ ಸೃಷ್ಟಿಸಿದೆವು..' ಎಂದು ಆರ್‌ಆರ್‌ಆರ್ ಚಿತ್ರತಂಡ ತನ್ನ ವೆಬ್‌ಸೈಟ್‌ನಲ್ಲಿ ಸಂತಸ ಹಂಚಿಕೊಂಡಿದೆ.

ಭಾರತದ ಸಾಕ್ಷ್ಯಚಿತ್ರಗಳಾದ 'ಆಲ್ ದಟ್ ಬ್ರೀತ್', 'ಎಲಿಫೆಂಟ್ ವಿಸ್ಪರ್ಸ್' ಪ್ರತ್ಯೇಕ ವಿಭಾಗದಲ್ಲಿ ಸ್ಪರ್ಧೆಯಲ್ಲಿವೆ. ಅಂತರರಾಷ್ಟ್ರೀಯ ಚಲನಚಿತ್ರ ವಿಭಾಗದಲ್ಲಿ ಭಾರತದ ಅಧಿಕೃತ ಪ್ರವೇಶವಾಗಿದ್ದ 'ದ ಲಾಸ್ಟ್ ಶೋ' ಅಂತಿಮ ಐದರ ಸುತ್ತಿನಲ್ಲಿ ಸ್ಥಾನ ಪಡೆದಿಲ್ಲ.



ಹಾಲಿವುಡ್ ನಟರಾದ ರಿಜ್ ಅಹ್ಮದ್ ಮತ್ತು ಅಲಿಸನ್ ವಿಲಿಯಮ್ಸ್ ಅವರು ಎಲ್ಲ 23 ವರ್ಗಗಳಲ್ಲಿ ಪ್ರಶಸ್ತಿಗೆ ಸ್ಪರ್ಧೆಯಲ್ಲಿರುವ ಚಿತ್ರಗಳ ವಿವರಗಳನ್ನು ಪ್ರಕಟಿಸಿದರು. ಆಸ್ಕರ್ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಮಾರ್ಚ್ 12ರಂದು ನಡೆಯಲಿದೆ.

'ಟೆಲ್ ಇಟ್ ಲೈಕ್ ಎ ವುಮೆನ್' ಚಿತ್ರದ 'ಅಪ್ಲಾಸ್...', 'ಟಾಪ್ ಗನ್: ಮಾವೆರಿಕ್' ಚಿತ್ರದ 'ಹೋಲ್ಡ್ ಮೈ ಹ್ಯಾಂಡ್..', ಬ್ಲಾಕ್ ಪ್ಯಾಂಥರ್, ವಕಾಂಡಾ ಫಾರ್ ಎವೆರ್ ಚಿತ್ರದ 'ಲಿಫ್ಟ್ ಮೀ ಅಪ್...' ಮತ್ತು 'ಎವೆರಿಥಿಂಗ್ ಎವೆರಿವೇರ್ ಆಲ್ ಅಟ್ ಒನ್ಸ್' ಚಿತ್ರದ 'ದಿಸ್ ಈಸ್ ದ ಲೈಫ್..' ಆಸ್ಕರ್ ಪ್ರಶಸ್ತಿಗಾಗಿ 'ಅತ್ಯುತ್ತಮ ಮೂಲಗೀತೆ ವರ್ಗ'ದಲ್ಲಿ ಸ್ಪರ್ಧೆಯಲ್ಲಿರುವ ಇತರೆ ಗೀತೆಗಳಾಗಿವೆ.

ಆರ್‌ಆರ್‌ಆರ್ ಚಿತ್ರದ, ಎಂ.ಎಂ. ಕೀರವಾಣಿ ಅವರು ಸಂಗೀತ ನಿರ್ದೇಶಿಸಿ, ಕಾಲಭೈರವ ಅವರು ಹಾಡಿರುವ 'ನಾಟು ನಾಟು..' ಈ ಮೂಲಕ ಮೂರನೇ ಬಾರಿಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಗಮನಸೆಳೆದಿದೆ.

ಈ ಚಿತ್ರಗೀತೆಗಾಗಿ ಎಂ.ಎಂ. ಕೀರವಾಣಿ ಅವರು ಈಚೆಗೆ 'ಗೋಲ್ಡನ್ ಗ್ಲೋಬ್' ಮತ್ತು ಕಳೆದ ತಿಂಗಳು ಕ್ರಿಟಿಕ್ಸ್ ಚಾಯ್ಸ್ ಪ್ರಶಸ್ತಿ ಪುರಸ್ಕೃತರಾಗಿದ್ದರು. ಅಲ್ಲದೆ, ಅತ್ಯುತ್ತಮ ವಿದೇಶಿ ಭಾಷಾ ಚಿತ್ರ ವರ್ಗದಲ್ಲಿ ಕ್ರಿಟಿಕ್ಸ್ ಚಾಯ್ಸ್ ಪ್ರಶಸ್ತಿಗೆ ಆರ್‌ಆರ್‌ಆರ್ ಆಯ್ಕೆಆಗಿತ್ತು.

'ಕೊಲಿಜಿಯಂನಲ್ಲಿ ಸರ್ಕಾರದ ಹಸ್ತಕ್ಷೇಪ ದುರುದ್ದೇಶಪೂರಿತ'

ಪ್ರಜಾವಾಣಿ ವಾರ್ತೆ

ಮೈಸೂರು: 'ನ್ಯಾಯಮೂರ್ತಿಗಳ ನೇಮಕಾತಿ ವ್ಯವಸ್ಥೆ 'ಕೊಲಿಜಿಯಂ'ನಲ್ಲಿ ತನ್ನ ಪ್ರತಿನಿಧಿ ಇರಬೇಕು ಎನ್ನುವ ಕೇಂದ್ರ ಸರ್ಕಾರದ ನಿಲುವಿನಲ್ಲಿ ದುರುದ್ದೇಶವಿದೆ' ಎಂದು ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಆಕ್ರೋಶ ವ್ಯಕ್ತಪಡಿಸಿದರು.


'ನ್ಯಾಯಾಂಗವನ್ನು ಹಿಡಿತದಲ್ಲಿಡಲು ಬಯಸುವವರು ಕೊಲಿಜಿಯಂ ಅನ್ನು ವಿರೋಧಿಸುವ ಮೂಲಕವೇ ನಿಯಂತ್ರಿಸುವುದಕ್ಕೆ ಪ್ರಯತ್ನಿಸುತ್ತಿದ್ದಾರೆ. ಇಂತಹ ಅಪಾಯಕಾರಿ ನಡೆ ಖಂಡನೀಯ' ಎಂದು ಮಂಗಳವಾರ ಮಾಧ್ಯಮ ಸಂವಾದದಲ್ಲಿ ಪ್ರತಿಪಾದಿಸಿದರು.

'ನ್ಯಾಯಾಂಗದಲ್ಲೂ ನ್ಯೂನತೆಗಳಿದ್ದು, ಸುಧಾರಣೆಯಾಗಬೇಕು. ಆದರೆ ಹೊರಗಿನವರಿಗೆ ಲಗಾಮು ನೀಡಬೇಕು ಎನ್ನುವ ಸರ್ಕಾರದ ಯೋಜನೆ ನ್ಯಾಯಾಂಗದ ಸ್ವಾಯತ್ತತೆಗೆ ಧಕ್ಕೆ ತರುವಂಥದ್ದು' ಎಂದು ಅಭಿಪ್ರಾಯಪಟ್ಟರು.

'ಕೊಲಿಜಿಯಂ ಶಿಫಾರಸು ಮಾಡಿದ ನ್ಯಾಯಮೂರ್ತಿಗಳ ವೈಯಕ್ತಿಕ ವಿಚಾರಗಳನ್ನು ಪರಿಗಣಿಸಿ ಕೇಂದ್ರ ನಿರಾಕರಿಸಿರುವುದು ತಪ್ಪು. ಒಬ್ಬ ಮನುಷ್ಯನ ವೈಯಕ್ತಿಕ ಜೀವನವನ್ನು ಆಡಳಿತ ದೃಷ್ಟಿಯಲ್ಲಿ ನೋಡಲಾಗದು. ಪ್ರಚಂಡ ಬಹುಮತವುಳ್ಳ ಸರ್ಕಾರದ ತಪ್ಪು ನಿರ್ಧಾರಗಳನ್ನು ಪ್ರಶ್ನಿಸಲು, ಸಂವಿಧಾನವನ್ನು ಎತ್ತಿಹಿಡಿಯಲು ನ್ಯಾಯಾಂಗಕ್ಕೆ ತನ್ನದೇ ಆಯ್ಕೆ ಪ್ರಕ್ರಿಯೆ ಮುಖ್ಯ' ಎಂದರು.

'ಸಚಿವರನ್ನು ನೇಮಿಸಿಕೊಳ್ಳುವ ಪ್ರಧಾನಿಯನ್ನು ಯಾರಾದರೂ ಪ್ರಶ್ನಿಸುತ್ತಾರೆಯೇ? ಆದರೆ, ಕೊಲಿಜಿಯಂನಲ್ಲಿ ನ್ಯಾಯಾಧೀಶರ ಗುಂಪು ಬಹುಮತದಲ್ಲಿ ಆಯ್ಕೆ ಪ್ರಕ್ರಿಯೆ ನಡೆಸುತ್ತದೆ. ಅಷ್ಟರಮಟ್ಟಿಗೆ ಅದು ಪಾರದರ್ಶಕ ಹಾಗೂ ಉತ್ತಮ ವ್ಯವಸ್ಥೆ' ಎಂದು ಹೇಳಿದರು.

ಷೇರುಪೇಟೆ ವಹಿವಾಟು 37



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18118.55
ಇಂದಿನ ಅಂತ್ಯ	18118.3
▼	0.25
ದಿನದ ಕನಿಷ್ಠ	18201

ವಿನಿಮಯ ದರ

$ ಡಾಲರ್	81.70
£ ಪೌಂಡ್	100.76
€ ಯುರೊ	88.74
¥ ಯೆನ್ (100ಕ್ಕೆ)	62.58

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹550
12 ಮೊಟ್ಟೆಗೆ	₹70
ಮೈಸೂರು	
100 ಮೊಟ್ಟೆಗೆ	₹550

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1615 (1610)
ಸೋಯಾ (ರಿಫೈನ್ಡ್)	₹1180(1210)
ಸೂರ್ಯಕಾಂತಿ (ರಿಫೈನ್ಡ್)	₹1200(1210)
ಪಾಮೋಲಿನ್	₹908(914)

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹1300-1600
ಮಧ್ಯಮ	₹1000-1200
ಸಣ್ಣ	₹500-900

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು
1ನೇ ದರ್ಜೆ ₹16000-20000
2ನೇ ದರ್ಜೆ ₹12000-15000

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹138.50
ಆರ್‌ಎಸ್‌ಎಸ್-5	₹133.50
ಗುಡ್ ಲಾಟ್	₹128.50



ತೊಗರಿ ಬೆಳೆ ನಷ್ಟ: ಹೆಕ್ಟೇರ್‌ಗೆ ₹ 10 ಸಾವಿರ ಪರಿಹಾರ

ಬೆಂಗಳೂರು: ಬೀದರ್, ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಯಲ್ಲಿ ನೆಟೆ ರೋಗದಿಂದ ತೊಗರಿ ಬೆಳೆಗೆ ಸಂಭವಿಸಿದ ಬೆಳೆ ಹಾನಿಯನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ, ಬಾಧಿತ ರೈತರಿಗೆ ಪ್ರತಿ ಹೆಕ್ಟೇರ್‌ಗೆ ₹ 10 ಸಾವಿರದಂತೆ ಎನ್‌ಡಿಆರ್‌ಎಫ್, ಎಸ್‌ಡಿಆರ್‌ಎಫ್ ಮಾರ್ಗಸೂಚಿಯಂತೆ ಗರಿಷ್ಠ 2 ಹೆಕ್ಟೇರ್‌ಗೆ ಸೀಮಿತಗೊಳಿಸಿ ಪರಿಹಾರ ನೀಡಲು ರಾಜ್ಯ ಸರ್ಕಾರ ನಿರ್ಧರಿಸಿದೆ. ಒಟ್ಟು ಪರಿಹಾರ ಮೊತ್ತವು ₹ 223 ಕೋಟಿ ಆಗಬಹುದೆಂದು ಅಂದಾಜಿಸಲಾಗಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಧ್ಯಕ್ಷತೆಯಲ್ಲಿ ಮಂಗಳವಾರ ನಡೆದ ಅಧಿಕಾರಿಗಳ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದೆ. ಈ 3 ಜಿಲ್ಲೆಗಳಲ್ಲಿ ಅಕಾಲಿಕ ಮಳೆ, ನವೆಂಬರ್ ತಿಂಗಳಿನಲ್ಲಿ ತಲೆದೋರಿದ ಒಣ, ಶುಷ್ಕ ವಾತಾವರಣದಿಂದ ತೊಗರಿ ಬೆಳೆಯಲ್ಲಿ ಸಂಕೀರ್ಣ ನೆಟೆ ರೋಗ ಉಲ್ಬಣಗೊಂಡಿತ್ತು. ಸಂಕೀರ್ಣ ನೆಟೆ ರೋಗಕ್ಕೆ ಕಲಬುರಗಿ ಜಿಲ್ಲೆಯಲ್ಲಿ ಸುಮಾರು 1.98 ಲಕ್ಷ ಹೆಕ್ಟೇರ್, ಬೀದರ್ ಜಿಲ್ಲೆಯಲ್ಲಿ ಸುಮಾರು 0.145 ಲಕ್ಷ ಹೆಕ್ಟೇರ್, ಯಾದಗಿರಿ ಜಿಲ್ಲೆಯಲ್ಲಿ ಸುಮಾರು 0.1028 ಲಕ್ಷ ಹೆಕ್ಟೇರ್ ಸೇರಿ ಒಟ್ಟು 2.2278 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ತೊಗರಿ ಬೆಳೆ ಹಾನಿಯಾಗಿರುವುದು ವರದಿಯಾಗಿದೆ.

‘ಪ್ರತಿ ಗ್ರಾಹಕನಿಂದ ಬರುವ ಆದಾಯ ₹ 300 ಆಗಬೇಕು’

ಕನಿಷ್ಠ ರಿಚಾರ್ಜ್ ಮೊತ್ತ ಏರಿಕೆ

ನವದೆಹಲಿ/ಬೆಂಗಳೂರು (ಪಿಟಿಐ/ರಾಯಿಟರ್ಸ್): 28 ದಿನಗಳವರೆಗೆ ಸೇವೆಯನ್ನು ಒದಗಿಸುವ ರಿಚಾರ್ಜ್‌ನ ಶುಲ್ಕವನ್ನು ಭಾರ್ತಿ ಏರ್‌ಟೆಲ್ ಕಂಪನಿಯು ಕರ್ನಾಟಕ ಸೇರಿದಂತೆ ಒಟ್ಟು ಎಂಟು ದೂರಸಂಪರ್ಕ ವೃತ್ತಗಳಲ್ಲಿ ಹೆಚ್ಚಿಸಿದೆ. ಹೊಸ ಶುಲ್ಕ ₹ 155 ಆಗಿದೆ. ಇದು ಈ ಹಿಂದಿನ ಶುಲ್ಕಕ್ಕೆ ಹೋಲಿಸಿದರೆ ಶೇಕಡ 57ರಷ್ಟು ಹೆಚ್ಚು.

ಕಂಪನಿಯು ಇದುವರೆಗೆ ₹ 99ಕ್ಕೆ 28 ದಿನಗಳವರೆಗೆ ದೂರಸಂಪರ್ಕ ಸೇವೆಯನ್ನು ಒದಗಿಸುತ್ತಿತ್ತು. ಈ ಶುಲ್ಕ ಪಾವತಿಸಿ ರಿಚಾರ್ಜ್ ಮಾಡಿಸಿಕೊಂಡವರಿಗೆ 200 ಎಂ.ಬಿ. ಡೇಟಾ ಬಳಸಲು ಹಾಗೂ ಪ್ರತಿ ಸೆಕೆಂಡಿಗೆ 2.5 ಪೈಸೆಯಂತೆ ಕರೆ ಮಾಡಲು ಸಾಧ್ಯವಾಗುತ್ತಿತ್ತು. ಈಗ ಕಂಪನಿಯು ಕನಿಷ್ಠ ಆರಂಭಿಕ ಶುಲ್ಕವನ್ನು ₹ 155ಕ್ಕೆ ನಿಗದಿಪಡಿಸಿದೆ.

ಇದರ ಅಡಿಯಲ್ಲಿ ಗ್ರಾಹಕರಿಗೆ ಮಿತಿರಹಿತ ಕರೆ ಸೌಲಭ್ಯ, 1 ಜಿ.ಬಿ. ಡೇಟಾ ಹಾಗೂ 300 ಎಸ್‌ಎಂಎಸ್ ಸೌಲಭ್ಯ ಸಿಗಲಿದೆ. ‘ಗ್ರಾಹಕರಿಗೆ ಹೆಚ್ಚು ಉತ್ತಮವಾದ ಅನುಭವ ಒದಗಿಸುವ ಭಾಗವಾಗಿ ನಾವು ₹ 155ರ ರಿಚಾರ್ಜ್ ಯೋಜನೆಯನ್ನು ಆರಂಭಿಸಿದ್ದೇವೆ’ ಎಂದು ಏರ್‌ಟೆಲ್ ವಕ್ತಾರರೊಬ್ಬರು ಹೇಳಿದ್ದಾರೆ.



ಹೊಸ ರಿಚಾರ್ಜ್ ಯೋಜನೆಯನ್ನು ಕಂಪನಿಯು ದೇಶದ ಎಲ್ಲೆಡೆ ಹಂತ ಹಂತವಾಗಿ ಜಾರಿಗೆ ತರಲಿದೆ ಎಂದು ಮೂಲಗಳು ತಿಳಿಸಿವೆ.

ಕಳೆದ ವರ್ಷ ನಡೆದ 5ಜಿ ತರಂಗಾಂತರ ಖರೀದಿಗೆ ಕೋಟ್ಯಂತರ ರೂಪಾಯಿ ವೆಚ್ಚ ಮಾಡಿರುವ ದೂರಸಂಪರ್ಕ ಕಂಪನಿಗಳು ಸೇವಾ ಶುಲ್ಕವನ್ನು ಹೆಚ್ಚಿಸುವ ನಿರೀಕ್ಷೆ ಇದೆ. ಏರ್‌ಟೆಲ್ ಕಂಪನಿಯು ತನ್ನ ಪ್ರತಿ ಗ್ರಾಹಕನಿಂದ ಪಡೆಯುವ ಆದಾಯ (ಎಆರ್‌ಪಿಯು) ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹ 190ಕ್ಕೆ ಏರಿಕೆ ಆಗಿದೆ.

ಎಆರ್‌ಪಿಯು ₹ 200ಕ್ಕೆ ಏರಿಕೆ ಆಗಬೇಕು ಹಾಗೂ ನಂತರದಲ್ಲಿ ₹ 300ಕ್ಕೆ ಹೆಚ್ಚಳ ಆಗಬೇಕು. ಆಗ ದೂರಸಂಪರ್ಕ ಉದ್ಯಮದ ಹಣಕಾಸಿನ ವಹಿವಾಟು ಆರೋಗ್ಯಕರ ಆಗುತ್ತದೆ ಎಂದು ಏರ್‌ಟೆಲ್ ಕಂಪನಿಯು 2021ರ ನವೆಂಬರ್‌ನಲ್ಲಿ ಹೇಳಿತ್ತು. ಜಿಯೊ ಕಂಪನಿಯ ಎಆರ್‌ಪಿಯು ಡಿಸೆಂಬರ್ ತ್ರೈಮಾಸಿಕದಲ್ಲಿ ₹ 178.2 ಆಗಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ

ಬಂಟ್ವಾಳ
ಕೋಕ 12,500-25,000
ಹೊಸತು 22,500-40,000
ಹಳತು 48,000-54,500
ಭದ್ರಾವತಿ
ರಾಶಿ 38,199-47,319
ಚನ್ನಗಿರಿ
ರಾಶಿ 46,299-47,659
ಚಿತ್ರದುರ್ಗ
ಆಪಿ 47,119-47,529
ಬೆಟ್ಟೆ 34,659-35,099
ಕೆಂಪುಗೋಟು 30,100-30,500
ರಾಶಿ 46,639-47,069
ಕಾರ್ಕಳ
ಹೊಸತು 30,000-40,000
ಹಳತು 40,000-54,500
ಸಾಗರ
ಕೆಂಪುಗೋಟು 32,899-34,919
ರಾಶಿ 35,036-46,929
ಸಿಪ್ಪೆಗೋಟು 18,200-21,022
ಚಾಲಿ 39,109-39,109
ಶಿವಮೊಗ್ಗ
ಬೆಟ್ಟೆ 46,000-52,829
ಗೊರಬಲು 17,080-36,199
ರಾಶಿ 38,599-47,599
ಸರಕು 50,800-80,496
ಸಿದ್ದಾಪುರ
ಬಿಳಿಗೋಟು 28,699-33,899
ಚಾಲಿ 39,399-41,199
ಕೋಕ 26,699-31,889
ಹೊಸಚಾಲಿ 32,899-35,809
ಕೆಂಪುಗೋಟು 31,899-32,899
ರಾಶಿ 42,099-46,629
ತಟ್ಟಿಬೆಟ್ಟೆ 38,699-45,809
ಶಿರಸಿ
ಬೆಟ್ಟೆ 25,199-42,799
ಬಿಳಿಗೋಟು 23,699-34,999
ಚಾಲಿ 32,809-43,039
ಕೆಂಪುಗೋಟು 29,699-34,776
ರಾಶಿ 38,299-46,208
ಯಲ್ಲಾಪುರ
ಆಪಿ 52,119-61,269
ಬಿಳಿಗೋಟು 24,099-35,699
ಕೋಕ 18,899-31,122
ಹಳೆಚಾಲಿ 35,499-41,871
ಹೊಸಚಾಲಿ 32,912-35,299
ಕೆಂಪುಗೋಟು 26,899-35,001
ರಾಶಿ 45,019-51,475
ತಟ್ಟಿಬೆಟ್ಟೆ 36,799-44,899

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮುದ್ರಮನೆ
ಎಪಿ	14200
ಎಸಿ	6775
ಆರ್‌ಪಿ	8600
ಆರ್‌ಸಿ	4620

ಮುಂಬೈ ಧಾರಣೆ

ಶೇಂಗಾ
24-01-2023

ಜಾವಾ 70/80(ಹೊಸ)	12150-12200
ಜಾವಾ 80/90(ಹೊಸ)	11150-11200
ದಪ್ಪ ಮಧ್ಯಪ್ರದೇಶ(ಹೊಸ)	10500-10550
ದಪ್ಪ ಗುಜರಾತ್(ಹೊಸ)	11600-11650

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1625(1625)
ಒಂದು ವಾರದ ಡೆಲಿವರಿ	1620(1615)
ಸೋಯಾ ಕಚ್ಚಾ	1110(1130)
ಪಾಮ್ ವಾರದ ಡೆಲಿವರಿ	906(912)
ಸೂರ್ಯಕಾಂತಿ ಎಣ್ಣೆ ಕಚ್ಚಾ	1100(1120)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)
ಅಪರಂಜಿ ಚಿನ್ನ 10ಗ್ರಾಂ
57000(56700)
ಬೆಳ್ಳಿ ಕೆ.ಜಿ 68000(68200)
ಆವರಣದಲ್ಲಿ ಹಿಂದಿನ ದಿನದ ಧಾರಣೆ

ಕೊಬ್ಬರಿ ಧಾರಣೆ

ಅರಸೀಕೆರೆ	₹10200-10690
ಕೆ.ಆರ್.ಪೇಟೆ (ಇತರ)	₹8350-8350
ತುರುವೇಕೆರೆ	₹10700-10700

ರಾಮನಗರ ರೇಷ್ಮೆಗೂಡು ಧಾರಣೆ
ಮಿಶ್ರತಳಿ (ಸಿ.ಬಿ) ₹465-685
ದ್ವಿತಳಿ (ಬಿ.ವಿ) ₹456-796

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ವಸಂತ ಕುಮಾರ್, ಹಾಸನ

• **ಪ್ರಶ್ನೆ:** ನನ್ನಲ್ಲಿ ಸುಮಾರು ₹ 15 ಲಕ್ಷ ಹೂಡಿಕೆಗೆ ಇದೆ. ನನ್ನ ವಯಸ್ಸು ಸುಮಾರು 63 ವರ್ಷ. ನಾನು ಪ್ರತಿ ತಿಂಗಳೂ ಇದರಿಂದ ಆದಾಯ ಬಯಸುತ್ತೇನೆ. ಈ ಬಗ್ಗೆ ಸಲಹೆ ನೀಡಿ.

ಉತ್ತರ: ಆದಾಯ ನಿರೀಕ್ಷಿಸಿ ಮಾಡುವ ಹೂಡಿಕೆಗೆ ನಮ್ಮಲ್ಲಿ ಹೂಡಿಕೆಗೆಂದೇ ನಿಗದಿಪಡಿಸಿದ ಹೆಚ್ಚುವರಿ ಹಣ ಇರುವುದು ಸೂಕ್ತ. ಇದು ನಮ್ಮ ಆರ್ಥಿಕ ಸಮತೋಲನ ಕಾಪಾಡಿಕೊಳ್ಳಲು ಪರಿಗಣಿಸಬೇಕಾದ ಬಹಳ ಮುಖ್ಯ ಅಂಶ. ವೈಯಕ್ತಿಕ ಬದುಕಿನ ಅಗತ್ಯ ಅಥವಾ ಮನೆ, ಮಕ್ಕಳ ವಿದ್ಯಾಭ್ಯಾಸ, ಆರೋಗ್ಯದ ಸಮಸ್ಯೆಗೆಂದು ಕೂಡಿಟ್ಟ ಹಣ ಅವುಗಳದ್ದೇ ಆದ ಸಮಯದಲ್ಲಿ ನೆರವಿಗೆ ಬರುತ್ತವೆ. ಹೀಗಾಗಿ ಕೆಲವು ಬಾರಿ ಅಧಿಕ ಲಾಭ ನೀಡುವ ಹೂಡಿಕೆಯ ಅವಕಾಶಗಳಿದ್ದರೂ ಹೂಡಿಕೆದಾರನ ಆದಾಯ, ವಯಸ್ಸು, ನಿರೀಕ್ಷಿಸುವ ಆದಾಯ, ಅವಧಿ ಇತ್ಯಾದಿಗಳನ್ನು ಗಮನದಲ್ಲಿಟ್ಟು ಹೂಡಿಕೆ ಮಾಡಬೇಕು. ನಿಮ್ಮ ಬಳಿ ಇರುವ ಸುಮಾರು ₹ 15 ಲಕ್ಷವನ್ನು ಹೂಡಿಕೆ ಮಾಡಿ, ಪ್ರತಿ ತಿಂಗಳೂ ಆದಾಯ ನಿರೀಕ್ಷಿಸುತ್ತಿದ್ದೀರಿ. ನಿಮ್ಮ ಈ ವಯಸ್ಸಿನಲ್ಲಿ ಕೆಳಗಿನ ಕೆಲವು ಸುರಕ್ಷಿತ ಹಾಗೂ ನಿಶ್ಚಿತ ಆದಾಯ ನೀಡುವ ಯೋಜನೆಗಳನ್ನು ಆಯ್ಕೆ ಮಾಡಬಹುದು.

ಹಿರಿಯ ನಾಗರಿಕರ ಉಳಿತಾಯ ಯೋಜನೆಯ ಅಡಿ ಪ್ರಸ್ತುತ ಸುಮಾರು ಶೇಕಡ 8ರ ಬಡ್ಡಿ ದರದಲ್ಲಿ ₹ 15 ಲಕ್ಷದವರೆಗೆ ಹೂಡಿಕೆಗೆ ಅವಕಾಶವಿದೆ. ಇದರಲ್ಲಿ ಹೂಡಿಕೆಯನ್ನು ಮೊದಲು ಐದು ವರ್ಷಗಳ ಅವಧಿಗೆ ಆಯ್ಕೆ ಮಾಡಿ. ಅಗತ್ಯವಿದ್ದರೆ ಮುಂದಿನ 3 ವರ್ಷದ ಅವಧಿಗೂ ವಿಸ್ತರಿಸಬಹುದು. ಈ ಯೋಜನೆಯ ಅಡಿ ಪ್ರತಿ ತಿಂಗಳ ಬದಲು ಮೂರು ತಿಂಗಳಿಗೊಮ್ಮೆ ಬಡ್ಡಿ ಬರುತ್ತದೆ. ಬಡ್ಡಿ ದರವೂ ಸಮರ್ಪಕವಾಗಿದೆ. ವೈಯಕ್ತಿಕವಾಗಿ ಅಥವಾ ಪತಿ-ಪತ್ನಿ ಜಂಟಿ ಖಾತೆ ತೆರೆಯುವ ಮೂಲಕವೂ ಹೂಡಿಕೆ ಮಾಡಬಹುದು. ಇಲ್ಲಿ 60 ವರ್ಷ ವಯಸ್ಸು ದಾಟಿದ ಹಿರಿಯ ನಾಗರಿಕರಿಗೆ ಹೂಡಿಕೆಗೆ ಅವಕಾಶವಿದೆ. ಈ ಅಂದಾಜಿನಂತೆ ನಿಮಗೆ ಪ್ರತಿ ಮೂರು ತಿಂಗಳಿಗೆ ₹ 30,000 ಬಡ್ಡಿ ಬರುತ್ತದೆ. ನಿಮ್ಮ ಸಮೀಪದ ಅಂಚೆ ಕಚೇರಿ ಅಥವಾ ಬ್ಯಾಂಕ್‌ನಲ್ಲಿ ವಿಚಾರಿಸಿ ಹೂಡಿಕೆ ಮಾಡಬಹುದು.

ಈ ಯೋಜನೆಯಲ್ಲದೆ, ಮಾಸಿಕ ಆದಾಯವನ್ನೇ ನೀವು ಬಯಸುವುದಿದ್ದರೆ, ಹಿರಿಯ ನಾಗರಿಕರಿಗೆ ಗರಿಷ್ಠ ₹ 4.5 ಲಕ್ಷ ಹೂಡಿಕೆಗೆ ಅವಕಾಶ ಕಲ್ಪಿಸುವ ಅಂಚೆ ಇಲಾಖೆಯ ತಿಂಗಳ ಆದಾಯ ಯೋಜನೆಯಲ್ಲಿ ಪಾಲ್ಗೊಳ್ಳಬಹುದು. ಜಂಟಿ ಖಾತೆಯಾದರೆ ಇಲ್ಲಿ ₹ 9 ಲಕ್ಷದವರೆಗೂ ಹೂಡಿಕೆ ಮಾಡಬಹುದು. ಇದೇ ಜನವರಿ ತಿಂಗಳಿನಿಂದ ಶೇ 7.1ರಷ್ಟು ಬಡ್ಡಿ ದರ ಜಾರಿಯಲ್ಲಿದೆ. ಬಡ್ಡಿಯನ್ನು ನೇರ ನಿಮ್ಮ ಖಾತೆಗೆ ಜಮಾ ಮಾಡಿಸುವ ವ್ಯವಸ್ಥೆ ಸಿಬಿಎಸ್ ಆಧಾರಿತ ಅಂಚೆ ಕಚೇರಿಗಳಲ್ಲಿ ಇರುತ್ತದೆ. ಈ ಎರಡು ಯೋಜನೆಗಳಲ್ಲಿ ನಿಮ್ಮ ಅನುಕೂಲಕ್ಕೆ ತಕ್ಕಂತೆ ಹಣ ಹಂಚಿಕೆ ಮಾಡಿ, ಹೂಡಿಕೆಯ ಪ್ರಯೋಜನ ಪಡೆಯಿರಿ.

ಚಂದ್ರಶೇಖರ್, ಬೆಂಗಳೂರು

• **ಪ್ರಶ್ನೆ:** ನಾನು ಮ್ಯೂಚುವಲ್ ಫಂಡ್‌ನಲ್ಲಿ ಹೂಡಿಕೆ ಮಾಡಿದ್ದು, ಈ ಹೂಡಿಕೆಯ ಲಾಭಕ್ಕೆ ತೆರಿಗೆ ಯಾವ ರೀತಿ ಲೆಕ್ಕ ಹಾಕಬೇಕು ಎಂಬ ಬಗ್ಗೆ ಮಾರ್ಗದರ್ಶನ ಕೋರುತ್ತೇನೆ. ನಾನು 2017ರ ಜುಲೈನಿಂದ ಆದಿತ್ಯ ಬಿರ್ಲಾ ಸನ್‌ಲೈಫ್ ಮ್ಯೂಚುವಲ್ ಫಂಡ್ ಒಂದರ ಫ್ಲೆಕ್ಸಿ ಕ್ಯಾಪ್ ಫಂಡ್ (ಗ್ರೋತ್) ರೆಗ್ಯುಲರ್ ಪ್ಲಾನ್‌ನಲ್ಲಿ (ಈಕ್ವಿಟಿ) ತಿಂಗಳಿಗೆ ₹ 3,000 ಎಸ್‌ಐಪಿ ಮೂಲಕ ಹೂಡಿಕೆ ಮಾಡಿ ₹ 2,72,678/- ಬಂದಿರುತ್ತದೆ. ಅದೇ ರೀತಿ, ಇನ್ನೊಂದು ಪೋಲಿಯೊದಲ್ಲಿ ಒಂದೇ ಬಾರಿಗೆ ₹ 30,000 ಹೂಡಿಕೆ ಮಾಡಿ, ಒಟ್ಟಾರೆ ₹ 49,001 ನನ್ನ ಖಾತೆಗೆ ಜಮಾ ಆಗಿರುತ್ತದೆ. ನಾನು 2022ರ ಡಿಸೆಂಬರ್ 26ರಂದು ಎರಡೂ ಪೋಲಿಯೋದ ಮೊತ್ತವನ್ನು ನಗದೀಕರಿಸಿಕೊಂಡಿದ್ದೇನೆ. ಇದಕ್ಕೆ ಆದಾಯ ತೆರಿಗೆ ಪಾವತಿಸಬೇಕೇ?

ಉತ್ತರ: ಹೂಡಿಕೆ ನಿರ್ಧಾರ ಕೈಗೊಳ್ಳುವಾಗ ಹೂಡಿಕೆದಾರರು ಆದಾಯ ತೆರಿಗೆ ಪರಿಣಾಮಗಳ ಬಗ್ಗೆ ಅರಿತು ಹೂಡಿಕೆ ಮಾಡುವುದು ಸೂಕ್ತ. ಹೀಗಾಗಿ ತೆರಿಗೆ ದರಗಳ ಬಗ್ಗೆ ಮೊದಲು ತಿಳಿದುಕೊಳ್ಳುವುದು ಹೂಡಿಕೆದಾರನಿಗೆ ಇರಬೇಕಾದ ಜವಾಬ್ದಾರಿ. ಹೂಡಿಕೆಗೆ ಆಯ್ಕೆ ಮಾಡಿದ ಮ್ಯೂಚುವಲ್ ಫಂಡ್, ಷೇರು ಮಾರುಕಟ್ಟೆಯಲ್ಲಿ ಹೂಡಿಕೆದಾರರ ಹಣವನ್ನು ತೊಡಗಿಸಿದ್ದರೆ ಅಂತಹ ಫಂಡ್‌ಗಳನ್ನು ಈಕ್ವಿಟಿ ಫಂಡ್ ಎಂದು ವರ್ಗೀಕರಿಸಲಾಗುತ್ತದೆ. ಯಾವುದೇ ಮ್ಯೂಚುವಲ್ ಫಂಡ್ ಹೌಸ್, ಹೂಡಿಕೆದಾರರ ಶೇ 65ಕ್ಕಿಂತ ಹೆಚ್ಚಿನ ಮೊತ್ತವನ್ನು ಕಂಪನಿಗಳ ಷೇರುಗಳಲ್ಲಿ ಹೂಡಿಕೆ ಮಾಡಿದಾಗಲಷ್ಟೇ ಈ ವರ್ಗದಲ್ಲಿ ಬರಲು ಸಾಧ್ಯ.

ಈಕ್ವಿಟಿ ಫಂಡ್‌ಗಳ ಹೂಡಿಕೆ ಅವಧಿ ಒಂದು ವರ್ಷಕ್ಕಿಂತ ಕಡಿಮೆಯದಾಗಿದ್ದರೆ ಅದು ಅಲ್ಪಾವಧಿ ಹೂಡಿಕೆಯಾಗುತ್ತದೆ. ಇಂತಹ ಈಕ್ವಿಟಿ ಫಂಡ್‌ಗಳಲ್ಲಿನ ಅಲ್ಪಾವಧಿಯ ಬಂಡವಾಳ ಲಾಭಕ್ಕೆ ಶೇ 15ರಷ್ಟು ಮೂಲ ತೆರಿಗೆ ಹಾಗೂ ಶೇ 4ರಷ್ಟು ಸೆಸ್ ಅನ್ವಯವಾಗುತ್ತದೆ. ಅದೇ ಈಕ್ವಿಟಿ ಫಂಡ್‌ಗಳಲ್ಲಿ ದೀರ್ಘಾವಧಿಯ ಬಂಡವಾಳ ಲಾಭದ ಮೊತ್ತಕ್ಕೆ ಶೇ 10ರಷ್ಟು ತೆರಿಗೆ ಹಾಗೂ ಶೇ 4ರಷ್ಟು ಸೆಸ್ ಅನ್ವಯವಾಗುತ್ತದೆ. ಒಂದು ಆರ್ಥಿಕ ವರ್ಷದಲ್ಲಿ ₹ 1 ಲಕ್ಷದವರೆಗಿನ ದೀರ್ಘಾವಧಿ ಬಂಡವಾಳ ಲಾಭಕ್ಕೆ ಸಂಪೂರ್ಣ ತೆರಿಗೆ ವಿನಾಯಿತಿ ಇದೆ. ದೀರ್ಘಾವಧಿ ಬಂಡವಾಳ ಲಾಭದಲ್ಲಿ ಇದಕ್ಕೂ ಹೆಚ್ಚಿನ ಮೊತ್ತವಷ್ಟೇ ಮೇಲೆ ಹೇಳಿರುವ ದರದಲ್ಲಿ ತೆರಿಗೆಗೆ ಒಳಪಡುತ್ತದೆ.

ನೀವು ನೀಡಿರುವ ಮಾಹಿತಿಯಂತೆ, ಮಾರಾಟ ಮಾಡಿದ ಅವಧಿಗಿಂತ ಒಂದು ವರ್ಷ ಹಿಂದೆ ಹೂಡಿಕೆ ಮಾಡಿದ ಎಸ್‌ಐಪಿಗಳೆಲ್ಲ ದೀರ್ಘಾವಧಿ ಬಂಡವಾಳ ಲಾಭ ವರ್ಗದಲ್ಲಿ ಬರುತ್ತವೆ. ಹಾಗೂ ಅದಕ್ಕಿಂತ ಕಡಿಮೆ ಅವಧಿಯ, ಅಂದರೆ ಕೊನೆಯ 12 ಎಸ್‌ಐಪಿ ಕಂತುಗಳ ಮೇಲಿನ ಲಾಭ-ನಷ್ಟ ಅಲ್ಪಾವಧಿ ಬಂಡವಾಳ ಲಾಭ ವರ್ಗಕ್ಕೆ ಬರುತ್ತದೆ. ನಿಮ್ಮ ಬಹುತೇಕ ಲಾಭದ ಪ್ರಮಾಣ ದೀರ್ಘಾವಧಿ ಬಂಡವಾಳ ಲಾಭದ ವರ್ಗದಲ್ಲೇ ಬರಬಹುದು. ಇನ್ನು ಎರಡನೆಯ ಪೋಲಿಯೋದಿಂದ ಬಂದಿರುವ ಲಾಭವು ಸಂಪೂರ್ಣವಾಗಿ ದೀರ್ಘಾವಧಿ ಬಂಡವಾಳ ಲಾಭದ ವರ್ಗಕ್ಕೆ ಬರುತ್ತದೆ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001.
ಇ-ಮೇಲ್: businessdesk@prajavani.co.in

ಕರೂರ್ ವೈಶ್ಯ ಬ್ಯಾಂಕ್ ಲಾಭ ಏರಿಕೆ

ಬೆಂಗಳೂರು: ಖಾಸಗಿ ವಲಯದ ಕರೂರ್ ವೈಶ್ಯ ಬ್ಯಾಂಕ್‌ನ ಡಿಸೆಂಬರ್ ತ್ರೈಮಾಸಿಕದ ಲಾಭವು ಶೇಕಡ 56.2ರಷ್ಟು ಹೆಚ್ಚಾಗಿದ್ದು ₹ 289 ಕೋಟಿ ತಲುಪಿದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ ಬ್ಯಾಂಕ್‌ನ ಲಾಭ ₹ 185 ಕೋಟಿ ಆಗಿತ್ತು. ಬ್ಯಾಂಕ್‌ನ ಎನ್‌ಪಿಎ ಪ್ರಮಾಣ ಶೇ 2.66ಕ್ಕೆ ಇಳಿಕೆಯಾಗಿದೆ. ಹಿಂದಿನ ವರ್ಷದ ಇದೇ ತ್ರೈಮಾಸಿಕದಲ್ಲಿ ಇದು ಶೇ 6.97ರಷ್ಟು ಇತ್ತು ಎಂದು ಬ್ಯಾಂಕ್‌ನ ಪ್ರಕಟಣೆ ತಿಳಿಸಿದೆ.

₹ 47,000 ದಾಟಿದ ಅಡಿಕೆ ಧಾರಣೆ

ಚನ್ನಗಿರಿ (ದಾವಣಗೆರೆ ಜಿಲ್ಲೆ): ಅಡಿಕೆ ಧಾರಣೆ ಚೇತರಿಕೆ ಕಾಣುತ್ತಿದ್ದು, ಕ್ವಿಂಟಲ್‌ಗೆ ₹ 47,000 ಗಡಿ ದಾಟಿದೆ. ಅಕ್ಟೋಬರ್‌ನಲ್ಲಿ ಅಡಿಕೆ ಧಾರಣೆ ₹ 53,000 ದಾಟಿತ್ತು. ಭೂತಾನ್‌ನಿಂದ ಅಡಿಕೆ ಆಮದು ಮಾಡಿಕೊಳ್ಳಲು ಅವಕಾಶ ಕಲ್ಪಿಸಿದ ಬೆನ್ನಲ್ಲೇ ಡಿಸೆಂಬರ್‌ನಲ್ಲಿ ₹ 39,000ಕ್ಕೆ ಕುಸಿದಿತ್ತು.

ವಾರದಿಂದ ಅಡಿಕೆ ಧಾರಣೆ ಅಲ್ಪ ಪ್ರಮಾಣದಲ್ಲಿ ಏರಿಕೆ ಕಂಡು ಜನವರಿ 23ರಂದು ₹ 47,000ದ ಗಡಿ ದಾಟಿದೆ. ಹೀಗಾಗಿ ಬೆಳೆಗಾರರು ಅಡಿಕೆ ಮಾರಲು ಮುಂದಾಗುತ್ತಿದ್ದಾರೆ.

‘ಡಿಸೆಂಬರ್‌ನಲ್ಲಿ ಅಡಿಕೆ ಧಾರಣೆ ಕುಸಿದಾಗ, ಜನವರಿಯಲ್ಲಿ ಏರಿಕೆಯಾಗಬಹುದು ಎಂದು ಧೈರ್ಯ ತುಂಬಿದ್ದೆ. ಜ. 23ರಂದು ರಾಶಿ ಅಡಿಕೆ ಕ್ವಿಂಟಲ್‌ಗೆ ಗರಿಷ್ಠ ಬೆಲೆ ₹47,659ಕ್ಕೆ ಮಾರಾಟವಾಗಿದೆ. ಕನಿಷ್ಠ ಬೆಲೆ ₹45,912 ಇತ್ತು. ಸರಾಸರಿ ₹47,005ಕ್ಕೆ ಮಾರಾಟವಾಗಿದೆ. ಬೆಟ್ಟೆ (ಸೆಕೆಂಡ್ಸ್) ಅಡಿಕೆ ಗರಿಷ್ಠ ₹34,789, ಕನಿಷ್ಠ ಬೆಲೆ ₹34,779 ಇದೆ. ಇನ್ನು ಸ್ವಲ್ಪ ದಿನ ಅಡಿಕೆ ಧಾರಣೆ ಯಥಾಸ್ಥಿತಿಯಲ್ಲಿ ಮುಂದುವರಿಯಲಿದೆ’ ಎಂದು ತುಮ್ಕೋಸ್ ಅಧ್ಯಕ್ಷ ಆರ್.ಎಂ. ರವಿ ಹೇಳಿದರು.

‘ಅಧಿಕ ಮಳೆಯಿಂದಾಗಿ ಇಳುವರಿ ಜೊತೆಗೆ ಧಾರಣೆಯೂ ಕುಸಿದು ಆತಂಕವಾಗಿತ್ತು. ಈಗ ಧಾರಣೆ ಹೆಚ್ಚಾಗಿದ್ದರಿಂದ ನಿಶ್ಚಿಂತೆಯಿಂದ ಅಡಿಕೆ ಮಾರಾಟ ಮಾಡುತ್ತಿದ್ದೇನೆ’ ಎಂದು ತಾಲ್ಲೂಕಿನ ಗುಳ್ಳೇಹಳ್ಳಿ ಗ್ರಾಮದ ಅಡಿಕೆ ಬೆಳೆಗಾರ ಎಂ.ಎಸ್. ಷಣ್ಮುಖ ತಿಳಿಸಿದರು.

ಪರವಾನಗಿ ಅಮಾನತು ‘ವಿಪರೀತದ’ ಕ್ರಮ

ನವದೆಹಲಿ (ರಾಯಿಟರ್ಸ್): ಪಾನಮತ್ತರಾಗಿದ್ದ ಪ್ರಯಾಣಿಕರೊಬ್ಬರು ಮಹಿಳಾ ಸಹ ಪ್ರಯಾಣಿಕರೊಬ್ಬರ ಮೇಲೆ ವಿಮಾನದಲ್ಲಿ ಮೂತ್ರ ಮಾಡಿದ ಪ್ರಕರಣದ ವಿಚಾರವಾಗಿ, ಆ ವಿಮಾನದ ಪೈಲಟ್‌ನ ಪರವಾನಗಿಯನ್ನು ಅಮಾನತು ಮಾಡಿದ ಕ್ರಮವು ‘ವಿಪರೀತದ್ದು’ ಎಂದು ಏರ್ ಇಂಡಿಯಾ ಮಂಗಳವಾರ ಹೇಳಿದೆ.

ಈ ಪ್ರಕರಣವನ್ನು ನಿಭಾಯಿಸಿದ ಬಗೆ ಸರಿಯಿಲ್ಲ ಎಂದು ನಾಗರಿಕ ವಿಮಾನಯಾನ ಮಹಾನಿರ್ದೇಶನಾಲಯವು (ಡಿಜಿಸಿಎ) ಏರ್ ಇಂಡಿಯಾಗೆ ₹ 30 ಲಕ್ಷ ದಂಡ ವಿಧಿಸಿದ್ದು, ಪೈಲಟ್ ಪರವಾನಗಿಯನ್ನು 3 ತಿಂಗಳ ಅವಧಿಗೆ ಅಮಾನತು ಮಾಡಿದೆ.

ಪಿಟಿಐ ವರದಿ: ಏರ್ ಇಂಡಿಯಾ ಕಂಪನಿಯು ವಿಮಾನದಲ್ಲಿ ಮದ್ಯ ಒದಗಿಸುವ ನೀತಿಯಲ್ಲಿ ಬದಲಾವಣೆ ತಂದಿದೆ. ಪರಿಷ್ಕೃತ ನೀತಿ ಅನ್ವಯ, ವಿಮಾನದ ಸಿಬ್ಬಂದಿ ಮದ್ಯ ಕೊಡದ ಹೊರತು, ಪ್ರಯಾಣಿಕರು ತಾವಾಗಿಯೇ ಮದ್ಯ ಸೇವಿಸಲು ಅವಕಾಶ ನೀಡುವಂತಿಲ್ಲ. ಪ್ರಯಾಣಿಕರು ತಾವೇ ತಂದ ಮದ್ಯವನ್ನು ಸೇವಿಸುತ್ತಿದ್ದಾರೆಯೇ ಎಂಬುದನ್ನು ಸಿಬ್ಬಂದಿ ಗಮನಿಸಬೇಕು.

‘ಪ್ರಯಾಣಿಕರಿಗೆ ಹೆಚ್ಚಿನ ಮದ್ಯ ಒದಗಿಸಲು ಜಾಣ್ಮೆಯಿಂದ ನಿರಾಕರಿಸುವುದೂ ಸೇರಿದೆ’ ಎಂದು ನೀತಿಯಲ್ಲಿ ಹೇಳಲಾಗಿದೆ. ‘ಹೊಸ ನೀತಿ ಜಾರಿಗೊಳಿಸಲಾಗಿದೆ’ ಎಂದು ಕಂಪನಿ ವಕ್ತಾರರೊಬ್ಬರು ತಿಳಿಸಿದ್ದಾರೆ.

ಮಾರುತಿ ಸುಜುಕಿ ಲಾಭ ಎರಡು ಪಟ್ಟು ಏರಿಕೆ



ನವದೆಹಲಿ (ಪಿಟಿಐ): ಮಾರುತಿ ಸುಜುಕಿ ಇಂಡಿಯಾ ಕಂಪನಿಯ ಡಿಸೆಂಬರ್ ತ್ರೈಮಾಸಿಕದ ನಿವ್ವಳ ಲಾಭವು ₹ 2,351 ಕೋಟಿಗೆ ಏರಿಕೆ ಆಗಿದೆ. ವಾಹನ ಮಾರಾಟ ಸುಧಾರಿಸಿದ್ದು ಲಾಭ ಹೆಚ್ಚಾಗುವುದಕ್ಕೆ ಒಂದು ಮುಖ್ಯ ಕಾರಣ.

ಹಿಂದಿನ ಹಣಕಾಸು ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ಕಂಪನಿಯು ₹ 1,011 ಕೋಟಿ ನಿವ್ವಳ ಲಾಭ ಗಳಿಸಿತ್ತು. ಈ ಹಣಕಾಸು ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ಕಂಪನಿಯು ಮಾರಾಟದ ಮೂಲಕ ₹ 27,849 ಕೋಟಿ ವರಮಾನ ಗಳಿಸಿದೆ.

ಡಿಸೆಂಬರ್ ತ್ರೈಮಾಸಿಕದಲ್ಲಿ ಕಂಪನಿಯು ಒಟ್ಟು 4.65 ಲಕ್ಷ ವಾಹನಗಳನ್ನು ಮಾರಾಟ ಮಾಡಿದೆ. ಇದರಲ್ಲಿ 61 ಸಾವಿರ ವಾಹನಗಳನ್ನು ರಫ್ತು ಮಾಡಲಾಗಿದೆ.

ಗ್ರ್ಯಾಂಡ್ ವಿಟಾರಾ ಮಾದರಿಯನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದ್ದು ಹಾಗೂ ಬ್ರೆಜಾ ಮಾದರಿಯ ಹೊಸ ಅವತರಣಿಕೆಯನ್ನು ಬಿಡುಗಡೆ ಮಾಡಿದ್ದು ಕಂಪನಿಗೆ ಮಾರುಕಟ್ಟೆ ಪಾಲನ್ನು ಗಟ್ಟಿಗೊಳಿಸಿಕೊಳ್ಳುವಲ್ಲಿ ನೆರವಿಗೆ ಬಂದಿದೆ ಎಂದು ಕಂಪನಿಯು ಷೇರುಪೇಟೆಗೆ ನೀಡಿರುವ ಮಾಹಿತಿಯಲ್ಲಿ ವಿವರಿಸಿದೆ.

ವೆಚ್ಚ ತಗ್ಗಿಸಲು ಮಾಡಿದ ಯತ್ನಗಳು, ಕಚ್ಚಾ ವಸ್ತುಗಳ ಬೆಲೆಯಲ್ಲಿ ಆದ ಇಳಿಕೆ ಕೂಡ ಲಾಭದ ಪ್ರಮಾಣ ಹೆಚ್ಚಾಗಲು ನೆರವಾಗಿವೆ.



ಶ್ರೇಯಸ್ ಗೋಪಾಲ್ ಮತ್ತು ಕೆ. ಗೌತಮ್

ರಣಜಿ: ಗೌತಮ್ ದಾಳಿಗೆ ಕುಸಿದ ಜಾರ್ಖಂಡ್

ಮುಖ್ಯಾಂಶಗಳು

- ಜಾರ್ಖಂಡ್ ತಂಡ 64.2 ಓವರ್‌ಗಳಲ್ಲಿ 164 ರನ್‌ಗಳಿಗೆ ಆಲೌಟ್
- 61 ರನ್‌ಗಳಿಗೆ ನಾಲ್ಕು ವಿಕೆಟ್ ಪಡೆದ ಗೌತಮ್
- ಕರ್ನಾಟಕ 27 ಓವರ್‌ಗಳಲ್ಲಿ ಎರಡು ವಿಕೆಟ್‌ಗಳಿಗೆ 80 ರನ್

ರಾಂಚಿ: ಸ್ಪಿನ್ ಜೋಡಿ ಕೃಷ್ಣಪ್ಪ ಗೌತಮ್ ಪರಿಣಾಮಕಾರಿ ದಾಳಿಯಿಂದಾಗಿ ಆತಿಥೇಯ ಜಾರ್ಖಂಡ್ ತಂಡವು ಕುಸಿಯಿತು.

ಮಂಗಳವಾರ ಇಲ್ಲಿ ಆರಂಭವಾದ ಸಿ ಗುಂಪಿನ ಕೊನೆಯ ಪಂದ್ಯದಲ್ಲಿ ಆಫ್‌ಸ್ಪಿನ್ನರ್ ಗೌತಮ್ (61ಕ್ಕೆ4) ಅವರ ದಾಳಿಗೆ ಆತಿಥೇಯ ಜಾರ್ಖಂಡ್ ತಂಡವು 64.2 ಓವರ್‌ಗಳಲ್ಲಿ 164 ರನ್‌ಗಳ ಸಾಧಾರಣ ಮೊತ್ತ ಗಳಿಸಿ ಆಲೌಟ್ ಆಯಿತು.

ಎರಡನೇ ಇನಿಂಗ್ಸ್ ಆರಂಭಿಸಿದ ಕರ್ನಾಟಕ ತಂಡವು ದಿನದಾಟದ ಅಂತ್ಯಕ್ಕೆ 27 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 80 ರನ್ ಗಳಿಸಿದೆ. ದೇವದತ್ತ ಪಡಿಕ್ಕಲ್ (ಬ್ಯಾಟಿಂಗ್ 20) ಮತ್ತು ನಿಕಿನ್ ಜೋಸ್ (ಬ್ಯಾಟಿಂಗ್ 8) ಕ್ರೀಸ್‌ನಲ್ಲಿದ್ದಾರೆ.

ಸಮರ್ಥ್ ಜೊತೆಗೆ ಮೊದಲ ವಿಕೆಟ್ ಜೊತೆಯಾಟದಲ್ಲಿ 46 ರನ್ ಸೇರಿಸಿದ ಮಯಂಕ್ 12ನೇ ಓವರ್‌ನಲ್ಲಿ ನದೀಮ್ ಎಸೆತವನ್ನು ಆಡುವ ಪ್ರಯತ್ನದಲ್ಲಿ ಆರ್ಯಮನ್ ಸೇನ್‌ಗೆ ಕ್ಯಾಚ್ ಕೊಟ್ಟರು. ಏಳು ಓವರ್‌ಗಳ ನಂತರ ಅನುಕೂಲ್ ರಾಯ್ ಎಸೆತದಲ್ಲಿ ಸಮರ್ಥ್ (31; 67ಎ, 4X3) ಕ್ಲೀನ್‌ಬೌಲ್ಡ್ ಆದರು. ಪ್ರಥಮ ಇನಿಂಗ್ಸ್ ಮುನ್ನಡೆ ಗಳಿಸಲು ಕರ್ನಾಟಕ ತಂಡಕ್ಕೆ 84 ರನ್‌ಗಳ ಅಗತ್ಯವಿದೆ. ಮಯಂಕ್ ಬಳಗವು ಈಗಾಗಲೇ ಕ್ವಾರ್ಟರ್‌ಫೈನಲ್ ಪ್ರವೇಶಿಸಿದೆ.

ಗೌತಮ್ ಮೋಡಿ: ಟಾಸ್ ಗೆದ್ದ ಜಾರ್ಖಂಡ್ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಮೂವರು ಸ್ಪಿನ್ನರ್‌ಗಳೊಂದಿಗೆ ಕಣಕ್ಕಿಳಿದ ಕರ್ನಾಟಕ ತಂಡವು ವೇಗಿ ವೈಶಾಖ ವಿಜಯಕುಮಾರ್‌ಗೆ ವಿಶ್ರಾಂತಿ ಕೊಟ್ಟು, ಎಡಗೈ ಸ್ಪಿನ್ನರ್ ಶುಭಾಂಗ್ ಹೆಗಡೆಗೆ ಅವಕಾಶ ನೀಡಿತು.

ವೇಗಿ ವಿದ್ವತ್ ಕಾವೇರಪ್ಪ ಒಂಬತ್ತನೇ ಓವರ್‌ನಲ್ಲಿ ದೇವವ್ರತ್ ವಿಕೆಟ್ ಗಳಿಸಿ ಕರ್ನಾಟಕದ ಖಾತೆ ತೆರೆದರು. ಇದಾದ ಮೇಲೆ ಗೌತಮ್ ಶಿಸ್ತಿನ ದಾಳಿಗೆ ಪ್ರಮುಖ ಬ್ಯಾಟರ್‌ಗಳಾದ ಆರ್ಯಮನ್ ಸೇನ್, ಕುಮಾರ್ ಸೂರಜ್, ವಿನತ್ ಸಿಂಗ್ ಮತ್ತು ಸೌರಭ್ ತಿವಾರಿ ಪೆವಿಲಿಯನ್ ಸೇರಿದರು.

ಇದರಿಂದಾಗಿ ಆತಿಥೇಯ ತಂಡವು ನೂರು ರನ್‌ಗಳ ಮೊತ್ತ ಮುಟ್ಟುವ ಮುನ್ನವೇ ಆರು ವಿಕೆಟ್‌ಗಳನ್ನು ಕಳೆದುಕೊಂಡಿತು. ಇನ್ನೊಂದೆಡೆ ಶ್ರೇಯಸ್ ಕೂಡ ಕೆಳಕ್ರಮಾಂಕದ ಆಟಗಾರರಿಗೆ ಪೆವಿಲಿಯನ್ ದಾರಿ ತೋರಿದರು. ಶುಭಾಂಗ್ ಕೂಡ ಒಂದು ವಿಕೆಟ್ ಗಳಿಸಿದರು. ಕುಶಾಗ್ರ (37; 106ಎ) ಹಾಗೂ ನದೀಮ್ (22; 4X3) ಅವರ ಬ್ಯಾಟಿಂಗ್‌ನಿಂದಾಗಿ ತಂಡದ ಮೊತ್ತಕ್ಕೆ ಮತ್ತಷ್ಟು ರನ್‌ಗಳು ಸೇರಿದವು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಜಾರ್ಖಂಡ್: 64.2 ಓವರ್‌ಗಳಲ್ಲಿ 164 (ದೇವವ್ರತ್ 18, ಕುಮಾರ ಸೂರಜ್ 22, ಕುಮಾರ್ ಖುಶಾಗ್ರ 37, ನದೀಮ್ 22, ವಿದ್ವತ್ ಕಾವೇರಪ್ಪ 34ಕ್ಕೆ2, ಕೃಷ್ಣಪ್ಪ ಗೌತಮ್ 61ಕ್ಕೆ4, ಶ್ರೇಯಸ್ ಗೋಪಾಲ್ 18ಕ್ಕೆ3, ಶುಭಾಂಗ್ ಹೆಗಡೆ 16ಕ್ಕೆ1) ಕರ್ನಾಟಕ: 27 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 80(ಆರ್. ಸಮರ್ಥ್ 31, ಮಯಂಕ್ ಅಗರವಾಲ್ 20, ದೇವದತ್ತ ಪಡಿಕ್ಕಲ್ ಬ್ಯಾಟಿಂಗ್ 20, ನಿಕಿನ್ ಜೋಸ್ ಬ್ಯಾಟಿಂಗ್ 8, ಶಹಬಾಜ್ ನದೀಮ್ 40ಕ್ಕೆ1, ಅನುಕೂಲ್ ರಾಯ್ 12ಕ್ಕೆ1)

ಏಕದಿನ ಕ್ರಿಕೆಟ್: ನ್ಯೂಜಿಲೆಂಡ್ ಎದುರು ಕ್ಲೀನ್‌ಸ್ವೀಪ್; ಕಾನ್ವೆ ಶತಕ ವ್ಯರ್ಥ

ಅಗ್ರಪಟ್ಟಕ್ಕೇರಿದ ಭಾರತ ತಂಡ

ಇಂದೋರ್ (ಪಿಟಿಐ): ಮೂರು ವರ್ಷಗಳ ನಂತರ ಶತಕ ದಾಖಲಿಸಿದ ರೋಹಿತ್ ಶರ್ಮಾ ಮತ್ತು ನ್ಯೂಜಿಲೆಂಡ್ ಎದುರಿನ ಸರಣಿಯಲ್ಲಿ ಎರಡನೇ ಬಾರಿ ನೂರರ ಗಡಿ ದಾಡಿದ ಶುಭಮನ್ ಗಿಲ್ ಭಾರತ ತಂಡಕ್ಕೆ ಕ್ಲೀನ್‌ಸ್ವೀಪ್ ಕಾಣಿಕೆ ನೀಡಿದರು.

ಇದರೊಂದಿಗೆ ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಏಕದಿನ ಕ್ರಿಕೆಟ್ ರ್‍ಯಾಂಕಿಂಗ್‌ನಲ್ಲಿ ಅಗ್ರಸ್ಥಾನಕ್ಕೇರಿತು. ಇಲ್ಲಿಯ ಹೋಳ್ಕರ್ ಮೈದಾನದಲ್ಲಿ ಮಂಗಳವಾರ ನಡೆದ ಮೂರನೇ ಏಕದಿನ ಕ್ರಿಕೆಟ್ ಪಂದ್ಯದಲ್ಲಿ ಭಾರತ ತಂಡವು 90 ರನ್‌ಗಳಿಂದ ಜಯಿಸಿತು.

ಟಾಸ್ ಗೆದ್ದ ಕಿವೀಸ್ ಬಳಗವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಆದರೆ ಆತಿಥೇಯ ತಂಡದ ನಾಯಕ ರೋಹಿತ್ (101ರನ್) ಮತ್ತು ಶುಭಮನ್ (112ರನ್) ಅವರು ಮೊದಲ ವಿಕೆಟ್‌ಗೆ 212 ರನ್ ಸೇರಿಸಿ ನ್ಯೂಜಿಲೆಂಡ್ ಯೋಜನೆಯನ್ನು ವಿಫಲಗೊಳಿಸಿದರು. ಇದರಿಂದಾಗಿ ತಂಡವು 50 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 385 ರನ್ ಗಳಿಸಿತು. ಗುರಿ ಬೆನ್ನಟ್ಟಿದ ನ್ಯೂಜಿಲೆಂಡ್ ತಂಡವು 41.2 ಓವರ್‌ಗಳಲ್ಲಿ 295 ರನ್ ಗಳಿಸಿ ಸೋಲೊಪ್ಪಿಕೊಂಡಿತು. ಆರಂಭಿಕ ಬ್ಯಾಟರ್ ಡೆವೊನ್ ಕಾನ್ವೆ (138; 100ಎ) ಅವರ ಹೋರಾಟ ವ್ಯರ್ಥವಾಯಿತು. ಈ ಪಂದ್ಯದಲ್ಲಿ ಒಟ್ಟು 680 ರನ್‌ಗಳು ಹರಿದವು.

ರೋಹಿತ್–ಗಿಲ್ ಜೊತೆಯಾಟ: ಆರಂಭಿಕ ಜೋಡಿ ರೋಹಿತ್ ಮತ್ತು ಗಿಲ್ ಅಬ್ಬರಕ್ಕೆ ಎದುರಾಳಿ ಬೌಲರ್‌ಗಳು ಬಸವಳಿದರು. ಈ ಜೋಡಿಯು 156 ಎಸೆತಗಳಲ್ಲಿ 212 ರನ್ ಸೇರಿಸಿದರು.

ರೋಹಿತ್ 2020ರ ಜನವರಿಯಲ್ಲಿ ಶತಕ ಗಳಿಸಿದ್ದರು. ಅದರ ನಂತರ ಮೂರಂಕಿ ಮೊತ್ತ ಮುಟ್ಟಿದ್ದು ಇಲ್ಲಿಯೇ. ಇದು ಅವರ 30ನೇ ಶತಕ. ಅವರಿಗಿಂತಲೂ ಹೆಚ್ಚು ವೇಗದ ಆಟವಾಡಿದ ಗಿಲ್ ಅಬ್ಬರಿಸಿದರು. ಇದೇ ಸರಣಿಯ ಮೊದಲ ಪಂದ್ಯದಲ್ಲಿ ಅವರು ದ್ವಿಶತಕ ಗಳಿಸಿದ್ದರು.

ಆದರೆ 27ನೇ ಓವರ್‌ನಲ್ಲಿ ರೋಹಿತ್ ಮತ್ತು 28ನೇ ಓವರ್‌ನಲ್ಲಿ ಗಿಲ್ ಔಟಾದರು. ಈ ಹಂತದಲ್ಲಿ ಇನಿಂಗ್ಸ್ ಮೇಲೆ ಹಿಡಿತ ಸಾಧಿಸಲು ಕಿವೀಸ್ ಬೌಲರ್‌ಗಳು ಪ್ರಯತ್ನಿಸಿದರು. ಇದರಿಂದಾಗಿ ತಂಡದ ಮೊತ್ತವು 300ರ ಗಡಿ ಮುಟ್ಟುವ ಮುನ್ನವೇ ವಿರಾಟ್ (36), ಇಶಾನ್ ಮತ್ತು ಸೂರ್ಯಕುಮಾರ್ ಪೆವಿಲಿಯನ್‌ಗೆ ಮರಳಿದರು.

ಆದರೆ ಹಾರ್ದಿಕ್ ಪಾಂಡ್ಯ ಮಾತ್ರ ಬೌಲರ್‌ಗಳ ಬೆವರಿಳಿಸಿದರು. ಮೂರು ಸಿಕ್ಸರ್ ಮತ್ತು ಮೂರು ಬೌಂಡರಿಗಳನ್ನು ಬಾರಿಸಿದ ಅವರು 38 ಎಸೆತಗಳಲ್ಲಿ 54 ರನ್ ಗಳಿಸಿದರು. ಶಾರ್ದೂಲ್ ಠಾಕೂರ್ ಕೂಡ 25 ರನ್‌ಗಳ ಕಾಣಿಕೆ ನೀಡಿದರು.

ಕಾನ್ವೆ–ಹೆನ್ರಿ ಶತಕದ ಜೊತೆಯಾಟ: ಬೌಲಿಂಗ್‌ನಲ್ಲಿಯೂ ಮಿಂಚಿದ ಹಾರ್ದಿಕ್ ನ್ಯೂಜಿಲೆಂಡ್ ತಂಡವು ಖಾತೆಯ ತೆರೆಯುವ ಮುನ್ನವೇ ಮೊದಲ ವಿಕೆಟ್ ಉರುಳಿಸಿದರು. ಆದರೆ ಕಾನ್ವೆ ಏಕಾಗ್ರತೆ ಭಂಗ ಬರಲಿಲ್ಲ. ಅವರು ಎರಡನೇ ವಿಕೆಟ್‌ಗೆ ಹೆನ್ರಿ ನಿಕೋಲ್ಸ್ ಅವರೊಂದಿಗಿನ ಜೊತೆಯಾಟದಲ್ಲಿ 106 ರನ್ ಸೇರಿಸಿದರು. ಡೆರಿಲ್ ಮಿಚೆಲ್ ಜೊತೆಗೆ ಮೂರನೇ ವಿಕೆಟ್‌ಗೆ 78 ರನ್ ಸೇರಿಸಿದರು. ಆದರೆ ಅವರ ಪ್ರಯತ್ನಗಳಿಗೆ ಆತಿಥೇಯ ಬೌಲರ್‌ಗಳು ತಡೆಯೊಡ್ಡಿದರು.

ಶಾರ್ದೂಲ್ ಮತ್ತು ಸ್ಪಿನ್ನರ್ ಕುಲದೀಪ್ ಯಾದವ್ ತಲಾ ಮೂರು ವಿಕೆಟ್ ಪಡೆದರು. ಹಾರ್ದಿಕ್ ಪಾಂಡ್ಯ ಮೊದಲ ಓವರ್‌ನಲ್ಲಿಯೇ ವಿಕೆಟ್ ಗಳಿಸಿ ಮಿಂಚಿದರು. ಯಜುವೇಂದ್ರ ಚಾಹಲ್ ಮತ್ತು ಉಮ್ರಾನ್ ಮಲಿಕ್ ಕೂಡ ತಲಾ ಒಂದು ವಿಕೆಟ್ ಗಳಿಸಿದರು.

ರೋಹಿತ್–ಗಿಲ್ ಜೊತೆಯಾಟ

ಇಂದೋರ್: ಭಾರತ ತಂಡದ ನಾಯಕ ರೋಹಿತ್ ಶರ್ಮಾ ಮತ್ತು ಶುಭಮನ್ ಗಿಲ್ ಶತಕ ಗಳಿಸಿದರು. ಮೊದಲ ವಿಕೆಟ್ ಜೊತೆಯಾಟದಲ್ಲಿ ನ್ಯೂಜಿಲೆಂಡ್ ವಿರುದ್ಧ ಅತಿ ಹೆಚ್ಚು ರನ್ ಸೇರಿಸಿದ ದಾಖಲೆಯನ್ನೂ ಮಾಡಿದರು.



9ಕ್ಕೆ 385
ಭಾರತವು ತನ್ನ ತವರಿನಂಗಳದಲ್ಲಿ ನ್ಯೂಜಿಲೆಂಡ್ ವಿರುದ್ಧ ಗಳಿಸಿದ ಅತಿ ದೊಡ್ಡ ಮೊತ್ತ.

ಶುಭಮನ್ ಗಿಲ್
ರನ್-112
ಎಸೆತ-78
ಬೌಂಡರಿ-13
ಸಿಕ್ಸರ್-5

ರೋಹಿತ್ ಶರ್ಮಾ
ರನ್-101
ಎಸೆತ-85
ಬೌಂಡರಿ-9
ಸಿಕ್ಸರ್-6

ಮೊದಲ ವಿಕೆಟ್ ಜೊತೆಯಾಟ (ನ್ಯೂಜಿಲೆಂಡ್ ಎದುರು)

ರನ್	ಬ್ಯಾಟರ್	ತಾಣ	ವರ್ಷ
212	ರೋಹಿತ್ ಶರ್ಮಾ–ಶುಭಮನ್ ಗಿಲ್	ಇಂದೋರ್	2023
201*	ವೀರೇಂದ್ರ ಸೆಹ್ವಾಗ್–ಗೌತಮ್ ಗಂಭೀರ್	ಹ್ಯಾಮಿಲ್ಟನ್	2009

ನೂರು–ಮೂರು
ನ್ಯೂಜಿಲೆಂಡ್ ಬೌಲರ್ ಜೇಕಬ್ ಡೆಫಿ ಅವರು 100 ರನ್ ನೀಡಿ ಮೂರು ವಿಕೆಟ್ ಗಳಿಸಿದ ಮೊದಲ ಬೌಲರ್ ಆದರು

ಅಂಕಿ ಸಂಖ್ಯೆ: ಎಚ್.ಆರ್. ಗೋಪಾಲಕೃಷ್ಣ

*360 ರನ್
ನ್ಯೂಜಿಲೆಂಡ್ ಎದುರಿನ ಮೂರು ಪಂದ್ಯಗಳ ಸರಣಿಯಲ್ಲಿ ಶುಭಮನ್ ಗಿಲ್ ಗಳಿಸಿರುವ ರನ್‌ಗಳು. ಪಾಕಿಸ್ತಾನದ ಬಾಬರ್ ಆಜಂ 2016ರಲ್ಲಿ ವೆಸ್ಟ್ ಇಂಡೀಸ್ ಎದುರು ಇಷ್ಟೇ ರನ್‌ಗಳನ್ನು ಗಳಿಸಿದ್ದರು.

ಕ್ರಿಕೆಟ್: ಮನೋಜ್ ಭಾಂಡಗೆ ಅಮೋಘ ಶತಕ

ಪ್ರಜಾವಾಣಿ ವಾರ್ತೆ

ಮೈಸೂರು: ಮನೋಜ್ ಭಾಂಡಗೆ ಸಿಡಿಸಿದ ಅಮೋಘ ಶತಕದ (102 ರನ್) ಬಲದಿಂದ ಕರ್ನಾಟಕ ತಂಡ ಎರಡನೇ ಇನ್ನಿಂಗ್ಸ್‌ನಲ್ಲಿ ಹಿಮಾಚಲ ಪ್ರದೇಶ ವಿರುದ್ಧ ಸವಾಲಿನ ಮೊತ್ತ ಕಲೆ ಹಾಕಿತು.

ಇಲ್ಲಿನ ಮಾನಸಗಂಗೋತ್ರಿಯ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಸಿ.ಕೆ. ನಾಯ್ಡು ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ರಾಜ್ಯ ತಂಡವು ಮಂಗಳವಾರ 89.4 ಓವರ್‌ಗಳಲ್ಲಿ 299 ರನ್ ಗಳಿಸಿತು. ತಾಳ್ಮೆಯ ಆಟವಾಡಿದ ಮನೋಜ್, ನಾಯಕ ಕಿಶನ್ ಎಸ್. ಬಿದರೆ (49) ಹಾಗೂ ವಿದ್ಯಾಧರ ಪಾಟೀಲ (54) ಅವರೊಂದಿಗೆ ಇನ್ನಿಂಗ್ಸ್ ಕಟ್ಟಿದರು.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್: ಕರ್ನಾಟಕ 166. ಹಿಮಾಚಲ ಪ್ರದೇಶ 67.4 ಓವರ್‌ಗಳಲ್ಲಿ 214 (ಆರ್.ಐ.ಠಾಕೂರ್ 77, ಎ.ಎಸ್. ಜಾಮ್ವಾಲ್ 57, ಎಂ.ಎಸ್.ಭಾಂಡಗೆ 47ಕ್ಕೆ 4). ಎರಡನೇ ಇನಿಂಗ್ಸ್: ಕರ್ನಾಟಕ 89.4 ಓವರ್‌ಗಳಲ್ಲಿ 299 (ಮನೋಜ್ ಭಾಂಡಗೆ 102, ವಿದ್ಯಾಧರ ಪಾಟೀಲ್ 54, ಮುಕುಲ್ ನೇಗಿ 80ಕ್ಕೆ 4)

ಸ್ಕೋರ್ ಕಾರ್ಡ್

ಭಾರತ: 9ಕ್ಕೆ385 (50 ಓವರ್‌ಗಳಲ್ಲಿ)
ರೋಹಿತ್ ಬಿ ಬ್ರೇಸ್‌ವೆಲ್ 101 (85ಎ, 4X9, 6X1), ಗಿಲ್ ಸಿ ಕಾನ್ವೆ ಬಿ ಟಿಕ್ನರ್ 112 (78ಎ, 4X13, 6X1), ಕೊಹ್ಲಿ ಸಿ ಫಿನ್ ಬಿ ಡಫಿ 36 (27ಎ, 4X3, 6X1) ಇಶಾನ್ ರನ್‌ಔಟ್/ಹೆನ್ರಿ 17 (24ಎ, 4X1, 6X1), ಸೂರ್ಯಕುಮಾರ್ ಸಿ ಕಾನ್ವೆ ಬಿ ಡಫಿ 14 (9ಎ, 6X2) ಹಾರ್ದಿಕ್ ಸಿ ಕಾನ್ವೆ ಬಿ ಡಫಿ 54 (38ಎ, 4X3, 6X3), ವಾಷಿಂಗ್ಟನ್ ಸಿ ಡೆರಿಲ್ ಬಿ ಟಿಕ್ನರ್ 9 (14ಎ, 4X1), ಶಾರ್ದೂಲ್ ಸಿ ಲಥಾಮ್ ಬಿ ಟಿಕ್ನರ್ 25 (17ಎ, 4X3), 6X1), ಕುಲದೀಪ್ ರನ್‌ಔಟ್ (ಲಥಾಮ್/ ಲಾಕಿ) 3(3ಎ) ಉಮ್ರಾನ್ ಔಟಾಗದೆ 2 (5ಎ)
ಇತರೆ: 12 (ಬೈ 5, ಲೆಗ್‌ಬೈ 1, ವೈಡ್ 6)
ವಿಕೆಟ್ ಪತನ: 1–212 (ರೋಹಿತ್ ಶರ್ಮಾ; 26.1), 2–230 (ಶುಭಮನ್ ಗಿಲ್;27.6), 3–268 (ಇಶಾನ್ ಕಿಶನ್; 34.3), 4–284 (ವಿರಾಟ್ ಕೊಹ್ಲಿ; 36.2), 5–293 (ಸೂರ್ಯಕುಮಾರ್ ಯಾದವ್;38.4), 6–313 (ವಾಷಿಂಗ್ಟನ್ ಸುಂದರ್; 42.2), 7–367 (ಶಾರ್ದೂಲ್ ಠಾಕೂರ್; 47.6), 8–379 (ಹಾರ್ದಿಕ್ ಪಾಂಡ್ಯ; 48.4), 9–385 (ಕುಲದೀಪ್ ಯಾದವ್; 49.6)
ಬೌಲಿಂಗ್: ಜೇಕಬ್ ಡಫಿ 10–0–100–3, ಲಾಕಿ ಫರ್ಗ್ಯುಸನ್ 10–1–53–0, ಬ್ಲೇರ್ ಟಿಕ್ನರ್ 10–0–76–3, ಮಿಚೆಲ್ ಸ್ಯಾಂಟನರ್ 10–0–50–0, ಡೆರಿಲ್ ಮಿಚೆಲ್ 4–0–41–0, ಮೈಕಲ್ ಬ್ರೇಸ್‌ವೆಲ್ 6–0–51–1.

ನ್ಯೂಜಿಲೆಂಡ್: 295 (41.2 ಓವರ್)
ಫಿನ್ ಬಿ ಹಾರ್ದಿಕ್ 9 (2ಎ), ಕಾನ್ವೆ ಸಿ ರೋಹಿತ್ ಬಿ ಉಮ್ರಾನ್ 138 (100ಎ, 4X12, 6X8), ಹೆನ್ರಿ ಎಲ್‌ಬಿಡಬ್ಲ್ಯು ಬಿ ಕುಲದೀಪ್ 42 (40ಎ, 4X3, 6X2) ಡೆರಿಲ್ ಸಿ ಇಶಾನ್ ಬಿ ಶಾರ್ದೂಲ್ 24 (31ಎ, 4X2), ಟಾಮ್ ಸಿ ಹಾರ್ದಿಕ್ ಬಿ ಶಾರ್ದೂಲ್ 0 (1ಎ), ಗ್ಲೆನ್ ಸಿ ಕೊಹ್ಲಿ ಬಿ ಶಾರ್ದೂಲ್ 5 (7ಎ), ಬ್ರೇಸ್‌ವೆಲ್ ಸ್ಟಂಪ್ಡ್ ಇಶಾನ್ ಬಿ ಕುಲದೀಪ್ 26 (22ಎ, 4X3, 6X1), ಸ್ಯಾಂಟನರ್ ಸಿ ಕೊಹ್ಲಿ ಬಿ ಚಾಹಲ್ 34 (29ಎ, 4X3, 6X2), ಫರ್ಗ್ಯುಸನ್ ಸಿ ರೋಹಿತ್ ಬಿ ಕುಲದೀಪ್ 7 (12ಎ), ಡಫಿ ಎಲ್‌ಬಿಡಬ್ಲ್ಯು ಬಿ ಚಾಹಲ್ 0 (2ಎ) ಟಿಕ್ನರ್ ಔಟಾಗದೆ 0 (2ಎ)
ಇತರೆ: 19 (ಬೈ 2, ಲೆಗ್‌ಬೈ 5, ವೈಡ್ 12)
ವಿಕೆಟ್ ಪತನ: 1–0 (ಫಿನ್ ಅಲೆನ್; 0.2), 2–106 (ಹೆನ್ರಿ ನಿಕೋಲ್ಸ್;14.5), 3–184 (ಡೆರಿಲ್ ಮಿಚೆಲ್; 25.1), 4–184 (ಟಾಮ್ ಲಥಾಮ್; 25.2), 5–200 (ಗ್ಲೆನ್ ಫಿಲಿಪ್ಸ್; 27.4), 6–230 (ಡೆವೊನ್ ಕಾನ್ವೆ; 31.4), 7–269 (ಮೈಕಲ್ ಬ್ರೇಸ್‌ವೆಲ್; 36.1), 8–279 (ಲಾಕಿ ಫರ್ಗ್ಯುಸನ್; 38.5), 9–280 (ಜೇಕಬ್ ಡಫಿ; 39.4), 10–295 (ಮಿಚೆಲ್ ಸ್ಯಾಂಟನರ್; 41.2)
ಬೌಲಿಂಗ್: ಹಾರ್ದಿಕ್ ಪಾಂಡ್ಯ 6–0–37–1, ವಾಷಿಂಗ್ಟನ್ ಸುಂದರ್ 6–0–49–0, ಶಾರ್ದೂಲ್ ಠಾಕೂರ್ 6–0–45–3, ಉಮ್ರಾನ್ ಮಲಿಕ್ 7–0–52–1, ಕುಲದೀಪ್ ಯಾದವ್ 9–0–62–3, ಯಜುವೇಂದ್ರ ಚಾಹಲ್ 7.2–0–43–2

ಫಲಿತಾಂಶ: ಭಾರತಕ್ಕೆ 90 ರನ್ ಗೆಲುವು

ಐಸಿಸಿ ರ್‍ಯಾಂಕಿಂಗ್ ಪಟ್ಟಿ (ಏಕದಿನ)

ಸ್ಥಾನ	ತಂಡ	ಪಂದ್ಯ	ಅಂಕ	ರೇಟಿಂಗ್
1	ಭಾರತ	44	5010	114
2	ಇಂಗ್ಲೆಂಡ್	30	3400	113
3	ಆಸ್ಟ್ರೇಲಿಯಾ	32	3572	112
4	ನ್ಯೂಜಿಲೆಂಡ್	29	3229	111
5	ಪಾಕಿಸ್ತಾನ	25	2649	106

ಮೂಲ: ಐಸಿಸಿ ವೆಬ್‌ಸೈಟ್



ರಾಷ್ಟ್ರೀಯ ಟಿಟಿ: ತನಿಷ್ಕಾಗೆ ಚಿನ್ನ



ಬೆಂಗಳೂರು: ಕರ್ನಾಟಕದ ತನಿಷ್ಕಾ ಅವರು ಸೂರತ್‌ನಲ್ಲಿ ನಡೆದ ರಾಷ್ಟ್ರೀಯ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ನ ಬಾಲಕಿಯರ 11 ವರ್ಷ ವಯಸ್ಸಿನೊಳಗಿನವರ ವಿಭಾಗದಲ್ಲಿ ಚಾಂಪಿಯನ್ ಆದರು. ಫೈನಲ್‌ನಲ್ಲಿ ತನಿಷ್ಕಾ 12-10, 11-4, 11-6 ರಲ್ಲಿ ಬಂಗಾಳದ ಸಾತುಯ ಬ್ಯಾನರ್ಜಿ ಅವರನ್ನು ಮಣಿಸಿದರು.

ಸೆಮಿಫೈನಲ್‌ನಲ್ಲಿ 11-9, 11-7, 11-3 ರಲ್ಲಿ ಶಾರಿಕಾ ಶಾಹಿದ್ ವಿರುದ್ಧ ಗೆದ್ದಿದ್ದರು.

ಹಾಕಿ: ಯಂಗ್‌ಸ್ಟಾರ್‌ಗೆ ಜಯ

ಬೆಂಗಳೂರು: ರಾಯಚೂರಿನ ಯಂಗ್ ಸ್ಟಾರ್ ಹಾಕಿ ಕ್ಲಬ್ ತಂಡದವರು ಕೆಎಸ್‌ಎಚ್‌ಎ 'ಎ' ಡಿವಿಷನ್ ಹಾಕಿ ಲೀಗ್‌ನಲ್ಲಿ ಗೆಲುವು ಪಡೆದರು.

ಮಂಗಳವಾರ ನಡೆದ ಪಂದ್ಯದಲ್ಲಿ ಯಂಗ್ ಸ್ಟಾರ್ ತಂಡ 5–2 ಗೋಲುಗಳಿಂದ ಧಾರವಾಡದ ಓಂ ಸಾಯಿ ಹಾಕಿ ಕ್ಲಬ್ ತಂಡವನ್ನು ಮಣಿಸಿತು. ಶ್ರೀಕಾಂತ್ (33), ತಾಲಿಬ್ (35), ಬಾಬು (39), ವಿನಯ್ (42) ಮತ್ತು ಅಂಕಿತ್ (6) ಅವರು ವಿಜಯಿ ತಂಡದ ಪರ ಗೋಲು ಗಳಿಸಿದರು.

ಓಂ ಸಾಯಿ ತಂಡಕ್ಕೆ ಮನು (17) ಮತ್ತು ಸಬ್ರಿತ್ (31) ಅವರು ಚೆಂಡನ್ನು ಗುರಿ ಸೇರಿಸಿದರು.

ಆಸ್ಟ್ರೇಲಿಯಾ ಓಪನ್ ಟೆನಿಸ್ ಟೂರ್ನಿ: ಕೋರ್ಡಗೆ ನಿರಾಸೆ

ಸೆಮಿಗೆ ರಿಬಾಕಿನಾ, ಅಜರೆಂಕಾ

ಮೆಲ್ಬರ್ನ್ (ರಾಯಿಟರ್ಸ್/ ಎಪಿ): ವಿಕ್ಟೋರಿಯಾ ಅಜರೆಂಕಾ ಮತ್ತು ಎಲೆನಾ ರಿಬಾಕಿನಾ ಅವರು ಆಸ್ಟ್ರೇಲಿಯಾ ಓಪನ್ ಟೆನಿಸ್ ಟೂರ್ನಿಯ ಮಹಿಳೆಯರ ಸಿಂಗಲ್ಸ್ ವಿಭಾಗದ ಸೆಮಿ ಫೈನಲ್ ಪ್ರವೇಶಿಸಿದರು.

ಮಂಗಳವಾರ ನಡೆದ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಬೆಲಾರಸ್‌ನ ಅಜರೆಂಕಾ 6-4, 6-1 ರಲ್ಲಿ ಅಮೆರಿಕದ ಜೆಸ್ಸಿಕಾ ಪೆಗೂಲ ವಿರುದ್ಧ ಗೆದ್ದರು. ನಾಲ್ಕರಘಟ್ಟದ ಪಂದ್ಯದಲ್ಲಿ ಅವರು ಕಜಕಸ್ತಾನದ ರಿಬಾಕಿನಾ ಅವರ ಸವಾಲು ಎದುರಿಸುವರು. ಇನ್ನೊಂದು ಕ್ವಾರ್ಟರ್ ಫೈನಲ್‌ನಲ್ಲಿ ರಿಬಾಕಿನಾ 6-2, 6-4 ರಲ್ಲಿ ಲಾತ್ವಿಯದ ಎಲೆನಾ ಒಸ್ಟಪೆಂಕೊ ಅವರನ್ನು ಮಣಿಸಿದರು.

33 ವರ್ಷದ ಅಜರೆಂಕಾ, ಇಲ್ಲಿ ಒಂದು ದಶಕದ ಬಿಡುವಿನ ಬಳಿಕ ಸೆಮಿ ಪ್ರವೇಶಿಸಿದ ಸಾಧನೆ ಮಾಡಿದ್ದಾರೆ. ಅವರು 2012 ಮತ್ತು 2013 ರಲ್ಲಿ ಚಾಂಪಿಯನ್ ಆಗಿದ್ದರು. 2020ರ ಅಮೆರಿಕ ಓಪನ್ ಟೂರ್ನಿಯ ಬಳಿಕ ಗ್ರ್ಯಾನ್‌ಸ್ಲಾಮ್ ಟೂರ್ನಿಯೊಂದರ ಸೆಮಿಫೈನಲ್ ಪ್ರವೇಶಿಸಿದ್ದು ಇದೇ ಮೊದಲು.

ಉತ್ತಮ ಲಯದಲ್ಲಿ ಆಡಿದ ಅಜರೆಂಕಾ ಮೊದಲ ಸೆಟ್‌ನಲ್ಲಿ ಆರಂಭದಲ್ಲೇ ಎದುರಾಳಿಯ ಸರ್ವ್ ಬ್ರೇಕ್ ಮಾಡಿ 3-0 ರಲ್ಲಿ ಮುನ್ನಡೆ ಪಡೆದರು. ಪೆಗೂಲ ಮರುಹೋರಾಟದ ಸೂಚನೆ ನೀಡಿದರಾದರೂ, ಅದಕ್ಕೆ ಅವಕಾಶ ನೀಡದ ಬೆಲಾರಸ್‌ನ ಆಟಗಾರ್ತಿ 6-4 ರಲ್ಲಿ ಸೆಟ್ ಗೆದ್ದರು.



ಎಲೆನಾ ರಿಬಾಕಿನಾ ಸಂಭ್ರಮ –ಎಎಫ್‌ಪಿ ಚಿತ್ರ

ಎರಡನೇ ಸೆಟ್‌ನಲ್ಲಿ ಅವರು ಎದುರಾಳಿಗೆ ಕೇವಲ ಒಂದು ಗೇಮ್ ಮಾತ್ರ ಬಿಟ್ಟುಕೊಟ್ಟರು.

ವಿಂಬಲ್ಡನ್ ಚಾಂಪಿಯನ್ ರಿಬಾಕಿನಾ ಅವರು ಮೆಲ್ಬರ್ನ್ ಪಾರ್ಕ್‌ನಲ್ಲಿ ಇದೇ ಮೊದಲ ಬಾರಿ ಸೆಮಿ ಪ್ರವೇಶಿಸಿದ ಸಾಧನೆ ಮಾಡಿದ್ದಾರೆ. ಎರಡೂ ಸೆಟ್‌ಗಳಲ್ಲಿ ಶಿಸ್ತಿನ ಆಟವಾಡಿ ಒಟ್ಟು 11 ಏಸ್‌ಗಳನ್ನು ಸಿಡಿಸಿದರು.

ಕೋರ್ಡಗೆ ನಿರಾಸೆ: ಅಮೆರಿಕದ ಸೆಬಾಸ್ಟಿಯನ್ ಕೋರ್ಡ ಅವರು ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಸೆಮಿ ಪ್ರವೇಶಿಸಲು ವಿಫಲರಾದರು. ರಷ್ಯಾದ ಕರೆನ್ ಕಚನೊವ್ ವಿರುದ್ಧದ ಕ್ವಾರ್ಟರ್ ಫೈನಲ್ ಪಂದ್ಯವನ್ನು ಮಣಿಕಟ್ಟಿನ ಗಾಯದ ಕಾರಣ ಅವರು ಅರ್ಧದಲ್ಲೇ ತ್ಯಜಿಸಿದರು. ಈ ವೇಳೆ ಕಚನೊವ್ 7-6, 6-3, 3-0 ರಲ್ಲಿ ಮುನ್ನಡೆಯಲ್ಲಿದ್ದರು.

ತಮ್ಮ ತಂದೆ ಮಾಡಿದ್ದ ಸಾಧನೆಯನ್ನು ಅನುಕರಿಸಬೇಕೆಂಬ ಸೆಬಾಸ್ಟಿಯನ್ ಅವರ ಕನಸು ಈ ಬಾರಿ ನನಸಾಗಲಿಲ್ಲ. ಸೆಬಾಸ್ಟಿಯನ್ ಅವರ ತಂದೆ ಪೆಟ್ರ್ ಕೋರ್ಡ 1998 ರಲ್ಲಿ ಇಲ್ಲಿ ಚಾಂಪಿಯನ್ ಆಗಿದ್ದರು.

ಮೊದಲ ಸೆಟ್‌ಅನ್ನು ಟೈಬ್ರೇಕರ್‌ನಲ್ಲಿ ಗೆದ್ದ ಕಚನೊವ್, ಆ ಬಳಿಕ ಆಕ್ರಮಣಕಾರಿ ಆಟವಾಡಿದರು. ರಷ್ಯಾದ ಆಟಗಾರ 2022ರ ಅಮೆರಿಕ ಓಪನ್ ಟೂರ್ನಿಯಲ್ಲೂ ಸೆಮಿ ಪ್ರವೇಶಿಸಿದ್ದ ಸಾಧನೆ ಮಾಡಿದ್ದರು.

ಕಚನೊವ್ ಅವರು ಸೆಮಿಫೈನಲ್‌ನಲ್ಲಿ ಗ್ರೀಸ್‌ನ ಸ್ಟೆಫಾನೊಸ್ ಸಿಟ್ಸಿಪಸ್ ವಿರುದ್ಧ ಪೈಪೋಟಿ ನಡೆಸುವರು. ಸಿಟ್ಸಿಪಸ್ ಕ್ವಾರ್ಟರ್ ಫೈನಲ್‌ನಲ್ಲಿ 6-3, 7-6, 6-4 ರಲ್ಲಿ ಜೆಕ್ ಗಣರಾಜ್ಯದ ಜಿರಿ ಲೆಹೆಲಾ ಅವರನ್ನು ಮಣಿಸಿದರು.

ನಾಲ್ಕರಘಟ್ಟಕ್ಕೆ ರೋಹನ್– ಸಾನಿಯಾ

ಮೆಲ್ಬರ್ನ್ (ಪಿಟಿಐ): ಭಾರತದ ರೋಹನ್ ಬೋಪಣ್ಣ ಮತ್ತು ಸಾನಿಯಾ ಮಿರ್ಜಾ ಜೋಡಿ ಕ್ವಾರ್ಟರ್ ಫೈನಲ್‌ನಲ್ಲಿ ಕಣಕ್ಕಿಳಿಯದೆಯೇ ಮಿಶ್ರ ಡಬಲ್ಸ್ ವಿಭಾಗದ ಸೆಮಿಫೈನಲ್ ಪ್ರವೇಶಿಸಿತು.

ಮಂಗಳವಾರ ನಡೆಯಬೇಕಿದ್ದ ಪಂದ್ಯದಲ್ಲಿ ಭಾರತದ ಜೋಡಿ ಎಲೆನಾ ಒಸ್ಟಪೆಂಕೊ– ಡೇವಿಡ್ ವೆಗಾ ಹೆರ್ನಾಂಡೆಜ್ ವಿರುದ್ಧ ಪೈಪೋಟಿ ನಡೆಸಬೇಕಿತ್ತು. ಆದರೆ ಎಲೆನಾ–ಡೇವಿಡ್ ಹಿಂದೆ ಸರಿದರು.

ಸಮಾಲೋಚನೆ ನಡೆಸಿಲ್ಲ: ಕುಸ್ತಿಪಟುಗಳ ಅಸಮಾಧಾನ

ನವದೆಹಲಿ (ಪಿಟಿಐ): ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ಅಧ್ಯಕ್ಷರ ಮೇಲಿನ ಆರೋಪಗಳ ತನಿಖೆಗೆ ಮೇಲುಸ್ತುವಾರಿ ಸಮಿತಿ ನೇಮಿಸುವ ಮುನ್ನ ಕ್ರೀಡಾ ಸಚಿವಾಲಯವು ತಮ್ಮೊಂದಿಗೆ ಸಮಾಲೋಚನೆ ನಡೆಸಿಲ್ಲ ಎಂದು ಕುಸ್ತಿಪಟುಗಳು ಅಸಮಾಧಾನ ಹೊರಹಾಕಿದ್ದಾರೆ.

ಡಬ್ಲ್ಯುಎಫ್‌ಐ ಅಧ್ಯಕ್ಷ ಬ್ರಿಜ್‌ಭೂಷಣ್ ಶರಣ್ ಸಿಂಗ್ ಅವರ ಮೇಲಿನ ಆರೋಪಗಳ ತನಿಖೆಗೆ ಕ್ರೀಡಾ ಸಚಿವಾಲಯವು ಮಹಿಳಾ ಬಾಕ್ಸರ್ ಎಂ.ಸಿ.ಮೇರಿ ಕೋಮ್ ನೇತೃತ್ವದ ಐವರು ಸದಸ್ಯರ ಸಮಿತಿಯನ್ನು ಸೋಮವಾರ ನೇಮಕ ಮಾಡಿತ್ತು.

ಜಂತರ್ ಮಂತರ್‌ನಲ್ಲಿ ಪ್ರತಿಭಟನೆ ನಡೆಸಿದ್ದ ಕುಸ್ತಿಪಟುಗಳಾದ ಬಜರಂಗ್ ಪೂನಿಯಾ, ವಿನೇಶಾ ಪೋಗಟ್, ಸರಿತಾ ಮೋರ್ ಮತ್ತು ಸಾಕ್ಷಿ ಮಲಿಕ್ ಅವರು ಕ್ರೀಡಾ ಸಚಿವಾಲಯದ ನಡೆಯನ್ನು ಪ್ರಶ್ನಿಸಿ 'ಟ್ವೀಟ್' ಮಾಡಿದ್ದಾರೆ.

'ನಮ್ಮೊಂದಿಗೆ ಸಮಾಲೋಚನೆ ನಡೆಸಿಯೇ ಮೇಲುಸ್ತುವಾರಿ ಸಮಿತಿ ರಚಿಸಲಾಗುವುದು ಎಂಬ ಭರವಸೆ ನೀಡಲಾಗಿತ್ತು. ಆದರೆ ಯಾರೂ ನಮ್ಮ ಅಭಿಪ್ರಾಯ ಕೇಳದಿರುವುದು ಬೇಸರದ ಸಂಗತಿ' ಎಂದು ದೂರಿದ್ದಾರೆ. ತಾವು ಮಾಡಿರುವ ಟ್ವೀಟ್‌ಅನ್ನು ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ ಮತ್ತು ಕ್ರೀಡಾ ಸಚಿವ ಅನುರಾಗ್ ಠಾಕೂರ್ ಅವರ ಟ್ವಿಟರ್ ಖಾತೆಗೆ ಟ್ಯಾಗ್ ಮಾಡಿದ್ದಾರೆ.

ಕುಸ್ತಿಪಟುಗಳಿಗೆ ನ್ಯಾಯ ದೊರಕಿಸಿಕೊಡಲು ಪ್ರಧಾನಿ ಮಧ್ಯಪ್ರವೇಶಿಸಬೇಕು ಎಂದು ಕಾಮನ್‌ವೆಲ್ತ್ ಕ್ರೀಡಾಕೂಟದ ಚಿನ್ನದ ಪದಕ ವಿಜೇತ ಕುಸ್ತಿಪಟು ಗೀತಾ ಪೋಗಟ್ ಮನವಿ ಮಾಡಿದ್ದಾರೆ.



ವಿನೇಶಾ ಪೋಗಟ್

'ಗೌರವಾನ್ವಿತ ಪ್ರಧಾನಿಯವರೇ, ಈ ದೇಶದ ಎಲ್ಲಾ ಹೆಣ್ಣುಮಕ್ಕಳು ಹೆಚ್ಚಿನ ಭರವಸೆ ಮತ್ತು ನಿರೀಕ್ಷೆಗಳೊಂದಿಗೆ ನಿಮ್ಮತ್ತ ನೋಡುತ್ತಿದ್ದಾರೆ. ನಮಗೆ ನ್ಯಾಯ ಸಿಗದಿದ್ದರೆ, ಅದು ದೇಶದ ಇತಿಹಾಸದಲ್ಲಿ ದೊಡ್ಡ ದುರದೃಷ್ಟ ಎನಿಸಿಕೊಳ್ಳಲಿದೆ' ಎಂದು ಟ್ವೀಟ್ ಮಾಡಿದ್ದಾರೆ.

ಮೇರಿ ಕೋಮ್ ನೇತೃತ್ವದ ಮೇಲುಸ್ತುವಾರಿ ಸಮಿತಿಯಲ್ಲಿ ಬ್ಯಾಡ್ಮಿಂಟನ್ ಆಟಗಾರ್ತಿ ಮತ್ತು ಮಿಷನ್ ಒಲಿಂಪಿಕ್ ಸೆಲ್ ಸದಸ್ಯರಾದ ತೃಪ್ತಿ ಮುರ್ಗುಂಡೆ, ಟಾರ್ಗೆಟ್ ಒಲಿಂಪಿಕ್ ಪೋಡಿಯಂ ಸ್ಕೀಮ್ (ಟಾಪ್ಸ್) ಮಾಜಿ ಸಿಇಒ ರಾಜಗೋಪಾಲನ್ ಮತ್ತು ಭಾರತ ಕ್ರೀಡಾ ಪ್ರಾಧಿಕಾರದ ಮಾಜಿ ಕಾರ್ಯನಿರ್ವಾಹಕ ನಿರ್ದೇಶಕರಾದ ರಾಧಿಕಾ ಶ್ರೀಮನ್ ಅವರು ಇದ್ದಾರೆ.

ರಾಷ್ಟ್ರೀಯ ಬ್ಯಾಸ್ಕೆಟ್‌ಬಾಲ್: ಕರ್ನಾಟಕ ಬಾಲಕರಿಗೆ ಗೆಲುವು

ಬೆಂಗಳೂರು: ಕರ್ನಾಟಕ ಬಾಲಕರ ತಂಡದವರು ಇಲ್ಲಿ ನಡೆಯುತ್ತಿರುವ 72ನೇ ರಾಷ್ಟ್ರೀಯ ಜೂನಿಯರ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಗೆಲುವು ಪಡೆದರು.

ಕಂಠೀರವ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಎರಡನೇ ಹಂತದ ಲೀಗ್ ಪಂದ್ಯದಲ್ಲಿ ಕರ್ನಾಟಕ 71-68 ರಲ್ಲಿ ಮಧ್ಯಪ್ರದೇಶ ತಂಡವನ್ನು ಮಣಿಸಿತು. ಆತಿಥೇಯ ತಂಡದ ಎನ್.ಎಂ.ವಿಷ್ಣು 25, ನಿಹಾಲ್ ವಿ.ಕೆ. 12 ಮತ್ತು ಪ್ರಿಯಾನ್ಶು 10 ಪಾಯಿಂಟ್ಸ್ ಗಳಿಸಿದರು.

ಇತರ ಪಂದ್ಯಗಳಲ್ಲಿ ತಮಿಳುನಾಡು 119-77 ರಲ್ಲಿ ರಾಜಸ್ಥಾನ ವಿರುದ್ಧ ಗೆದ್ದರೆ, ಉತ್ತರ ಪ್ರದೇಶ 81-65 ರಲ್ಲಿ ಪಂಜಾಬ್ ತಂಡವನ್ನು ಸೋಲಿಸಿತು.

ಬಾಲಕಿಯರ ವಿಭಾಗದಲ್ಲಿ 9 ರಿಂದ 16ನೇ ಸ್ಥಾನವನ್ನು ನಿರ್ಣಯಿಸಲು ನಡೆಯುತ್ತಿರುವ ಲೀಗ್ ಪಂದ್ಯದಲ್ಲಿ ಕರ್ನಾಟಕ 111-49 ರಲ್ಲಿ ಮೇಘಾಲಯ ತಂಡವನ್ನು ಮಣಿಸಿತು. 29 ಪಾಯಿಂಟ್ಸ್ ಕಲೆಹಾಕಿದ ಪ್ರಿಯಾಂಕಾ, ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು. ಅದಿತಿ ಮತ್ತು ಐಶ್ವರ್ಯಾ ತಲಾ 15 ಪಾಯಿಂಟ್ಸ್ ಗಳಿಸಿದರು.

ಹಾಕಿ: ನಾಲ್ಕರಘಟ್ಟಕ್ಕೆ ಆಸ್ಟ್ರೇಲಿಯಾ

ಭುವನೇಶ್ವರ (ಪಿಟಿಐ): ಜೆರೆಮಿ ಹೇವರ್ಡ್ ಅವರ ಮಿಂಚಿನ ಆಟದ ಬಲದಿಂದ ಸ್ಪೇನ್ ತಂಡವನ್ನು ಮಣಿಸಿದ ಆಸ್ಟ್ರೇಲಿಯಾ, ಎಫ್‌ಐಎಚ್ ವಿಶ್ವಕಪ್ ಹಾಕಿ ಟೂರ್ನಿಯ ಸೆಮಿಫೈನಲ್ ಪ್ರವೇಶಿಸಿತು.

ಕಳಿಂಗಾ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಕಾಂಗರೂ ನಾಡಿನ ತಂಡ 4-3 ಗೋಲುಗಳಿಂದ ಗೆದ್ದಿತು.

ಆಸ್ಟ್ರೇಲಿಯಾ ತಂಡ ವಿಶ್ವಕಪ್ ಟೂರ್ನಿಯಲ್ಲಿ ಸತತ 12ನೇ ಬಾರಿ ನಾಲ್ಕರಘಟ್ಟ ಪ್ರವೇಶಿಸಿದ ಸಾಧನೆ ಮಾಡಿದೆ. 1978 ರಲ್ಲಿ ಬ್ಯೂನಸ್ ಐರಿಸ್‌ನಲ್ಲಿ ನಡೆದಿದ್ದ ವಿಶ್ವಕಪ್ ಬಳಿಕದ ಎಲ್ಲ ಟೂರ್ನಿಗಳಲ್ಲೂ ಸೆಮಿ ಪ್ರವೇಶಿಸಿದೆ. 1986, 2010 ಮತ್ತು 2014 ರಲ್ಲಿ ಚಾಂಪಿಯನ್ ಆಗಿತ್ತು.

ಹೇವರ್ಡ್ ಅವರು 33 ಹಾಗೂ 37ನೇ ನಿಮಿಷಗಳಲ್ಲಿ ತಂಡಕ್ಕೆ ದೊರೆತ ಪೆನಾಲ್ಟಿ ಕಾರ್ನರ್ ಅವಕಾಶವನ್ನು ಗೋಲಿನಲ್ಲಿ ಪರಿವರ್ತಿಸಿದರು. ಇತರ ಗೋಲುಗಳನ್ನು ಫ್ಲಿನ್ ಒಗಿಲ್ವಿ (30) ಮತ್ತು ನಾಯಕ ಅರನ್ ಜಲೆವ್‌ಸ್ಕಿ (32) ತಂದಿತ್ತರು.

ಸ್ಪೇನ್ ತಂಡದ ಪರ ಕ್ಸೇವಿಯರ್



ಆಸ್ಟ್ರೇಲಿಯಾ ಮತ್ತು ಸ್ಪೇನ್ ಆಟಗಾರರ ನಡುವಣ ಪೈಪೋಟಿ –ಪಿಟಿಐ ಚಿತ್ರ

ಗಿಸ್ಪರ್ಟ್ (20), ಮಾರ್ಕ್ ರೆಸೆಸೆನ್ಸ್ (24) ಹಾಗೂ ಮಾರ್ಕ್ ಮಿರಲೆಸ್ (41) ಚೆಂಡನ್ನು ಗುರಿ ಸೇರಿಸಿದರು.

ಸ್ಪೇನ್ ತಂಡ ಮೊದಲ ಕ್ವಾರ್ಟರ್‌ನಲ್ಲಿ ಆಸ್ಟ್ರೇಲಿಯಾದ ಆಕ್ರಮಣಕಾರಿ ಆಟಕ್ಕೆ ಕಡಿವಾಣ ತೊಡಿಸಲು ಯಶಸ್ವಿಯಾಗಿತ್ತು. ಆರಂಭದ 15 ನಿಮಿಷಗಳಲ್ಲಿ ಆಸ್ಟ್ರೇಲಿಯಾಕ್ಕೆ ಮೂರು ಪೆನಾಲ್ಟಿ ಕಾರ್ನರ್ ದೊರೆತರೂ ಗೋಲು ಬರಲಿಲ್ಲ.

ಎರಡನೇ ಕ್ವಾರ್ಟರ್‌ನಲ್ಲಿ ಬೆನ್ನುಬೆನ್ನಿಗೆ ಎರಡು ಗೋಲು ಗಳನ್ನು ಗಳಿಸಿದ ಸ್ಪೇನ್, ಅಚ್ಚರಿ ಉಂಟು ಮಾಡಿತು. ಆದರೆ ಮರುಹೋರಾಟ ನಡೆಸಿದ ಆಸ್ಟ್ರೇಲಿಯಾ ಏಳು ನಿಮಿಷಗಳಲ್ಲಿ ನಾಲ್ಕು ಗೋಲುಗಳನ್ನು ಗಳಿಸಿ 4-2 ರಲ್ಲಿ ಮೇಲುಗೈ ಪಡೆಯಿತು. ಆ ಬಳಿಕ ಒಂದು ಗೋಲು ಗಳಿಸಿದ ಸ್ಪೇನ್ ಸೋಲಿನ ಅಂತರ ಅಲ್ಪ ತಗ್ಗಿಸಿತು.

ಇನ್ನೊಂದು ಕ್ವಾರ್ಟರ್ ಫೈನಲ್‌ನಲ್ಲಿ ನ್ಯೂಜಿಲೆಂಡ್ ತಂಡವನ್ನು 2-0 ಗೋಲುಗಳಿಂದ ಮಣಿಸಿದ ಹಾಲಿ ಚಾಂಪಿಯನ್ ಬೆಲ್ಜಿಯಂ ಸೆಮಿಫೈನಲ್ ಪ್ರವೇಶಿಸಿತು.

ಇಂದಿನ ಪಂದ್ಯ

ಇಂಗ್ಲೆಂಡ್ Vs ಜರ್ಮನಿ — 4.30 ಸಂಜೆ
ನೆದರ್ಲೆಂಡ್ಸ್ Vs ಕೊರಿಯಾ — 7.00
ಸ್ಥಳ: ಭುವನೇಶ್ವರ
ಲೈವ್: ಸ್ಟಾರ್ ಸ್ಪೋರ್ಟ್ಸ್

ಐಸಿಸಿ ಟೆಸ್ಟ್ ತಂಡ: ಪಂತ್‌ಗೆ ಸ್ಥಾನ

ದುಬೈ (ಪಿಟಿಐ): ಭಾರತದ ವಿಕೆಟ್‌ಕೀಪರ್ ಬ್ಯಾಟರ್ ರಿಷಭ್ ಪಂತ್ ಅವರು ಐಸಿಸಿ ಪ್ರಕಟಿಸಿರುವ 2022ರ ಸಾಲಿನ 'ವರ್ಷದ ಟೆಸ್ಟ್ ಕ್ರಿಕೆಟ್ ತಂಡ'ದಲ್ಲಿ ಸ್ಥಾನ ಪಡೆದಿದ್ದಾರೆ.

ಮಧ್ಯಮ ಕ್ರಮಾಂಕದ ಬ್ಯಾಟರ್ ಶ್ರೇಯಸ್ ಅಯ್ಯರ್ ಮತ್ತು ಮೊಹಮ್ಮದ್ ಸಿರಾಜ್ ಅವರಿಗೆ ಐಸಿಸಿ ಏಕದಿನ ತಂಡದಲ್ಲಿ ಅವಕಾಶ ದೊರೆತಿದೆ.

ಪಂತ್ ಅವರು ಕಳೆದ ವರ್ಷ ಆಡಿದ್ದ 12 ಇನಿಂಗ್ಸ್‌ಗಳಲ್ಲಿ 61.81ರ ಸರಾಸರಿಯಲ್ಲಿ 680 ರನ್ ಕಲೆ ಹಾಕಿದ್ದರು. ಎರಡು ಶತಕ ಮತ್ತು ನಾಲ್ಕು ಅರ್ಧಶತಕ ಗಳಿಸಿದ್ದರು. ಇಂಗ್ಲೆಂಡ್‌ನ ಬೆನ್ ಸ್ಟೋಕ್ಸ್ ನೇತೃತ್ವದ ಟೆಸ್ಟ್ ತಂಡದಲ್ಲಿ ಭಾರತದ ಬೇರೆ ಯಾರಿಗೂ ಸ್ಥಾನ ಲಭಿಸಿಲ್ಲ.

ಕಳೆದ ಋತುವಿನಲ್ಲಿ ತೋರಿದ್ದ ಉತ್ತಮ ಪ್ರದರ್ಶನವು ಅಯ್ಯರ್ ಮತ್ತು ಸಿರಾಜ್ ಅವರಿಗೆ ವರ್ಷದ ಏಕದಿನ ತಂಡದಲ್ಲಿ ಸ್ಥಾನ ದೊರಕಿಸಿಕೊಟ್ಟಿದೆ.

'ವರ್ಷದ ಮಹಿಳಾ ಏಕದಿನ ತಂಡ'ದಲ್ಲಿ ಭಾರತದ ಸ್ಮೃತಿ ಮಂದಾನಾ, ಹರ್ಮನ್‌ಪ್ರೀತ್ ಕೌರ್ ಮತ್ತು ರೇಣುಕಾ ಸಿಂಗ್ ಅವರಿಗೆ ಸ್ಥಾನ ದೊರೆತಿದೆ.

ಐಸಿಸಿ ಟೆಸ್ಟ್ ತಂಡ: ಬೆನ್ ಸ್ಟೋಕ್ಸ್ (ನಾಯಕ), ಉಸ್ಮಾನ್ ಖವಾಜಾ, ಕ್ರೇಗ್ ಬ್ರಾಥ್‌ವೇಟ್, ಮಾರ್ನಸ್ ಲಾಬುಶೇನ್, ಬಾಬರ್ ಅಜಂ, ಜಾನಿ ಬೆಸ್ಟೋ, ರಿಷಭ್ ಪಂತ್ (ವಿಕೆಟ್ ಕೀಪರ್), ಪ್ಯಾಟ್ ಕಮಿನ್ಸ್, ಕಗಿಸೊ ರಬಾಡ, ನೇಥನ್ ಲಿಯೊನ್, ಜೇಮ್ಸ್ ಆ್ಯಂಡರ್ಸನ್.

ಐಸಿಸಿ ಏಕದಿನ ತಂಡ: ಬಾಬರ್ ಅಜಂ (ನಾಯಕ), ಟ್ರಾವಿಸ್ ಹೆಡ್, ಶಾಯ್ ಹೋಪ್, ಶ್ರೇಯಸ್ ಅಯ್ಯರ್, ಟಾಮ್ ಲಥಾಮ್ (ವಿಕೆಟ್ ಕೀಪರ್), ಸಿಕಂದರ್ ರಜಾ, ಮೆಹ್ದಿ ಹಸನ್ ಮಿರಾಜ್, ಅಲ್ಜರಿ ಜೋಸೆಫ್, ಮೊಹಮ್ಮದ್ ಸಿರಾಜ್, ಟ್ರೆಂಟ್ ಬೌಲ್ಟ್, ಆ್ಯಡಂ ಜಂಪಾ.